# ಜೀವವುಳ್ಳ ಸತ್ಯವೇದದ ಸೃಜನಾತ್ಮಕ ಅಧ್ಯಯನ

## ನೆರವೇರುವಿಕೆಗೆ ಅನ್ವೇಷಣೆ

## ಯೋಹಾನನ ಸುವಾರ್ತೆಯಿಂದ ಕಲಿಯುವಿಕೆ

# ಜೀವವುಳ್ಳ ಸತ್ಯವೇದದ ಸೃಜನಾತ್ಮಕ ಅಧ್ಯಯನ

## ನೆರವೇರುವಿಕೆಗೆ ಅನ್ವೇಷಣೆ

## ಯೋಹಾನನ ಸುವಾರ್ತೆಯಿಂದ ಕಲಿಯುವಿಕೆ

Creative Living International Publication

QUEST FOR FULFILLMENT: STUDIES
FROM THE BOOK OF JOHN

C Copyright 1995 by Creative Living
International of the United States of America

All rights reserved. No part of this book may
be reproduced in any form without written
permission from Creative Living
International, 11560 Brass Lantern Court,
Reston, virginia 20194

Creative Living International is a Christian
organization designed to help individuals
find practical biblical principles for today's
living.

Scripture quotations are from the Holy Bilble:
New International Version (NIV). Copyright
1973, 1978, 1984, International Bible
Society.

Printed in India

# ನೆರವೇರುವಿಕೆಯ ಅನ್ವೇಷಣೆ

## *ಯೋಹಾನನ ಸುವಾರ್ತೆಯಿಂದ ಕಲಿಯುವಿಕೆ*


ನೀವು ಪ್ರಾರಂಭಿಸುವದಕ್ಕಿಂತ ಮುನ್ನ...

**ಭಾಗ I: ಸಾರ್ವಜನಿಕ ಸೇವೆ**

| **ಪಾಠ** | **ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ** | |
|---|---|---|
| 1 ಕತ್ತಲೆಯ ಲೋಕದಲ್ಲಿ ಬೆಳಕು | ನಮಗೆ ಬೇಕಾಗಿರುವ ಬೆಳಕು | 7 |
| 2 ಮೊದಲ ಶಿಷ್ಯರು | ನಮ್ಮ ಅನನ್ಯತೆಯನ್ನು ಪರಿಶೋಧಿಸುವದು | 17 |
| 3 ಮದುವೆಯ ಮನೆಯಲ್ಲಿ ಮತ್ತು ದೇವಾಲಯದಲ್ಲಿ | ನಾವು ಎದುರುನೋಡುವ ಮಾರ್ಪಡುವಿಕೆ | 28 |
| 4 ನಿಕೊದೇಮನು ಮತ್ತು ನೂತನ ಸೃಷ್ಟಿ | ಆಂತರ್ಯ ಮತ್ತು ಬಾಹ್ಯದಲ್ಲಿ ಬಿಡುಗಡೆ | 35 |
| 5 ಸಮಾರ್ಯದಲ್ಲಿ ಯೇಸು ಕ್ರಿಸ್ತನು | ಸಂಪೂರ್ಣವಾಗಿ ತಿಳಿಯಲ್ಪಟ್ಟವರು ಮತ್ತು ಸಂಪೂರ್ಣವಾಗಿ ಪ್ರೀತಿಸಲ್ಪಟ್ಟವರು | 45 |
| 6 ಯೆರೂಸಲೇಮಿಗೆ ಪ್ರಯಾಣ | ಗರ್ವಕ್ಕೆ ವಿರುದ್ಧವಾಗಿ ಎಚ್ಚರವಹಿಸುವದು | 53 |
| 7 ಐದು ಸಾವಿರ ಜನರಿಗೆ ಊಟ ಕೊಟ್ಟದ್ದು | ದೇಹ ಮತ್ತು ಆತ್ಮಕ್ಕೆ ಸೌಲಭ್ಯಗಳು | 63 |
| 8 ಯೇಸು ಕ್ರಿಸ್ತನೇ ಜೀವವುಳ್ಳ ರೊಟ್ಟಿ | ಹೃದಯದ ಹಸಿವೆಯನ್ನು ತೃಪ್ತಿಗೊಳಿಸುವದು | 70 |
| 9 ಗುಡಾರದ ಹಬ್ಬಗಳಲ್ಲಿ | ಪರಿಪೂರ್ಣವಾದ ಸಮಯವನ್ನು ಅರ್ಥಮಾಡಿಕೊಳ್ಳುವದು | 78 |
| 10 ಕ್ರಿಸ್ತನು ತನ್ನ ಬೋಧನೆಯನ್ನು | ಕರುಣೆಯ ಪ್ರಾಧಾನ್ಯತೆ ದೃಢಪಡಿಸುತ್ತಿದ್ದಾನೆ | 87 |
| 11 ಹೆಚ್ಚು ಸಾರ್ವಜನಿಕ ಚರ್ಚೆ | 1 ನೇ ಸತ್ಯದ ಪರವಾಗಿ ನಿಲ್ಲುವದು | 96 |
| 12 ಹುಟ್ಟು ಕುರುಡನ ಗುಣಪಡಿಸುವಿಕೆ | 2 ನೇ ಸತ್ಯದ ಪರವಾಗಿ ನಿಲ್ಲುವದು | 105 |
| 13 ಯೇಸು ಒಳ್ಳೇ ಕುರುಬನು | ಅಭದ್ರತೆಯನ್ನು ಜಯಿಸುವದು | 114 |
| 14 ಸತ್ತ ಲಾಜರನನ್ನು ಎಬ್ಬಿಸಿದ್ದು | ಅಂತಿಮವಾದ ನೆರವೇರುವಿಕೆ | 123 |
| 15 ಸಾರ್ವಜನಿಕ ಸೇವೆಯ ಅಂತ್ಯ | ಸರಿಯಾದ ಕೇಂದ್ರೀಕರಣೆ | 134 |

**ಭಾಗ II: ಶಿಷ್ಯರಿಗೆ ವೈಯಕ್ತಿಕವಾದ ಸೇವೆ**

| | | |
|---|---|---|
| 16 ಕಡೇ ಭೋಜನ ಪ್ರಾರಂಭ | ಹೆಚ್ಚಾಗಿ ಕೊಟ್ಟು ಜೀವಿಸುವದು | 144 |
| 17 ಯೇಸು ತನ್ನ ಶಿಷ್ಯರನ್ನು ಬಲಪಡಿಸುತ್ತಾನೆ | ತಿಳುವಳಿಕೆಯನ್ನು ಮೀರುವ ಸಮಾಧಾನ | 154 |
| 18 ಶಿಷ್ಯತ್ವದ ಬಗ್ಗೆ ಹೆಚ್ಚು ಬೋಧನೆ | ಜೀವಿಸಲು ಶಕ್ತಿ | 165 |
| 19 ಯೇಸುವಿಗೆ ಬೀಳ್ಕೊಡುಗೆ | ಪ್ರಾರ್ಥನೆಯ ನೆರವೇರಿಕೆ | 175 |
| 20 ತನ್ನವರಿಗಾಗಿ ಯೇಸುವಿನ ಪ್ರಾರ್ಥನೆ | ಪ್ರೀತಿಯ ಸಂಕೋಲೆ | 186 |
| 21 ಬಂಧನ, ಶ್ರಮೆ ಮತ್ತು ಶಿಲುಬೆಯ ಮರಣ | (ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆಇಲ್ಲ) | 196 |
| 22 ಪುನರುತ್ಥಾನ | ಪರಿಪೂರ್ಣವಾದ ಭರವಸೆ | 207 |
| 23 "ನನ್ನ ಕುರಿಗಳನ್ನು ಮೇಯಿಸು" | ಕಾರ್ಯಗತವಾಗಿರುವ ನೆರವೇರುವಿಕೆ | 219 |

**ಪ್ರಾಮುಖ್ಯವಾದ ಅಡಿ ಟಿಪ್ಪಣಿಗಳು 227**

**ಗ್ರಂಥಗಳ ವಿವರಣೆ 228**

# ಭಾಗ 1

# ಸಾರ್ವಜನಿಕ ಸೇವೆ

# ಪಾಠ 1

## ಕತ್ತಲೆಯ ಲೋಕದಲ್ಲಿ ಬೆಳಕು

**ಪೀಠಿಕಾಭಾಷಣ (ಯೋಹಾನ 1:1–13)**

ಯೋಹಾನನ ಸುವಾರ್ತೆಯ1 ಬರಹಗಾರನು ಯೇಸು ಕ್ರಿಸ್ತನ ಮೊಟ್ಟ ಮೊದಲ ಹನ್ನೆರೆಡು ಶಿಷ್ಯರಲ್ಲಿ ಒಬ್ಬನಾಗಿದ್ದ ಅಪೊಸ್ತಲನಾದ ಯೋಹಾನನಾಗಿದ್ದಾನೆ2. ಚರಿತ್ರೆಗಾರರ ಪ್ರಾಕಾರ ಆತನು ಈ ಸುವಾರ್ತೆಯನ್ನು ಎ.ಡಿ 85ರಲ್ಲಿ ಬರೆದಿರಬಹುದು. ಯೇಸು ಕ್ರಿಸ್ತನಲ್ಲಿ ನಂಬಿಕೆಯ ಮೂಲಕ 60 ವರ್ಷಗಳ ಅನುಭವುಳ್ಳ ಯೋಹಾನನು ಈ ಸುವಾರ್ತೆಯನ್ನು ಬರೆಯುವಾಗ ಅವನಿಗೆ 85 ವರ್ಷಗಳಾಗಿತ್ತು. ಯೋಹಾನನು ತನ್ನ 20ನೇ ವಯಸ್ಸಿನಲ್ಲಿ ಯೇಸು ಕ್ರಿಸ್ತನ ಪ್ರೀತಿಯ ಶಿಷ್ಯನಾಗಿ ಕ್ರಿಸ್ತನು ಐದು ರೊಟ್ಟಿ ಎರಡು ಮೀನುಗಳಿಂದ ಐದು ಸಾವಿರ ಜನರಿಗೆ ಊಟ ಕೊಟ್ಟದ್ದು, ನೀರನ ಮೇಲೆ ನಡೆದದ್ದು, ಬಿರುಗಾಳಿಯನ್ನು ಶಾಂತಪಡಿಸಿದ್ದು, ಮತ್ತು ಕುರುಡರನ್ನು, ಕುಂಟರನ್ನು ಗುಣಪಡಿಸಿದ್ದನ್ನು ಹಾಗೂ ದೆವ್ವ ಪೀಡಿತರನ್ನು ಬಿಡುಗಡೆಗೊಳಿಸಿದ್ದು (ಯೋಹಾನ 20:30, 21:35) ಹೀಗೆ ಅದೆಷ್ಟೋ ಅಸಂಖ್ಯವಾದ ಅದ್ಭುತಗಳನ್ನು ಕಣ್ಣಾರೆ ಕಂಡಿದ್ದಾನೆ. ಯೇಸು ಕ್ರಿಸ್ತನು ಕುರುಡನಿಗೆ ಕಣ್ಣು ಕೊಟ್ಟದ್ದು ಮತ್ತು ಸತ್ತ ಲಾಜರನನ್ನು ಹಾಗೂ ವಿಧವೆಯ ಮಗನನ್ನು ಬದುಕಿಸಿದ್ದನ್ನೂ ನೋಡಿದ್ದಾನೆ. ಪರಲೋಕವು ತೆರೆಯಲ್ಪಟ್ಟು ಮಹಿಮಾರ್ಹನಾದ ಯೇಸು ಕ್ರಿಸ್ತನ ಬಗ್ಗೆ ಎಲೀಯನು ಮತ್ತು ಮೋಶೆಯು ಕೊಟ್ಟ ಸಾಕ್ಷಿಯನ್ನು ನೋಡಿದ್ದಾನೆ ಹಾಗೂ "ಈತನು ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ. ನೀವು ಆತನ ಮಾತುಗಳನ್ನು ಕೇಳಿರಿ!" ದೇವರು ತಾನೇ ಪ್ರಕಟಿಸಿದ್ದನ್ನು ಸಹ ಕೇಳಿಸಿಕೊಂಡಿದ್ದಾನೆ (ಮಾರ್ಕ 9:2–8).

ಯೇಸು ಕ್ರಿಸ್ತನು ಗೆತ್ಸೆಮನೆ ತೋಟದಲ್ಲಿ ಅತ್ತಾಗ, ಶಿಲುಬೆಗೆ ಏರಿಸಲ್ಪಟ್ಟಾಗ ಯೋಹಾನನ ಅಲ್ಲಿದ್ದನು, ಮತ್ತು ಎಲ್ಲಾದಕ್ಕಿಂತಲೂ ಪ್ರಾಮುಖ್ಯವಾದದ್ದೆಂದರೆ ಯೇಸು ಕ್ರಿಸ್ತನು ತನ್ನ ಪುನರುತ್ಥಾನದ ನಂತರ ನಲವತ್ತು ದಿವಸಗಳ ಕಾಲ ಯೋಹಾನನೊಂದಿಗೂ ಮತ್ತು ಬೇರೆ ಕೆಲವರೊಂದಿಗೂ ಮಾತನಾಡಿದನು ಮತ್ತು ನಡೆದಾಡಿದನು.

ಆದರೆ ಇದು ಕೇವಲ ಪ್ರಾರಂಭ ಮಾತ್ರವೇ ಆಗಿದೆ. ಇದಾದ ನಂತರ, ಯೋಹಾನನು ವಿರೋಧತ್ವಗಳ ನಡುವೆಯೂ ಕ್ರಿಸ್ತನಿಗಾಗಿ ಸಾಕ್ಷಿಗಳಾಗಿ ನಿಲ್ಲಲು ವಿಶ್ವಾಸಿಗಳಲ್ಲಿ ನೆಲೆಗೊಳ್ಳುವದಕ್ಕಾಗಿ ಮತ್ತು ಅವರನ್ನು ಬಲಗೊಳಿಸುವದಕ್ಕಾಗಿ ಅದ್ಭುತ ರೀತಿಯಲ್ಲಿ ಬಂದ ಪವಿತ್ರಾತ್ಮನಿಗೆ ಸಹ ಯೋಹಾನನು

ಸಾಕ್ಷಿಯಾಗಿದ್ದಾನೆ (ಅ.ಕೃ 2).

ಸಭೆಯು ಬೆಳೆಯುತ್ತಾ ಮತ್ತು ಕ್ರಿಸ್ತನ ಕುರಿತಾದ ಶುಭವಾರ್ತೆಯನ್ನು ಪ್ರಚುರಪಡಿಸುತ್ತಿದ್ದಂತೆಲ್ಲಾ ಅಧ್ಭುತಗಳನ್ನು ನಡೆಸುವಂತೆ ದೇವರು ವಿಶ್ವಾಸಿಗಳನ್ನು ಬಲಪಡಿಸಿದ್ದನ್ನು ಆತನು ಕಂಡನು. ಸಭೆಯನ್ನು ವಿಪರೀತವಾಗಿ ಹಿಂಸೆಪಡಿಸುತ್ತಿದ್ದ ತಾರ್ಸಿಸಿನ ಸೌಲನ (ಪೌಲನು) ಅಗಮ್ಯವಾದ ಮಾರ್ಪಡುವಿಕೆಗೆ ಸಾಕ್ಷಿಯಾಗಿದ್ದಾನೆ, ಇಡೀ ರೋಮನ್ ಸಾಮ್ರಾಜ್ಯಕ್ಕೆ ಸುವಾರ್ತೆಯನ್ನು ಸಾರುವಂತೆ ದೇವರು ಈ ಪೌಲನನ್ನು ಬಹಳವಾಗಿ ಉಪಯೋಗಿಸಿಕೊಂಡನು. ಇನ್ನೂ ಹೇಳುವದಾದರೆ, ಯೋಹಾನನು ತೀವ್ರವಾದ ವಿರೋಧ ಮತ್ತು ಅಸಂಖ್ಯವಾದ ವಿಶ್ವಾಸಿಗಳ ಹಾಗೂ ತನ್ನನ್ನು ಬಿಟ್ಟು ರಕ್ತಸಾಕ್ಷಿಗಳಾದ ಎಲ್ಲಾ ಅಪೊಸ್ತಲರ ಮಧ್ಯದಲ್ಲಿ ವಾಸಿಸಿದನು. ಈಗ ಆತನು ವೃದ್ಧನಾಗಿದ್ದಾನೆ ಮತ್ತು ಮುಖ್ಯವಾಗಿ ಹಿಂದೆಗಿಂತ ಹೆಚ್ಚಾದ ನಂಬಿಕೆಯುಳ್ಳವನಾಗಿದ್ದಾನೆ.

ಆಚಾರಗಳು ಹೇಳುವದೇನೆಂದರೆ ಯೋಹಾನನು ಯೇಸು ಕ್ರಿಸ್ತನ ಈ ಸುವಾರ್ತೆಯನ್ನು ತನ್ನ ಕ್ರೈಸ್ತೀಯ ಸ್ನೇಹಿತರ ಮನವಿಯ ಮೇರೆಗೆ ಬರೆದಿದ್ದಾನೆ ಮತ್ತು ಸಭಿಕರು ಮೂರು ದಿವಸಗಳ ಕಾಲ ಉಪವಾಸವಿದ್ದು ಪ್ರಾರ್ಥಿಸಿದ ನಂತರವೇ ಆತನು ಇದನ್ನು ಬರೆಯಲು ಒಪ್ಪಿಕೊಂಡನು.2 ವಾಸ್ತವಿಕವಾಗಿ ಹೇಳುವದಾದರೆ ಆತನು ಎಲ್ಲವನ್ನೂ ನೋಡಿದ್ದನು ಮತ್ತು ಕೇಳಿದ್ದನು, ಆದ್ದ-ರಿಂದ ವೃದ್ಧನಾದ ಈ ಅಪೊಸ್ತಲನಿಗೆ ಹೇಳಲು ಇನ್ನೇನಿತ್ತು? ಯೋಹಾನನು ತನ್ನ ಪುಸ್ತಕವನ್ನು ಪೀಠಿಕಾಭಾಗದೊಂದಿಗೆ ಪ್ರಾರಂಭಿಸುತ್ತಿದ್ದಾನೆ, ಇದರಲ್ಲಿ ಪುಸ್ತಕದ ಸಾರಂಶವುಳ್ಳ ವಿಷಯಗಳು ಒಳಗೊಂಡಿವೆ ಮತ್ತು ಆತನ ಪರಿಪೂರ್ಣವಾದ ದೃಢತೆಯಿದೆ ಅದೇನೆಂದರೆ: ದೇವರು ಮನುಷ್ಯನಾದನು ಮತ್ತು ತನ್ನನ್ನು ನಜರೇತಿನ ಯೇಸು ಕ್ರಿಸ್ತನಾಗಿ ಪ್ರಕಟಿಸಿಕೊಂಡನು. ಸ್ತ್ರೀ ಮತ್ತು ಪುರುಷರು ಆತನಲ್ಲಿ ನಂಬಿಕೆಯನ್ನಿಟ್ಟು ಜೀವಿಸುವದಕ್ಕಾಗಿ, ಯೋರ್ದನ್ ಹೊಳೆಯ ದಡದಿಂದ ಪುನರುತ್ಥಾನವಾದ ನಂತರ ಕಾಣಿಸಿಕೊಳ್ಳುವವರೆಗೂ, ದೇವರ ನಿತ್ಯವಾದ ವಾಕ್ಯವಾಗಿರುವ ಯೇಸು ಕ್ರಿಸ್ತನು ಮನುಷ್ಯನಾದನೆಂಬದನ್ನು ಯೋಹಾನನು ಪ್ರಕಟಿಸುತ್ತಿದ್ದಾನೆ.

ಆದ್ದರಿಂದ ಯೋಹಾನನ ಗಾಢಚಿಂತನೆಯ ಪ್ರಾರಂಭದ ಹೇಳಿಕೆಗಳನ್ನು ಹತ್ತಿರದಿಂದ ನೋಡೋಣ.

**ಯೋಹಾನ 1:1–18 ಓದಿರಿ.**

1. ಎ. ಯೇಸು ಕ್ರಿಸ್ತನ ವಂಶಾವಳಿಯೊಂದಿಗೆ ತನ್ನ ಸುವಾರ್ತೆಯನ್ನು ಪ್ರಾರಂಭಿಸುವದರ ಬದಲಾಗಿ, ಆದಿಕಾಂಡ 1ನೇ ಅಧ್ಯಾಯದಲ್ಲಿರುವ ಸೃಷ್ಟಿಯ ವಿಷಯಗಳನ್ನು ಯೋಹಾನನು ಯಾಕೆ ಉಲ್ಲೇಖಿಸುತ್ತಿದ್ದಾನೆ. ಇಂಥ ಪ್ರಾರಂಭದಿಂದ ಯೋಹಾನನು ಏನನ್ನು ಹೇಳಲು ಬಯಸುತ್ತಿದ್ದಾನೆ (1:1–3)?

ಬಿ. ಕೊಲೊಸ್ಸೆ ಪತ್ರಿಕೆಯ ಬರಹಗಾರನು ಈ ಅಂಶವನ್ನು ಹೇಗೆ ಪುನಃ ಹೇಳುತ್ತಿದ್ದಾನೆ (ಕೊಲೊಸ್ಸೆ 1:16–17)?

2. ಯೇಸು ಕ್ರಿಸ್ತನನ್ನು ವಿವರಿಸುವದಕ್ಕಾಗಿ ಯೋಹಾನನು ಯಾವ ಸಕಾರಾತ್ಮಕವಾದ ಪದ ಪ್ರಯೋಗವನ್ನು ಮಾಡಿದ್ದಾನೆ (1:4,9)?

3. ಎ. ಯೋಹಾನನು ಈ ಉಲ್ಲೇಖನ ಭಾಗದಲ್ಲಿ ಯಾವ ಅನಾಹುತವನ್ನು ಪರಿಚಯಪಡಿಸುತ್ತಿದ್ದಾನೆ (1:10–11)?

ಬಿ. ಯೋಹಾನನು ಯಾವ ಸುಂದರವಾದ ಸಾಧ್ಯತೆಯನ್ನು ಪ್ರಕಟಿಸಿದ್ದಾನೆ (1:12–13)?

4. ಯೇಸು ಕ್ರಿಸ್ತನ ಬಗ್ಗೆ ಅಪೊಸ್ತಲನು ಕೊಟ್ಟ ವೈಯಕ್ತಿಕವಾದ ಸಾಕ್ಷಿ ಏನು (1:14)?

5. ಯೋಹಾನನು ಯೇಸು ಕ್ರಿಸ್ತನನ್ನು ದೇವರ ನರಾವತಾರವೆತ್ತಿದ ವಾಕ್ಯವೆಂದು ವಿವರಿಸಿದ್ದಾನೆ (1:1–4,14). ಈ ತಲೆಬರಹದೊಂದಿಗೆ, ಸೃಷ್ಟಿಯ ಹಿಂದೆ ಇರುವ ಕಾರಣ ಮತ್ತು ಪ್ರೇರಣೆಯು ಯೇಸು ಕ್ರಿಸ್ತನೇ ಆಗಿದ್ದಾನೆ ಎಂಬದನ್ನು ಮತ್ತು ಮಾನವಕುಲದ ಮೇಲೆ ದೇವರು ತೋರಿಸಿದ ಪ್ರೀತಿಯನ್ನು ಸಹ ತಿಳಿಯಪಡಿಸುತ್ತಿದ್ದಾನೆ. ಇದೇ ವಿಷಯಗಳನ್ನು ಇಬ್ರಿಯ ಪತ್ರಿಕೆಯ ಬರಹಗಾರನು ಪುನಃ ಹೇಗೆ ಹೇಳಿದ್ದಾನೆ (ಇಬ್ರಿಯ 1:1–3).

*ಅಡಿ ಟಿಪ್ಪಣಿ: ನೋಟ್ 3, ವಾಕ್ಯ, ಪುಟ ಸಂಖ್ಯೆ8.*

6. ಇಸ್ರಾಯೇಲ್ಯರಲ್ಲಿ ಸಮಕಾಲೀನ ಪ್ರವಾದಿಯಾದ ಸ್ನಾನಿಕನಾದ ಯೋಹಾನನು ಸಹ ಯೇಸು ಕ್ರಿಸ್ತನ ದೈವೀಕತೆಯನ್ನು ಪ್ರಕಟಪಡಿಸಿದನು. ಸ್ನಾನಿಕನಾದ ಯೋಹಾನನ ಪಾತ್ರವೇನು (1:6–8,15)?

*ಅಡಿ ಟಿಪ್ಪಣಿ: ಸ್ನಾನಿಕನಾದ ಯೋಹಾನನು, ನೋಟ್ 4, ಪುಟ ಸಂಖ್ಯೆ 8.*

7. ಅಪೊಸ್ತಲನಾದ ಯೋಹಾನನು ಯೇಸು ಕ್ರಿಸ್ತನ ಶಿಷ್ಯನಾದಾಗ ಅವನಿಗೆ 25 ವರ್ಷ ಪ್ರಾಯವಾಗಿತ್ತು, ಹೀಗೆ ನಾವು ಆಲೋಚಿಸುವದಾದರೆ ಆತನು ತನ್ನ ಸುವಾರ್ತೆಯನ್ನು ಬರೆದಾಗ ಅವನಿಗೆ 80 ವರ್ಷ ಪ್ರಾಯವಾಗಿರಬಹುದು. 60 ವರ್ಷಗಳಿಂದ ವಿಶ್ವಾಸಿಯಾಗಿ ಜೀವಿಸುತ್ತಿದ್ದ ಆತನು, ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವವರ ಅನುಭವವು ಹೇಗಿರುವದೆಂದು ಅಪೊಸ್ತಲನು ಯಾವ ರೀತಿಯ ಸಾಕ್ಷಿಯನ್ನು ಕೊಡುತ್ತಿದ್ದಾನೆ (1:16–18)?

## ಮೂಲಭೂತವಿಷಯಗಳ ಮೇಲೆ ಕಟ್ಟಲ್ಪಡುವದು

### ಬೆಳಕಿನ ಅವಶ್ಯಕತೆ

ಯೋಹಾನನು ತನ್ನ ಸುವಾರ್ತೆಯನ್ನು ಬೆಳಕಿನ ಅವಶ್ಯಕತೆಯು ನಮಗಿದೆ ಎಂದು ಹೇಳುವದರ ಮೂಲಕ ಪ್ರಾರಂಭಿಸುತ್ತಿದ್ದಾನೆ. ಸಣ್ಣ ಮಕ್ಕಳು ಮತ್ತು ವಯಸ್ಕರು ಸಹಜವಾಗಿ ಕತ್ತಲೆಗೆ ಭಯಪಡುತ್ತಾರೆ. ಇದು ಅಪಾಯಗಳ ಸಾಧ್ಯತೆಯಿರುವ ಸ್ಥಳವಾಗಿದ್ದು ನಿಯಂತ್ರಣವನ್ನು ಕಳೆದುಕೊಂಡಿರುವ ಅಗಾಧಚಿಂತನೆಯ ಭಾವವನ್ನು ಹುಟ್ಟಿಸುತ್ತದೆ.

ಜೀವಿತವು ನಮ್ಮೆಲ್ಲರಿಗೂ ಆತ್ಮೀಕ ಮತ್ತು ಭಾವನಾತ್ಮಕ ಕತ್ತಲೆಯನ್ನು ಕೆಲವೊಮ್ಮೆ ಕೊಡುತ್ತದೆ. ಸಾರ್ವತ್ರಿಕವಾಗಿ ನಮ್ಮ ಜೀವಿತಗಳಲ್ಲಿ ಬೆಳಕಿನಿಂತ ಲಾಭವನ್ನು ಜನರು ನಾವಾಗಿದ್ದೇವೆ. ನಮಗೆ ಮಾರ್ಗದರ್ಶನ, ತಿಳುವಳಿಕೆ ಮತ್ತು ಭದ್ರತೆಯನ್ನು ಕೊಡುವದಕ್ಕಾಗಿ ನಮಗೆ ಕೇವಲ ಶಾರೀರಿಕವಾದ ಬೆಳಕಿನ ಅವಶ್ಯಕತೆ ಮಾತ್ರವಲ್ಲ ಬದಲಾಗಿ ಈ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವದಕ್ಕಾಗಿ ಆತ್ಮೀಕ ಬೆಳಕು ಸಹ ಬೇಕಾಗಿದೆ.

ಸತ್ಯವೇದದನುಸಾರವಾಗಿ ನೋಡುವದಾದರೆ "ಬೆಳಕು" ಎಂಬ ಪದವು ಒಳ್ಳೇದನ್ನು ಮತ್ತು ಸತ್ಯವನ್ನು ಸೂಚಿಸುತ್ತದೆ ಆದರೆ "ಕತ್ತಲೆಯು" ದುಷ್ಟತನವನ್ನು ಮತ್ತು ಸುಳ್ಳನ್ನು ಪ್ರತಿನಿಧಿಸುತ್ತದೆ. ಪ್ರಾಕೃತ ರಂಗದಲ್ಲಿ ನೋಡುವದಾದರೆ ಬೆಳಕು ಕತ್ತಲೆಗೆ ವಿರುದ್ಧವಾದದ್ದಾಗಿದೆ ಆದರೆ ಬಲದ ವಿಷಯಕ್ಕೆ ಬರುವದಾದರೆ ಕತ್ತಲೆಯು ಬೆಳಕಿಗಿಂತ ಬಲವಾದದ್ದಲ್ಲ. ಸತ್ಯವೇದದ ಶ್ರೇಷ್ಟವಾದ ಸತ್ಯವೇನೆಂದರೆ,

ಆತ್ಮೀಕ ಬೆಳಕು, ಅಥವಾ ಒಳ್ಳೇತನ ಮತ್ತು ಸತ್ಯ ಇವುಗಳನ್ನು ಕತ್ತಲೆಯು ಎಂದಿಗೂ ಜಯಿಸಲಾರದು (ಯೋಹಾನ 1:5). ಆದ್ದರಿಂದ ದೇವರ ಬೆಳಕಾಗಿರುವ ಯೋಹಾನನು ನಮ್ಮ ಮಾರ್ಗದರ್ಶನ, ತಿಳುವಳಿಕೆ ಮತ್ತು ಭದ್ರತೆಗೆ ಬೇಕಾಗಿರುವ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ವಾಗ್ದಾನಗಳ ಬಗ್ಗೆ ಮಾತನಾಡುವದು ಮಾತ್ರವಲ್ಲದೆ, ದುಷ್ಟತನವನ್ನು ಜಯಿಸಲು ನಮ್ಮನ್ನು ಬಲಪಡಿಸುತ್ತದೆ ಮತ್ತು ನಮ್ಮ ಜೀವಿತಗಳನ್ನು ಸತ್ಯದಿಂದ ತುಂಬುತ್ತದೆ.

ನೆರವೇರಿಕೆಗೆ ಪ್ರಾಮುಖ್ಯವಾದ ಕೆಲವು ಅಂಶಗಳು ಇಲ್ಲಿವೆ. ನಾವು ನಮ್ಮ ಕಲಿಕೆಯನ್ನು ಪ್ರಾರಂಭಿಸುತ್ತಾ, ಬೆಳಕಿನ ಅವಶ್ಯಕತೆ ನಮಗಿರುವದರ ಬಗ್ಗೆ ಸತ್ಯವೇದವು ಏನು ಹೇಳುತ್ತದೆ ಎಂದು ನೋಡಿಕೊಳ್ಳೋಣ.

1. ಎ. ಪ್ರಾಕೃತ ರಂಗದಲ್ಲಿ ಬೆಳಕು ಮತ್ತು ಕತ್ತಲೆಯ ನಡುವೆಯಿರುವ ಭಿನ್ನಭಾವವೇನು?

ಬಿ. ಈ ಭಿನ್ನಭಾವಗಳು ಆತ್ಮೀಕ ಮತ್ತು ಭಾವನಾತ್ಮಕ ಕತ್ತಲೆಗೆ ಹೇಗೆ ಸಂಬಂಧಪಟ್ಟಿವೆ?

2. ಜೀವಿತದ ಯಾವ ಸನ್ನಿವೇಶಗಳು ನಾವು ಕತ್ತಲೆಯಲ್ಲಿದ್ದೇವೆ ಎಂದು ಅಂದುಕೊಳ್ಳುವ ಹಾಗೆ ಮಾಡುತ್ತವೆ?

3. ಎ. ದೇವರು ಆತ್ಮೀಕವಾಗಿ ಮತ್ತು ಭಾವನಾತ್ಕವಾಗಿ ಕೊಡುವ ಬೆಳಕಿನ ಬಗ್ಗೆ ಕೆಳಗೆ ಕೊಡಲ್ಪಟ್ಟಿರುವ ವಚನಗಳು ಏನನ್ನು ಪ್ರಕಟಪಡಿಸುತ್ತವೆ?

ಕೀರ್ತನೆ 21:1

ಯೆಶಾಯ 42:16

ಯೆಶಾಯ 60:20

ಬಿ. ದೇವರ ಬೆಳಕನ್ನು ಸ್ವೀಕರಿಸಿಕೊಳ್ಳುವದರಲ್ಲಿ ನಮ್ಮ ಪಾತ್ರ ಏನೆಂದು ಸೂಚಿಸಲಾಗಿದೆ?

ಮತ್ತಾಯ 7:7–8

ಜ್ಞಾನೋಕ್ತಿ 3:5–6

4. ದೇವರ ಬೆಳಕಿಲ್ಲದ ಜೀವಿತದಿಂದ ಬರುವ ಕತ್ತಲೆಯ ಬಗ್ಗೆ ಸತ್ಯವೇದವು ಏನನ್ನು ವಿವರಿಸುತ್ತದೆ?

ಧರ್ಮೋಪದೇಶಕಾಂಡ 28:29

ಜ್ಞಾನೋಕ್ತಿ 4:19

5. ಆತ್ಮೀಕ ಅಂಧಕಾರಕ್ಕೆ ಕಾರಣವೇನೆಂದು, ಕೆಳಗೆ ಕೊಡಲ್ಪಟ್ಟಿರುವ ವಚನಭಾಗಗಳು ತಿಳಿಯಪಡಿಸುತ್ತವೆ?

ರೋಮಾ 1:21–22

ಎಫೆಸ 4:18

6.ಯೋಹಾನನು ತನ್ನ ಪೀಠಿಕಾಭಾಷಣದಲ್ಲಿ ಹೇಳುವಂತೆ, ನಮಗೆ ಎಂಥಾ ಬೆಳಕು ಬೇಕೆಂದು ಅಪೊಸ್ತಲನಾದ ಪೌಲನು ಪ್ರಕಟಿಸಿದ್ದಾನೆ?

2 ಕೊರಿಂಥ 4:6

7. ಎ. ಪ್ರವಾದಿಗಳು ಯೇಸು ಕ್ರಿಸ್ತನನ್ನು "ಇಮ್ಮಾನುವೇಲ್" ಎಂದು ಕರೆದಿದ್ದಾರೆ, ಅದರ ಅರ್ಥ "ದೇವರು ನಮ್ಮ ಸಂಗಡ ಇದ್ದಾನೆ" (ಮತ್ತಾಯ 1:23). ಈ ಲೋಕಕ್ಕೆ ಬರಲಿಕ್ಕಿದ್ದ ತನ್ನ ಮಗನ ಮೂಲಕವಾಗಿ ದೇವರು ನಮಗೆ ಎಂಥ ಆತ್ಮೀಕ ಬೆಳಕನ್ನು ಕೊಡಲು ಶಕ್ತನಾಗಿದ್ದನು?

ಬಿ. ಲೋಕಕ್ಕೆ ಬೆಳಕಾಗಿರುವ ಇಮ್ಮಾನುವೇಲನೇ ಯೇಸು ಕ್ರಿಸ್ತನು ಎಂಬ ನಮ್ಮ ತಿಳುವಳಿಕೆಗೆ ಕೆಳಗೆ ಕೊಡಲ್ಪಟ್ಟಿರುವ ವಚನಭಾಗವು ದೇವರ ಬಗ್ಗೆ ನಮಗೆ ಏನನ್ನು ಹೇಳುತ್ತದೆ?

2 ಸಮುವೇಲ 22:31

ಫಿಲಿಪ್ಪಿ 2:5–8

ಇಬ್ರಿಯ 4:14–15

8. ಯೇಸು ಕ್ರಿಸ್ತನು ತನ್ನಲ್ಲಿ ನಂಬಿಕೆಯನ್ನಿಡುವವರಿಗೆ ಏನನ್ನು ವಾಗ್ದಾನ ಮಾಡಿದ್ದಾನೆ?

ಯೋಹಾನ 8:12

## ಸಾರಾಂಶ

9. ಎ. ಯಾವಾಗ ಅಥವಾ ಹೇಗೆ ನೀವು ನಿಮ್ಮ ಜೀವಿತದಲ್ಲಿ ಆತ್ಮೀಕ ಮತ್ತು/ಅಥವಾ ಭಾವನಾತ್ಮಕ ಕತ್ತಲೆಯನ್ನು ಅನುಭವಿಸಿದ್ದೀರ?

ಬಿ. ದೇವರ ಕಾಂತಿಯಿಲ್ಲದೆ ಜೀವಿತವು ಹೇಗಿರುವದೆಂದು ನೀವು ಅಂದುಕೊಂಡಿದ್ದೀರ?

10. ಎ. ನೀವು ದೇವರನ್ನು ಬೇಡಿಕೊಳ್ಳುವಾಗ ಆತನು ವಾಗ್ದಾನ ಮಾಡುವ ಮಾರ್ಗದರ್ಶನ, ತಿಳುವಳಿಕೆ ಮತ್ತು ಭದ್ರತೆ ನಿಮ್ಮ ಜೀವಿತದ ಯಾವುದಾದರೂ ಕ್ಷೇತ್ರಗಳಿಗೆ ಈಗಲೂ ಬೇಕಿದೆಯೇ?

ಬಿ. ನಿಮ್ಮ ಅಗತ್ಯತೆ ಮತ್ತು ಅವುಗಳ ಪೂರೈಕೆಗಾಗಿ ಆತನ ನಂಬಿಗಸ್ಥಿಕೆಯನ್ನು ಒಪ್ಪಿಕೊಳ್ಳಲು ಒಂದು ನಿಮಿಷವನ್ನು ತೆಗೆದುಕೊಳ್ಳಿರಿ?

11. ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಾಗ ಅದುವೇ ನಮ್ಮನ್ನು ಕತ್ತಲೆಯಿಂದ ಬೆಳಕಿಗೆ ನಡೆಸುತ್ತದೆ ಎಂದು ಯೋಹಾನನು ಪ್ರಕಟಿಸಿದ್ದಾನೆ. ಇದನ್ನು ನಿಮ್ಮ ಜೀವಿತದಲ್ಲಿ ಮಾಡುವಂತೆ ನೀವು ಎಂದಾದರೂ ಯೇಸು ಕ್ರಿಸ್ತನನ್ನು ನಂಬಿದ್ದೀರ? ಒಂದುವೇಳೆ ನಂಬಿಲ್ಲದಿರುವದಾದರೆ ಮತ್ತು ನಂಬಬೇಕೆಂದು ಬಯಸುವದಾದರೆ, ನಿಮಗಾಗಿ ಈ ಪ್ರಾರ್ಥನೆಯನ್ನು ಕೊಟ್ಟಿದ್ದೇವೆ: *ಪರಲೋಕ ತಂದೆಯೇ, ನಿನ್ನ ಕುಮಾರನಾದ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವದರಿಂದ ಸಿಗುವ ಬೆಳಕು ನನಗೆ ಬೇಕು. ನನ್ನ ಜೀವಿತದಲ್ಲಿ ಬರುವಂತೆ ಮತ್ತು ನಿನ್ನ ಸತ್ಯದ ಕುರಿತಾಗಿ ನನಗಿರುವ ತಿಳುವಳಿಕೆಯ ಮೇಲೆ ಪ್ರಕಾಶವನ್ನು ಬೀರುವಂತೆ ಆಹ್ವಾನಿಸುತ್ತೇನೆ. ಆಮೆನ್.*

1 ಸುವಾರ್ತೆಯನ್ನು ಇಯುಗ್ಗೆಲಿಯೋನ್ ಎಂಬ ಗ್ರೀಕ್ ಪದದಿಂದ ಭಾಷಾಂತರ ಮಾಡಲಾಗಿದೆ ಇದರ ಅರ್ಥ "ಶುಭವಾರ್ತೆ." ಮನುಷ್ಯನ ಸ್ವಭಾವವನ್ನು ಮಾರ್ಪಡಿಸುವದರ ಮತ್ತು ಆತನ ಪಾಪವನ್ನು ಕ್ಷಮಿಸುವದರ ಮೂಲಕ ಮನುಷ್ಯರನ್ನು ತನ್ನೊಂದಿಗೆ ಸಂಧಾನ ಮಾಡಿಕೊಳ್ಳಬೇಕೆಂಬ ದೇವರ ಯೋಜನೆಗೆ ಈ ಪದವನ್ನು ಹೊಸ ಒಡಂಬಡಿಕೆಯಲ್ಲಿ ಬಳಸಲಾಗಿದೆ. ಸುವಾರ್ತಾ ಕಥೆಯು ದೇವರು ನಮಗೆ ಯೇಸು ಕ್ರಿಸ್ತನ ಕಾರ್ಯ ಮತ್ತು ಆತನ ಮೂಲಕವಾಗಿ ನಮಗೆ ಕೊಡಲ್ಪಟ್ಟಿರುವ ವರದಾನವಾಗಿದೆ, ಈ ವಿಷಯವನ್ನು ಪ್ರಚುರಪಡಿಸುವ ಜವಾಬ್ದಾರಿಕೆಯನ್ನು ಸಭೆಗೆ ವಹಿಸಲಾಗಿದೆ (ಮಾರ್ಕ 16:15; ಅ.ಕೃ 20:24; ಎಫೆಸ 1:13). ಯೇಸು ಕ್ರಿಸ್ತನ ಜೀವಿತ, ಮರಣ ಮತ್ತು ಪುನರುತ್ಥಾನದ ಪ್ರಭಾವವು, ಲೋಕದ ಜನರಿಗೆ ಆತನ ಸಂದೇಶವನ್ನು ಲೋಕದ ಜನರಿಗೆ ಪ್ರಚುರಪಡಿಸುವಂತೆ ಆತನ ಶಿಷ್ಯರನ್ನು ಪ್ರೇರೇಪಿಸಿತು. *Zondervan Pictorial Bible*

*Dictionary*, page 318.

2 ಯೋಹಾನನ ಬರವಣಿಗೆ. ಸತ್ಯವೇದದ ಅನೇಕ ಬರಹಗಾರರ ಹಾಗೆ, "ಯೇಸು ಕ್ರಿಸ್ತನಿಗೆ ಪ್ರಿಯನಾಗಿದ್ದ ಶಿಷ್ಯನೆಂದು" ಹೇಳಿಕೊಂಡಿರುವ ಯೋಹಾನನು ( cf. 13:23; 19:26; 20:2; 21:7), ಈ ಪುಸ್ತಕದಲ್ಲಿ ತನ್ನ ಹೆಸರನ್ನು ಎಲ್ಲಿಯೂ ಬರೆದಿಲ್ಲ. ಯೋಹಾನನು ಬರಹಗಾರನಲ್ಲದಿದ್ದರೆ; ಬೇರೆ ಯಾರೇ ಬರೆದಿದ್ದರೂ ಖಂಡಿತವಾಗಿಯೂ ಯೋಹಾನನ ಹೆಸರನ್ನು ಬರೆಯುತ್ತಿದ್ದರು, ಆಗ ಅದನ್ನು ವಿವರಿಸಲು ಬಹಳ ಕಷ್ಟವಾಗುತಿತ್ತು. ಯೆಹೂದ್ಯರ ಜೀವಿತದ ಬಗ್ಗೆ ಪರಿಪೂರ್ಣವಾದ ಮಾಹಿತಿಅಳು, ಸ್ಥಳಗಳು ಅದರ ಮೇರೆಗಳು ಮತ್ತು ಕಣ್ಣಾರೆ ಕಂಡ ವಿಷಯಗಳೆಲ್ಲವೂ ಯೋಹಾನನೇ ಬರಹಗಾರನೆಂದು ಒತ್ತಿ ಹೇಳುತ್ತವೆ. ಕಟ್ಟಳೆಗಳು ಮತ್ತು ಪ್ರಾಚೀನ ಬರಹಗಾರರಾದ ಐರೇನಿಯಸ್ ಮತ್ತು ಟರ್ಟುಲಿಯನ್‌ರಂಥವರು ಸಹ ಇದು ಯೋಹಾನನ ಬರವಣಿಗೆ ಎಂದು ಹೇಳಿದ್ದಾರೆ. ಯೋಹಾನನ ತಂದೆಯಾದ ಜೆಬೆದಾಯನು (21:2) ಮತ್ತು ಆತನ ತಾಯಿಯಾದ ಸಲೋಮೆ, ಇಬ್ಬರೂ ಯೇಸು ಕ್ರಿಸ್ತನ ಹಿಂಬಾಲಕರಾಗಿದ್ದರು (cf. ಮತ್ತಾಯ 27:56; ಮಾರ್ಕ 15:40; 16:1). ಯೇಸುವಿನ ತಾಯಿಯಾದ ಮರಿಯಳ ಸಹೋದರಿಯೇ ಸಲೋಮೆ ಎಂಬದು ಕೆಲವರ ನಂಬಿಕೆ (cf. ಮಾರ್ಕ 15:40; ಯೋಹಾನ 19:25). ನಿಜವಾಗಿ ಹೇಳುವದಾದರೆ ಯೇಸು ಕ್ರಿಸ್ತನ ಮತ್ತು ಯೋಹಾನನ ನಡುವಿನ ಆಳವಾದ ಸಂಬಂಧ ಬಾಲ್ಯದಿಂದಲೇ ಅವರ ನಡುವೆಯಿತ್ತು ಯಾಕೆ–ಂದರೆ ಅವರು ದಾಯಾದಿಗಳಾಗಿದ್ದರು. ಅಪೊಸ್ತಲನಾದ ಯಾಕೋಬನು, ಯೋಹಾನನ ಅಣ್ಣ, ಅಪೊಸ್ತಲರಲ್ಲಿ ಮೊದಲನೆಯದಾಗಿ ರಕ್ತಸಾಕ್ಷಿಯಾದವನು ಈತನೇ (ಅ.ಕೃ 12:2). ಅವರು ಗಲಿಲಾಯ ಸಮುದ್ರದಲ್ಲಿ ಮೀನನ್ನು ಹಿಡಿಯುತ್ತಿದ್ದರು, ಮೀನುಗಾರಿಗೆ ಅವರ ವೃತ್ತಿಯಾಗಿತ್ತು. ಯೇಸು ಕ್ರಿಸ್ತನ ಮರಣದ ನಂತರ, ಯೋಹಾನನ ಯೆರೂಸಲೇಮಿನ ಸಭೆಯಲ್ಲಿ ನಾಯಕನಾದನು (ಗಲಾತ್ಯ 2:9), ನಂತರ ಅವನು ತನ್ನ ಜೀವಿತದ ಕೊನೆಯ ದಿನಗಳನ್ನು ಕಳೆದ ಎಫೆಸದಲ್ಲಿ ಈ ಸುವಾರ್ತೆಯನ್ನು ಬರೆದನು. ಯೋಹಾನನು ಒಟ್ಟಾಗಿ ಹೊಸ ಒಡಂಬಡಿಕೆಯಲ್ಲಿ ಐದು ಪುಸ್ತಕಗಳನ್ನು ಬರೆದಿದ್ದಾನೆ: ಮೂರು ಪತ್ರಿಕೆಗಳು (1, 2 ಮತ್ತು 3ನೇ ಯೋಹಾನನ ಪತ್ರಿಕೆ), ಯೋಹಾನನ ಸುವಾರ್ತೆ ಮತ್ತು ಪ್ರಕಟನೆ (ಪತ್ಮೋಸ್ ದ್ವೀಪದಲ್ಲಿ ಸೆರೆಯಾಗಿದ್ದಾಗ ಬರೆಯಲ್ಪಟ್ಟದ್ದು).

ಪುರಾಣವು ಹೇಳುವದೇನೆಂದರೆ ಯೋಹಾನನು ಈ ಸುವಾರ್ತೆಯನ್ನು ತನ್ನ ಕ್ರೈಸ್ತೀಯ ಸ್ನೇಹಿತರ ಒತ್ತಾಯದ ಮೇರೆಗೆ ಬರೆದಿದ್ದಾನೆ, ಸಭೆಯವರು ಮೂರು ದಿವಸಗಳ ಕಾಲ ಉಪವಾಸವಿದ್ದು ಪ್ರಾರ್ಥಿಸಿದ ನಂತರವೇ ಆತನು ಇದನ್ನು ಬರೆಯಲು ಒಪ್ಪಿಕೊಂಡನು. *The Zondervan Pictorial Bible Dictionary*, page 438.

3 ವಾಕ್ಯ. ಪೀಠಿಕಾ ಭಾಷಣದಲ್ಲಿ ಯೇಸು ಕ್ರಿಸ್ತನಿಗೆ ಕೊಡಲಾಗಿರುವ ಅಗಮ್ಯವಾದ ತಲೆಬರಹ "ವಾಕ್ಯ" ಎಂಬ ಪದವಾಗಿದೆ. ಗ್ರೀಕ್ ಪದವಾದ ಲೋಗೋಸ್‌ನಿಂದ ಭಾಷಾಂತರ ಮಾಡಲ್ಪಟ್ಟಿರುವ ಉತ್ತಮವಾದ ಪದ ಇದಾಗಿದೆ, ಇದನ್ನು ಉತ್ತಮವಾಗಿ ವ್ಯಾಖ್ಯಾನಿಸಲಾಗಿದೆ "ಕಾರಣ." ಗ್ರೀಕರಿಗೆ ಲೋಗೋಸ್ ಎಂದರೆ, ಲೋಕದಲ್ಲಿ ಕ್ರಮವಾಗಿರುವ ಹಿಂದೆ ಇರುವ ಶಕ್ತಿ ಮತ್ತು ಮೂಲಕಾರಣ. ಯೆಹೂದ್ಯರಿಗೆ ಲೋಗೋಸ್ ಎಂದರೆ ಇಡೀ ಲೋಕವನ್ನೇ ಸೃಷ್ಟಿಸಿದ ದೇವರ ಪ್ರಭಾವಶಾಲಿಯಾದ ಮಾತಾಗಿದೆ.

4 ಸ್ನಾನಿಕನಾದ ಯೋಹಾನನು ಇಸ್ರಾಯೇಲಿನಲ್ಲಿ ವಿಶೇಷವಾದ ವ್ಯಕ್ತಿತ್ವವುಳ್ಳವನಾಗಿದ್ದನು. (ಪಾಠ 2 ವ್ಯಾಖ್ಯಾನವನ್ನು ನೋಡಿರಿ) ಯೋಹಾನನು ದೃಢಮೂಲನಾಗಿದ್ದನು, ಯೋರ್ದಾನಿನ ಆಚೆ ಅರಣ್ಯಪ್ರದೇಶದಲ್ಲಿ ಜೀವಿಸುತ್ತಿದ್ದನು. ಆತನು ಮುಂದೆ ಬರಲಿಕ್ಕಿದ್ದ ಮೆಸ್ಸೀಯನಿಗಾಗಿ ತಮ್ಮ ಪಾಪಗಳನ್ನು ತೊಳೆದುಕೊಂಡು ಶುದ್ಧರಾಗುವದಕ್ಕೆ ಗುರುತಾಗಿ ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನದ ಬಗ್ಗೆ ಬೋಧಿಸಿದನು. ಯೋಹಾನನ ಸಂದೇಶವನ್ನು ಕೇಳಿದ ಯೆಹೂದ್ಯರು ಮತ್ತು ಅನ್ಯರು

ನೀರಿನಲ್ಲಿ ದೀಕ್ಷಾಸ್ನಾನವನ್ನು ಮಾಡಿಸಿಕೊಂಡರು. ಮೆಸ್ಸೀಯನನ್ನು ಎದುರುಗೊಳ್ಳುವದಕ್ಕೆ ಸಿದ್ಧರಾಗಿದ್ದ ಯೆಹುದ್ಯರು ದೇವರಿಂದ ಆರಿಸಲ್ಪಟ್ಟವರು ಮತ್ತು ಅಬ್ರಹಾಮನ ಸಂತತಿಯವರಾಗಿದ್ದರಿಂದ ಯೋಹಾನನ ಬೋಧನೆಯನ್ನು ಕೇಳಿ ಬಹಳವಾಗಿ ಕೋಪಿಸಿಕೊಂಡರು; ಅನ್ಯಜನರಿಂದ ರೂಪಾಂತರಗೊಂಡು ಯೆಹೂದ್ಯ ನಂಬಿಕೆಯನ್ನು ಆಚರಿಸುತ್ತಿದ್ದವರು ಮಾತ್ರ ಇದಕ್ಕೂ ಮುಂಚೆ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು. ಏನೇಆದರೂ ಬಹಳಷ್ಟು ಅಸಂಖ್ಯರಾದ ಜನರು ಯೋಹಾನನ ಮಾತುಗಳನ್ನು ಕೇಳಲು ಮತ್ತು ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಯೋರ್ದನ್ ಹೊಳೆಯ ಬಳಿ ಬರುತ್ತಿದ್ದರು.

# ಪಾಠ 2

# ಮೊದಲನೆಯ ಶಿಷ್ಯರು

## ಯೋಹಾನ 1:19–51

ಸ್ನಾನಿಕನಾದ ಯೋಹಾನನು ಇಸ್ರಾಯೇಲಿನಲ್ಲಿ ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿತ್ವವುಳ್ಳವನಾಗಿದ್ದನು ಮತ್ತು ತನ್ನ ಬೋಧನೆಯ ಮೂಲಕವಾಗಿ ಪಾಲಿಸ್ತೀನಿನಲ್ಲಿ ಅಪಾರವಾದ ಜಾಗೃತಿಯನ್ನು ಮೂಡಿಸಿದನೆಂದು ಸತ್ಯವೇದದ ಯಾವ ವಚನಭಾಗಗಳೂ ತಿಳಿಸುವದಿಲ್ಲ. ಯೆಹೂದ್ಯ ಚರಿತ್ರಕಾರನಾದ ಜೋಸ್‌ಫಸ್ ಎಂಬವನು ಯೇಸು ಕ್ರಿಸ್ತನಿಗಿಂತ ಹೆಚ್ಚಾಗಿ ಸ್ನಾನಿಕನಾದ ಯೋಹಾನನ ವಿಷಯದಲ್ಲಿ ಬರೆದಿದ್ದಾನೆ.

ಸ್ನಾನಿಕನಾದ ಯೋಹಾನನನ್ನು ವಿಸ್ತಾರವಾದ ರೀತಿಯಲ್ಲಿ ಪ್ರವಾದಿ ಎಂದು ನಂಬಲಾಗುತಿತ್ತು ಈ ಕಾರಣದಿಂದಲೇ ಅವನು ಬಹಳಷ್ಟು ಪ್ರಭಾವಶಾಲಿಯಾಗಿದ್ದನು. ಜನರು ಪ್ರವಾದಿಗಳ ಮೂಲಕವಾಗಿ ದೇವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರೆಂದು ಇಸ್ರಾಯೇಲರ ಚರಿತ್ರೆಯು ತಿಳಿಸುತ್ತದೆ. ಇಸ್ರಾಯೇಲ್ ಜನರು ತಮ್ಮ ಪ್ರವಾದಿಗಳ ವಿಷಯದಲ್ಲಿ ಬಹಳ ಹೆಚ್ಚಳಪಡುತ್ತಿದ್ದರು, ಆದರೆ ನಾನೂರು ವರ್ಷಗಳ ಅವಧಿಯಲ್ಲಿ ಅಂದರೆ ಮಲಾಕಿಯ ನಂತರ ಇಸ್ರಾಯೇಲಿನಲ್ಲಿ ಪ್ರವಾದಿಯು ಇರಲಿಲ್ಲ. ದೇವರು ನಿಶ್ಯಬ್ದವಾಗಿದ್ದನು. ನಂತರ ದೃಢಮೂಲನಾಗಿದ್ದ ಯೋಹಾನನು ಬಂದನು, ಅವನು ಮರಳುಕಾಡಿನಲ್ಲಿ ಜೀವಿಸುತ್ತಾ ಮಿಡತೆ ಮತ್ತು ಕಾಡುಜೇನು ತಿನ್ನುತ್ತಿದ್ದನು. ವಾಗ್ದಾನ ಮಾಡಲ್ಪಟ್ಟಿದ್ದ ಮೆಸ್ಸೀಯನಿಗಾಗಿ ಸಿದ್ಧಗೊಳ್ಳುವದಕ್ಕಾಗಿ ಆತನು ಯಾವುದೇ ರಾಜಿಯಿಲ್ಲದೇ ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಡಿರಿ ಎಂದು ಸಾರಿದನು.

ಯೆಹೂದ್ಯರಾದರೋ ತಮ್ಮನ್ನು ರೋಮನ್ನರ ದಬ್ಬಾಳಿಕೆಯಿಂದ ಬಿಡಿಸಿ ಲೋಕದಲ್ಲಿಯೇ ಬಲಿಷ್ಠ ಜನಾಂಗವನ್ನಾಗಿ ಮಾಡುವ ಮೆಸ್ಸೀಯನಿಗಾಗಿ ಕಾಯುತ್ತಿದ್ದರು.1 ಆದರೆ ಸ್ನಾನಿಕನಾದ ಯೋಹನನಾದರೋ ಕೇವಲ ಅಬ್ರಹಾಮನ ಸಂತತಿಯವರಾಗಿದ್ದರೆ ಮಾತ್ರ ದೇವರ ಮುಂದೆ ನೀತಿವಂತರೆಂದು ನಿರೂಪಿಸಿಕೊಳ್ಳಲು ಸಾಧ್ಯವಿಲ್ಲ ಮತ್ತು ಮೆಸ್ಸೀಯನು ಪ್ರತಿಯೊಬ್ಬರ ಹೃದಯಗಳನ್ನು ವ್ಯಕ್ತಿಗತವಾಗಿ ವಿಚಾರಿಸುವದಕ್ಕಾಗಿ ಬರುತ್ತಿದ್ದಾನೆ ಎಂದು ಸಾರುತ್ತಿದ್ದನು. ಯೆಹೂದ್ಯರು ಮತ್ತು ಅನ್ಯಜನರು ಕ್ರಿಸ್ತನನ್ನು ಸಂಧಿಸಲು ಸಿದ್ಧಗೊಳ್ಳಬೇಕಾದರೆ ತಮ್ಮ ಪಾಪಗಳನ್ನು ಅರಿಕೆಮಾಡಿಕೊಳ್ಳಬೇಕು ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿದನು. ಜನರು ಗುಂಪುಗುಂಪಾಗಿ ಯೋಹಾನನ ಮಾತುಗಳನ್ನು ಕೇಳುವದಕ್ಕಾಗಿ ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕಾಗಿ ಯೊರ್ದಾನ ಹೊಳೆಯ ಹತ್ತಿರ ಬರುತ್ತಿದ್ದರು.

ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನದ ಬಗ್ಗೆ ಆತನು ಸಾರುತಿದ್ದರಿಂದ, ಯೆಹೂದ್ಯರಾದ ಅನೇಕ ನಾಯಕರು ಪ್ರವಾದಿಯನ್ನು ತಿರಸ್ಕರಿಸಿದರು. ದೇವರು ಆರಿಸಿಕೊಂಡಿರುವ ಜನರೊಂದಿಗೆ ಯೋಹಾನನು ಅನ್ಯಜನಗಳಿಗೂ ದೀಕ್ಷಾಸ್ನಾನ ಮಾಡಿಸುತ್ತಿದ್ದಾನೆ ಎಂಬದು ಅವರ ಆರೋಪವಾಗಿತ್ತು (ಯೆಹೂದ್ಯರು ಈಗಾಗಲೇ ಯೆಹೂದ್ಯ ನಂಬಿಕೆಯನ್ನು ಸ್ವೀಕರಿಸಿಕೊಂಡು ಯೆಹೂದ್ಯರಾಗಿದ್ದ

ಅನ್ಯರಿಗೆ ದೀಕ್ಷಾಸ್ನಾನವನ್ನು ಕೊಟ್ಟಿದ್ದರು). ಕೇವಲ ಶಾರೀರಿಕ ಸಂಬಂಧದಲ್ಲಿ ಅಬ್ರಹಾಮನ ಸಂತತಿಯವರಾಗಿದ್ದರೆ ಸಾಕು ದೇವರ ಎದುರಿನಲ್ಲಿ ನೀತಿವಂತರೆಂದು ನಿಂತುಕೊಳ್ಳಬಹುದು ಎಂದು ಯೆಹೂದ್ಯರು ನಂಬುತ್ತಿದ್ದರು. ಮೆಸ್ಸೀಯನ ಬರೋಣಕ್ಕಾಗಿ ನಿಮ್ಮನ್ನು ಸಿದ್ಧಮಾಡಿಕೊಳ್ಳಬೇಕಾದರೆ ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಿರಿ ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಎಂಬ ಯೋಹಾನನ ಸೂಚನೆಯಿಂದ ಧಾರ್ಮಿಕ ನಾಯಕರಿಗೆ ಬಹಳವಾಗಿ ಅವಮಾನವಾಯಿತು. ಆದರೆ ಯೋಹಾನನ ಪ್ರಖ್ಯಾತಿ ಮತ್ತು ಆತನೊಬ್ಬ ಪ್ರವಾದಿ ಎಂಬ ಸಾರ್ವಜನಿಕರ ಅಭಿಪ್ರಾಯ ಆತನ ನಿಂದಕರು ಬಾಯಿ ಮುಚ್ಚಿಕೊಳ್ಳುವಂತೆ ಮಾಡಿತು. ಆದ್ದರಿಂದ ಆತನ ಸೇವೆಯನ್ನು ಮೊಟಕುಗೊಳಿಸುವದಕ್ಕಾಗಿ ಅವರು ಕುತಂತ್ರಗಳನ್ನು ರೂಪಿಸಲು ಮುಂದಾದರು.

ಯೋಹಾನನು ಯೋರ್ದಾನ್ ಹೊಳೆಯಲ್ಲಿ ಜನರಿಗೆ ದೀಕ್ಷಾಸ್ನಾನವನ್ನು ಮಾಡಿಸುತ್ತಿದ್ದಾಗ, ಆತನಿಗೆ ಈ ಸೇವೆಯನ್ನು ಮಾಡುವ ಅಧಿಕಾರವು ಎಲ್ಲಿಂದ ಬಂತು ಎಂಬದನ್ನು ಬಹಿರಂಗವಾಗಿ ಪ್ರಶ್ನಿಸುವದಕ್ಕಾಗಿ ಯೆರೂಸಲೇಮಿನಲ್ಲಿದ್ದ ಯೆಹೂದ್ಯ ನಾಯಕರು ತಮ್ಮ ಪ್ರತಿನಿಧಿಗಳನ್ನು ಆತನ ಬಳಿಗೆ ಕಳುಹಿಸಿದರು (ಯೋಹಾನ 1:19–28). ಅವರು ಆತನನ್ನು ನೀನು, ಸಾವನ್ನು ಕಾಣದೆ ಹೋದ ಹಳೆಯ ಒಡಂಬಡಿಕೆಯ ಪ್ರವಾದಿಯಾದ ಎಲೀಯನೋ (ಮಲಾಕಿ 4:5) ಅಥವಾ ಧರ್ಮೋಪದೇಶಕಾಂಡ 18:15ರಲ್ಲಿ ಮೋಶೆಯು ಬರೆದಿರುವ ಪ್ರವಾದಿಯೋ ಎಂದು ವಿಚಾರಿಸಿದರು. ಇವರ್ಯಾರು ಅಲ್ಲದಿದ್ದರೆ ನೀನು ಮೆಸ್ಸೀಯನೋ? ಅವರು ಆತನನ್ನು ನಿಜವಾಗಿ ಕೇಳುತಿದ್ದದ್ದೇನೆಂದರೆ, "ಪಶ್ಚಾತ್ತಾಪದ ಬಗ್ಗೆ ಸಾರುವ ಮತ್ತು ಯೆಹೂದ್ಯರಿಗೆ ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ನಿನಗೆ ಎಲ್ಲಿಂದ ಬಂತು?"

ಯೋಹಾನನು ತನ್ನನ್ನು ವಿಚಾರಿಸಲು ಬಂದಿದ್ದವರಿಗೆ ಬುದ್ಧಿವಂತಿಕೆಯಿಂದ, ಬರಲಿಕ್ಕಿರುವ ಹಳೆಯ ಒಡಂಬಡಿಕೆ ಪ್ರವಾದಿಗಳಲ್ಲಿ ನಾನು ಯಾರೂ ಅಲ್ಲ ಎಂದು ಹೇಳಿದನು. ಆದರೆ ಪ್ರವಾದಿಯಾದ ಯೆಶಾಯನ ಮಾತುಗಳಲ್ಲಿ ತನ್ನ ಬಗ್ಗೆ ಆತನು ಪ್ರಕಟಪಡಿಸಿದೇನೆಂದರೆ, ದೇವರು ನನ್ನನ್ನು ಕಳುಹಿಸಿರುವದು, "ಕರ್ತನ ದಾರಿಯನ್ನು ಸಿದ್ಧಮಾಡುವದಕ್ಕಾಗಿ" ಅಂದನು (ಯೆಶಾಯ 40:3). ಧಾರ್ಮಿಕ ನಾಯಕರು ಆತನ ಮೇಲೆ ಗಮನವನ್ನು ಕೇಂದ್ರೀಕರಿಸುವದಕ್ಕೆ ಪ್ರಯತ್ನಪಟ್ಟಷ್ಟೂ ಆತನು ಅವರ ಗಮನವನ್ನು ಯೇಸು ಕ್ರಿಸ್ತನ ಕಡೆಗೆ ತಿರುಗಿಸಿದನು.

ಆತನು ಧಾರ್ಮಿಕ ನಾಯಕರೊಡನೆ ಇವುಗಳನ್ನೆಲ್ಲಾ ಮಾತನಾಡಿದ ಮಾರನೆಯ ದಿನವೇ, ಯೇಸು ಕ್ರಿಸ್ತನು ಯೋಹಾನನಿಂದ ದಿಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕಾಗಿ ಯೋರ್ದಾನಿಗೆ ಬಂದನು. ಯೇಸುವಿನ ದಾಯಾದಿಯಾಗಿರುವ ಯೋಹಾನನಿಗೆ (cf. ಲೂಕ 1:13–17, 30–31, 36), ಆತನು ಮೊದಲೇ ಗೊತ್ತಿತ್ತು, ಈ ಸಂಧರ್ಭದಲ್ಲಿ ಯೇಸು ಕ್ರಿಸ್ತನೇ ಮೆಸ್ಸೀಯನೆಂದು ಯೋಹಾನನು ಮನವರಿಕೆ ಮಾಡಿಕೊಂಡನು. ಯೇಸುವೇ ಮೆಸ್ಸೀಯನೆಂದು ಹೇಗೆ ಮನವರಿಕೆ ಮಾಡಿಕೊಳ್ಳಬೇಕೆಂದು ದೇವರು ಯೋಹಾನನಿಗೆ ಮೊದಲೇ ಪ್ರಕಟಪಡಿಸಿದ್ದನು. ಆತನು ಬಂದಾಗ, ಪವಿತ್ರಾತ್ಮನ ಇಳಿದು ಬಂದು ಆತನಲ್ಲಿ ನೆಲೆಸುವದನ್ನು ಯೋಹಾನನು ನೋಡಿದನು. ಆತನು ಯೇಸುವಿಗೆ ದೀಕ್ಷಾಸ್ನಾನವನ್ನು ಕೊಟ್ಟಾಗ, ಪವಿತ್ರಾತ್ಮನು ಪಾರಿವಾಳದ ಮೂಲಕ ಇಳಿದುಬರುವದನ್ನು ಮತ್ತು ಯೇಸುವಿನಲ್ಲಿ ನೆಲೆಸುವದನ್ನು ಕಂಡನು.

ತಕ್ಷಣವೇ, ಪ್ರಾಮುಖ್ಯತೆ ಮತ್ತು ಸೇವೆಯಲ್ಲಿ ಯೇಸುವೇ ತನಗಿಂತಲೂ ಉನ್ನತನು ಎಂದು

ಯೋಹಾನನು ಪ್ರಕಟಪಡಿಸಿದನು ಮತ್ತು ಆತನನ್ನೇ ಹಿಂಬಾಲಿಸುವಂತೆ ತನ್ನ ಶಿಷ್ಯರನ್ನೂ ಪ್ರೋತ್ಸಾಹಪಡಿಸಿದನು. ಸ್ನಾನಿಕನು ಧೈರ್ಯದಿಂದ ಯೇಸುವನ್ನು "ಲೋಕದ ಪಾಪವನ್ನು ತೆಗೆದುಹಾಕುವ ಯಜ್ಞದ ಕುರಿಮರಿ2" (1:29) ಈತನು ನಿಮಗೆ "ಪವಿತ್ರಾತ್ಮನಿಂದ ದೀಕ್ಷಾಸ್ನಾನ ಮಾಡಿಸುವನು" (1:33),3 ಮತ್ತು ಈತನೇ "ದೇವಕುಮಾರನೆಂದು" ಪರಿಚಯಪಡಿಸಿದನು (1:34).

ಹೀಗೆ ಯೇಸು ಕ್ರಿಸ್ತನು, ಸ್ನಾನಿಕನಾದ ಯೋಹಾನನ ಪೂರ್ತಿಯಾದ ಸೇವೆ ಮತ್ತು ಪ್ರಭಾವಶಾಲಿಯಾದ ದೃಢೀಕರಣ ತನ್ನ ಹಿಂದೆ ಇದ್ದದ್ದರಿಂದ ತನ್ನ ಸಾರ್ವಜನಿಕ ಸೇವೆಯನ್ನು ಪ್ರಾರಂಭಿಸಿದನು. ಯೋಹಾನನು ದೀಕ್ಷಾಸ್ನಾನ ಮಾಡಿಸುತ್ತಿದ್ದ ಯೋರ್ದಾನ ಹೊಳೆಯ ಹಿಂಭಾಗದಲ್ಲಿದ್ದ ಬೆಥಾನ್ಯದಲ್ಲಿ, ಯೇಸು ಕ್ರಿಸ್ತನು ತನ್ನ ಮೊದಲನೆಯ ಶಿಷ್ಯರನ್ನು ಹುಡುಕೊಳ್ಳಲು ಪ್ರಾರಂಭಿಸಿದನು. ಈ ಎಲ್ಲಾ ಜನರಿಗೆ ದೀಕ್ಷಾಸ್ನಾನವನ್ನು ಮಾಡಿಸಿದ್ದ, ಸ್ನಾನಿಕನಾದ ಯೋಹಾನನು, ಯೋಹಾನನನ್ನು ಮತ್ತು ಆಂದ್ರೇಯನನ್ನು ಯೇಸುವಿನ ಬಳಿಗೆ ಕಳುಹಿಸಿದನು. ಆಂದ್ರೇಯನು ತನ್ನ ಸಹೋದರನಾದ ಸಿಮೋನನನ್ನು ಯೇಸುವಿನ ಬಳಿಗೆ ಕರತಂದನು, ಯೇಸು ಆತನಿಗೆ ಪೇತ್ರ ಎಂದು ಹೆಸರಿಟ್ಟನು. ಯೇಸು ಫಿಲಿಪ್ಪನನ್ನು ಕರೆದನು, ಅವನು ನಂತರ ನತಾನಿಯೇಲನನ್ನು ಕರೆತಂದನು. ದೇವರಿಗೆ ಮಾತ್ರವೇ ಗೊತ್ತಿದ್ದ ನತಾನಿಯೇಲನ ಸ್ವಭಾವ ಮತ್ತು ಜೀವಿತವನ್ನು ಯೇಸು ಕ್ರಿಸ್ತನು ಪ್ರಕಟಪಡಿಸುವವರೆಗೂ ನತಾನಿಯೇಲನು ನಂಬದವನಾಗಿದ್ದನು. ನತಾನಿಯೇಲನು ಅತ್ಯಾಶ್ಚರ್ಯಪಟ್ಟನು, ಆದರೆ "ಮನುಷ್ಯಕುಮಾರನೊಂದಿಗೆ" ನೀವಿರುವ ಸಮಯದಲ್ಲಿ ದೇವರ ಅತ್ಯಧಿಕವಾದ ಪ್ರಕಟನೆಗಳನ್ನು ಕಾಣುವಿರಿ ಎಂದು ಯೇಸು ಕ್ರಿಸ್ತನು ಅವರಿಗೆ ವಾಗ್ದಾನ ಮಾಡಿದನು.4

## ಯೋಹಾನ 1:19–28 ಓದಿರಿ

1. ಸ್ನಾನಿಕನಾದ ಯೋಹಾನನನ್ನು ಪ್ರಶ್ನಿಸಲು ಯೆಹೂದ್ಯರ ನಾಯಕರು ಯೋರ್ದಾನಿನ ಹಿಂಭಾಗದಲ್ಲಿರುವ ಬೆಥಾನ್ಯಕ್ಕೆ ಬಂದಾಗ, ಆತನು ತನ್ನ ಬಗ್ಗೆ ಏನೆಂದು ಹೇಳಿಕೊಂಡನು (1:19–23)?
**Reference:** ಕ್ರಿಸ್ತನು, ನೋಟ್ 1, ಪುಟ 17.

2. ಫರಿಸಾಯರು ಪ್ರಶ್ನೆಗಳನ್ನು ಮುಂದುವರೆಸಿದಾಗ, ಯೋಹಾನನು ಅವರ ಗಮನವನ್ನು ಯಾರ ಕಡೆಗೆ ತಿರುಗಿಸಿದನು (1:26–27)?

**ಯೋಹಾನ 1:29–34 ಓದಿರಿ.**

3.ಎ. ಸ್ನಾನಿಕನಾದ ಯೋಹಾನನು ಯೇಸುವಿನ ಮೊದಲನೆಯ ಶಿಷ್ಯನು. ಯೇಸುವಿಗೆ ದೀಕ್ಷಾಸ್ನಾನವನ್ನು ಕೊಟ್ಟ ನಂತರ (ಮತ್ತಾಯ 3:13–17), ಯೋಹಾನನು ಯೇಸುವನ್ನು ಜನರಿಗೆ ಹೇಗೆ ಪರಿಚಯಪಡಿಸಿದನು (1:29–31)?
**Reference:** ನೋಟ್ 2, ದೇವರ ಕುರಿಮರಿ, ಪುಟ 18.

ಬಿ. ಯೇಸುವೇ ಮೆಸ್ಸೀಯನೆಂದು ದೇವರು ಯೋಹಾನನಿಗೆ ಹೇಗೆ ಪ್ರಕಟಪಡಿಸಿದನು (1:32–33; ಮತ್ತಾಯ 3:13–17 ಸಹ ನೋಡಿರಿ).

**Reference:** ನೋಟ್ 3, ಪವಿತ್ರಾತ್ಮನ ದೀಕ್ಷಾಸ್ನಾನ, ಪುಟ 18.

ಸಿ. ಯೇಸು ಕ್ರಿಸ್ತನನ್ನು ಪರಿಚಯಪಡಿಸುವ ತನ್ನ ಕಾರ್ಯವನ್ನು ನೆರವೇರಿಸಿದ ನಂತರ ಯೋಹಾನನ ಪ್ರಕಟನೆ ಏನಾಗಿತ್ತು (1:34)?

**ಯೋಹಾನ 1:35–42 ಓದಿರಿ.**

4.ಎ. ಆಂದ್ರೇಯನು ಯೇಸುವನ್ನು ಸಂಧಿಸಿದಾಗ ಏನಾದ ಮೇಲೆ ಮನದಟ್ಟುಮಾಡಿಕೊಂಡನು (1:35–41)?

ಬಿ. ಆಂದ್ರೇಯನ ಹೊಸ ದೃಢತೆ ಮತ್ತು ಉತ್ಸುಕತೆ ಏನನ್ನು ಮಾಡುವಂತೆ ಪ್ರೇರೇಪಿಸಿತು (1:42)?

5. ಯೇಸು ಕ್ರಿಸ್ತನು ಸಿಮೋನನನ್ನು ಹೇಗೆ ಸ್ವೀಕರಿಸಿಕೊಂಡನು (1:42)?

ಗಮನಕ್ಕೆ: ಕೇಫಾಸ್ (ಅರಾಮಿಕ್) ಮತ್ತು ಪೇತ್ರ (ಗ್ರೀಕ್) ಅಂದರೆ ಬಂಡೆ. "ಸುವಾರ್ತೆಗಳಲ್ಲಿ ಪೇತ್ರನು ಬಂಡೆಗೆ ಹೋಲಿಕೆಯಾಗಿದ್ದಾನೆ; ಆತನು ದುಡುಕು ಸ್ವಭಾವವುಳ್ಳವನು ಮತ್ತು ಸ್ಥಿರತೆಯಿಲ್ಲದವನಾಗಿದ್ದನು. ಅಪೊಸ್ತಲರ ಕೃತ್ಯಗಳಲ್ಲಿ ಆತನು ಮೊದಲನೆಯ ಶತಮಾನದ ಸಭೆಯ ಆಧಾರಸ್ತಂಭವಾಗಿದ್ದನು. ಆತನು ಏನಾಗಿದ್ದನು ಎಂಬ ಕಾರಣಕ್ಕಾಗಿ ಯೇಸು ಅವನಿಗೆ ಈ ಹೆಸರನ್ನು ಕೊಡಲಿಲ್ಲ ಬದಲಾಗಿ ದೇವರ ಕೃಪೆಯ ನಿಮಿತ್ತ ಆತನು ಏನಾಗುವನು ಎಂಬದನ್ನು ನಿರೂಪಿಸುವದಕ್ಕಾಗಿ ಈ ಹೆಸರನ್ನು ಕೊಟ್ಟನು." The NIV Study Bible, Page 1595.

**ಯೋಹಾನ 1:43–51 ಓದಿರಿ.**

6. ಫಿಲಿಪ್ಪನ ಕರೆಯುವಿಕೆಯಲ್ಲಿ ವ್ಯತ್ಯಸ್ಥವಾದ ವಿಷಯ ಏನಾಗಿತ್ತು (1:43)?

7.ಎ. ಫಿಲಿಪ್ಪನು ನತಾನಿಯೇಲನನ್ನು ಯೇಸುವಿನ ಬಳಿಗೆ ಕರೆತಂದಾಗ, ಯೇಸು ನತಾನಿಯೇಲನ ಪ್ರಶ್ನೆಗಳನ್ನು ಹೇಗೆ ಹೋಗಲಾಡಿಸಿದನು (1:44–49)?

**ಗಮನಿಸಿರಿ:** 47ನೇ ವಚನದಲ್ಲಿ ನತಾನಿಯೇಲನ ಹೃದಯವನ್ನು ತಿಳಿದುಕೊಂಡಿರುವ ಯೇಸುವು, ಆತನು ಪರಿಪೂರ್ಣನೆಂದು ಹೇಳುತ್ತಿಲ್ಲ ಬದಲಾಗಿ ಆತನು ತನ್ನ ನಂಬಿಕೆಯಲ್ಲಿ ಪ್ರಾಮಾಣಿಕನು ಮತ್ತು ಕಪಟವಿಲ್ಲದವನು ಎಂದು ಹೇಳುತ್ತಿದ್ದಾನೆ. ಅಂಜೂರದ ಮರದ ಕೆಳಗೆ ಕುಳಿತ್ತಿದ್ದನು ನೋಡಲು ಯೇಸು ಅಲ್ಲಿರಲಿಲ್ಲ ಎಂದು ನತಾನಿಯೇಲನಿಗೆ ಚೆನ್ನಾಗಿ ಗೊತ್ತಿತ್ತು (1:48). ಯೇಸುವಿನ ಹೇಳಿಗೆ ದೇವರು ಸರ್ವಜ್ಞಾನಿ ಮತ್ತು ಸರ್ವವ್ಯಾಪಿ ಎಂಬದಕ್ಕೆ ಸಾಕ್ಷಿಯಾಗಿತ್ತು ಮತ್ತು ಯೇಸು ಕ್ರಿಸ್ತನೇ ದೇವಕುಮಾರನೆಂದು ಹೇಳುವಂತೆ ನತಾನಿಯೇಲನನ್ನು ಪ್ರೇರೇಪಿಸಿತು(1:49).

ಬಿ. ಯೇಸು ಏನನ್ನು ವಾಗ್ದಾನ ಮಾಡಿದನು (1:50–50)?

**Reference:** ನೋಟ್ 5, ಪರಲೋಕವು ತೆರೆಯಲ್ಪಟ್ಟದ್ದು ಮತ್ತು ನೋಟ್ 4, ಮನುಷ್ಯಕುಮಾರನು, ಪುಟ 18

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವದು

## ನಮ್ಮ ಅದ್ವಿತೀಯತೆಯನ್ನು ಪರಿಶೋಧಿಸುವದು

ಶಿಷ್ಯರ ಜೀವಿತಗಳು ಸುಲಭವಾಗಿರಲಿಲ್ಲ, ಅವರ ನಂಬಿಕೆಯ ನಿಮಿತ್ತವಾಗಿ ಪರಿಪೂರ್ಣರು ಮತ್ತು ಅರ್ಥಗರ್ಭಿತವಾದವರಾಗಿದ್ದರು ಎಂಬದರಲ್ಲಿ ಯಾವುದೇ ಸಂದೇಹವಿಲ್ಲ. ಸ್ನಾನಿಕನಾದ ಯೋಹಾನನು, ಅಪೊಸ್ತಲನಾದ ಯೋಹಾನನು, ಆಂದ್ರೇಯನು, ಫಿಲಿಪ್ಪನು, ನತಾನಿಯೇಲನು ಮತ್ತು ಪೇತ್ರನು, ಯೇಸು ಕ್ರಿಸ್ತನಿಗೆ ಭಿನ್ನರಾದ ಜನರಾಗಿದ್ದರು. ಆತನು ಪ್ರತಿಯೊಬ್ಬರ ವಿಷಯದಲ್ಲಿ ವಿಶೇಷವಾದ ಉದ್ದೇಶವುಳ್ಳವನಾಗಿದ್ದನು ಮತ್ತು ಆತನು ಅವರೊಂದಿಗೆ ಅದ್ವಿತೀಯನಾಗಿ ವ್ಯವಹರಿಸಿದನು.

ಅತ್ಯಂತ ವೇಗವಾಗಿರುವ ಲೋಕದಲ್ಲಿ, ನಾವು ಸುಲಭವಾಗಿ ಜನರ ಮಧ್ಯದಲ್ಲಿ ಕಳೆದುಹೋಗುತ್ತೇವೆ, ಜನದಟ್ಟಣೆಯಲ್ಲಿ ಕೇವಲ ಸಂಖ್ಯೆಯಾಗಿರುತ್ತೇವಷ್ಟೆ. ವಿಶೇಷವಾದ ವರದಾನಗಳುಳ್ಳ, ಐಶ್ವರ್ಯವುಳ್ಳ, ಸುಂದಾರವಾದ, ಬುದ್ಧಿವಂತರಾದ ಅಥವಾ "ಒಟ್ಟಾಗಿರುವ" ಹೆಚ್ಚಿನದಾಗಿರುವ ಜನರನ್ನು ಮಾಧ್ಯಮದವರು ಬಹಿರಂಗಗೊಳಿಸುತ್ತದೆ. ಇದರಿಂದ ತಿಳಿದುಕೊಳ್ಳಬಹುದಾದ ಫಲಿತಾಂಶವೆಂದರೆ ನಾವು ಸಾಮಾನ್ಯರು ಮತ್ತು ಅಲ್ಪರಾಗಿದ್ದೇವೆ ಎಂದು ನಮಗೆ ಅನ್ನಿಸುತ್ತದೆ.
ಆದರೆ ಸತ್ಯವೇದವು ಹೇಳುವದು ಮತ್ತು ಯೇಸು ಕ್ರಿಸ್ತನು ತನ್ನ ಪ್ರತಿಯೊಬ್ಬ ಶಿಷ್ಯರೊಂದಿಗೂ ಮಾತುಕತೆಯನ್ನು ನಡೆಸುವಾಗ ಪ್ರದರ್ಶಿಸುವದೇನೆಂದರೆ, ನಾವೆಲ್ಲರೂ ದೇವರಿಗೆ ಅಗಮ್ಯವಾದ ಪ್ರಾಧಾನ್ಯತೆಯುಳ್ಳವರಾಗಿದ್ದೇವೆ. ನಮ್ಮನ್ನು ಸೃಷ್ಟಿಸಿದವನು ಆತನೇ ಮತ್ತು ನಮ್ಮ ಸಾಮರ್ಥ್ಯ ಏನೆಂದು ನಮಗಿಂತಲೂ ಚೆನ್ನಾಗಿ ಆತನಿಗೇ ಗೊತ್ತು. ಪೇತ್ರನ ವಿಷಯದಂತೆಯೇ, ಆತನಿಗೆ ನಮ್ಮ ವ್ಯಕ್ತಿತ್ವಗಳು ಮತ್ತು ಅದರಿಂದ ಏನನ್ನು ಮಾಡಬೇಕೆಂದು ಆತನಿಗೆ ಗೊತ್ತು. ಆತನು ನಮ್ಮ ಮೇರೆಗಳ ಮೇಲೆ ಗಮನವನ್ನು ಹರಿಸುವದಿಲ್ಲ ಬದಲಾಗಿ ನಮ್ಮ ಜೀವಿತಗಳಲ್ಲಿ ಕಾರ್ಯಮಾಡುವದಕ್ಕಾಗಿ ನಾವು ಆತನಿಗೆ ಅನುಮತಿಯನ್ನು ಕೊಡುವದಾದರೆ, ನನ್ನ ಮತ್ತು ನಿಮ್ಮ ಜೀವಿತಗಳಲ್ಲಿ ವಿಶೇಷವಾದ ಉದ್ದೇಶಗಳಿಗಾಗಿ ಅವುಗಳನ್ನು ಪರಿಪೂರ್ಣವಾಗಿ ಮಾರ್ಪಡಿಸುತ್ತಾನೆ.

ನೆರವೇರುವಿಕೆಯ ಶೋಧನೆಯ ಬಗ್ಗೆ ನಾವು ನಮ್ಮ ಧ್ಯಾನವನ್ನು ಮುಂದುವರೆಸುತ್ತಿರುವಂತೆ, ಆಳವಾದ ಮತ್ತು ಕೊನೆಯವರೆಗೂ ಉಳಿಯುವಂಥ ಅಮೂಲ್ಯವಾದ ವಿಷಯಗಳ ಕಟ್ಟಲ್ಪಡುವಿಕೆಗಾಗಿ ಸತ್ಯವೇದದನುಸಾರವಾದ ಅಡಿಪಾಯಗಳನ್ನು ನೋಡಿಕೊಳ್ಳೋಣ; ಯೇಸು ಕ್ರಿಸ್ತನಿಗೆ ನಮ್ಮ ಅದ್ವಿತೀಯತೆ.

1. ಕಡಿಮೆ ಪ್ರಮಾಣದ ಸ್ವಪ್ರತಿಷ್ಠೆಯನ್ನು ನಮ್ಮ ಸಮಾಜದಲ್ಲಿ ಪ್ರೋತ್ಸಾಹಪಡಿಸುವಂಥದ್ದು ಏನು? ಜನರು ತಮ್ಮ ಸ್ವ ಬೆಲೆಯನ್ನು ದೃಢಪಡಿಸಿಕೊಳ್ಳುವ ಕೆಲವು ಸುಳ್ಳು ಮೌಲ್ಯಗಳು ಯಾವುವು?

2. ಕಡಿಮೆ ಪ್ರಮಾಣದ ಸ್ವಪ್ರತಿಷ್ಠೆ ಹೇಗೆ ದುಷ್ಪರಿಣಾಮವನ್ನು ಬೀರುತ್ತದೆ:

ದೇವರೊಂದಿಗಿನ ನಮ್ಮ ಸಂಬಂಧದ ಮೇಲೆ?

ಇತರ ಜನರೊಂದಿಗಿನ ನಮ್ಮ ಸಂಬಂಧದ ಮೇಲೆ?

ನಮ್ಮ ದೈನಂದಿನದ ಕೆಲಸಗಳ ಮೇಲೆ?

3. ವಿಶೇಷವಾದ ಉದ್ದೇಶಗಳಿಗಾಗಿ ಆತನೇ ಸೃಷ್ಟಿಸಿದ ತನ್ನ ಪ್ರತಿಯೊಂದು ಶಿಷ್ಯರೊಂದಿಗೆ ಯೇಸು ಕ್ರಿಸ್ತನು ವಿಶಿಷ್ಟವಾದ ವ್ಯಕ್ತಿಗಳಾಗಿ ಪ್ರತಿಕ್ರಿಯಿಸಿದನು. ಯೇಸು ಕ್ರಿಸ್ತನೇ ನಮ್ಮನ್ನು ಸೃಷ್ಟಿಸಿದನು ಮತ್ತು ನಮ್ಮನ್ನು ವ್ಯಕ್ತಿಗತವಾಗಿ ತಿಳಿದುಕೊಂಡಿದ್ದಾನೆ ಎಂದು ಸತ್ಯವೇದವು ತಿಳಿಸುತ್ತದೆ (ಯೋಹಾನ 1:1–3; ಕೊಲೊಸ್ಸೆ 1:16). ಕೆಳಗೆ ಕೊಡಲ್ಪಟ್ಟಿರುವ ವಚನಗಳು ಏನನ್ನು ಹೇಳುತ್ತವೆ:
ಎ. ದೇವರಿಗೆ ನಿಮ್ಮ ಅದ್ವಿತೀಯತೆ ಮತ್ತು ಬೆಲೆ?
ಕೀರ್ತನೆ 139:13–18

ಯೋಹಾನ 1:1–3; ಕೊಲೊಸ್ಸೆ 1:16
ಲೂಕ 12:6–7

ಬಿ. ನಿಮಗಾಗಿ ಆತನ ಯೋಜನೆಗಳು?
ಯೆರೆಮೀಯ 29:11

5. ಲೋಕದ ಸೃಷ್ಟಿಕರ್ತನು ನಮ್ಮನ್ನು ಪ್ರೀತಿಸುತ್ತಾನೆ ಎಂಬ ವಿಷಯವನ್ನು ತಿಳಿದುಕೊಳ್ಳುವಾಗ ಅದುವೇ ನಮ್ಮ ಸ್ವಪ್ರತಿಷ್ಠೆಯನ್ನು ಕಟ್ಟುತ್ತದೆ. ದೇವರ ಪ್ರೀತಿಯ ಬಗ್ಗೆ ಕೆಳಗೆ ಕೊಡಲ್ಪಟ್ಟಿರುವ ವಚನಗಳು ಏನನ್ನು ಹೇಳುತ್ತವೆ?

ಯೆರೆಮೀಯ 31:3

ರೋಮಾ 8:38–39

6. ನಮ್ಮ ಜೀವಿತದ ಮೇಲೆ ದೇವರ ದೃಷ್ಟಿಕೋನವನ್ನು ನೋಡುವದಾದರೆ ನಮ್ಮ ಸಾಧನೆಯ ಮೇಲಿನ ಕೇಂದ್ರಬಿಂದುವು ಬದಲಾಗಿ ಹೋಗುತ್ತದೆ. ಬೆಲೆಯುಳ್ಳ ಆಕಾಂಕ್ಷೆಗಳ ಬಗ್ಗೆ ಕೆಳಗಿನ ವಚನಗಳು ಏನನ್ನು ಹೇಳುತ್ತವೆ?

1 ಸಮುವೇಲ 16:7

ಜ್ಞಾನೋಕ್ತಿ 31:30

**ಗಮನಿಸಿರಿ:** *ಭಯ ಎಂದರೆ ಪೂಜ್ಯಭಾವನೆಯುಳ್ಳ ಭರವಸೆಯಾಗಿದೆ.*

ಮೀಕ 6:8

7. ಸೋತು ಹೋಗುತ್ತೇವೆಂಬ ಭಯ ಅಥವಾ ನೂನ್ಯವಾದ ಭಾವನೆ ನಮ್ಮನ್ನು ಅಂಗವಿಕಲರನ್ನಾಗಿಸುತ್ತದೆ, ಇದು ನಾವು ನಮ್ಮ ಸಾಮರ್ಥ್ಯಕ್ಕೆ ತಲುಪದಂತೆ ಅಥವಾ ಹೊಸ ಕಾರ್ಯಗಳನ್ನು ಪ್ರಯತ್ನಿಸದಂತೆ ನಮಗೆ ಅಡಚಣೆಯನ್ನುಂಟು ಮಾಡುತ್ತದೆ?

ಫಿಲಿಪ್ಪ 4:13

2 ಕೊರಿಂಥ 12:9

8. ಮೊದಲನೆಯ ಶಿಷ್ಯರು ಪಶ್ಚಾತ್ತಾಪ ಮತ್ತು ಪಾಪದ ಕ್ಷಮಾಪಣೆಯ ಬಗ್ಗೆ ಸ್ನಾನಿಕನಾದ ಯೋಹಾನನು ಕೊಟ್ಟ ಸಂದೇಶವನ್ನು ತಮ್ಮ ಜೀವಿತಗಳಿಗೆ ಅಳವಡಿಸಿಕೊಂಡರು. ಇದುವೇ ಅವರನ್ನು ದೇವರಿಗೆ ಪ್ರತಿಕ್ರಿಯಿಸುವಂತೆ ಸ್ವತಂತ್ರರನ್ನಾಗಿಸಿತು ಮತ್ತು ಅವರಿಗಾಗಿ ದೇವರು ಮಾಡಿದ ಮಹದಾದ ಯೋಜನೆಗಳನ್ನು ಹಿಂಬಾಲಿಸುವಂತೆ ಮಾಡಿತು.

ಎ. ನಮಗೆ ಆರೋಗ್ಯಕರವಾದ ಸ್ವಪ್ರತಿಷ್ಟೆ ಬೇಕಾದರೆ ಅಪರಾಧದ ಮನೋಭಾವನೆ ನಮಗಿರಬಾರದು. ಪಾಪದ ವಿಷಯದಲ್ಲಿ ಏನನ್ನು ಮಾಡುವಂತೆ ದೇವರು ನಮ್ಮನ್ನು ಸತತವಾಗಿ ಆಹ್ವಾನಿಸುವವನಾಗಿದ್ದಾನೆ?

1 ಯೋಹಾನ 1:9

ಬಿ. ಯಾವ ಆಧಾರದ ಮೇಲೆ ನಾವು ದೇವರಿಂದ ಕ್ಷಮಿಸಲ್ಪಡುತ್ತೇವೆ?

ಮತ್ತಾಯ 26:28 (ಇಬ್ರಿಯ 9:22)

ಎಫೆಸ 1:7

Reference: ನೋಟ್ 2, ದೇವರ ಕುರಿಮರಿ, ಪುಟ 18.

9. ಯೇಸು ಕ್ರಿಸ್ತನ ಪ್ರತಿಯೊಬ್ಬ ಶಿಷ್ಯನು ವ್ಯಕ್ತಿಗತವಾಗಿ ಪ್ರತಿಕ್ರಿಯೆಯನ್ನು ನೀಡಿದ ವಿಷಯವೇ, ಅವರು ಪ್ರತಿಯೊಬ್ಬರು ತಮ್ಮ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವಂತೆ ಆತನಿಗೆ ಅನುಮತಿಯನ್ನು ನೀಡಿತು. ಯೇಸು ಕ್ರಿಸ್ತನಿಗೆ ಪ್ರತಿಕ್ರಿಯಿಸಲು ಅವರು ಮಾಡಿದ ಆಯ್ಕೆಗಳೇನು?

## ಸಾರಾಂಶ

10. ಎ. ಈ ಪಾಠದ ಮೂಲಕ ಯೇಸು ಕ್ರಿಸ್ತನಿಗೆ ನಿಮ್ಮ ಅದ್ವಿತೀಯತೆ ಬಗ್ಗೆ ನೀವು ಏನನ್ನು ಅರ್ಥಮಾಡಿಕೊಂಡಿದ್ದೀರ?
ಬಿ. ಈ ಪಾಠವನ್ನು ಕಲಿತ ನಂತರ ನೀವು ನಿಮ್ಮ ಜೀವಿತದಲ್ಲಿ ಕಡಿಮೆ ಪ್ರಮಾಣದ ಸ್ವಪ್ರತಿಷ್ಠೆಯಿಂದ ಕಷ್ಟಪಡುತ್ತಿರುವ ಕ್ಷೇತ್ರಗಳನ್ನು ಹೇಗೆ ವೀಕ್ಷಿಸುತ್ತೀರ?
11. ನಿಮ್ಮ ಜೀವಿತದ ಯಾವುದಾದರೂ ಕ್ಷೇತ್ರದಲ್ಲಿ ನೀವು ಅಪರಾಧ ಮನೋಭಾವನೆಯನ್ನು ಇನ್ನೂ ಇಟ್ಟುಕೊಂಡಿದ್ದೀರ? ನೀವು ಅರಿಕೆ ಮಾಡಲು ಮತ್ತು ಬಿಟ್ಟು ಬಿಡಲು ಬಯಸುವ ಪಾಪಗಳನ್ನು ಒಂದು ಹಾಳೆಯಲ್ಲಿ ಬರೆದುಕೊಳ್ಳಿರಿ. 1 ಯೋಹಾನ 1:9 ವಚನವನ್ನು ಆ ಹಾಳೆಯ ಮೇಲೆ ಬರೆಯಿರಿ ಮತ್ತು ಯೇಸು ಕ್ರಿಸ್ತನ ಶಿಲುಬೆಯಿಂದ ದೇವರ ಕ್ಷಮಾಪಣೆಯನ್ನು ಪಡೆದಿರುವ ಗುರುತಾಗಿ ಅವುಗಳನ್ನು ನಾಶ ಮಾಡಿರಿ. ಈ ಅಭ್ಯಾಸವು ನಿಮ್ಮಲ್ಲಿ ಅದ್ಭುತಕರವಾದ ಶುದ್ಧೀಕರಣದ ಪ್ರಭಾವವನ್ನು ಬೀರುತ್ತದೆ.
12. ಯೇಸು ಕ್ರಿಸ್ತನಿಗೂ ಮತ್ತು ನಿಮ್ಮ ಜೀವಿತವನ್ನು ಮುನ್ನಡೆಸಬೇಕು ಹಾಗೂ ಅದಕ್ಕೆ ಮಾರ್ಗದರ್ಶನವನ್ನು ಕೊಡಬೇಕೆಂಬ ಆತನ ಬಯಕೆಗೆ ನಿಮ್ಮ ವೈಯಕ್ತಿಕ ಪ್ರತಿಕ್ರಿಯೆ ಏನು?
ಈ ವಿಷಯಗಳ ಬಗ್ಗೆ ದೇವರೊಂದಿಗೆ ಮಾತನಾಡಲು ಒಂದು ನಿಮಿಷ ತೆಗೆದುಕೊಳ್ಳಿರಿ. ಆತನು ನಿಮ್ಮನ್ನು ಪ್ರೀತಿಸುತ್ತಾನೆ ಎಂದು ತಿಳಿದುಕೊಳ್ಳಿರಿ, ನೀವು ನಿಮ್ಮನ್ನೇ ಪ್ರೀತಿಸಿಕೊಳ್ಳುವವರಾಗಬೇಕೆಂದು ಬಯಸುತ್ತಾನೆ ಮತ್ತು ನಿಮ್ಮಲ್ಲಿ ಬಲಹೀನತೆಗಳಿರುವಾಗಲೂ, ನಿಮ್ಮ ಜೀವಿತಕ್ಕಾಗಿ ವಿಶೇಷವಾದ ಯೋಜನೆಗಳುಳ್ಳವನಾಗಿದ್ದಾನೆ.

## ಪಾಠ 2 ನೋಟ್ಸ್

1 ಕ್ರಿಸ್ತನು (1:20). ಕ್ರಿಸ್ತನು (ಗ್ರೀಕ್) ಅಥವಾ ಮೆಸ್ಸೀಯ (ಇಬ್ರಿಯ) ಎಂದರೆ "ಅಭ್ಯಿಷಿಕ್ತನು." ಹೊಸ ಒಡಂಬಡಿಕೆಯಲ್ಲಿ ಸಾವಿರಾರು ಬಾರಿ ಬರಹಗಾರರು ಯೇಸು ಕ್ರಿಸ್ತನಿಗೆ ಈ ತಲೆಬರಹವನ್ನು ಕೊಟ್ಟಿದ್ದಾರೆ. ಯೆಹೂದ್ಯ ಜನರು ತಮ್ಮನ್ನು ತಮ್ಮ ವೈರಿಗಳಿಂದ ಬಿಡಿಸಲು ದೇವರಿಂದ ಅಭಿಷೇಕಿಸಲ್ಪಟ್ಟ ರಕ್ಷಕನನ್ನು ಮತ್ತು ಅರಸನನ್ನು ಸೂಚಿಸುವ ಹಳೆಯ ಒಡಂಬಡಿಕೆಯ ಪ್ರವಾದನೆಯಲ್ಲಿ ನಂಬಿಕೆಯನ್ನಿಟ್ಟಿದ್ದರು. ಈ ಮೆಸ್ಸೀಯನು ದಾವೀದನ ವಂಶದಿಂದ ಬರುವವನಾಗಿದ್ದರಿಂದ ಆತನನ್ನು ದಾವೀದನ ಕುಮಾರನೆಂದು ಉಲ್ಲೇಖಿಸಲಾಗಿದೆ (1 ಪೂರ್ವ 17:11–15). ಆತನನ್ನು ಮನುಷ್ಯ ಕುಮಾರನೆಂದು ಉಲ್ಲೇಖಿಸಲಾಗಿದೆ (ದಾನಿಯೇಲ 7:13–14) ಮತ್ತು ಆತನು ಶ್ರಮೆಯನ್ನನುಭವಿಸುವ ಸೇವಕನು (ಯೆಶಾಯ 53), ವಾಸ್ತವಾಗಿರುವ ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಅನೇಕ ಯೆಹೂದ್ಯರಿಗೆ ಸಾಧ್ಯವಾಗಲಿಲ್ಲ.
2 ದೇವರ ಕುರುಮರಿ (1:29,36) ಯಜ್ಞವನ್ನು ಸೂಚಿಸುತ್ತದೆ, ಯೆಶಾಯ 53:3–8ರಲ್ಲಿ ಲೋಕದ ಪಾಪಗಳಿಗಾಗಿ ಅರ್ಪಿಸಲಾಗುವ ಯಜ್ಞದ ಬಗ್ಗೆ ವಿಶೇಷವಾಗಿ ಪ್ರವಾದಿಸಲಾಗಿರುವ ಯಜ್ಞ ಇದಾಗಿದೆ ಮತ್ತು ಯಾಜಕಕಾಂಡ 17:11, ಇಬ್ರಿಯ 9:11–22 ಮತ್ತು ಇಬ್ರಿಯ 10:8–14ರಲ್ಲಿ ಇದಕ್ಕೆ ಸ್ಪಷ್ಟೀಕರಣವನ್ನು ನೀಡಲಾಗಿದೆ. ಮನುಷ್ಯನು ಪ್ರಾರಂಭದಿಂದಲೂ (cf. ಆದಿಕಾಂಡ 3) ಪಾಪದಿಂದಾಗುವ ಮರಣದ ಶಿಕ್ಷೆಯನ್ನು ಎದುರಿಸುವವನಾಗಿದ್ದನು. ಒಂದುವೇಳೆ ಸ್ತ್ರೀ ಮತ್ತು ಪುರುಷರು ದೇವರಲ್ಲಿ ನಂಬಿಕೆಯನ್ನಿಟ್ಟು ಆತನಿಂದ ದೊರೆಯುವ ಉಚಿತವಾದ ಕ್ಷಮಾಪಣೆಯನ್ನು

ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಯೇಸು ಕ್ರಿಸ್ತನು ಮರಣದ ಶಿಕ್ಷೆಯನ್ನು ತನ್ನ ಮೇಲೆ ವಹಿಸಿಕೊಂಡನು. ದೇವರ ಕುರಿಮರಿಯು ಪಾಪಿಯಾದ ಮನುಷ್ಯನಿಗೋಸ್ಕರ ತನ್ನ ಮುಗ್ಧ ಪ್ರಾಣವನ್ನು ಕೊಡುವದಕ್ಕಾಗಿ ಬಂದನು.

3 *ಪವಿತ್ರಾತ್ಮನಿಂದ ದೀಕ್ಷಾಸ್ನಾನ* (1:33). ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನವು ಪಶ್ಚಾತ್ತಾಪಕ್ಕಾಗಿ ಕೊಡಲಾಗುತ್ತಿದ್ದ ತಾತ್ಕಾಲಿಕವಾದ ಮುಂಜಾಗ್ರತಾ ನೀರಿನ ದೀಕ್ಷಾಸ್ನಾನವಾಗಿತ್ತು ಮತ್ತು ಕ್ಷಮಾಪಣೆ ಹಾಗೂ ಪಾಪಗಳು ತೊಳೆಯಲ್ಪಡಲು ಗುರುತಾಗಿತ್ತು (ಲೂಕ 3:3). ಆದರೆ ಯೇಸು ಕ್ರಿಸ್ತನು ಭಿನ್ನವಾಗಿ, ಪವಿತ್ರಾತ್ಮನಿಂದ ದೀಕ್ಷಾಸ್ನಾನ ಮಾಡಿಸುವನು. ಆತನು ಎಲ್ಲಾ ವಿಶ್ವಾಸಿಗಳ ಮೇಲೆಯೂ ಪವಿತ್ರಾತ್ಮನನ್ನು ಸುರಿಸಿ, ರಕ್ಷಣೆಯ ಸಂದೇಶಕ್ಕನುಸಾರವಾಗಿ ಜೀವಿಸಲು ಮತ್ತು ಕಲಿಸಲು ಬಲಗೊಳಿಸುವನು. ಯೇಸು ಕ್ರಿಸ್ತನು ಸತ್ತು ಮೂರನೆಯ ದಿನದಲ್ಲಿ ಎದ್ದು ಬಂದು ಪರಲೋಕಕ್ಕೆ ಆಸೀನನಾದ ಮೇಲೆ ಪವಿತ್ರಾತ್ಮ ದಾನವು ಎಲ್ಲರಿಗೂ ದೊರೆಯಿತು (20:22; ಅ.ಕೃ 2 ನೋಡಿರಿ). "*Life Application Bible NIV*, ಪುಟ 1872.

ನೋಟ್ 2, ಪವಿತ್ರಾತ್ಮನು, ಪುಟ 33 ಸಹ ನೋಡಿರಿ.

4 *ಮನುಷ್ಯಕುಮಾರನು* (1:51) ಯೇಸು ಕ್ರಿಸ್ತನು ತನ್ನ ಬಗ್ಗೆ ಹೆಚ್ಚಾಗಿ ಉಪಯೋಗಿಸಿಕೊಂಡ ತಲೆಬರಹ ಇದಾಗಿದೆ. ಯೆಹೂದ್ಯರು "ಮೆಸ್ಸೀಯ" ಎಂಬ ಪದವನ್ನು ಕೇಳಿದ ಕೂಡಲೇ, ಇಸ್ರಾಯೇಲನ್ನು ಲೋಕದಲ್ಲಿಯೇ ಬಲಿಷ್ಟ ರಾಷ್ಟ್ರವನ್ನಾಗಿ ಮಾಡಬಲ್ಲ ಜಯವೀರನಾದ ಲೋಕದ ಅರಸನ ಬಗ್ಗೆ ಹೇಳುವ ಹಳೆಯ ಒಡಂಬಡಿಕೆಯ ಪ್ರವಾದನೆಯ ಬಗ್ಗೆ ಆಲೋಚಿಸಿದರು. (ನೋಟ್ 5, *ಮೆಸ್ಸೀಯನಿಗೆ ಸಂಬಂಧಪಟ್ಟ ವೇದದನುಸಾರವಾದ ಪ್ರವಾದನೆ* ನೋಡಿರಿ, ಪುಟ 50:51).

ಈ ಲೋಕದ ಪ್ರಯಾಣದಲ್ಲಿ ತಾನು ಶ್ರಮೆಯನ್ನನುಭವಿಸಬೇಕು ಮತ್ತು ಪಾಪದ ಪಾಲಿಗೆ ಸಾಯಬೇಕು ಎಂಬ ವಿಷಯವನ್ನು ತಿಳಿದುಕೊಂಡಿದ್ದ ಯೇಸು ಕ್ರಿಸ್ತನು ಎಲ್ಲರ ಎದುರಿನಲ್ಲಿ ಮೆಸ್ಸಿಯನೆಂದು ಕರೆಯಿಸಿಕೊಳ್ಳಲು ನಿರಾಕರಿಸಿದನು ಯಾಕೆಂದರೆ ಜನರು ತನ್ನನ್ನು ಒತ್ತಾಯಪೂರ್ವಕವಾಗಿ ಲೋಕದ ಅರಸನನ್ನಾಗಿ ಮಾಡಬಹುದೆಂಬದು ಆತನ ಆಲೊಚನೆಯಾಗಿತ್ತು (cf. ಯೋಹಾನ 6:15). ಆದ್ದರಿಂದಲೇ, ದಾನಿಯೇಲ ಪ್ರವಾದನೆ ಗ್ರಂಥದ 7:13ರಲ್ಲಿ ಸೂಚಿಸಲಾಗಿರುವ ಮೆಸ್ಸೀಯನ ಪ್ರವಾದನೆಯಲ್ಲಿ ಮನುಷ್ಯಕುಮಾರನೆಂಬ ತಲೆಬರಹವನ್ನು ಯೇಸು ಕ್ರಿಸ್ತನು ತನ್ನನ್ನು ಸೂಚಿಸುವದಕ್ಕಾಗಿ ಉಪಯೋಗಿಸಿಕೊಂಡನು. ದೇವರು ಮನುಷ್ಯಕುಮಾರನಿಗೆ ಅಧಿಕಾರ, ಮಹಿಮೆ, ನಿತ್ಯವಾದ ಆಡಳಿತ ಮತ್ತು ಶಾಶ್ವತವಾದ ಸಿಂಹಾಸನವನ್ನು ಒದಗಿಸುವ ದರ್ಶನವನ್ನು ಕಂಡ ಪ್ರವಾದಿಯು ಅದನ್ನು ಪ್ರಕಟಪಡಿಸುತ್ತಿದ್ದಾನೆ. ಯೇಸು ಕ್ರಿಸ್ತನು ಈ ತಲೆಬರಹವನ್ನು ತನ್ನನ್ನು ಸೂಚಿಸಲು ಉಪಯೋಗಿಸಿದಾಗ, ತನ್ನ ಪ್ರೇಕ್ಷಕರನ್ನು ನಿಯಂತ್ರಿಸಲು ಮತ್ತು ಅವರಿಗೆ ಕಲಿಸಲು ಆತನು ತನ್ನನ್ನೇ ಮೆಸ್ಸಿಯನೆಂದು ಮತ್ತು ದೈವೀಕತೆಯುಳ್ಳವನೆಂದು ಸೂಚಿಸುತ್ತಿದ್ದಾನೆ.

5 *ಪರಲೋಕವು ತೆರೆಯಲ್ಪಟ್ಟು...ದೇವದೂತರು ಇಳಿದು ಬರುತ್ತಿದ್ದರು ಮತ್ತು ಮೇಲಕ್ಕೆ ಹೋಗುತ್ತಿದ್ದರು* (1:51). "ಆದಿಕಾಂಡ 28:12ರಲ್ಲಿ ಯಾಕೋಬನು ಕಂಡ ಕನಸಿಗೆ ಇದು ಸೂಚನೆಯಾಗಿದೆ. ನಿಜವಾದ ದೇವರ ಮನುಷ್ಯನಾಗಿರುವ ಯೇಸು ಕ್ರಿಸ್ತನು ಪರಲೋಕ ಮತ್ತು ಭೂಲೋಕದ ನಡುವೆ ಮೆಟ್ಟಿಲಾಗಿರುವನು. ಇದು ರೂಪಾಂತರದ (cf. ಮಾರ್ಕ 9:2–8) ಹಾಗೆ ಶಾರೀರಿಕವಾದ ಅನುಭವಾಗಿರುತ್ತದೆ ಎಂದು ಯೇಸು ಕ್ರಿಸ್ತನು ಹೇಳುತ್ತಿಲ್ಲ (ಅಂದರೆ ಅವರು ಮೆಟ್ಟಿಲನ್ನು ತಮ್ಮ ಕಣ್ಣಿನಿಂದ ಕಾಣುವದಿಲ್ಲ), ಆದರೆ ಯೇಸು ಕ್ರಿಸ್ತನ ನಿಜವಾದ ಸ್ವಭಾವ ಮತ್ತು ಆತನ ಬರೋಣದ ಉದ್ದೇಶದ ಬಗ್ಗೆ ಆಂತರಿಕ ದೃಷ್ಟಿಕೋನವುಳ್ಳವರಾಗಿರುತ್ತಾರೆ." "*Life Application Bible NIV*, ಪುಟ 1872.

# ಪಾಠ 3

# ಮದುವೆ ಮನೆಯಲ್ಲಿ ಮತ್ತು ದೇವಾಲಯದಲ್ಲಿ

## ಯೋಹಾನ 2

ಬೆಥಾನ್ಯದಿಂದ ಗಲಿಲಾಯಕ್ಕೆ ಕೆಲವು ದಿವಸಗಳ ಪ್ರಾಯಾಣವನ್ನು ಮಾಡಿದ ನಂತರ, ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರು ಕಾನಾ ಊರಿನಲ್ಲಿ ನಡೆಯುತ್ತಿದ್ದ ಮದುವೆಗೆ ಹೋದರು, ಆ ಮದುವೆಗೆ ಯೇಸುವಿನ ತಾಯಿಯನ್ನು ಸಹ ಆಹ್ವಾನಿಸಲಾಗಿತ್ತು. ಸತ್ಯವೇದದ ಸಮಯದಲ್ಲಿ ಮದುವೆ ಎಂದರೆ ವಾರಗಟ್ಟಲೆ ನಡೆಯುತ್ತಿದ್ದ ಆಚರಣೆಯಾಗಿತ್ತು, ಯಾಕೆಂದರೆ ಹಳ್ಳಿಯಲ್ಲಿರುವ ಜನರೆಲ್ಲರೂ ಮದುವೆಗೆ ಹೋಗುತ್ತಿದ್ದರು. ಈ ಸಂದರ್ಭದಲ್ಲಿ, ಮದುಮಗನಿಗೆ ಒಂದು ಸಮಸ್ಯೆ ಎದುರಾಯಿತು. ಸಮಾರಂಭವು ಮುಗಿಯುವದಕ್ಕಿಂತ ಮುಂಚೆಯೇ ದ್ರಾಕ್ಷಾರಸವು ಮುಗಿದುಹೋಯಿತು. ಯೇಸುವಿನ ತಾಯಿಯು ಈ ಸಮಸ್ಯೆಯನ್ನು ಆತನಿಗೆ ತಿಳಿಸಿದಳು.

ಯೇಸು ಕ್ರಿಸ್ತನು ಮರಿಯಳಿಗೆ ಕೊಟ್ಟ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳುವದು ಕಷ್ಟವಾಗಿದೆ: "ಅಮ್ಮಾ ನನ್ನ ಗೊಡವೆ ನಿನಗೇಕೆ? ನನ್ನ ಸಮಯವು ಇನ್ನೂ ಬಂದಿಲ್ಲ" (2:4). ನನ್ನ ಮಗನು ಈಗ ತಾನೇ ತನ್ನ ಮೆಸ್ಸೀಯನ ಸೇವೆಯನ್ನು ಪ್ರಾರಂಭಿಸಿದ್ದಾನೆ ಮತ್ತು ಈಗಿನಿಂದ ನಮ್ಮ ಸಂಬಂಧವು ಬೇರೆಯಾಗುತ್ತದೆ ಎಂಬದನ್ನು ಅರ್ಥಮಾಡಿಕೊಳ್ಳಲು ಆಕೆಯು ವಿಫಲವಾದಳು. ಜನರನ್ನು ದೇವರ ಕೃಪೆಯ ಕಡೆಗೆ ನಡೆಸುವದಕ್ಕಾಗಿ ತನ್ನ ಶಕ್ತಿಯ ಉಪಯೋಗವನ್ನು ಮಾಡಬೇಕೆಂದು ಆತನು ಆಕೆಗೆ ಹೇಳುತ್ತಿದ್ದನು. ಆದಾಗ್ಯೂ, ಯೇಸು ಕ್ರಿಸ್ತನ ಹೇಳಿಕೆಯ ಎರಡನೆಯ ಭಾಗವನ್ನು ನಾವು ಗಮನಿಸುವದಾದರೆ ಆತನು ಹೇಳುತ್ತಿದ್ದಾನೆ, "ನನ್ನ ಸಮಯವು ಇನ್ನೂ ಬಂದಿಲ್ಲ" ಇಲ್ಲಿ ಆತನು ತನ್ನ ಮರಣ ಮತ್ತು ಪುನರುತ್ಥಾನದ ನಂತರ ಬರುವ ಪ್ರಭಾವದ ಪ್ರಕಟನೆಯನ್ನು ಮಾಡುತ್ತಿದ್ದಾನೆ ಎಂಬದರಲ್ಲಿ ಯಾವುದೇ ಅನುಮಾನವಿಲ್ಲ (cf. ಯೋಹಾನ 12:27, 13:1, 17:1).

ಆದಾಗ್ಯೂ ಮರಿಯಳು ಸೇವಕರ ಕಡೆಗೆ ತಿರುಗಿಕೊಂಡು ಯೇಸು ನಿಮಗೆ ಹೇಳುವದನ್ನೆಲ್ಲಾ ಮಾಡಿರಿ ಎಂದು ಹೇಳಿದಳು. ಅವರು ಆತನ ಸೂಚನೆಗಳನ್ನು ಎಚ್ಚರಿಕೆಯಿಂದ ಅನುಸರಿಸಿದರು ಮತ್ತು ಯೇಸು ಕ್ರಿಸ್ತನು 120 ರಿಂದ 180 ಲೀಟರ್ ನೀರನ್ನು ರುಚಿಕರವಾದ ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದನು. ಯೇಸು ಕ್ರಿಸ್ತನೇ ನಿಜವಾದ ಮೆಸ್ಸಿಯನೆಂಬ ದೃಢತೆಯನ್ನು ಈ ಅಸಮಾನ್ಯವಾದ ಅದ್ಭುತವು ಆತನ ಶಿಷ್ಯರ ಜೀವಿತದಲ್ಲಿ ಮೂಡಿಸಿತು.

ಯೇಸು ಕ್ರಿಸ್ತನ ನಂತರದ ಸಮಯಗಳಲ್ಲಿ ಗಲಿಲಾಯವನ್ನು ತನ್ನ ಸೇವಾಕೇಂದ್ರವನ್ನಾಗಿ ಮಾಡಿಕೊಳ್ಳುವದಕ್ಕಿಂತ ಮುಂಚೆ ಕಪೆರ್ನೌಮಿನಲ್ಲಿ ಸ್ವಲ್ಪ ಸಮಯವಿದ್ದ ತರುವಾಗ, ಆತನು, ಆತನ ಕುಟುಂಬದವರು ಮತ್ತು ಶಿಷ್ಯರು ಪಸ್ಕ ಹಬ್ಬವನ್ನು 1 ಆಚರಿಸುವದಕ್ಕಾಗಿ ಯೆರೂಸಲೇಮಿಗೆ ಹೋದರು. ಯೆಹೂದ್ಯರ ವಾರ್ಷಿಕ ಹಬ್ಬಗಳಲ್ಲಿ ಇದು ಪ್ರಮುಖವಾದದ್ದಾಗಿದೆ, ಮತ್ತು ವ್ಯಾಪಾರಸ್ಥರು ಈ ಸಂದರ್ಭದಲ್ಲಿ ದೇವಾಲಯದಲ್ಲಿ ವ್ಯಾಪಾರ ಮಾಡುತ್ತಾ ಲಾಭ ಪಡೆದುಕೊಳ್ಳುತ್ತಿದ್ದರು.

ಕೆಲವರು ಪಾಶ್ಚಾತ್ಯ ಹಣವನ್ನು ಬದಲಾಯಿಸಿಕೊಳ್ಳಲು ತರುತ್ತಿದ್ದರು, ಕೆಲವರು ಶುದ್ಧೀಕರಣದ ಆಚರಣೆಯನ್ನು ಮಾಡುವದಕ್ಕಾಗಿ ಪ್ರಾಣಿಗಳನ್ನು ಮಾರಾಟ ಮಾಡುತ್ತಿದ್ದರು, ಎರಡೂ ಕಾರ್ಯಗಳನ್ನು ಅತಿಯಾದ ಲಾಭವನ್ನು ಗಳಿಸುವದಕ್ಕಾಗಿಯೇ ಮಾಡುತ್ತಿದ್ದರು. ಯೇಸು ಕ್ರಿಸ್ತನು ಯೆರೂಸಲೇಮಿಗೆ ತಲುಪಿದ ಕೂಡಲೇ, ನೇರವಾಗಿ ದೇವಾಲಯಕ್ಕೆ ಹೋದನು ಮತ್ತು ದುರಾಸೆಯುಳ್ಳವರಾಗಿ ಅಲ್ಲಿ ವ್ಯಾಪಾರವನ್ನು ನಡೆಸುತ್ತಿದ್ದ ವ್ಯಾಪಾರಸ್ಥರನ್ನು ಹೊರಹಾಕಲು ಪ್ರಾರಂಭಿಸಿದನು. ಆತನು ಕೊರಡೆಯನ್ನು ಕೈಯಲ್ಲಿ ಹಿಡಿದುಕೊಂಡು ಚೀನಿವಾರರ ಮೇಜುಗಳನ್ನು ಕೆಡವಿದನು ಮತ್ತು ವ್ಯಾಪಾರಸ್ಥರನ್ನು ಹೊರಗೆದೊಬ್ಬಿದನು. "ನನ್ನ ತಂದೆಯ ಮನೆಯನ್ನು" ನಿಮ್ಮ ದುರಾಸೆಯ ವ್ಯಾಪಾರಗಳಿಂದ ವ್ಯಾಪಾರ ಸ್ಥಳವನ್ನಾಗಿ ಮಾಡಬೇಡಿರಿ ಎಂದು ಆತನು ಆಜ್ಞಾಪಿಸಿದನು.

ಇದು ಸಣ್ಣದೊಂದು ಘಟನೆಯಾಗಿರಲಿಲ್ಲ. ನಿರೀಕ್ಷಿಸಿದಂತೆಯೇ, ಇಂಥ ಕಾರ್ಯಗಳನ್ನು ಮಾಡಲು ಯೇಸು ಕ್ರಿಸ್ತನಿಗೆ ಏನು ಅಧಿಕಾರವಿದೆ ಎಂದು ಪ್ರಶ್ನಿಸಿದರು. ಆತನ ಉತ್ತರವನ್ನು ಅರ್ಥಮಾಡಿಕೊಳ್ಳಬೇಕೆಂದರೆ, ದೇವಾಲಯವು ದೇವರ ಪ್ರಸನ್ನತೆ ಅವರ ಮಧ್ಯದಲ್ಲಿದೆ ಎಂದು ಪ್ರತಿನಿಧಿಸುವ ಯೆಹೂದ ಧರ್ಮದ ಕೇಂದ್ರವಾಗಿತ್ತು ಎಂಬದನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಕಾಲಕ್ರಮೇಣ ದೇವಾಲಯದ ವಿವಿಧ ಆಚರಣೆಗಳು ಭ್ರಷ್ಟವಾಗಿದ್ದವು ಮತ್ತು ಅನೇಕರಿಗೆ ದೇವಾಲಯವು ದೇವರ ಪ್ರಸನ್ನತೆಯ ಸ್ಥಳವಾಗಿರಲಿಲ್ಲ. ಆದ್ದರಿಂದ ಅವರ ಷರತ್ತಿಗೆ ಉತ್ತರವಾಗಿ, ದೇವಾಲಯವನ್ನು ಶುಚಿಗೊಳಿಸುವ ತನ್ನ ಅಧಿಕಾರವನ್ನು ಸೂಚಿಸಲು, ಯೇಸು ಕ್ರಿಸ್ತನು ತನ್ನನ್ನೇ ದೇವಾಲಯವೆಂದು ಹೇಳಿದನು (2:19,21). ಅವರ ಮಧ್ಯದಲ್ಲಿ ವಾಸಿಸುತ್ತಿದ್ದ ನಿಜವಾದ ದೇವರ ಪ್ರಸನ್ನತೆ ಆತನೇ ಆಗಿದ್ದನು, ಆದರೆ ದೇವರ ಮೇಲೆ ಅವರಿಗಿದ್ದ ನಿಜವಾದ ಬಯಕೆಯ ಸ್ಥಾನದಲ್ಲಿ ದುರಾಸೆ ಮತ್ತು ಧರ್ಮಾಚರಣೆಗಳು ಬಂದದ್ದರಿಂದ ಆ ಪ್ರಸನ್ನತೆಯನ್ನು ಕಾಣಲು ಅವರಿಗೆ ಸಾಧ್ಯವಾಗಲಿಲ್ಲ.

ಯೇಸು ಕ್ರಿಸ್ತನು ಮುಂದೆ ಬರಲಿಕ್ಕಿದ್ದ ಆತನ ಮರಣ ("ಈ ದೇವಾಲಯವನ್ನು ನಾಶಮಾಡಿರಿ") ಮತ್ತು ಪುನರುತ್ಥಾನ ("ಮತ್ತು ಮೂರು ದಿವಸಗಳಲ್ಲಿ ನಾನು ಅದನ್ನು ಪುನಃ ಎಬ್ಬಿಸುವೆನು") ಬಗ್ಗೆ ಹೇಳಿದನು. ದೇವಾಲಯದ ಯಜ್ಞಗಳನ್ನು ಕೊನೆಗೊಳಿಸುವ ತನ್ನ ಯಜ್ಞದ ಬಗ್ಗೆ ಯೇಸು ಕ್ರಿಸ್ತನು ಈ ವಿಷಯಗಳನ್ನು ಮಾತನಾಡುತ್ತಿದ್ದನು ಎಂದು ಶಿಷ್ಯರು ನಂತರ ಅರ್ಥಮಾಡಿಕೊಂಡರು. ಆದರೆ ಈ ಸಮಯದಲ್ಲಿ ಮಾತ್ರ ಬೃಹದಾಕಾರದ ದೇವಾಲಯದ ಬಗ್ಗೆ ಆತನು ಮಾತನಾಡುತ್ತಿದ್ದಾನೆ ಎಂದು ಎಲ್ಲರೂ ನೆನೆಸಿದ್ದರಿಂದ ಅತ್ಯಾಶ್ಚರ್ಯಪಟ್ಟರು.

ಆದರೂ ಮುಂದಿನ ದಿನಗಳಲ್ಲಿ ಯೇಸು ಕ್ರಿಸ್ತನು ಅವರ ಎದುರಿನಲ್ಲಿ ಮಾಡಿದ ಸೌಖ್ಯತೆಯ ಅದ್ಭುತ2 ಮತ್ತು ಬಿಡುಗಡೆಯ ಕಾರ್ಯಗಳ ನಿಮಿತ್ತವಾಗಿ ಅನೇಕರು ಆತನಲ್ಲಿ ನಂಬಿಕೆಯನ್ನಿಟ್ಟರು. ಯೇಸು ಕ್ರಿಸ್ತನು ಅವರ ಹೃದಯವನ್ನು ತೆರೆದ ಪುಸ್ತಕದಂತೆ ಓದಲು ಶಕ್ತನಾಗಿದ್ದನು ಮತ್ತು ಜನರ ಹೃದಯಗಳಲ್ಲಿ ಎಷ್ಟು ತಿಳುವಳಿಕೆ ಮತ್ತು ಪ್ರಾಮಾಣಿಕತೆಯಿದೆ ಎಂಬದನ್ನು ನೋಡುವವನಾಗಿದ್ದನು. ಆತನು ನಮಗೆ ಏನನ್ನು ಮಾಡಿದ್ದಾನೆ ಎಂಬ ವಿಷಯದ ಆಧಾರದ ಮೇಲೆ ಅವರ ನಂಬಿಕೆಯು ನೆಲೆಗೊಂಡಿತಾದ್ದರಿಂದ ಸ್ಥಿರತೆಯಿಲ್ಲದ್ದಾಗಿತ್ತು. ಯಾರೆಲ್ಲಾ ಯಾವುದೇ ಪ್ರಶ್ನೆಗಳಿಲ್ಲದೇ ನಂಬಿಗಸ್ಥರು ಮತ್ತು ವಿಧೇಯರಾಗಿದ್ದಾರೆಂದು ಯೇಸುವಿಗೆ ಗೊತ್ತಿದೆಯೋ ಅಂಥವರಿಗೆ ಮಾತ್ರವೇ ಆತನು ತನ್ನ ವ್ಯಕ್ತಿತ್ವದ ತಿಳುವಳಿಕೆ ಮತ್ತು ಉದ್ದೇಶವನ್ನು ತಿಳಿಯಪಡಿಸುತ್ತಾನೆ.

## ಯೋಹಾನ 2:1–10 ಓದಿರಿ.

1. ಮದುವೆಯ ಮನೆಯಲ್ಲಿ ಎದುರಾದ ಸಮಸ್ಯೆ ಏನು, ಮತ್ತು ಅದರ ವಿಷಯವಾಗಿ ಮರಿಯಳು ಏನು ಮಾಡಿದಳು (2:1–5)?

**Reference**: ವ್ಯಾಖ್ಯಾನದ ಉಲ್ಲೇಖನ 2, ಪುಟ 19 re: ಮರಿಯಳಿಗೆ ಯೇಸುವಿನ ಉತ್ತರ

2.ಎ. ಯೇಸು ಕ್ರಿಸ್ತನು ಎದುರಾಗಿದ್ದ ಸಮಸ್ಯೆಯನ್ನು ಹೇಗೆ ಪರಿಹರಿಸಿದನು (2:6–10)?

ಬಿ. ಈ ಸೂಚಕಕಾರ್ಯದ ಫಲಿತಾಂಶದಿಂದ ಏನಾಯಿತು (2:11)?

3. ಯೇಸು ಕ್ರಿಸ್ತನು ತನ್ನ ಸೇವೆಯ ಪ್ರಾರಂಭದಲ್ಲಿಯೇ, ತನ್ನ ಮರಣದ "ಸಮಯದ" ಬಗ್ಗೆ ಹೇಳಿದನು (2:4). ಆತನು ಮಾಡಿದ ಸೂಚಕಕಾರ್ಯಗಳು ಆತನ ಮರಣವನ್ನು ಸೂಚಿಸುವ ವಿವಿಧ ಪ್ರತಿಕ್ರಿಯೆಗಳನು ಸೂಚಿಸುತ್ತದೆ. ಈ ವಚನಗಳಿಂದ ಸ್ಪಷ್ಟಗೊಳ್ಳುವ ತನ್ನ ವಿಮೋಚನಾ ಕಾರ್ಯದ ಸಮಯದ ಬಗ್ಗೆ ಯೇಸು ಕ್ರಿಸ್ತನಿಗೆ ಏನು ಗೊತ್ತಿತ್ತು (7:6, 8:20, 12:23,27, 17:1)?

ಯೋಹಾನ 2:12–25 ಓದಿರಿ.

4.ಎ. ಕರ್ತನಿಂದ ಕಠಿಣವಾದ ಮಾತುಗಳನ್ನು ಮತ್ತು ಕ್ರಿಯೆಗಳನ್ನು ಹೊರಪಡಿಸಿದ ಪರಿಸ್ಥಿತಿ ಯಾವುದು (2:13–16)?

**Reference**: ನೋಟ್ 2ಬಿ, ಈ ಪ್ರಬೋಧನೆ, ಪುಟ 187

ಬಿ. ಯೇಸು ಕ್ರಿಸ್ತನು ಕ್ರಿಯೆಗಳನ್ನು ಆತನ ಶಿಷ್ಯರು ನಂತರ ಯಾವ ಗುಣಲಕ್ಷಣಗಳೆಂದು ಹೇಳಿದರು (2:17)?

**ನೋಟ್**: ಈ ಹೇಳಿಕೆಯು ಕೀರ್ತನೆ 69:9ರಲ್ಲಿ ಹೇಳಲಾಗಿರುವ ಮೆಸ್ಸೀಯನ ಕುರಿತಾದ ಪ್ರವಾದನೆಯಾಗಿದೆ.

5.ಎ. ಯೆಹೂದ್ಯರು ಯೇಸುವನ್ನು ನೀನು ಯಾವ ಅಧಿಕಾರದಿಂದ ಇವುಗಳನ್ನೆಲ್ಲಾ ಮಾಡುತ್ತೀಯ ಎಂದು ಕೇಳಿದಾಗ ಆತನು ಅವರಿಗೆ ಏನೆಂದು ಉತ್ತರ ಕೊಟ್ಟನು (2:18–20)?

**Reference**: ವ್ಯಾಖ್ಯಾನದ ಉಲ್ಲೇಖನ 2, ಪುಟ 20, re: ಈ ದೇವಲಾಯ (2:19).

ಬಿ. ಕರ್ತನ ಹೇಳಿಕೆಯನ್ನು ಶಿಷ್ಯರ ನಂತರ ಏನೆಂದು ಅರ್ಥಮಾಡಿಕೊಂಡರು (2:21–22)?

6.ಎ. ಅನೇಕ ಜನರು ಯೇಸುವಿನಲ್ಲಿ ಯಾಕೆ ನಂಬಿಕೆಯನ್ನಿಟ್ಟರು (2:23)?

**Reference**: ನೋಟ್ 1, ಯೇಸುವಿನ ಸೂಚಕಕಾರ್ಯಗಳು, ಪುಟ 75.

ಬಿ. ಈ ವಿಶ್ವಾಸಿಗಳ ಬಗ್ಗೆ ಯೇಸುವಿಗೆ ಏನು ಗೊತ್ತಿತ್ತು (2:24–25)?

**Reference**: ವ್ಯಾಖ್ಯಾನದ ಕಡೆಯ ಉಲ್ಲೇಖನ, ಪುಟ 20.

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ನಾವು ಎದುರುನೋಡುವ ಮಾರ್ಪಡುವಿಕೆ

ತಮ್ಮ ಜೀವಿತಗಳಲ್ಲಿ ದೊಡ್ಡ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂಬ ಅನುಭವಗಳ ಸಮಯವನ್ನು ಅನೇಕರು ಎದುರಿಸುತ್ತಾರೆ. ಕೆಲವರು ತಮ್ಮ ವಾತಾವರಣವನ್ನು ಬದಲಾಯಿಸಿಕೊಳ್ಳುವದರ ಅಥವಾ ತಮ್ಮ ಪರಿಸ್ಥಿತಿಗಳನ್ನು ಕಡಿತ ಮಾಡಿಕೊಳ್ಳುವದರ ಮೂಲಕ ತಮ್ಮ ಸಮಸ್ಯೆಗಳನ್ನು ಎದುರಿಸಲು ಸಿದ್ಧರಾಗುತ್ತಾರೆ. ಇನ್ನು ಕೆಲವರು ತಮ್ಮನ್ನು ಬದಲಾಯಿಸಿಕೊಳ್ಳುವ ಬದಲಾಗಿ ತಮ್ಮ ಸುತ್ತಮುತ್ತಲಿರುವ ಜನರನ್ನು ಬದಲಾಯಿಸಲು ಹರಸಾಹಸಪಡುತ್ತಾರೆ--ಇದು ನಿರಾಸೆಯನ್ನು ಮೂಡಿಸುವಂಥ ಪ್ರಯತ್ನವಾಗಿದೆ--ಆದರೆ ಬುದ್ಧಿವಂತರಾದರೋ ಸ್ವಬೆಳವಣಿಗೆಯ ಗಂಭೀರವಾದ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅವರು ವಿಶೇಷವುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ, ಆದರೆ ಯಶಸ್ಸಿನ ಕೊರತೆಯಿರುವದರಿಂದ ಶೀಘ್ರದಲ್ಲಿಯೇ ಬಳಲಿಹೋಗುತ್ತಾರೆ ಮತ್ತು ಗಲಿಬಿಲಿಗೊಳಗಾಗುತ್ತಾರೆ. ವೃತ್ತಿಪರವಾದ ಸಲಹೆಗಳು ಅನೇಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ ಆದರೆ ಮಾನುಷಿಕ ಜಟಿಲತೆಯ ನಿಮಿತ್ತವಾಗಿ ಹೊಸ ಪ್ರಕಟನೆಗಳಲ್ಲಿ ಕೆಲವು ಗೊಂದಲಗಳನ್ನು ಸಹ ಸೃಷ್ಟಿಸುತ್ತದೆ.

ಬದಲಾಗಬೇಕೆಂಬ ನಮ್ಮ ಸಮರ್ಪಣೆಯನ್ನು, ನಾವು ದೊಡ್ಡ ನಿರೀಕ್ಷೆ ಮತ್ತು ದೃಢತೆಯೊಂದಿಗೆ ಪ್ರಾರಂಭಿಸುತ್ತೇವೆ, ಆದರೂ ಎಷ್ಟೇ ಕಠಿಣ ಪರಿಶ್ರಮದ ನಂತರವೂ ಸಮಸ್ಯೆ ಮಾತ್ರ ಬಗೆಹರಿಯದೆ ಹಾಗೆಯೇ ಉಳಿಯುವಾಗ ಹತಾಶರಾಗುತ್ತೇವೆ.
ಆದರೆ ದೇವರ ದೃಷ್ಟಿಯಲ್ಲಿ ನಮ್ಮ ಸ್ಥಿತಿಯು ನಿರೀಕ್ಷೆಯಿಲ್ಲದಿರುವದಾಗಿ ಎಂದಿಗೂ ಕಾಣಿಸುವದಿಲ್ಲ. ಪಾಠ 2ರಲ್ಲಿ ನಾವು ಚರ್ಚಿಸಿರುವ ಹಾಗೆ ದೇವರು ನಮ್ಮ ಸಾಮರ್ಥ್ಯವನ್ನು ನೋಡುವದು ಮಾತ್ರವಲ್ಲ ಬದಲಾಗಿ ಮಾರ್ಪಡುವಿಕೆಯ ಕ್ರಿಯೆಯುದ್ದಕ್ಕೂ ಆತನು ನಮ್ಮೊಂದಿಗೆ ಹಂತ-ಹಂತವಾಗಿ ಜೊತೆಯಲ್ಲಿಯೇ ನಡೆಯುವವನಾಗಿದ್ದಾನೆ.

ಕಾನಾ ಊರಿನ ಮದುವೆಯಲ್ಲಿ ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದಂಥ ಕಥೆಯು ನಮ್ಮ ಜೀವಿತವನ್ನು ಯೇಸುವಿನ ಶಕ್ತಿಯು ಬದಲಾಯಿಸುತ್ತದೆ ಎಂಬದಕ್ಕೆ ನಿದರ್ಶನವಾಗಿದೆ. ಯೇಸು ಕ್ರಿಸ್ತನು

ಮನುಷ್ಯರ ಜೀವಿತಗಳನ್ನು ಆಂತರ್ಯದಲ್ಲಿಯೂ ಮತ್ತು ಬಾಹ್ಯದಲ್ಲಿಯೂ ಮಾರ್ಪಡಿಸುವನು ಎಂಬ ವಾಗ್ದಾನವನ್ನು ಸತ್ಯವೇದವು ತಿಳಿಸುತ್ತದೆ. ಹೊಸ ಒಡಂಬಡಿಕೆಯಲ್ಲಿರುವ ಶುಭಸಂದೇಶವೇನೆಂದರೆ, ನಾವು ಕ್ರಿಸ್ತನಲ್ಲಿ ಭರವಸೆಯುಳ್ಳವರಾಗಿದ್ದು, ಆತನ ನಾಯಕತ್ವ ಮತ್ತು ಶಕ್ತಿಗೆ ನಮ್ಮನ್ನೇ ಸತತವಾಗಿ ಒಪ್ಪಿಸಿಕೊಡುವಾಗ, ಆತನು ನಮ್ಮನ್ನು ಸೃಷ್ಟಿಸಿದ ಉದ್ದೇಶದ ಮೇರೆಗೆ ನಾವು ಪರಿಪೂರ್ಣರಾದ ವ್ಯಕ್ತಿಗಳಾಗಿ ಮರ್ಪಡುತ್ತೇವೆ.

1.ಎ. ಮನುಷ್ಯರು ಬದಲಾವಣೆಗಳಿಗಾಗಿ ಹಂಬಲಿಸುವಂತೆ ಮಾಡುವ ವೈಯಕ್ತಿಕವಾದ ಸಮಸ್ಯೆಗಳು ಯಾವುವು?

ಬಿ. ಬದಲಾಗಬೇಕೆಂಬ ಬಯಕೆಯು ಮನುಷ್ಯರನ್ನು ಎಲ್ಲಿಗೆ ಮುನ್ನಡೆಸುತ್ತದೆ?

ಸಿ. ನಮಗೆ ಮಾರ್ಪಡುವಿಕೆಯು ಬೇಕೆಂದು ಅರ್ಥಮಾಡಿಕೊಳ್ಳುವಾಗ, ಅದಕ್ಕಾಗಿ ನಾವು ಪ್ರಡುವ ಪ್ರಯಾಸದಿಂದ ನಮಗೆ ದೊರೆಯುವ ಫಲಿತಾಂಶ ಏನು?

2. ಯೇಸು ಕ್ರಿಸ್ತನ ಮಾರ್ಪಡಿಸುವಿಕೆಯ ವಾಗ್ದಾನಗಳನ್ನು ಹೇಗೆ ವಿವರಿಸಲಾಗಿದೆ? ದೇವರು ಏನನ್ನು ವಾಗ್ದಾನ ಮಾಡಿದ್ದಾನೆ?

2 ಕೊರಿಂಥ 5:17

ಯೆಶಾಯ 43:18–19

3. ಯೇಸು ಕ್ರಿಸ್ತನು ತನ್ನ ಜೀವಿತವನ್ನು ನಮ್ಮಲ್ಲಿ ಮತ್ತು ನಮ್ಮ ಮೂಲಕವಾಗಿ ಜೀವಿಸುವದರಿಂದ ನಮ್ಮಲ್ಲಿ ಮಾರ್ಪಡುವಿಕೆಯು ಆಗುತ್ತದೆ ಎಂದು ಸತ್ಯವೇದವು ಹೇಳುತ್ತದೆ. ನಾವು ವ್ಯತ್ಯಸ್ಥರಾಗಿ ಪ್ರತಿಕ್ರಿಯಿಸುವಂತೆ ನಮ್ಮನ್ನು ಬಲಗೊಳಿಸಲಾಗುತ್ತದೆ ಮತ್ತು ಮುನ್ನಡೆಸಲಾಗುತ್ತದೆ ಎಂದು ಆತನ ಆತ್ಮವು ವಾಗ್ದಾನ ಮಾಡುತ್ತದೆ. ಈ ವಿಷಯವಾಗಿ ಕೆಳಗಿನ ವಾಕ್ಯಗಳು ಏನನ್ನು ತಿಳಿಸುತ್ತದೆ?

ಯೆಹೆಜ್ಕೇಲ 36:26–27

ಎಫೆಸ 3:16–17ಎ

ಕೊಲೊಸ್ಸೆ 1:27ಬಿ

4. ಯೇಸು ಕ್ರಿಸ್ತನು ನಮ್ಮ ಜೀವಿತದಲ್ಲಿ "ನೀರನ್ನು ದ್ರಾಕ್ಷಾರಸವನ್ನಾಗಿ" ಮಾರ್ಪಡಿಸುವ ಕ್ರಿಯೆಯನ್ನು ನಮ್ಮ ಜೀವಿತದಲ್ಲಿ ನಾವು ಹೇಗೆ ತೆಗೆದುಕೊಳ್ಳಬೇಕೆಂದರೆ, ನಮ್ಮ ನಕಾರಾತ್ಮಕವಾದ ಅನುಭವಗಳನ್ನು ಸಕಾರಾತ್ಮಕ ಮತ್ತು ಆರೋಗ್ಯವಂತ ಅನುಭವಗಳನ್ನಾಗಿ ಮಾರ್ಪಡಿಸಲು ಆತನಿಗೆ ಅವಕಾಶವನ್ನು ಕೊಡಬೇಕು. ಹಂತಹಂತವಾಗಿ ಯೇಸು ಕ್ರಿಸ್ತನಿಗೆ ನಮ್ಮನ್ನೇ ಒಪ್ಪಿಸಿಕೊಡುವ ಆಯ್ಕೆಯನ್ನು ನಾವು ಮಾಡುವಾಗ, ಆತನು ಯಾವುದರಿಂದ ಮಾರ್ಪಡುವಿಕೆಗಳನ್ನು ಮಾಡುತ್ತಾನೆ:

ಮಾರ್ಗದರ್ಶನದ ಕೊರತೆ? ಕೀರ್ತನೆ 32:8

ಅಭದ್ರತೆ? ಯೆಶಾಯ 33:6

ಭಯ? ಯೆಶಾಯ 41:10

ಸಂತೋಷದ ಕೊರತೆ? ಕೀರ್ತನೆ 16:11

ಅಸಮಾಧಾನ? ಮತ್ತಾಯ 11:28–30

ಗೊತ್ತುಗುರಿಯಿಲ್ಲದ ಉದ್ದೇಶ? ಮತ್ತಾಯ 5:14–16; ಕೀರ್ತನೆ 138:8

ಸ್ವಾರ್ಥ? ಫಿಲಿಪ್ಪಿ 2:3–4

ಚಿಂತೆ/ಕಳವಳ? ಫಿಲಿಪ್ಪಿ 4:6–7

ನಕಾರಾತ್ಮಕ ಪ್ರವೃತ್ತಿ/ಸ್ವ–ನಿಯಂತ್ರಣದ ಕೊರತೆ? ಗಲಾತ್ಯ 5:22–23

## ಸಾರಾಂಶ

5.ಎ. ಕ್ರಿಸ್ತನಿಂದ ನಾವು ಮಾರ್ಪಡಬೇಕಾದರೆ, ಮೊದಲನೆಯದಾಗಿ ಆತನು ನಮ್ಮಲ್ಲಿ ಜೀವಿಸುವವನಾಗಿರಬೇಕು. ಪ್ರಕಟನೆ 3:20ರಲ್ಲಿ ಆತನು ನಮಗೆ ಕೊಟ್ಟಿರುವ ವಾಗ್ದನ ಮತ್ತು ಆಹ್ವಾನವೇನು?

ಬಿ. ನಿಮ್ಮ ಹೃದಯದ ಬಯಕೆ ಇದೇನಾ?

6.ಎ. ಕ್ರಿಸ್ತನಿಂದ ಸತತವಾಗಿ ಮಾರ್ಪಡಬೇಕೆಂದು ನಾವು ಬಯಸುವದಾದರೆ, ನಮ್ಮ ಜೀವಿತದ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವು ಆತನಿಗೆ ನಮ್ಮನ್ನೇ ಒಪ್ಪಿಸಿಕೊಡಬೇಕು. ಆತನ ಮಾರ್ಪಡುವಿಕೆಯನ್ನು ಅನುಭವಿಸಲು ನೀವು ಒಪ್ಪಿಸಿಕೊಡಬೇಕಾದ ಯಾವುದಾದರೂ ಕ್ಷೇತ್ರಗಳು ನಿಮ್ಮ ಜೀವಿತದಲ್ಲಿ ಇದೆಯೇ?

ಬಿ. 4ನೇ ಪ್ರಶ್ನೆಯನ್ನು ಮತ್ತೆ ಗಮನಿಸುವದಾದರೆ, ನಿಮ್ಮ ಬಯಕೆಯನ್ನು ನೀವು ಆತನಿಗೆ ತಿಳಿಸುವಾಗ ಏನನ್ನು ಕೊಡುವೆನೆಂದು ದೇವರು ವಾಗ್ದಾನ ಮಾಡಿದ್ದಾನೆ?

## ಪಾಠ 3 ನೋಟ್ಸ್

1 ಪಸ್ಕ, ಅಥವಾ ಹುಳಿಯಿಲ್ಲದ ರೊಟ್ಟಿಗಳ ಹಬ್ಬ, ಯೆಹೂದ ಧರ್ಮದ ಮೊದಲನೆಯ ಮತ್ತು ಅತ್ಯಂತ ಪ್ರಾಧಾನ್ಯತೆಯುಳ್ಳ ಪರಿಶುದ್ಧವಾದ ಹಬ್ಬವಾಗಿದೆ. ಪಸ್ಕವು ವಾರದ ಮೊದಲನೆಯ ದಿನದಲ್ಲಿ ಪ್ರಾರಂಭವಾಗುತ್ತದೆ ಮತ್ತು ಹುಳಿಯಿಲ್ಲದ ರೊಟ್ಟಿಗಳ ಹಬ್ಬವು ವಾರದ ಉಳಿದ ದಿವಸಗಳಲ್ಲಿ ನಡೆ–ಯುತ್ತದೆ ಅಂತೂ ಈ ಹಬ್ಬವು ಒಂದುವಾರ ಪೂರ್ತಿ ನಡೆಯುತ್ತದೆ. ಈ ಆಚರಣೆಯು ಐಗುಪ್ತದೇಶದ ದಾಸತ್ವದಿಂದ ಇಸ್ರಾಯೇಲರಿಗಾದ ಬಿಡುಗಡೆ (ವಿಮೋಚನಕಾಂಡ 12:1–13) ಮತ್ತು ದೇವರಿಂದ ವಿಮೋಚಿಸಲ್ಪಟ್ಟ ರಾಷ್ಟ್ರವಾಗಿ ಇಸ್ರಾಯೇಲಿನ ಸ್ಥಾಪನೆಗೆ ಸ್ಮಾರಕವಾದದ್ದಾಗಿದೆ.

2 Reference: ನೋಟ್ 1, ಯೇಸುವಿನ ಸೂಚಕಕಾರ್ಯಗಳು, ಪುಟ ಸಂಖ್ಯೆ 75.

# ಪಾಠ 4

# ನಿಕೊದೇಮನು ಮತ್ತು ನೂತನ ಸೃಷ್ಟಿ

## ಯೋಹಾನ 3

ಯೇಸು ಕ್ರಿಸ್ತನು ದುರಾಸೆಯುಳ್ಳ ವ್ಯಾಪಾರಸ್ಥರನ್ನು ದೇವಾಲಯದಿಂದ ಹೊರಡಿಸಿದ ಸ್ವಲ್ಪ ಸಮಯದ ನಂತರ, ಪ್ರಧಾನನಾದ ಧಾರ್ಮಿಕ ನಾಯಕನಾದ ನಿಕೊದೇಮನೆಂಬವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಪ್ರಶ್ನೆಯೊಂದನ್ನು ಕೇಳಲು ಬಂದನು. ನಿಕೊದೇಮನು ಫರಿಸಾಯನಾಗಿದ್ದನು1 ಮತ್ತು ಎಪ್ಪತ್ತು ಮಂದಿಯನ್ನೊಳಗೊಂಡ ಯೆಹೂದ್ಯರ ಸಮಿತಿಯಾದ ಸೆನ್ಹದ್ರೀನಿನ ಸದಸ್ಯನಾಗಿದ್ದನು. ನಂತರ ಯೇಸು ಕ್ರಿಸ್ತನಿಗಾಗಿ ಧ್ವನಿಯೆತ್ತಿದ ಧಾರ್ಮಿಕ ನಾಯಕರಲ್ಲಿ ಈತನೂ ಒಬ್ಬನಾಗಿದ್ದನು (7:50–52) ಮತ್ತು ಯೇಸು ಕ್ರಿಸ್ತನನ್ನು ಹೂಣಿಡುವ ಸಮಯದಲ್ಲಿ ತನ್ನಿಂದಾಗುವ ಸಹಕಾರವನ್ನು ಸಹ ನೀಡಿದನು (19:39–40).

ತಮ್ಮ ಮೊದಲನೆಯ ಭೇಟಿಯಲ್ಲಿಯೇ, ನಿಕೊದೇಮನು ಯೇಸು ಕ್ರಿಸ್ತನಿಗೆ, ನಿನ್ನ ಸ್ವಭಾವ ಮತ್ತು ಸೂಚಕಕಾರ್ಯಗಳು ನನ್ನನ್ನು ನಿನ್ನ ಕಡೆಗೆ ಸೆಳೆದುಕೊಂಡಿವೆ ಎಂದು ಹೇಳಿದನು. ಯೇಸುವೇ ದೇವರೆಂದು ಆತನಿಗೆ ಗೊತ್ತಿತ್ತು (3:2), ಆದರೆ ಯೇಸು ಕ್ರಿಸ್ತನೆಂಬ ವ್ಯಕ್ತಿಯೊಂದಿಗೆ ತನ್ನ ಧಾರ್ಮಿಕ ತಿಳುವಳಿಕೆಗಳನ್ನು ಸಂಧಾನಪಡಿಸಿಕೊಳ್ಳಲು ಆತನಿಗೆ ಸಾಧ್ಯವಾಗಲಿಲ್ಲ. ಆದ್ದರಿಂತ ತನ್ನ ಗೊಂದಲವನ್ನು ಬಗೆಹರಿಸಿಕೊಳ್ಳುವದಕ್ಕಾಗಿ ಆಅನು ನೇರವಾಗಿ ಯೇಸುವಿನ ಬಳಿಗೆ ಬಂದನು.

ತಮ್ಮ ಮಾತುಕತೆಯ ಫಲವಾಗಿ ಯೇಸು ಕ್ರಿಸ್ತನು ನಿಕೊದೇಮನ ಎರಡು ಅಗತ್ಯತೆಗಳನ್ನು ಗುರುತಿಸಿಕೊಂಡನು. ಮೊದಲನೆಯದಾಗಿ ಪವಿತ್ರಾತ್ಮನು ಕೊಡುವ ಹೊಸ ಸೃಷ್ಟಿಯ ಬಗ್ಗೆ ಆತನ ಅಗತ್ಯತೆಯಿತ್ತು.2 ಈ ಅಗತ್ಯತೆಯು––ದೇವರ ಮಗನಲ್ಲಿ ನಂಬಿಕೆಯನ್ನಿಡುವದರ ಮೂಲಕ–– ದೇವರ ರಾಜ್ಯದೊಳಗೆ ಪ್ರವೇಶಿಸುವ ಎರಡನೆಯ ಅಗತ್ಯತೆಯ ಮೇಲೆ ನೆರವೇರುವದಾಗಿತ್ತು. (ನಾನು ಅಬ್ರಹಾಮನ ಸಂತತಿಯವನಾಗಿರುವದರಿಂದ ದೇವರ ಮುಂದೆ ನೀತಿವಂತನಾಗಿ ನಿಂತುಕೊಳ್ಳಬಹುದೆಂಬದು ನಿಕೊದೇಮನ ನಂಬಿಕೆಯಾಗಿತ್ತು.) ಪ್ರಾಮಾಣಿಕನು ಮತ್ತು ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಹಂಬಲವುಳ್ಳ ಈ ಧಾರ್ಮಿಕ ನಾಯಕನೊಂದಿಗೆ ಮಾತನಾಡುತ್ತಿರುವಾಗ, ತಾನು ಪರಲೋಕದಿಂದ ಬಂದವನು ಮತ್ತು ನಿತ್ಯವಾದ ಪರಲೋಕದ ಸತ್ಯಗಳ ಬಗ್ಗೆ ತಾನು ಕೊಡುತ್ತಿರುವ ಸಾಕ್ಷಿಗಳು ಸತ್ಯವಾದವುಗಳೆಂಬ ಭರವಸೆಯನ್ನು ಯೇಸು ಕ್ರಿಸ್ತನು ನಿಕೊದೇಮನಿಗೆ ಕೊಟ್ಟನು. ಮನುಷ್ಯಕುಮಾರನಾದ,3 ಯೇಸು ಕ್ರಿಸ್ತನು ವಾಗ್ದಾನ ಮಾಡಿದ್ದೇನೆಂದರೆ, ಆತನು ಮೇಲಕ್ಕೆತ್ತಲ್ಪಡುವನು (ತನ್ನ ಶಿಲುಬೆಯ ಮರಣದ ಸೂಚನೆ), ಮತ್ತು ಆತನಲ್ಲಿ ನಂಬಿಕೆಯನ್ನಿಡುವವರು ಮಾತ್ರ ನಿತ್ಯಜೀವವನ್ನು ಪಡೆಯುವರು.

3:15ರ ನಂತರ ಯೇಸು ಕ್ರಿಸ್ತನು ನಿಕೊದೇಮನೊಂದಿಗೆ ತನ್ನ ಮಾತುಗಳನ್ನು ನಿಲ್ಲಿಸಿದ್ದಾನೆ ಮತ್ತು

ಉಳಿದ ವಿಷಯಗಳು ಬರಹಗಾರನ ಆಲೋಚನೆಗಳಾಗಿವೆ ಎಂಬದು ಹಲವು ವಿಮರ್ಷಕರ ನಂಬಿಕೆಯಾಗಿದೆ. ಈ ಮಾತುಗಳನ್ನು ಒಂದುವೇಳೆ ಯೇಸುವೇ ಹೇಳಿರಬಹುದು ಅಥವಾ ಯೋಹಾನನೇ ಹೇಳಿರಬಹುದು, ಆದರೆ ಇವುಗಳು ದೇವರ ಮಾತುಗಳಾಗಿವೆ ಮತ್ತು ದೇವರ ಅಸಾಮಾನ್ಯವಾದ ಪ್ರೀತಿಯ ಬಗ್ಗೆ ಇವುಗಳು ಮಾತನಾಡುತ್ತವೆ. ತನ್ನ ಅದ್ವಿತೀಯವಾದ ಪ್ರೀತಿಯು ತನ್ನಲ್ಲಿದ್ದ ಉತ್ತಮವಾದ--ತನ್ನ ಒಬ್ಬನೇ ಮಗನನ್ನು--ಈ ಲೋಕಕ್ಕೆ ಕಳುಹಿಸುವಂತೆ ತಂದೆಯನ್ನು ಒತ್ತಾಯಪಡಿಸಿತು. ಆತನು ತನ್ನ ಮಗನನ್ನು ಲೋಕಕ್ಕೆ ಕಳುಹಿಸಿದ್ದು ತೀರ್ಪು ಮಾಡುವದಕ್ಕಾಗಿಯಲ್ಲ ಬದಲಾಗಿ ನಿತ್ಯವಾದ ರಕ್ಷಣೆ ಮತ್ತು ಜೀವವನ್ನು ಕೊಡಲು ತನ್ನೆಡೆಗೆ ಸೆಳೆದುಕೊಳ್ಳುವದಕ್ಕಾಗಿ ಕಳುಹಿಸಿದನು. ಯಾರೆಲ್ಲಾ ತನ್ನ ಮಗನನ್ನು ನಂಬುತ್ತಾರೋ ಅವರು ನ್ಯಾಯವಿಚಾರಣೆಗೆ ಒಳಗಾಗಬಾರದು ಬದಲಾಗಿ ಬಿಡುಗಡೆ ಮಾಡುವದಕ್ಕಾಗಿ ದೇವರು ತನ್ನ ಮಗನನ್ನು ಕಳುಹಿಸಿದನೆಂದು ಯೋಹಾನನು ಸಾರುತ್ತಿದ್ದಾನೆ.

ತನ್ನ ಮಗನ ಮೂಲಕವಾಗಿ ದೇವರ ಬೆಳಕು ಲೋಕದೊಳಗೆ ಪ್ರವಹಿಸುವಾಗ ಆಗುವ ಪರಿಸ್ಥಿತಿ ಏನೆಂದರೆ ದೇವರನ್ನು ಮೆಚ್ಚಿಸಲು ಆಸಕ್ತಿಯಿಲ್ಲದ ಅನೇಕರು ಬೆಳಕಿನಿಂದ ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸುತ್ತಾರೆ. ಅವರು ತಿರಸ್ಕಾರ ಅಂಧಕಾರ, ಮೋಸ ಮತ್ತು ದೈವೀಕವಲ್ಲದ ಆಚರಣೆಗಳಲ್ಲಿ ಅಡಗಿಕೊಳ್ಳುತ್ತಾರೆ. ಆದರೆ ಸತ್ಯವನ್ನು4 ಪ್ರೀತಿಸುವವರೆಲ್ಲರೂ ದೇವರ ಬೆಳಕಿಗೆ ಪ್ರತಿಕ್ರಿಯಿಸುತ್ತಾರೆ ಮತ್ತು ಆತನ ಮಗನನ್ನು ಸ್ವಾಗತಿಸುತ್ತಾರೆ.

ಇದಾದ ನಂತರ, ಆತನ ಶಿಷ್ಯರು ಆತನು ಕೊಟ್ಟ ಅಧಿಕಾರದಿಂದ ದೀಕ್ಷಾಸ್ನಾನವನ್ನು ಮಾಡಿಸುತ್ತಿದ್ದ ಯೂದಾಯದ ಗ್ರಾಮಾಂತರ ಪ್ರದೇಶಗಳ ಕಡೆಗೆ ಸೇವೆಗಾಗಿ ಹೋದನು (3:22, 4:2).5 ಇದನ್ನು ಕೇಳಿದಾಗ ಸ್ನಾನಿಕನಾದ ಯೋಹಾನನ ಶಿಷ್ಯರಲ್ಲಿ ಕೆಲವರಿಗೆ ದುಃಖಪಟ್ಟರು. ಅನೇಕಾನೇಕ ಜನರು ಯೋಹಾನ ಕಡೆಗೆ ಬರುವದಕ್ಕಿಂತ ಯೇಸುವಿನ ಕಡೆಗೆ ಹೋಗುತ್ತಿದ್ದಾರೆ ಎಂಬದೂ ಅವರ ಚಿಂತೆಯಾಗಿತ್ತು. ಈ ವಿಷಯವನ್ನು ಅವರು ಯೋಹಾನನಿಗೆ ತಿಳಿಸಿದಾಗ, ಆತನು ಅವರಿಗೆ ಕರುಣೆಯುಳ್ಳವರಾಗಿರಿ ಮತ್ತು ತಗ್ಗಿಸಿಕೊಳ್ಳಿರಿ ಎಂದು ಅವರಿಗೆ ಉತ್ತರಿಸಿದನು. ಯೇಸು ಕ್ರಿಸ್ತನಿಗೆ ಈ ಸೇವೆಯನ್ನು ದೇವರೇ ಕೊಟ್ಟಿದ್ದಾನೆ ಮತ್ತು ಮೆಸ್ಸೀಯನ ದಾರಿಯನ್ನು ಸರಿಮಾಡುವ ಕೆಲಸವನ್ನು ದೇವರು ನನಗೆ ಕೊಟ್ಟಿದ್ದಾನೆ. ಮದುಮಗ ಮತ್ತು ಸ್ನೇಹಿತನ ಉದಾಹರಣೆಯನ್ನು ಉಪಯೋಗಿಸುವದ ಮೂಲಕ, ಮದುವೆಯ ಸಮಾರಂಭದಲ್ಲಿ ಎಲ್ಲವೂ ಉತ್ತಮವಾಗಿರುವಾಗ ಮದುಮಗನಿಗೆ ಸಹಾಯವನ್ನು ಮಾಡಲು ಮತ್ತು ಆತನೊಂದಿಗೆ ಸಂತೋಷಿಸಲು ಅವನ ಸ್ನೇಹಿತನು ಹೇಗೆ ಜೊತೆಯಲ್ಲಿರುತ್ತಾನೆ ಎಂಬದನ್ನು ಯೋಹಾನನು ತೋರಿಸುತ್ತಿದ್ದಾನೆ. ಯೇಸು ಕ್ರಿಸ್ತನನ್ನು ಇಸ್ರಾಯೇಲರಲ್ಲಿ ನಂಬಿಗಸ್ಥನೆಂದು ಪರಿಚಯಪಡಿಸಿದ್ದಕ್ಕೂ ಮತ್ತು ಅವರೆಲ್ಲರೂ ಆತನನ್ನು ಹಿಂಬಾಲಿಸುವದನ್ನು ಕಾಣುವದರಲ್ಲಿಯೂ ಯೋಹಾನನು ಸಂತುಷ್ಟನಾಗಿದ್ದನು. “ಆತನು ಹೆಚ್ಚಿಸಲ್ಪಡಬೇಕು, ಮತ್ತು ನಾನು ತಗ್ಗಿಸಲ್ಪಡಬೇಕು” ಎಂದು ಸ್ನಾನಿಕನಾದ ಯೋಹಾನನು ಹೇಳಿದ ಮಾತುಗಳನ್ನು ಸುವಾರ್ತೆಗಳಲ್ಲಿ ಕೊನೆಯದಾಗಿ ಬರೆಯಲ್ಪಟ್ಟಿದೆ.

ಈಗ ಬರಹಗಾರನು ಸ್ನಾನಿಕನಾದ ಯೋಹಾನನು ಕೊಟ್ಟ ಸಾಕ್ಷಿಯ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತಿದ್ದಾನೆ. ಅಭಿಷಿಕ್ತನು ಮತ್ತು ಯೇಸು ಕ್ರಿಸ್ತನಿಗೆ ಮುಂದಾಗಿ ಪ್ರವಾದಿಯಾದ ಈತನು ಕಾಣಿಸಿಕೊಂಡದ್ದರಿಂದ, ಆತನು “ಲೋಕದಿಂದ ಬಂದವನಾಗಿದ್ದನು” ಅದ್ದರಿಂದ ಮೇರೆಗಳುಳ್ಳವನಾಗಿದ್ದನು. ಆದರೆ ಯೇಸು ಕ್ರಿಸ್ತನಾದರೋ ಪರಲೋಕದಿಂದ ಬಂದವನಾಗಿದ್ದರಿಂದ,

ಪರಲೋಕದಲ್ಲಿ ನೋಡಿರುವದನ್ನು ಮತ್ತು ಕೇಳಿರುವದನ್ನು ನಿಖರವಾಗಿ ಹೇಳುವವನಾಗಿದ್ದಾನು. ದೇವರ ಮಾತುಗಳನ್ನು ತಿಳಿಸುವದಕ್ಕಾಗಿ ಆತನು ದೇವರಿಂದ ಕಳುಹಿಸಲ್ಪಟ್ಟವನಾಗಿದ್ದನು ಮತ್ತು ಮಿತಿಮೀರಿದಷ್ಟು ದೇವರಾತ್ಮನ ಶಕ್ತಿಯಿತ್ತು. ತಂದೆಯಾದ ದೇವರು ಮೇಲಿನಿಂದ ಕಳುಹಿಸಿಕೊಟ್ಟ ಆತನ ಮಗನಲ್ಲಿ ನಂಬಿಕೆಯನ್ನಿಡುವದರ ಮೇಲೆಯೇ ನಿತ್ಯಜೀವವು ಆಧಾರವಾಗಿದೆ: ಎಂಬ ತನ್ನ ದೃಢತೆಯನ್ನು ಅಪೊಸ್ತಲನು ಮತ್ತೊಮ್ಮೆ ಪ್ರಕಟಪಡಿಸುತ್ತಿದ್ದಾನೆ.

## ಯೋಹಾನ 3:1–15 ಓದಿರಿ.

1. ನಿಕೊದೇಮನು ಯಾರು ಮತ್ತು ಯೇಸುವಿನ ಬಗ್ಗೆ ಅವನು ಏನು ತಿಳಿದುಕೊಂಡಿದ್ದನು (3:1–2)?

**Reference**: ನೋಟ್ 1, ಫರಿಸಾಯರು, ಪುಟ 33, ಮತ್ತು ನೋಟ್ 1, *ಯೇಸುವಿನ ಸೂಚಕಕಾರ್ಯಗಳು*, ಪುಟ 75.

2. ದೇವರರಾಜ್ಯದ ಬಗ್ಗೆ ಯೇಸು ಕ್ರಿಸ್ತನು ಈ ಧಾರ್ಮಿಕ ನಾಯಕನಿಗೆ ಏನನ್ನು ಹೇಳಿದನು (3:3–5)?

3. ಆತ್ಮೀಕ ನೂತನ ಸೃಷ್ಟಿಯಲ್ಲಿ ಪವಿತ್ರಾತ್ಮನ ಕಾರ್ಯ ಏನೆಂದು ಯೇಸು ಕ್ರಿಸ್ತನು ಪ್ರಕಟಪಡಿಸಿದನು (3:6–8)?

**Reference**: ನೋಟ್ 2, ಪವಿತ್ರಾತ್ಮನು, ಪುಟ 33.

4. ಇಸ್ರಾಯೇಲಿನಲ್ಲಿ ಧಾರ್ಮಿಕ ನಾಯಕನಾಗಿದ್ದ ನಿಕೊದೇಮನು, ಪವಿತ್ರಾತ್ಮನನ್ನು ಕೊಡುವ ದೇವರ ಶಕ್ತಿಯನ್ನು ಅರ್ಥಮಾಡಿಕೊಂಡಿರಬೇಕಾಗಿತ್ತು (cf. ಯೆಹೆಜ್ಕೇಲ 36:26–27). ನಿಕೊದೇಮನ ಮುಗ್ಧತೆಯನ್ನು ಯೇಸು ಕ್ರಿಸ್ತನು ಯಾವುದಕ್ಕೆ ಹೋಲಿಸುತ್ತಿದ್ದಾನೆ (3:11–12)?

5. ಯೇಸು ಕ್ರಿಸ್ತನು ತನ್ನ ಕುರಿತಾಗಿ ನಿಕೊದೇಮನಿಗೆ ಪ್ರಕಟಡಿಸಿದ ಮೂರು ವಿಶೇಷತೆಗಳೇನು (3:13–15)?

**Reference**: ನೋಟ್ 6, *ಮೇಲಕ್ಕೆತ್ತಲ್ಪಟ್ಟ ಸರ್ಪ*, ಪುಟ 34 ಮತ್ತು ನೋಟ್ 4, ಮನುಷ್ಯಕುಮಾರನು, ಪುಟ 18.

ಯೋಹಾನ 3:16–21 ಓದಿರಿ.

6. ದೇವರು ತನ್ನ ಮಗನನ್ನು ಕಳುಹಿಸುವ ಉದ್ದೇಶವೇನು (3:16–18)?

7. 3:19–20ರಲ್ಲಿ ಮೂಲಭೂತವಾದ ಯಾವ ಸಮಸ್ಯೆಯನ್ನು ವಿವರಿಸಲಾಗಿದೆ?

8. ಯೊಹಾನ 3:21ರ ಪ್ರಕಾರ ಯೇಸು ಕ್ರಿಸ್ತನು ತನ್ನ ಕುರಿತಾಗಿ ನೀಡಿದ ಪ್ರಕಟನೆಗೆ ನಿಕೊದೇಮನು ನೀಡಿದ ಪ್ರತಿಕ್ರಿಯೆ ಏನು?

**Reference**: ನೋಟ್ 4, ಸತ್ಯವನ್ನು ಪ್ರೀತಿಸುವವರೆಲ್ಲರು, ಪುಟ 33.

## ಯೋಹಾನ 3:22–26 ಓದಿರಿ.

9. ಸ್ನಾನಿಕನಾದ ಯೋಹಾನನು ತನ್ನ ಶಿಷ್ಯರನ್ನು ಕಾಡುತಿದ್ದ ವಿಷಯಗಳಿಗೆ ಏನೆಂದು ಉತ್ತರವನ್ನು ಕೊಟ್ಟನು (3:27–30)?

10. 3:31–36ರವರೆಗೆ ಬರೆಯಲ್ಪಟ್ಟಿರುವ ವಚನಗಳು ಬರಹಗಾರನ ಹೇಳಿಕೆಗಳಾಗಿವೆಯೇ ಹೊರತು ಸ್ನಾನಿಕನಾದ ಯೋಹಾನನ ಹೇಳಿಕೆಗಳಲ್ಲಿ ಎಂಬದು ಅನೇಕ ದೈವಶಾಸ್ತ್ರಜ್ಞರ ನಂಬಿಕೆಯಾಗಿದೆ. ಅಲ್ಲಿ ಕೊಡಲಾಗಿರುವ ಹೇಳಿಕೆಗಳನ್ನು ನೀವು ಹೇಗೆ ಸಂಕ್ಷಿಪ್ತಗೊಳಿಸುತ್ತೀರ?

ಗಮನಿಸಿರಿ: "ನಾವು ದೇವರ ಕೋಪದ" ಬಗ್ಗೆ ಮಾತನಾಡುವಾಗ [3:36], ದೇವರ ಗುಣಲಕ್ಷಣವನ್ನು ವಿವರಿಸುವದಕ್ಕಾಗಿ ನಾವು ಲೌಕಿಕ ಮನುಷ್ಯರು ಮಾಡುವ ಪದಪ್ರಯೋಗವನ್ನು ಮಾಡುತ್ತಿದ್ದೇವೆ. ಒಬ್ಬ ಮನುಷ್ಯನು ವೈರತ್ವವನ್ನು ಸಾಧಿಸದೆ ಮತ್ತು ತನ್ನಲ್ಲಿ ದ್ವೇಷವನ್ನು ಬೆಳೆಸಿಕೊಳ್ಳದೆ, ಕೋಪಮಾಡಿಕೊಳ್ಳಲು ಹೇಗೆ ತಾನೆ ಸಾಧ್ಯ ಎಂಬದನ್ನು ಅರ್ಥಮಾಡಿಕೊಳ್ಳುವದು ಬಹಳ ಕಷ್ಟಕರವಾದದ್ದಾಗಿದೆ. ಆದರೆ ದೇವರು ಇಂಥವನಲ್ಲ. ಕೋಪವು ಪ್ರೀತಿಗೆ ವಿರುದ್ಧವಾದದ್ದಾಗಿದೆ. ಆತನು ಪ್ರೀತಿಸುವವರ ಜೀವಿತಗಳನ್ನು ಹಾಳುಮಾಡುವ ಅವಿಧೇಯತೆ, ದುಷ್ಟತನ ಮತ್ತು ಪಾಪವನ್ನು ದ್ವೇಷಿಸುವ ದೇವರ ಪ್ರೀತಿ ಇದಾಗಿದೆ...ದೇವರು ಪಾಪದ ಪರವಾಗಿ ನಿಂತುಕೊಳ್ಳುವದಿಲ್ಲ ಮತ್ತು ಬೆಂಬಲಿಸುವದೂ ಇಲ್ಲ ಹಾಗೂ ಲೋಕದಲ್ಲಿ ಅನೀತಿವಂತಿಕೆ ಮತ್ತು ಕೆಟ್ಟತನವು ನೆಲೆಗೊಳ್ಳುವಂತೆ ಮಾಡುವದಿಲ್ಲ ಎಂಬದನ್ನು ದೇವರ ಕೋಪವು ಕಲಿಸುತ್ತದೆ." ಗೋರ್ಡನ್ ಬ್ರಿಡ್ಜರ್. The Man Outside, ಪುಟ 40.

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಆಂತರ್ಯ ಮತ್ತು ಬಾಹ್ಯದಲ್ಲಿ ಬಿಡುಗಡೆ

ನಿಕೊದೇಮನು ಕೇವಲ ಯೇಸು ಕ್ರಿಸ್ತನ ಬೋಧನೆ ಮತ್ತು ಸೂಚಕಕಾರ್ಯಗಳಿಗೆ ಸಾಕ್ಷಿಯಾಗಿರಲಿಲ್ಲ, ಆದರೆ ಕ್ರಿಸ್ತನ ಪ್ರಥಮ ಶ್ರೇಣಿಯ ಯಥಾರ್ಥತೆಯನ್ನು ಸಹ ನೋಡಿದ್ದನು. ಯೇಸು ಕ್ರಿಸ್ತನಲ್ಲಿ ಖಂಡಿತವಾಗಿಯೂ ಜನರ ಮೇಲೆ ತಾಳ್ಮೆಯುಳ್ಳ ಮತ್ತು ಕರುಣೆಯುಳ್ಳ ಪ್ರೀತಿಯಿತ್ತು, ಇದುವೇ ಆತನನ್ನು ಐಶ್ವರ್ಯವಂತರಿಗೂ ಮತ್ತು ಬಡವರಿಗೂ ಸಮಾನ ರೀತಿಯಲ್ಲಿ ಸೇವೆಯನ್ನು ಮಾಡುವಂವೆ ಪ್ರೇರೇಪಿಸಿತು. ಇನ್ನೂ ಹೇಳುವದಾದರೆ, ಪರಲೋಕ ಮತ್ತು ಭೂಲೋಕದಲ್ಲಿ ಆತ್ಮೀಕ ರಂಗವನ್ನು ಯೇಸು ಕ್ರಿಸ್ತನು ಒಮ್ಮೆಲೆ ಕಾಣುತ್ತಿರುವ ಹಾಗೆ ಒಂದು ಸಂದರ್ಭದಲ್ಲಿ ಅನ್ನಿಸುತಿತ್ತು. ಯೇಸು ಕ್ರಿಸ್ತನು ವೈಯಕ್ತಿಕವಾದ ಸಂಬಂಧ ಮತ್ತು ಸಮಾಧಾನವನ್ನು ಹೊಂದಿದ್ದ ಪ್ರೀತಿಯುಳ್ಳ ತಂದೆಯಾದ ದೇವರ ಬಗ್ಗೆ ಮಾತನಾಡಿದನು.

ನಿಕೊದೇಮನು ಹಲವಾರು ವರ್ಷಗಳಲ್ಲಿ ಅನೇಕ ಧಾರ್ಮಿಕ ನಾಯಕರನ್ನು ನೋಡಿದ್ದನು, ಆದರೆ ಈತನು ಮಾತ್ರ ಅವರೆಲ್ಲರಿಗಿಂತಲೂ ಪ್ರಭಾವಿತನೂ ಮತ್ತು ಅನನ್ಯನಾಗಿದ್ದನು. ದೇವರಲ್ಲಿ ಭಯಭಕ್ತಿಯುಳ್ಳವನಾಗಿದ್ದ ಫರಿಸಾಯನು ಸಲಹೆಗಾಗಿ ಯೇಸುವಿನ ಬಳಿಗೆ ಬಂದನು ಮತ್ತು ಯೇಸು ಕ್ರಿಸ್ತನು ಅವನನ್ನು ಅವನ ಅಗತ್ಯತೆಯ ಸಮಯದಲ್ಲಿಯೇ ಸಂಧಿಸಿದನು.

ಯೇಸು ಕ್ರಿಸ್ತನು ನಿಕೊದೇಮನಿಗೆ ವಿವರಿಸಿದ ಆತ್ಮೀಕ ಪರಿಪೂರ್ಣತೆಯು, ಲೋಕದನುಸಾರವಾದ ಧಾರ್ಮಿಕ ಆಚರಣೆ ಮತ್ತು ಕ್ರಿಯೆಗಳಿಂದ ಎಂದಿಗೂ ಸಿಗುತ್ತಿರಲಿಲ್ಲ. ಆದರೆ, ಪವಿತ್ರಾತ್ಮನು ಒಬ್ಬ ವ್ಯಕ್ತಿಯ ಆಂತರ್ಯದಲ್ಲಿಯೂ ಮತ್ತು ಬಾಹ್ಯದಲ್ಲಿಯೂ ಆತ್ಮೀಕವಾದ ಹೊಸ ಜೀವವನ್ನು ಉತ್ಪಾದಿಸುವದರ ಮೂಲಕ, ಆತನನ್ನು ಮಾರ್ಪಡಿಸುತ್ತಾನೆ. ಪವಿತ್ರಾತ್ಮನು ಅವನನ್ನು ನೂತನಪಡಿಸುವದಕ್ಕಾಗಿ, ಆತನು ದೇವರ ರಾಜ್ಯದೊಳಗೆ ಪ್ರವೇಶವನ್ನು ಮತ್ತು ನಿತ್ಯಜೀವವನ್ನು ಪಡೆದುಕೊಳ್ಳಲು--ನಿಕೊದೇಮನು ಯೇಸುವನ್ನು ನಂಬಬೇಕಾಗಿತ್ತು ಮತ್ತು ಆತನಲ್ಲಿ ತನ್ನ ಭರವಸೆಯನ್ನಿಡಬೇಕಾಗಿತ್ತು ಅಷ್ಟೆ.

ಯೇಸು ಕ್ರಿಸ್ತನು ನಿಕೊದೇಮನಿಗೆ ಕೊಟ್ಟ ಶುಭವಾರ್ತೆಯು ನಮಗೆಲ್ಲರಿಗೂ ಅನ್ವಯಿಸುತ್ತದೆ: ದೇವರನ್ನು ಮೆಚ್ಚಿಸಲು ನಾವು ಹೋರಾಡುವ ಅವಶ್ಯಕತೆಯಿಲ್ಲ. ನಾವು ಯೇಸು ಕ್ರಿಸ್ತನಲ್ಲಿ ಭರವಸೆಯುಳ್ಳವರಾಗಿದ್ದು, ಆತನ ಮಾತುಗಳನ್ನು ಅಂಗೀಕರಿಸುವದಾದರೆ, ಯೇಸು ಕ್ರಿಸ್ತನ ಪರಿಪೂರ್ಣತೆಯನ್ನು ದೇವರು ನಮ್ಮಲ್ಲಿ ಉತ್ಪಾದಿಸುವವನಾಗಿದ್ದಾನೆ. “ಕಾರ್ಯಗಳನ್ನು ನಾವೇ ಮಾಡುತ್ತೇವೆ” ಎಂಬದು ನಮ್ಮ ಸ್ವಭಾವವಾಗಿರುವದಾದರೆ, ಆ ಕಾರ್ಯದಲ್ಲಿ ಎದುರಾಗುವ ಅಸಾಧ್ಯತೆಗಳೇನು ಎಂದು ದೇವರಿಗೆ ಚೆನ್ನಾಗಿ ಗೊತ್ತು. ನಮಗೆ ನಮ್ಮ ಆಂತರ್ಯದಲ್ಲಿ ಬಾಹ್ಯದಲ್ಲಿ ಆತನ ಶಕ್ತಿ--ಬಲ, ಜ್ಞಾನ ಮತ್ತು ಆತ್ಮನ ಮಾರ್ಪಡಿಸುವಿಕೆ ಬೇಕು.

ಯೇಸು ಕ್ರಿಸ್ತನು ನಿಕೊದೇಮನಿಗೆ ಕೊಟ್ಟ ಶ್ರೇಷ್ಟವಾದ ಸಂದೇಶವನ್ನು ಇನ್ನೂ ಹತ್ತಿರದಿಂದ ನೋಡಿಕೊಳ್ಳೋಣ.

1. ದೇವರನ್ನು ಮೆಚ್ಚಿಸುವ ವಿಷಯದ ಬಗ್ಗೆ ಧ್ಯಾನಿಸುವಾಗ ಸಾಮಾನ್ಯವಾಗಿ ಜನರು ಆಲೋಚಿಸುವ ವಿಷಯವೇನು?

2. ಈ ವಿಧಾನದಲ್ಲಿ ದೇವರನ್ನು ಮೆಚ್ಚಿಸಲು ಜನರು ದೃಢವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ಅದರಿಂದ ದೊರೆಯುವ ಫಲಿತಾಂಶಗಳೇನು?

3. ಯೇಸು ಕ್ರಿಸ್ತನಲ್ಲಿಡುವ ಸರಳವಾದ ನಂಬಿಕೆ ಅಥವಾ ಭರವಸೆಯಿಂದ ಪ್ರಾರಂಭವಾಗುವ ಆತ್ಮೀಕ ಜೀವಿತವನ್ನು ಪವಿತ್ರಾತ್ಮನು ಕೊಡುತ್ತಾನೆ ಎಂದು ಯೇಸು ಕ್ರಿಸ್ತನು ನಿಕೊದೇಮನಿಗೆ ಹೇಳಿದನು. “ನಂಬಿಕೆ” (ಪ್ಯುಟೋ ಎಂಬ ಗ್ರೀಕ್ ಪದ) ಎಂದರೆ “ಯಾವುದಾದರೂ ವಿಷಯದಲ್ಲಿ ಖಾತ್ರಿಪಡಿಸಿಕೊಳ್ಳುವದು, ಭರವಸೆಯನ್ನಿಡುವದು, ನೆಚ್ಚಿಕೊಳ್ಳುವದು, ಆಧಾರ ಮಾಡಿಕೊಳುವದು, ಅಲ್ಪವಾದ ವಿಶ್ವಾಸವಲ್ಲ.”7

ಎ. ಈ ವ್ಯಾಖ್ಯಾನದ ಬೆಳಕಿನಲ್ಲಿ, ಯೋಹಾನ 3:14–18ರಲ್ಲಿ ನಮ್ಮನ್ನು ಆತ್ಮೀಕ ಮಾರ್ಪಡುವಿಕೆಗೆ ನಡೆಸುವ ಯೇಸು ಸಂಬಂಧದ ಬಗ್ಗೆ ಯೋಹಾನನು ಕಲಿಸುವದನ್ನು ನೀವು ಹೇಗೆ ಸಂಕ್ಷಿಪ್ತಗೊಳಿಸುತ್ತೀರ?

ಬಿ. ಕ್ರೈಸ್ತೀಯ ಜೀವಿತವನ್ನು ಜೀವಿಸುವದಕ್ಕೆ ಕ್ರಿಸ್ತನಲ್ಲಿ ನಾವಿಡುವ ನಂಬಿಕೆಯು ನಮ್ಮನ್ನು ಬಲಪಡಿಸುತ್ತದೆ ಎಂಬದನ್ನು ತಿಳಿಸುವದಕ್ಕಾಗಿ ಯೋಹಾನ 15ರಲ್ಲಿ ಕೊಂಬೆಯು ದ್ರಾಕ್ಷೆ ಗಿಡದಲ್ಲಿ ನೆಲೆಗೊಂಡಿರುವದ ಉದಾಹರಣೆಯನ್ನು ಆತನು ಉಪಯೋಗಿಸಿದ್ದಾನೆ. ಕ್ರಿಸ್ತನನ್ನು ಬಿಟ್ಟು ಕ್ರೈಸ್ತೀಯ ಜೀವಿತವನ್ನು ಜೀವಿಸಲು ಪ್ರಯತ್ನಿಸುವದರ ಬಗ್ಗೆ ಆತನು ಹೇಳುವದೇನು (ಯೋಹಾನ 15:5)?

4. ನಮ್ಮ ಜೀವಿತಗಳನ್ನು ಮಾರ್ಪಡಿಸುವ ಪವಿತ್ರಾತ್ಮನ ಕೆಲಸವನ್ನು ಯೇಸು ಕ್ರಿಸ್ತನು ಹೇಗೆ ವಿವರಿಸಿದ್ದಾನೆ?

ಯೋಹಾನ 14:16–17

ಯೋಹಾನ 14:26

5. ಆತ್ಮನು ನಮ್ಮ ಜೀವಿತಗಳಲ್ಲಿ ನೆಲೆಗೊಂಡಿರುವಾಗ ಮತ್ತು ನಮ್ಮನ್ನು ನಿಯಂತ್ರಿಸುವ ಅವಕಾಶವನ್ನು ಆತನಿಗೆ ಕೊಡುವಾಗ ನಮ್ಮಲ್ಲಿ ಎಂಥ ಸ್ವಭಾವಗಳು ಕಾಣಿಸಿಕೊಳ್ಳುತ್ತವೆ?

ಗಲಾತ್ಯ 5:22–23

6. ನಾವು ದೇವರಲ್ಲಿ ಭರವಸೆಯನ್ನಿಡಲು ಮತ್ತು ಆತನನ್ನು ಆತುಕೊಳ್ಳಲು ಮುಂದಾಗುವಾಗ ಪವಿತ್ರಾತ್ಮನು ನಮಗೆ ಎಂಥಾ ಸಹಾಯವನ್ನು ನೀಡುತ್ತಾನೆ?

ರೋಮಾ 8:26

7. ನಾವು ಪ್ರತಿಯೊಬ್ಬರೂ ಯಾವುದಾದರೊಂದು ಸಮಯದಲ್ಲಿ ಮನಃಪೂರ್ವಕವಾದ ತೀರ್ಮಾನದೊಂದಿಗೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡಲು ಪ್ರಾರಂಭಿಸುತ್ತೇವೆ. ಕ್ರೈಸ್ತೀಯ ಜೀವಿತವನ್ನು ನಮ್ಮೊಳಗೆ ಜೀವಿಸಲು ಆತ್ಮೀಕ ಜನನವನ್ನು ಮತ್ತು ಶಕ್ತಿಯನ್ನು ಕೊಡುವಂತೆ ಪವಿತ್ರಾತ್ಮನನ್ನು ಈ ತೀರ್ಮಾನವೇ ಸ್ವತಂತ್ರಗೊಳಿಸುತ್ತದೆ.

ಪ್ರಾರಂಭದ ನಂಬಿಕೆಯ ನಂತರ, ದೈನಂದಿನದ ಅಗತ್ಯತೆಗಳಿಗೆ ಕ್ರಿಸ್ತನಲ್ಲಿ ಭರವಸೆಯನ್ನಿಡಲು ಮಾತುವ ಆಯ್ಕೆಯು ಒಬ್ಬ ವಿಶ್ವಾಸಿಯನ್ನು ಸತತವಾಗಿ ಮಾರ್ಪಡಿಸುವಂತೆ ಪವಿತ್ರಾತ್ಮನಿಗೆ ಅವಕಾಶವನ್ನು ಕೊಡುತ್ತದೆ. ಈ ಆಯ್ಕೆಯನ್ನು ಕೆಳಗಿನ ವಚನಗಳಲ್ಲಿ ಹೇಗೆ ವಿವರಿಸಲಾಗಿದೆ?

ಜ್ಞಾನೋಕ್ತಿ 3:5–6

ಗಲಾತ್ಯ 5:25

## ಸಾರಾಂಶ

8. ಫರಿಸಾಯನಾಗಿದ್ದ ನಿಕೊದೇಮನು ದೇವರನ್ನು ಮೆಚ್ಚಿಸುವದಕ್ಕಾಗಿ ತನ್ನ ಸ್ವಂತ ಕಾರ್ಯಗಳಲ್ಲಿ (ಧಾರ್ಮಿಕ ನಿಯಮಗಳು ಮತ್ತು ಕಟ್ಟಳೆಗಳು) ಯಾಕೆ ಭರವಸೆಯನ್ನಿಡಲಿಲ್ಲ. ನಿಕೊದೇಮನನ್ನು ಬಿಡುಗಡೆಗೊಳಿಸಿ, ಸರಳವಾದ ನಂಬಿಕೆಯ ಮೂಲಕ ಆತನನ್ನು ಮಾರ್ಪಡಿಸಬೇಕೆಂದು ಯೇಸು ಕ್ರಿಸ್ತನ ಬಯಕೆಯಾಗಿತ್ತು. ನಮ್ಮ ಸ್ವಂತ ಬಲದಲ್ಲಿ ದೇವರನ್ನು ಮೆಚ್ಚಿಸಲು ಪ್ರಯತ್ನಿಸುವದರ ಬಗ್ಗೆ ಎಫೆಸ 2:8–9 ಏನನ್ನು ಹೇಳುತ್ತದೆ?

9. ನೀವು ಎಂಥ ವ್ಯಕ್ತಿಯಾಗಿರಬೇಕೆಂಬ ಉದ್ದೇಶದಿಂದ ದೇವರು ನಿಮ್ಮನ್ನು ಸೃಷ್ಟಿಸಿದ್ದಾನೋ ಅಂಥವರಾಗಿರಲು ಪವಿತ್ರಾತ್ಮನು ನಿಮ್ಮನ್ನು ಮಾರ್ಪಡಿಸಬೇಕೆಂದರೆ ನೀವು ಏನು ಮಾಡಬೇಕು?

## ಪಾಠ 4 ನೋಟ್ಸ್

1 ಫರಿಸಾಯರು. ಫರಿಸಾಯರು ಎಂಬ ಪದದ ಅರ್ಥ "ಬೇರ್ಪಡಿಸಲ್ಪಟ್ಟವರು." ಯೇಸು ಕ್ರಿಸ್ತನ ಕಾಲದಲ್ಲಿದ್ದ ಫರಿಸಾಯರು ಕಾನೂನುಬದ್ಧರಾಗಿ ನಡೆದುಕೊಳ್ಳುತ್ತಿದ್ದ ಜನರು ಮತ್ತು ಬೇರ್ಪಟ್ಟ ಗುಂಪಿನ ಜನರಾಗಿದ್ದು, ಕ್ರಮಬದ್ಧವಾಗಿ, ಆದರೆ ಕಪಟಿಗಳಾಗಿ, ಮೋಶೆಯ ಧರ್ಮಶಾಸ್ತ್ರವನ್ನು ಮತ್ತು ಅಲಿಖಿತವಾಗಿರುವ "ಹಿರಿಯರ ಕಟ್ಟಳೆಗಳನ್ನು" ಪಾಲಿಸುತ್ತಿದ್ದರು. ಪಾಲೆಸ್ತೀನಿನಲ್ಲಿ 6,000 ಫರಿಸಾಯರಿದ್ದರು ಅಂದರೆ, ಅಲ್ಲಿನ ಜನಸಂಖ್ಯೆಯಲ್ಲಿ ಒಂದು ಪ್ರತಿಶತಃ. ಫರಿಸಾಯರು ದೇವರಿಂದ ಎಲ್ಲಿಯೂ ನೇಮಿಸಲ್ಪಟ್ಟವರಾಗಿರಲಿಲ್ಲ, ಆದರೆ "ಜನರು ಮಾತ್ರ ಅವರನ್ನು ಅನಧಿಕೃತವಾದ ಧಾರ್ಮಿಕ ನಾಯಕರೆಂದು" ಸನ್ಮಾನಿಸುತ್ತಿದ್ದರು. ಅವರು ಸಭಾಮಂದಿರದಲ್ಲಿ ಬೋಧಕರಾಗಿದ್ದರು, ಜನರ ಎದುರಿನಲ್ಲಿ ಧಾರ್ಮಿಕ ಮಾದರಿಗಳಾಗಿದ್ದರು ಮತ್ತು ಹಳೆಯ ಒಡಂಬಡಿಕೆಯ ಧರ್ಮಶಾಸ್ತ್ರ ಹಾಗೂ ಅದನ್ನು ಸರಿಯಾಗಿ ಪಾಲಿಸುವ ಪೋಷಕರನ್ನಾಗಿ ತಮ್ಮನ್ನೇ ನೇಮಿಸಿಕೊಂಡಿದ್ದರು. ಧರ್ಮಶಾಸ್ತ್ರದ ಬಗ್ಗೆ ಅವರು ಕೊಟ್ಟ "ವ್ಯಾಖ್ಯಾನವನ್ನು" ಮುಂದಿನ ತಲೆಮಾರಿನ ಜನರಿಗೆ ಕಟ್ಟಳೆಯಾಗಿ ಕೊಡಲ್ಪಟ್ಟಿದೆ, ಮತ್ತು ಅದನ್ನು ಅವರು ಸತ್ಯವೇದದಂತೆಯೇ ಅಧಿಕಾರವುಳ್ಳದೆಂದು ಪಾಲಿಸಲಾಗುತಿತ್ತು.

2 ಪವಿತ್ರಾತ್ಮನು. ದೇವರು ಸತ್ಯವೇದದಲ್ಲಿ ತನ್ನನ್ನು ತ್ರಯೇಕ ದೇವರಾಗಿ ಪರಿಚಯಿಸಿಕೊಂಡಿದ್ದಾನೆ; ದೇವರೆಂಬ ಭಾವನೆಯುಳ್ಳ ಮೂರು ವಿಧವಾದ ವ್ಯಕ್ತಿಗಳು. ತ್ರಯೇಕತ್ವದಲ್ಲಿ ಮೂರನೇ ವ್ಯಕ್ತಿಯಾಗಿರುವ ಪವಿತ್ರಾತ್ಮನು, ಯೇಸು ಕ್ರಿಸ್ತನನ್ನು ವೈಯಕ್ತಿಕವಾಗಿ ಸ್ವೀಕರಿಸಿಕೊಳ್ಳುವ ವ್ಯಕ್ತಿಯಲ್ಲಿ ಜೀವಿಸುವವನಾಗಿದ್ದಾನೆ (ಯೋಹಾನ 1:12, 14:16–17). ಸತ್ಯವೇದವು ಪವಿತ್ರಾತ್ಮನನ್ನು "ಅದು" ಎಂದು ಹೇಳುವದಿಲ್ಲ ಬದಲಾಗಿ "ಆತನು" ಎಂದರೆ ನಿಖರವಾದ ವ್ಯಕ್ತಿತ್ವವುಳ್ಳವನು ಎಂದು ಹೇಳುತ್ತದೆ. ಯೋಹಾನ 3ರಲ್ಲಿ, ಯೇಸು ಕ್ರಿಸ್ತನು ನಿಕೊದೇಮನಿಗೆ ಹೇಳುತ್ತಿರುವದೇನೆಂದರೆ, ತ್ರಯೇಕತ್ವದಲ್ಲಿ ಸದಸ್ಯನಾಗಿರುವ ಪವಿತ್ರಾತ್ಮನು ಒಬ್ಬ ವಿಶ್ವಾಸಿಯ ಜೀವಿತದಲ್ಲಿ ನೂತನ ಸೃಷ್ಟಿಯನ್ನು ಅಥವ ಆತ್ಮೀಕ ಜನನವನ್ನು ಉಂಟುಮಾಡುತ್ತಾನೆ. ಪವಿತ್ರಾತ್ಮನು ಕಾಣಲು ನಮ್ಮಿಂದ ಸಾಧ್ಯವಿಲ್ಲವಾದರೂ, ಆತನ

ಕೆಲಸಗಳ ಪುರಾವೆಯನ್ನು ನಾವು ಕಾಣಬಹುದು (3:8).

ಪವಿತ್ರಾತ್ಮನಿಂದ ನಮ್ಮನ್ನು "ತುಂಬಿಸು" (ಎಫೆಸ 5:18ಬಿ) ಎಂದು ನಾವು ದೇವರನ್ನು ಕೇಳಿಕೊಳ್ಳುವಾಗ (ಲೂಕ 11:13), ಕ್ರೈಸ್ತೀಯ ಜೀವಿತವನ್ನು ಜೀವಿಸುವದಕ್ಕಾಗಿ ಅಸಮಾನ್ಯವಾದ ರೀತಿಯಲ್ಲಿ ಸೂಚನೆಗಳನ್ನು ಕೊಡುವುವದರ ಮತ್ತು ಬಲಪಡಿಸುವದರ ಮೂಲಕ ಆತನು ನಮಗೆ ಪ್ರತಿಕ್ರಿಯೆಯನ್ನು ನೀಡುತ್ತಾನೆ (ಯೆಹೆಜ್ಕೇಲ 23:26–27). ಕೊಲೊಸ್ಸೆ 1:27ಬಿ ರಲ್ಲಿ "ಕ್ರಿಸ್ತನು ನಿನ್ನಲ್ಲಿ" ಎಂದು ಹೇಳಿರುವದನ್ನೇ ಇದಕ್ಕೂ ಸತ್ಯವೇದವು ಸೂಚಿಸುತ್ತದೆ.

3 Reference: ನೋಟ್ 4, ಮನುಷ್ಯಕುಮಾರನು, ಪುಟ 18.

4 ಸತ್ಯವು ಬೆಳಕಿಗೆ ಬರುವದನ್ನು ಪ್ರೀತಿಸುವವರೆಲ್ಲರು (3:21). "ಪರಿಪೂರ್ಣವಾದ ರೀತಿಯಲ್ಲಿ ಬೆಳಕು ಮಿನುಗದಿರುವದು ಅಂದರೆ ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವ ಅವಕಾಶವು ಸಿಗದೆ ಹೋದವರ ಬಗ್ಗೆ ಸ್ಪಷ್ಟವಾಗಿ ಏನನ್ನು ಸೂಚಿಸಿಲ್ಲ. ಆದರೆ ಯೋಹಾನನ ಮಾತುಗಳು ಅವರಿಗೆ ಆಗುವ ವಿಚಾರಣೆಯ ಬಗ್ಗೆಯೂ ತಿಳಿಸುತ್ತದೆ. ಕ್ರಿಸ್ತನಾಗಿ ದೇಹಧರಿಸಿಕೊಂಡು ವಾಕ್ಯವೆಂಬವನು ಸ್ತ್ರೀ ಮತ್ತು ಪುರುಷರ ನಡುವೆ ಬಂದ ಹಾಗೆ, ದೇವರ ಬೆಳಕಿನ ವಿಷಯವು ಸಹ ಆಗಿದೆ. ಒಂದುವೇಳೆ ಸ್ತ್ರೀ ಪುರುಷರಿಗೆ ಬೆಳಕಿಗೆ ಅವರು ತೋರಿದ ಪ್ರತಿಕ್ರಿಯೆಗನುಸಾರವಾಗಿ ನ್ಯಾಯವಿಚಾರಣೆಯು ಆಗುವದಾದರೆ, ಅವರಿಗೆ ದೊರೆಯುತ್ತಿರುವ ಆ ಬೆಳಕಿಗನುಸಾರವಾಗಿಯೇ ಅವರಿಗೆ ನ್ಯಾಯವಿಚಾರಣೆಯು ಆಗುತ್ತದೆ. ಲೋಕಕ್ಕೆ ಬೆಳಕಾಗಿರುವವನಿಂದ ಎಲ್ಲಾ ಬೆಳಕುಗಳಿಗೂ ಹೊಳಪಿರುತ್ತದೆ. ತಮಗೆ ಸಿಗುವ ಅಪೂರ್ಣವಾದ ಬೆಳಕನ್ನು ಅಂಗೀಕರಿಸಿಕೊಳ್ಳುವವರೆಲ್ಲರೂ, ಪರಿಪೂರ್ಣವಾದ ಬೆಳಕು ತಮ್ಮ ಮೇಲೆ ಮಿನುಗುವಾದ ಅದನ್ನು ಸಂತೋಷದಿಂದ ಅಂಗೀಕರಿಸಿಕೊಳ್ಳುತ್ತಾರೆ. ತಮ್ಮ ಮೇಲೆ ಮಿನುಗುವ ಬೆಳಕನ್ನು ಯಾವುದೇ ರೀತಿಯಲ್ಲಿ ಅವರು ನಿರಾಕರಿಸಿದರು, ತಮ್ಮ ಮೇಲೆ ನ್ಯಾಯವಿಚಾರಣೆಯನ್ನು ಬರಮಾಡಿಕೊಳ್ಳುವವರಾಗಿದ್ದಾರೆ." F. F. Bruce, ಪುಟ 92.

5 ದೀಕ್ಷಾಸ್ನಾನ ಮಾಡಿಸುತ್ತಿದ್ದ ಯೇಸುವಿನ ಶಿಷ್ಯರು (3:22, 4:2). ಯೇಸು ಕ್ರಿಸ್ತನು ಭೂಲೋಕದಲ್ಲಿ ತನ್ನ ಶಿಷ್ಯರೊಂದಿಗೆ ದೀಕ್ಷಾಸ್ನಾನದ ಸೇವೆಯನ್ನು ಮಾಡಿಸುತ್ತಿದ್ದನು ಎಂದು ಸುವಾರ್ತೆಗಳಲ್ಲಿ ತಿಳಿಸಲಾಗುತ್ತಿರುವ ವಚನಭಾಗಗಳು ಇವುಗಳಾಗಿವೆ. ಯೇಸು ಕ್ರಿಸ್ತನು ದೀಕ್ಷಾಸ್ನಾನವನ್ನು ಮಾಡಿಸುತ್ತಿರಲಿಲ್ಲ, ಆದರೆ ಆತನ ಅಧಿಕಾರದಲ್ಲಿ ಶಿಷ್ಯರು ದೀಕ್ಷಾಸ್ನಾನವನ್ನು ಮಾಡಿಸುತ್ತಿದ್ದರು. ಅವರು ಮಾಡಿಸುತ್ತಿದ್ದ ಈ ದೀಕ್ಷಾಸ್ನಾನವು ಸ್ನಾನಿಕನಾದ ಯೋಹಾನನು ಮಾಡಿಸುತ್ತಿದ್ದ ಸ್ನಾನದಂತೆಯೇ ಆಗಿದ್ದು, ಪಶ್ಚಾತ್ತಾಪ ಮತ್ತು ಪಾಪಗಳ ತೊಳೆಯಲ್ಪಡುವಿಕೆಗೆ ಗುರುತಾಗಿತ್ತು. ಯೇಸು ಕ್ರಿಸ್ತನು ಪಂಚಾಶತ್ತಮದ ದಿನದಂದು ಪ್ರಥಮ ಬಾರಿಗೆ (ಅ.ಕೃ 2) ಕಳುಹಿಸಿಕೊಡುತ್ತೇನೆಂದು ಹೇಳಿದ ಪವಿತ್ರಾತ್ಮನ ದೀಕ್ಷಾಸ್ನಾನದ ಪ್ರಾರಂಭ ಇದಾಗಿರಲಿಲ್ಲ (ಯೋಹಾನ 1:33).

6 ಸರ್ಪಗಳು ಮೇಲಕ್ಕೆತ್ತಲ್ಪಡುವದು. ಅರಣ್ಯಕಾಂಡ 21:8–9ರಲ್ಲಿ ವಿವರಿಸಲಾಗಿರುವ ಘಟನೆಯು ಯೇಸು ಕ್ರಿಸ್ತನ ಮೂಲಕವಾಗಿ ದೊರೆಯುವ ರಕ್ಷಣೆಗೆ ಹೇಗೆ ಛಾಯೆಯಾಗಿದೆಯೆಂದು 3:14ರಲ್ಲಿ ಯೇಸು ಕ್ರಿಸ್ತನು ವಿವರಿಸಿದನು. ಇಸ್ರಾಯೇಲ್ಯರು ದೇವರಿಗೆ ಅವಿಧೇಯರಾಗಿದ್ದರು ಮತ್ತು ಸರ್ಪಗಳ ಭಾಧೆಯಿಂದ ಶಿಕ್ಷೆಗೊಳಪಟ್ಟರು. ಸ್ವಸ್ಥಪಡಿಸುವೆನೆಂಬ ದೇವರ ವಾಗ್ದಾನದಲ್ಲಿ ನಂಬಿಕೆಯನ್ನಿಟ್ಟು, ಮೇಲಕ್ಕೆತ್ತಲ್ಪಟ್ಟಿರುವ ತಾಮ್ರ ಸರ್ಪವನ್ನು ದೃಷ್ಟಿಸುವದರ ಮೂಲಕ ದೇವರಿಗೆ ವಿಧೇಯರಾಗುವವರನ್ನು

ಹೊರತುಪಡಿಸಿ ಉಳಿದ ಎಲ್ಲರೂ ಸರ್ಪಗಳ ಕಡಿತದಿಂದ ಸತ್ತುಹೋಗುವರು. ಅದೇರೀತಿಯಾಗಿ, ಆತನು ಮೇಲಕ್ಕೆತ್ತಲ್ಪಡುವನು (ಶಿಲುಬೆಯ ಮೇಲೆ), ಮತ್ತು ಆತನಲ್ಲಿ ನಂಬಿಕೆಯನ್ನಿಡುವವರು, ಪಾಪದ ನಿಮಿತ್ತವಾಗಿ ಎದುರಾಗುವ ಶಿಕ್ಷೆಯಿಂದ ತಪ್ಪಿಸಿಕೊಳ್ಳುವರು.

7 Vines Expository Dictionary of Old and New Testament Words, page 116.

# ಪಾಠ 5

# ಸಮಾರ್ಯದಲ್ಲಿ ಯೇಸು ಕ್ರಿಸ್ತನು

## ಯೋಹಾನ 4

ಸ್ಥಾನಿಕನಾದ ಯೋಹಾನನಿಗಿಂತಲೂ ಯೇಸು ಕ್ರಿಸ್ತನ ಪಖ್ಯಾತಿ ಹೆಚ್ಚಾಗುತ್ತಿದೆ ಎಂಬದನ್ನು ಫರಿಸಾಯರು ಗಮನಿಸಿದರು. ಇದರ ನಿಮಿತ್ತವಾಗಿ, ಯೇಸು ಕ್ರಿಸ್ತನು ಯೆಹೂದವನ್ನು ಬಿಟ್ಟು ಗಲಿಲಾಯಕ್ಕೆ ಬಂದನು. ಅಲ್ಲಿಂದ ಹೊರಡುವದರ ಮೂಲಕ ಆತನು, ತನ್ನ ಮತ್ತು ಸ್ಥಾನಿಕನಾದ ಯೋಹಾನನ ಮಧ್ಯೆ ಸ್ಪರ್ಧೆಯನ್ನು ಹುಟ್ಟುಹಾಕಲು ಪ್ರಯತ್ನಪಡುತ್ತಿದ್ದ ಫರಿಸಾಯರ ಪ್ರಯತ್ನಗಳನ್ನು ವಿಫಲಗೊಳಿಸಿದನು ಮತ್ತು ತನಗೆ ವಿರೋಧವಾಗಿ ಕಾರ್ಯಸಾಧಿಸಲು ಎದುರುನೋಡುತ್ತಿದ್ದ ಯೆಹೂದ್ಯ ಧರ್ಮನಾಯಕರ ತಂತ್ರಗಳಿಂದ ತಪ್ಪಿಸಿಕೊಂಡನು.

ಗಲಿಲಾಯಕ್ಕೆ ನೇರವಾಗಿ ಹೋಗಬೇಕಾದರೆ, ಸಮಾರ್ಯವನ್ನು ಹಾದುಹೋಗಬೇಕಾಗಿತ್ತು, ಆದ್ದ-ರಿಂದ ಮಧ್ಯಾಹ್ನದ ಸಮಯದಲ್ಲಿ ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರು ಅಲ್ಲೇ ಸೆಯೀರಿನಲ್ಲಿಯೇ ಉಳಿದುಕೊಂಡರು. ಶಿಷ್ಯರು ಆಹಾರವನ್ನು ತರಲು ಹೋದರು ಆದರೆ ಯೇಸು ಕ್ರಿಸ್ತನು ಮಾತ್ರ ಯಾಕೋಬನು ತೋಡಿಸಿದ ಬಾವಿಯ ಹತ್ತಿರ ವಿಶ್ರಮಿಸಿಕೊಳ್ಳಲು ಉಳಿದುಕೊಂಡನು. ನಂತರ ಯೇಸು ಕ್ರಿಸ್ತನು ಸಮಾರ್ಯದ ಸ್ತ್ರೀಯ ಹತ್ತಿರ ಕುಡಿಯಲು ನೀರನ್ನು ಕೇಳಿದಾಗ ಸಭ್ಯಾಚಾರವನ್ನು ಮುರಿದುಹಾಕಿದನು. ಯಾಕೆಂದರೆ ಸಂಪ್ರದಾಯಸ್ಥನಾದ ಯಾವ ಯೆಹೂದ್ಯನೂ ಸಮಾರ್ಯ1 ಸ್ತ್ರೀಯ ಹತ್ತಿರ ಕುಡಿಯಲು ನೀರನ್ನು ಕೇಳುವದಿಲ್ಲ ಅಥವಾ ಅವರೊಂದಿಗೆ ಮಾತನಾಡಲೂ ಮುಂದಾಗುವದಿಲ್ಲ.

ಇಷ್ಟೆಲ್ಲಾ ಇದ್ದರೂ ಯೇಸು ಕ್ರಿಸ್ತನು ಆ ಸ್ತ್ರೀಯೊಂದಿಗೆ ಬಹಳ ಸಮಯ ಮಾತನಾಡಿದನು. ತನ್ನನ್ನು ಕೇಳಿಕೊಳ್ಳುವವರಿಗೆ ತಾನು ಕೊಡುವ ಜೀವಜಲದ ಬಗ್ಗೆ ಆತನು ಆಕೆಗೆ ಹೇಳಿದನು. ಈ ನೀರನ್ನು ಕುಡಿದವರಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ ಮತ್ತು ನಿತ್ಯಜೀವಕ್ಕೆ ನಡೆಸುವ ಉಕ್ಕುವ ಒರತೆ-ಯ ಹಾಗಿರುತ್ತದೆ. "ಕರ್ತನೇ, ನನಗೂ ಈ ನೀರನ್ನು ಕೊಡು," ಇದು ಆಕೆಯ ಸ್ವಾಭಾವಿಕವಾದ ಪ್ರತಿಕ್ರೆಯಾಗಿತ್ತು.

ಆದರೆ ಯೇಸು ಕ್ರಿಸ್ತನು ಆಕೆಗೆ ನೀನು ಮೊದಲು ಹೋಗಿ ನಿನ್ನ ಗಂಡನನ್ನು ಕರೆದುಕೊಂಡು ಬಾ ಎಂದು ಹೇಳಿದನು. ನನಗೆ ಗಂಡನಿಲ್ಲ ಎಂದು ಹೇಳಿದಳು, ಅದನ್ನು ಒಪ್ಪಿಕೊಂಡ ಕರ್ತನು, ನಿನಗೆ ಐದು ಜನ ಗಂಡಂದಿರಿದ್ದರು ಮತ್ತು ಈಗ ನಿನ್ನ ಜೊತೆಯಲ್ಲಿರುವವನು ನಿನ್ನ ಗಂಡನಲ್ಲ ಎಂದು ಆಕೆಗೆ ಹೇಳಿದನು.

ಯೇಸು ಕ್ರಿಸ್ತನು ಪ್ರವಾದಿಯಾಗಿದ್ದಾನೆಂಬದನ್ನು ತಿಳಿದುಕೊಂಡ, ಸಮಾರ್ಯದ ಸ್ತ್ರೀಯು ತಕ್ಷಣವೆ

ತನ್ನ ವಿಷಯವನ್ನು ಬದಲಾಯಿಸಿಕೊಂಡಳು. ಯೆಹೂದ್ಯರು ಮತ್ತು ಸಮಾರ್ಯರ ಮಧ್ಯೆ ಎಲ್ಲಿ ಆರಾಧನೆಯನ್ನು ಮಾಡಬೇಕೆಂಬ ವಿಷಯದಲ್ಲಿ ನಡೆಯುತ್ತಿದ್ದ ಆತ್ಮೀಕವಾದ ಗೊಂದಲವನ್ನು ಆಕೆ ಪ್ರಸ್ತಾಪಿಸಿದಳು. ದೇವರಿಗೆ ಪ್ರಾಮುಖ್ಯವಾಗಿರುವದು ಏನೆಂದರೆ ಒಬ್ಬನ್ನು ಎಲ್ಲಿ ಆರಾಧಿಸುತ್ತಾನೆ ಎಂಬದಲ್ಲ ಬದಲಾಗಿ ಯಾರನ್ನು ಮತ್ತು ಹೇಗೆ ಆರಾಧಿಸುತ್ತಾರೆ ಎಂಬದಾಗಿದೆ ಎಂದು ಆಕೆಗೆ ಹೇಳಿದನು. ಆತನು ಆಕೆಗೆ ವಿವರಿಸಿದ್ದೇನೆಂದರೆ ತಂದೆಯು (ಆಗಿನ ಸಮಯದಲ್ಲಿ ದೇವರಿಗಿದ್ದ ಹೊಸ ಕಲ್ಪನೆ) "ಆತ್ಮಸ್ವರೂಪನಾಗಿದ್ದಾನೆ, ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು." ರಕ್ಷಣೆಯನ್ನು ಒದಗಿಸುವ ಮೆಸ್ಸೀಯನು ಯೆಹೂದ್ಯನಾಗಿದ್ದಾನೆ ಮತ್ತು ಯೆಹೂದ್ಯರನ್ನು2 ಭದ್ರಪಡಿಸಿರುವ ದೇವರ ಶುದ್ಧವಾದ ಪರಿಪೂರ್ಣ ಜ್ಞಾನದ ಬಗ್ಗೆ ಸಮಾರ್ಯರಿಗೆ ತಿಳುವಳಿಕೆಯಿಲ್ಲ ಎಂದು ಯೇಸು ಆಕೆಗೆ ಹೇಳಿದನು.

"ಮೆಸ್ಸೀಯನು ಬರುವಾಗ, ಆತನೇ ನಮಗೆ ಎಲ್ಲವನ್ನೂ ಹೇಳುತ್ತಾನೆ" ಎಂದು ಆಕೆ ಧೈರ್ಯವಾಗಿ ಹೇಳಿದಳು. "ನಿನ್ನಿಂದಿಗೆ ಮಾತನಾಡುತ್ತಿರುವ ನಾನೇ ಆತನು" ಎಂದು ಯೇಸು ಕ್ರಿಸ್ತನು ಆಕೆಗೆ ಉತ್ತರಿಸಿದನು.

ಎಂಥಾ ಪ್ರಭಾವದ ಮೇರೆಗೆ ಈ ಹೇಳಿಕೆಯು ಆಕೆಯ ಹೃದಯದಲ್ಲಿ ನಾಟಿರಬಹುದು, ಅದರಲ್ಲೂ "ಆಕೆ ಮಾಡಿರುವದೆಲ್ಲವೂ ಗೊತ್ತಿರುವವನಿಂದ" ಸ್ವಲ್ಪ ಆಲೋಚಿಸಿರಿ. ಆಕೆಯು ತನ್ನ ನೀರಿನ ತಂಬಿಗೆಯನ್ನು ಅಲ್ಲಿಯೇ ಬಿಟ್ಟು ತನ್ನನ್ನು ಕ್ರಿಸ್ತನೆಂದು ಹೇಳಿಕೊಂಡ ವ್ಯಕ್ತಿಯ ಬಗ್ಗೆ ಎಲ್ಲರಿಗೂ ತಿಳಿಯಪಡಿಸುವದಕ್ಕಾಗಿ ಊರೊಳಗೆ ವೇಗವಾಗಿ ಹೋದಳು.

ಶಿಷ್ಯರು ಹಿಂದಿರುಗಿ ಬಂದ ಮೇಲೆ, ತಂದೆಯಾದ ದೇವರು ಕೊಟ್ಟಿರುವ ಕೆಲಸದಿಂದ ಆಗುವ ನೆರವೇರಿಕೆಯ ಬಗ್ಗೆ ಯೇಸು ಕ್ರಿಸ್ತನು ಅವರೊಂದಿಗೆ ಮಾತನಾಡಿದನು. ದೇವರ "ಹೊಲದಲ್ಲಿ" ಬೀಜವನ್ನು ಬಿತ್ತುವದರ ಮತ್ತು ಬೆಳೆಯನ್ನು ಕೊಯ್ಯುವದರ ವಿಷಯದ ಬಗ್ಗೆ ಆತನು ವಿವರಿಸಿದನು. "ಹೊಲಗಳನ್ನು ನೋಡಿರಿ" "ಅವುಗಳು ಕೊಯ್ಯಲ್ಪಡಲು ಸಿದ್ಧವಾಗಿವೆ" ಎಂದು ಆತನು ಹೇಳಿದನು.

ಆಕೆಯು ಕೊಟ್ಟ ಸಾಕ್ಷಿಯ ನಿಮಿತ್ತವಾಗಿ ಯೇಸುವನ್ನು ನೋಡಲು ಅನೇಕ ಸಮಾರ್ಯರೊಂದಿಗೆ ಆ ಸ್ತ್ರೀಯು ಸಹ ಹಿಂದಿರುಗಿದಳು. ಯೇಸು ಕ್ರಿಸ್ತನು ಯೆಹೂದ್ಯನಾಗಿದ್ದಾಗ್ಯೂ, ಆ ಜನರಿಗೆ ಆತನಿಂದ ಯಾವದೇ ತೊಂದರೆಯಾಗಲಿಲ್ಲ ಮತ್ತು ಸೆಯೀರಿನಲ್ಲಿ ಅವರೊಂದಿಗೆ ಇಳುಕೊಳ್ಳುವಂತೆ ಅವರು ಯೇಸುವನ್ನು ಆಹ್ವಾನಿಸಿದರು. ಅನೇಕರು ನಂಬಿದರು ಮತ್ತು ಯೇಸುವಿನೊಂದಿಗೆ ಸಮಯವನ್ನು ಕಳೆದ ನಂತರ ಅವರು ಕೊಟ್ಟ ಹೇಳಿಕೆ ಏನೆಂದರೆ: "ಈ ಮನುಷ್ಯನು ನಿಜವಾಗಿಯೂ ಲೋಕದ ರಕ್ಷಕನು" (4:42).

ಗಲಿಲಾಯಕ್ಕೆ ಹಿಂದಿರುಗಿ ಬಂದ ಮೇಲೆ, ಯೇಸು ಕ್ರಿಸ್ತನು ತನ್ನ ಎರಡನೇ ವರ್ಷದ ಸಾರ್ವಜನಿಕ ಸೇವೆಯನ್ನು ಪ್ರಾರಂಭಿಸಿದನು. ಆತನು ಯೆರೂಸಲೇಮಿನಲ್ಲಿ ಮಾಡಿದ ಸೂಚಕಕಾರ್ಯಗಳನ್ನೆಲ್ಲಾ ಅವರು ನೋಡಿದ್ದರಿಂದ ಇಲ್ಲಿ ಆತನನ್ನು ಸಂತೋಷವಾಗಿ ಬರಮಾಡಿಕೊಂಡರು. ಆದರೂ ಆತನಿಗೆ, "ಪ್ರವಾದಿಯಲ್ಲಿ ಸ್ವಂತ ಊರಿನಲ್ಲಿ ಮರ್ಯಾದೆಯು ಸಿಗುವದಿಲ್ಲ" ಎಂದು ಚೆನ್ನಾಗಿ ಗೊತ್ತಿತ್ತು.

ಆತನು ಕಾನಾ ಊರಿಗೆ ಬಂದ ಮೇಲೆ--ಹೆರೋದನ ಸೇವೆಯಲ್ಲಿ ನಿರತನೂ, ಅನ್ಯಮತಸ್ಥನೂ

ಆಗಿದ್ದ––ಪ್ರಧಾನನೊಬ್ಬನು ತನ್ನ ಮನೆಯಲ್ಲಿ ತೀವ್ರವಾಗಿ ಅಸ್ವಸ್ಥನಾಗಿ ಬಿದ್ದಿದ್ದ ತನ್ನ ಮಗನನ್ನು ಗುಣಪಡಿಸುವಂತೆ ಬೇಡಿಕೊಳ್ಳಲು ಕಪೆರ್ನೌಮಿನಿಂದ ಯೇಸು ಕ್ರಿಸ್ತನ ಬಳಿಗೆ ಬಂದನು. ಆ ವ್ಯಕ್ತಿಯ ಹೃದಯದಲ್ಲಿ ಯೇಸು ಕ್ರಿಸ್ತನಿಗೆ ನಿಜವಾದ ನಂಬಿಕೆ ಕಾಣಿಸಿದ್ದರಿಂದ, ಆತನಿದ್ದ ಸ್ಥಳಕ್ಕೆ ಹೋಗದೇನೇ ಯೇಸು ಅವನನ್ನು ಗುಣಪಡಿಸಿದನು. "ನಿನ್ನ ಮಗನು ಬದುಕುತ್ತಾನೆ" ಎಂದು ಯೇಸು ಹೇಳಿದ ಮಾತಿನ ಮೇರೆಗೆ ಆ ಪ್ರಧಾನನು ತನ್ನ ಮನೆಗೆ ಹೊರಟುಹೋದನು. ಆದರೆ ಆತನು ಇನ್ನೂ ತನಗೆ ಮನೆಗೆ ಹೋಗುತ್ತಿರುವಾಗಲೇ, ದಾರಿ ಮಧ್ಯದಲ್ಲಿ ಆತನ ಸೇವಕರು ಸಿಕ್ಕಿ ನಿನ್ನೆ ಮಧ್ಯಾಹ್ನ ಒಂದು ಗಂಟೆ ನಿನ್ನ ಮಗನಿಗೆ ಜ್ವರದಿಂದ ಬಿಡುಗಡೆಯಾಯಿತು ಎಂದು ಹೇಳಿದರು. ನಿನ್ನ ಮಗನು ಬದುಕುವನು ಎಂದು ಯೇಸು ಕ್ರಿಸ್ತನು ಆ ಸಮಯದಲ್ಲಿಯೇ ಹೇಳಿದ್ದನು. ಇದರ ನಿಮಿತ್ತವಾಗಿ ಪ್ರಧಾನನು ಮತ್ತು ಆತನ ಮನೆಯವರು ಯೇಸುವಲ್ಲಿ ನಂಬಿಕೆಯನ್ನಿಟ್ಟರು.

## ಯೋಹಾನ 4:1–15 ಓದಿರಿ.

1.ಎ. ಯೇಸು ಕ್ರಿಸ್ತನು ಬಾವಿಯ ಹತ್ತಿರ ಸ್ತ್ರೀಯನ್ನು ಸಂಧಿಸಿದ ಸಂದರ್ಭವನ್ನು ಕಲ್ಪಿಸಿಕೊಳ್ಳಿರಿ ಮತ್ತು ವಿವರಿಸಿರಿ (4:3–6)?

**ನೋಟ್**: ಮಧ್ಯಾಹ್ನ ಆರನೇ ತಾಸಿನಲ್ಲಿ.

ಬಿ. ಯೇಸು ಕ್ರಿಸ್ತನು ತನ್ನೊಂದಿಗೆ ಮಾತನಾಡಿದ್ದರಿಂದ ಆ ಸ್ತ್ರೀಯು ಯಾಕೆ ಆಶ್ಚರ್ಯಚಕಿತಳಾದಳು (7–9)?

**Reference**: ನೋಟ್ 1, ಸಮಾರ್ಯರು, ಪುಟ 42.

2. ತನ್ನ ಕುರಿತಾದ ಕುತೂಹಲವನ್ನು ಯೇಸು ಕ್ರಿಸ್ತನು ಆಕೆಯಲ್ಲಿ ಹೇಗೆ ಹೆಚ್ಚಿಸಿದನು (4:10–12)?

3. ತಾನು ಏನನ್ನು ಕೊಡುತ್ತೇನೆಂದು ಯೇಸು ಕ್ರಿಸ್ತನು ಹೇಳಿದನು (4:13–14)?

## ಯೋಹಾನ 4:16–26 ಓದಿರಿ.

4. ನನಗೆ ನಿನ್ನ ವೈಯಕ್ತಿಕ ಜೀವಿತವು ಗೊತ್ತು ಎಂದು ಹೇಳುವದರ ಮೂಲಕ ಯೇಸು ಕ್ರಿಸ್ತನು ಏನನ್ನು ನೆರವೇರಿಸಿದನು (4:16–18)?

5.ಎ. ಆರಾಧನೆಯ ಬಗ್ಗೆ ಯೇಸು ಕ್ರಿಸ್ತನು ಆ ಸ್ತ್ರೀಗೆ ಏನನ್ನು ಕಲಿಸಿದನು (4:23–24)

**Reference**: ನೋಟ್ 2, ನೀನು ಮಾಡುವ ಆರಾಧನೆಯು ನಿನಗೆ ಗೊತ್ತಿಲ್ಲ, ಪುಟ 42.

ಬಿ. ಯೇಸು ಕ್ರಿಸ್ತನು ತನ್ನ ತಂದೆಯ ಬಗ್ಗೆ ಆತನು ಪರಿಪೂರ್ಣನಾದ ಪರಲೋಕದ ತಂದೆ ಎಂದು ಹೇಳಿದನು. ಯೇಸು ಕ್ರಿಸ್ತನು ಬರುವದಕ್ಕಿಂತ ಮುಂಚೆ ದೇವರಿಗೆ ಉಪಯೋಗಿಸುವಂಥ ಪದವಾಗಿರಲಿಲ್ಲ. ದೇವರ ಯಾವ ಪ್ರತಿರೂಪ ಮತ್ತು ಆತನೊಂದಿಗಿನ ಸಂಬಂಧವನ್ನು ಯೇಸು ಕ್ರಿಸ್ತನು ಪರಿಚಯಪಡಿಸಿದನು?

6. ಬರುವ ಮೆಸ್ಸೀಯನ ಬಗ್ಗೆ ಸ್ತ್ರೀಯು ಮಾತನಾಡಿದಾಗ, ಯೇಸು ಕ್ರಿಸ್ತನು ಆಕೆಗೆ ಏನೆಂದು ಹೇಳಿದನು (4:26)?

**ಗಮನಿಸಿರಿ:** ಯೇಸು ಕ್ರಿಸ್ತನು ತನ್ನನ್ನು ಮೆಸ್ಸೀಯನೆಂದು ನೇರವಾಗಿ ಹೇಳಿರುವದನ್ನು ಮೊದಲನೆಯದಾಗಿ ದಾಖಲಿಸಿರುವ ಸಂದರ್ಭ ಇದಾಗಿದೆ. ಆತನು ಸಾಮಾನ್ಯವಾಗಿ ತನ್ನನ್ನು "ಮನುಷ್ಯಕುಮಾರನೆಂದು" ಪರಿಚಯಪಡಿಸಿಕೊಳ್ಳುತ್ತಿದ್ದನು. (ನೋಟ್ 4, ಮನುಷ್ಯಕುಮಾರನು, ಪುಟ 18 ನೋಡಿರಿ).

ಯೋಹಾನ 4:27–42 ಓದಿರಿ.

7. ತನ್ನ ಶಿಷ್ಯರು ಸಹ ಅನುಭವಿಸಬೇಕೆಂದು ಯೇಸು ಕ್ರಿಸ್ತನು ಬಯಸುವಂತೆ ಆತನು ಬಲಗೊಳಿಸಿ ಪ್ರೇರೇಪಿಸಿದ್ದು ಏನು (4:34–35)?

8. ಬಾವಿಯ ಹತ್ತಿರ ಬಂದ ಸ್ತ್ರೀಯ ಸಾಕ್ಷಿಯಿಂದ ದೊರೆತ ಫಲಿತಾಂಶ ಏನು (4:39–42)?

ಯೋಹಾನ 4:43–54 ಓದಿರಿ.

9.ಎ. ಯೇಸುವಿನ ಮಾತಿನಲ್ಲಿನ ತನ್ನ ನಂಬಿಕೆಯನ್ನು ಪ್ರಧಾನನು ಹೇಗೆ ವ್ಯಕ್ತಪಡಿಸಿದನು (4:46ಬ್–47,50)?

ಬಿ. ಪ್ರಧಾನನ ನಂಬಿಕೆಯ ಫಲಿತಾಂಶ ಏನು (4:50–53)?

**ಗಮನಿಸಿರಿ**: Re: ಇದಕ್ಕಿಂತಲೂ ಮುಂಚೆ ಯೇಸು ಕ್ರಿಸ್ತನು ಅನೇಕ ಸೂಚಕಕಾರ್ಯಗಳನ್ನು ಮಾಡಿದ್ದನು (2:23; 3:2). ಕಾನಾದಲ್ಲಿ ಯೇಸು ಮಾಡಿದ ನಂತರ ಇದು ಎರಡನೆಯದು ಎಂದು ಯೋಹಾನನು ಹೇಳುತ್ತಿದ್ದಾನೆ.

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಪೂರ್ಣವಾಗಿ ತಿಳಿಯಲ್ಪಟ್ಟವರು ಮತ್ತು ಪೂರ್ಣವಾಗಿ ಪ್ರೀತಿಸಲ್ಪಟ್ಟವರು

ಸಮಾರ್ಯದ ಸ್ತ್ರೀಯೊಂದಿಗೆ ಮಾತನಾಡುವದಕ್ಕಾಗಿ ಒಬ್ಬ ಯೆಹೂದ್ಯನು ತನ್ನನ್ನು ತಗ್ಗಿಸಿಕೊಂಡದ್ದರಿಂದ ಬಾವಿಯ ಹತ್ತಿರಕ್ಕೆ ಬಂದ ಸ್ತ್ರೀಯು ಆಶ್ಚರ್ಯಚಕಿತಳಾದಳು. ಸದ್ಯದ ಮತ್ತು ದುಃಖಕರವಾದ ಹಿಂದಿನ ವಿಫಲತೆಗಳೆಲ್ಲವೂ ಆತನಿಗೆ ಗೊತ್ತಿದೆ ಎಂಬ ವಿಷಯವು ಗೊತ್ತಾದ ಮೇಲೆ ಆಕೆಯು ಇನ್ನೆಷ್ಟರ ಮಟ್ಟಿಗೆ ಆಶ್ಚರ್ಯಪಟ್ಟಿರಬಹುದು. ವಾಗ್ದಾನ ಮಾಡಲ್ಪಟ್ಟಿರುವ ಮೆಸ್ಸೀಯನು ತಾನೇ ಎಂಬದು ಆಕೆಗೆ ಖಾತ್ರಿಯಾಗುವವರೆಗೂ ಆತನು ಆಕೆಯನ್ನು ಬೆಲೆಯುಳ್ಳ ವ್ಯಕ್ತಿಯಾಗಿ ಪರಿಗಣಿಸಿದನು ಮತ್ತು ಮರ್ಯಾದೆಯೊಂದಿಗೆ ಆಕೆಯೊಡನೆ ಮಾತನಾಡಿದನು.

ನಮಗೆಲ್ಲರಿಗೂ ನಾವು ಪರಿಪೂರ್ಣವಾಗಿ ತಿಳಿಯಲ್ಪಡಬೇಕು ಮತ್ತು ಪ್ರೀತಿಸಲ್ಪಡಬೇಕು ಎಂಬ ಬಯಕೆ ಇದ್ದೇ ಇರುತ್ತದೆ. ನಾವೆಲ್ಲರೂ ಗಾಯಗಳನ್ನು ಅನುಭವಿಸಿರುವವರು ಮತ್ತು ಪರಿಪೂರ್ಣರಲ್ಲದ ಜನರಾಗಿದ್ದೇವೆ. ಅಂಗೀಕರಿಸಲ್ಪಡುವದಕ್ಕಾಗಿ ನಮ್ಮಲ್ಲಿರುವ ಬಲಹೀನತೆಗಳನ್ನು ಬಚ್ಚಿಟ್ಟುಕೊಳ್ಳುವಂತೆ ಈ ಸಮಾಜವು ನಮ್ಮನ್ನು ಪ್ರೋತ್ಸಾಹಪಡಿಸುತ್ತದೆ, ಆದರೆ ನಾವಿರುವ ಪರಿಸ್ಥಿತಿಯಲ್ಲಿಯೇ ಯೇಸು ಕ್ರಿಸ್ತನು ನಮ್ಮನ್ನು ಸ್ವಾಗತಿಸುತ್ತಾನೆ ಮತ್ತು ನಮ್ಮನ್ನು ನೋಡಬೇಕಾದ ರೀತಿಯಲ್ಲಿಯೇ ನೋಡುತ್ತಾನೆ. ನಮ್ಮ ಬಗ್ಗೆ ನಮಗಿಂತಲೂ ಹೆಚ್ಚಾಗಿ ತಿಳಿದುಕೊಂಡಿರುವವನು, ಇನ್ನೂ ನಮ್ಮನ್ನು ಪರಿಪೂರ್ಣವಾಗಿ ಪ್ರೀತಿಸುವವನಾಗಿರುವದರಿಂದ ಇದರ ಬಗ್ಗೆ ನಾವು ಹೆಚ್ಚಾಗಿ ಪರಿಶೀಲನೆಯನ್ನು ಮಾಡಿಕೊಳ್ಳೋಣ.

1.ಎ. ನಮ್ಮ ಬಲಹೀನತೆಗಳು ಹೊರಗಡೆ ಬರುವಾಗ ಎಂಥಾ ಮನೋಭಾವನೆಗಳನ್ನು ನಾವು ಅನುಭವಿಸುತ್ತೇವೆ?

ಬಿ. ನಾವು ಕಾಣುವಂಥವುಗಳಿಂದ ಏನನ್ನು ಎದುರುನೋಡುತ್ತೇವೆ?

ಸಿ. ನಮ್ಮ ಬಲಹೀನತೆಗಳ ನಿಮಿತ್ತವಾಗಿ ನಮ್ಮನ್ನು ನಿಂದಿಸುವಾಗ ಅಥವಾ ತಿರಸ್ಕರಿಸುವಾಗ ಏನಾಗುತ್ತದೆ?

2. ನಮ್ಮ ಅಸಮರ್ಥತೆಗಳು ಹೊರಗೆ ಬರುವಾಗಲೂ ಅವುಗಳನ್ನು ಕಾಣುವವನು ನಮ್ಮನ್ನು ಪರಿಪೂರ್ಣವಾಗಿ ಪ್ರೀತಿಸುವಾಗ ಏನಾಗುತ್ತದೆ?

3. ಕ್ರಿಸ್ತನು ಬಾವಿಯ ಹತ್ತಿರಕ್ಕೆ ಬಂದ ಸ್ತ್ರೀಗೆ ತೋರಿಸಿದ ಮತ್ತು ನಮ್ಮನ್ನು ಕಟ್ಟುವಂಥ ಪ್ರೀತಿಯನ್ನು 1 ಕೊರಿಂಥ 13:4–8ಬಿ ಹೇಗೆ ವಿವರಿಸುತ್ತದೆ?

4.ಎ. ವಿಫಲತೆ ಮತ್ತು ಅಪರಿಪೂರ್ಣತೆಯ ವಿಷಯದಲ್ಲಿ ದೇವರ ಪ್ರೀತಿಯ ಬಗ್ಗೆ ಯೇಸು ಕ್ರಿಸ್ತನು ಒಂದು ಸಾಮ್ಯವನ್ನು ಹೇಳಿದನು. ಲೂಕ 15:11–24 ದೇವರ ಹೃದಯದ ಬಗ್ಗೆ ಏನನ್ನು ತಿಳಿಸುತ್ತದೆ?

ಬಿ. ಪ್ರೀತಿಯನ್ನು ಸ್ವೀಕರಿಸಿಕೊಳ್ಳುವ ಬಗ್ಗೆ ಈ ಸಾಮ್ಯವು ಏನನ್ನು ಹೇಳುತ್ತದೆ?

5. ನಿಮ್ಮ ವಿಷಯದಲ್ಲಿ ದೇವರ ಜ್ಞಾನದ ಬಗ್ಗೆ ಕೆಳಗೆ ಕೊಡಲ್ಪಟ್ಟಿರುವ ವಚನಗಳು ಏನು ಹೇಳುತ್ತವೆ?

ಕೀರ್ತನೆ 139:1–4,13–14,16

ಇಬ್ರಿಯ 4:13

6. ಸತ್ಯವೇದದಲ್ಲಿ ಯೇಸು ಕ್ರಿಸ್ತನಿಗೆ ಕೊಡಲ್ಪಟ್ಟಿರುವ ತಲೆಬರಹಗಳಲ್ಲಿ ವಿಮೋಚಕನು ಎಂಬದು ಸಹ ಒಂದಾಗಿದೆ. ಕ್ರಯವನ್ನು ಕೊಟ್ಟು ಬಂಧನದಿಂದ ಬಿಡುಗಡೆಗೊಳಿಸುವದನ್ನು ಅಥವಾ ದಾಸತ್ವದಿಂದ ಬಿಡುಗಡೆಗೊಳಿಸುವದಕ್ಕಾಗಿ ಒಬ್ಬ ದಾಸನನ್ನು ಖರೀದಿಸಿಕೊಳ್ಳುವದರ ಬಗ್ಗೆ ಈ ಪದವು ತಿಳಿಸುತ್ತದೆ.3 ಕೆಳಗಿನ ವಚನಗಳಲ್ಲಿ ಯೇಸು ಕ್ರಿಸ್ತನನ್ನು ವಿಮೋಚಕನೆಂದು ಹೇಗೆ ವಿವರಿಸಲಾಗಿದೆ?

ಕೊಲೊಸ್ಸೆ 1:13–14

ತೀತ 2:14

7.ಎ. ಕ್ರಿಸ್ತನ ವಿಮೋಚನೆಯನ್ನು "ಮುರಿಯಲ್ಪಟ್ಟವುಗಳನ್ನು ಕಟ್ಟುತ್ತಾನೆ"––ದೇವರೊಂದಿಗೆ ಮುರಿಯಲ್ಪಟ್ಟಿರುವ ನಮ್ಮ ಸಂಬಂಧ, ಮುರಿದು ಚೂರಾಗಿರುವ ನಮ್ಮ ಜೀವಿತಗಳು, ನಾವು ಎದುರಿಸುವ ಕಷ್ಟಗಳು, ಎಂಬದಾಗಿ ಓದಿರಿ. ಬಾವಿಯ ಬಳಿಗೆ ಬಂದ ಸ್ತ್ರೀಯ ಹಾಗೆ ಮುರಿಯಲ್ಪಟ್ಟಿರುವ ಜನರನ್ನು ವಿಮೋಚಿಸುವದಕ್ಕಾಗಿ ಆತನು ಬಂದನು. ಪ್ರೀತಿಸುವ ವಿಮೋಚಕನಾಗಿ, ಜೀವಜಲವು ನಿನ್ನೊಳಗೆ "ಉಕ್ಕುತ್ತದೆ" ಎಂದು ಹೇಳುವದರ ಮೂಲಕ ಆ ಸ್ತ್ರೀಯ ಹೃದಯದಲ್ಲಿ ಯಾವ ಚಿತ್ರಣವನ್ನು ಮೂಡಿಸಿದನು?

ಬಿ. ವಿಮೋಚನೆಯ ಪ್ರೀತಿಯಲ್ಲಿ ನಾವು ಇಂದು ಏನನ್ನು ಅನುಭವಿಸಬೇಕೆಂದು ಯೇಸು ಕ್ರಿಸ್ತನು ಬಯಸುತ್ತಾನೆ?

ಯೋಹಾನ 8:32

ರೋಮಾ 8:28

ರೋಮಾ 15:13

ಎಫೆಸ 3:19

8. ನಮ್ಮ ವಿಫಲತೆಗಳೆಲ್ಲವನ್ನೂ ಆತನು ಬಲ್ಲವನಾಗಿದ್ದಾಗಲೂ, ಸಮಾರ್ಯದವರ ಹಾಗೆ ಮತ್ತು ಯೋಹಾನ 4:46–53ರಲ್ಲಿ ಬರೆಯಲ್ಪಟ್ಟಿರುವ ಪ್ರಧಾನನ ಹಾಗೆ ಯೇಸು ಕ್ರಿಸ್ತನು ಕೊಡುವ ವಿಮೋಚನೆಯ ಪ್ರೀತಿಯನ್ನು ಅನುಭವಿಸುವದು ಹೇಗೆ?

ಯೋಹಾನ 4:10ಬಿ,13–14

ಯೆಶಾಯ 55:1,6–7

## ಸಾರಾಂಶ

9. ಈ ಪಾಠದ ಮೂಲಕ ನೀವು ಕ್ರಿಸ್ತನ ಜಾಗೃತಿ ಮತ್ತು ನಿಮ್ಮ ಜೀವಿತ ಹಾಗೂ ಪರಿಸ್ಥಿತಿಗಳ ಬಗ್ಗೆ ಏನನ್ನು ಗಮನಿಸಿದ್ದೀರ?

10. ಬಾವಿಯ ಬಳಿಯಲ್ಲಿ ಯೇಸು ಕ್ರಿಸ್ತನು ಸ್ತ್ರೀಯೊಂದಿಗೆ ನಡೆಸಿದ ಸಂಭಾಷಣೆಯ ಮೂಲಕ ಕ್ರಿಸ್ತನ ಪ್ರೀತಿ ಮತ್ತು ಅಂಗೀಕರಣೆಯ ಬಗ್ಗೆ ನೀವು ಏನನ್ನು ಗಮನಿಸಿದ್ದೀರ?

11. ನಿಮ್ಮ ಜೀವಿತದಲ್ಲಿ ಯೇಸು ಏನನ್ನು ವಿಮೋಚಿಸಬೇಕೆಂಬದು ನಿಮ್ಮ ಬಯಕೆಯಾಗಿದೆ?

## ಪಾಠ 5 ನೋಟ್ಸ್

1 ಸಮಾರ್ಯದವರು. ಸಮಾರ್ಯದವರ ವಿಷಯದಲ್ಲಿ ಯೆಹೂದ್ಯರಿಗೆ ಬಲವಾದ ಪೂರ್ವಕಲ್ಪಿತ ಅಭಿಪ್ರಾಯವಿತ್ತು. ಈ ಜನರು 721 ಬಿ.ಸಿಯಲ್ಲಿ ಇಸ್ರಾಯೇಲಿನ ಉತ್ತರ ಸಂಸ್ಥಾನದ ಬೀಳ್ವಿಕೆಯಾದ ನಂತರ ಅಶ್ಶೂರದ ಅರಸರು ಪಾಲೆಸೀನಿನಲ್ಲಿ ಸ್ಥಾಪಿಸಿದ ಸ್ವದೇಶವನ್ನು ಬಿಟ್ಟು ಅನ್ಯದೇಶದಲ್ಲಿ ಅಲೆದಾಡುವ ಸಂತತಿಯವರಾಗಿದ್ದರು. ಅವರ ಮಿಶ್ರಿತವಾದ ರಕ್ತ (ಯೆಹೂದ ಕುಲದವರೊಂದಿಗೆ ಆದ ಮದುವೆಯ ನಿಮಿತ್ತವ) ಮತ್ತು ಅನ್ಯ ಹಾಗೂ ಇಬ್ರಿಯ ನಂಬಿಕೆಯ ಮಿಶ್ರಣವಾದ ಧರ್ಮ ಅವರದ್ದಾಗಿದ್ದರಿಂದ, ಸಮಾರ್ಯದವರು ಅನ್ಯರಿಗಿಂತಲೂ ತುಚ್ಛರಾಗಿದ್ದಾರೆ ಎಂದು ಯೆಹೂದ್ಯರು ಭಾವಿಸುತ್ತಿದ್ದರು. ಭಾವನೆಗಳು ಪರಸ್ಪರವಾಗಿದ್ದವು: ಯೆಹೂದ್ಯರ ನಿರಾಕರಣೆ ಮತ್ತು ಅವರ ಸ್ಥಳಗಳ ಅತಿಕ್ರಮಣಗಳಿಗೆ ಸಮಾರ್ಯದವರು ಪ್ರತಿಕ್ರಿಯಿಸಿದರು. (ಗಲಿಲಾಯವು ಒಂದು ಸಮಯದಲ್ಲಿ ಸಮಾರ್ಯದ ಭಾಗವಾಗಿತ್ತು.) ಈ ಕಾರಣದಿಂದಲೇ ಸಮಾರ್ಯವನ್ನು ಹಾದುಹೋಗುತ್ತಿದ ಯೆಹೂದ್ಯರಿಗೆ ವಸತಿಗಳನ್ನು ಕಲ್ಪಿಸಲು ಸಮಾರ್ಯದವರು ನಿರಾಕರಿಸುತ್ತಿದ್ದರು ಮತ್ತು ಸಮಾರ್ಯಕ್ಕೆ ಹೋಗದೆ ಪ್ರಯಾಣವನ್ನು ಮುಂದುವರೆಸುವದಕ್ಕಾಗಿ ಯೆಹೂದ್ಯರು ಯೋರ್ದನ್ ಹೊಳೆಯ ಮಾರ್ಗವಾಗಿ ಹೋಗುತ್ತಿದ್ದರು.

2 ನಿನಗೆ ಗೊತ್ತಿಲ್ಲದಿರುವದನ್ನು ನೀನು ಆರಾಧಿಸುತ್ತಿದ್ದೀಯ..(4:22). ಯೆಹೂದ್ಯರು ದೇವರ ವಾಕ್ಯಗಳನ್ನು ಹೆಚ್ಚು ಸುರಕ್ಷಿತವಾಗಿಟ್ಟುಕೊಂಡಿದ್ದರು. ಕೇವಲ ಪಂಚಗ್ರಂಥಗಳು, ಅಥವಾ ಹಳೆಯ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಮಾತ್ರವೇ ಸಮಾರ್ಯರ ಸತ್ಯವೇದದಲ್ಲಿದ್ದವು. ಅವರು ದೇವರ ಆರಾಧನೆಯನ್ನು ಮಾಡುತ್ತಿದ್ದರು, ಅವರು ಪ್ರವಾದನೆಯ ಪ್ರಕಟನೆಗಳನ್ನು ಹೆಚ್ಚಾಗಿ ತಿಳಿದುಕೊಳ್ಳಲಿಲ್ಲವಾದ್ದರಿಂದ ದೇವರ ಬಗ್ಗೆ ಹೆಚ್ಚು ತಿಳುವಳಿಕೆ ಅವರಿಗೆ ಸಿಗಲಿಲ್ಲ.

3 RVine's Expository Dictionary of Old and New Testament Words, ಪುಟ 263.

# ಪಾಠ 6

# ಯೆರೂಸಲೇಮಿಗೆ ಪ್ರಯಾಣ

## ಯೋಹಾನ 5

ಗಲಿಲಾಯದಲ್ಲಿ ಸೇವೆಯನ್ನು ಮುಗಿಸಿದ ನಂತರ, ಯೆಹೂದ್ಯರ ವಾರ್ಷಿಕ ಹಬ್ಬವೊಂದರಲ್ಲಿ ಪಾಲ್ಗೊಳ್ಳುವದಕ್ಕಾಗಿ ಯೇಸು ಕ್ರಿಸ್ತನು ಯೆರೂಸಲೇಮಿಗೆ ಹೋದನು. ಯೆರೆಸಲೇಮಿನಲ್ಲಿ, ಬೇತ್ಸತ್ಥಾ ಎಂಬ ಕೊಳದ ಬಳಿಯಲ್ಲಿ ಕುರುಡರು, ಕುಂಟರು ಮತ್ತು ಪಾರ್ಶ್ವವಾಯು ರೋಗಿಗಳು ತಮಗೆ ಅದ್ಭುತಕರವಾದ ರೀತಿಯಲ್ಲಿ ಸೌಖ್ಯತೆಯು ದೊರೆಯಬಹುದೆಂಬ ನಿರೀಕ್ಷೆಯಲ್ಲಿದ್ದರು. ಮೂವತ್ತೆಂಟು ವರ್ಷಗಳಿಂದ ರೋಗಿಯಾಗಿ ಕೊಳದ ಬಳಿಯಲ್ಲಿದ್ದ ವ್ಯಕ್ತಿಯೊಬ್ಬನ ಬಳಿಗೆ ಯೇಸು ಕ್ರಿಸ್ತನು ಬಂದನು. “ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ” ಎಂದು ಯೇಸು ಕ್ರಿಸ್ತನು ಹೇಳಿದ ಮಾತಿನಂತೆಯೇ ಆತನು ತನ್ನ ಹಾಸಿಗೆಯನ್ನು ಎತ್ತುಕೊಂಡು ನಡೆದನು. ಜನರು ಹೆಚ್ಚಾಗಿ ಸೇರಿದ್ದ-ರಿಂದ, ಗುಣವಾದವನಿಗೇ ಗುಣಪಡಿಸಿದವನು ಯಾರೆಂದು ಗೊತ್ತಾಗುವದರೊಳಗಾಗಿ ಯೇಸು ಅಲ್ಲಿಂದ ಹೊರಟುಹೋದನು.

ಸೌಖ್ಯವನ್ನು ಹೊಂದಿದ ಮನುಷ್ಯನೊಂದಿಗೆ ಸಂತೋಷಪಡುವದರ ಬದಲಾಗಿ, ಆ ವ್ಯಕ್ತಿಯು ಸಬ್ಬತ್ ದಿನದಲ್ಲಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆದದ್ದಕ್ಕಾಗಿ ಯೆಹೂದ್ಯರು1 ಪ್ರತಿಭಟನೆಯನ್ನು ಮಾಡಿದರು. (ಸಬ್ಬತ್ ದಿನದಂದು ಒಬ್ಬನು ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆಯುವದನ್ನು “ಹಿರಿಯರ ಕಟ್ಟಳೆಯು” ನಿಷೇಧಿಸಿತ್ತು2). ನನ್ನನ್ನು ಗುಣಪಡಿಸಿದವನು ನನಗೆ ಇದನ್ನು ಮಾಡಲು ಹೇಳಿದ್ದಾನೆ ಎಂದು ಆ ವ್ಯಕ್ತಿಯು ಹೇಳಿದನು.

ನಂತರ, ಆ ವ್ಯಕ್ತಿಯನ್ನು ಯೇಸು ಕ್ರಿಸ್ತನು ದೇವಾಲಯದಲ್ಲಿ ಕಂಡುಹಿಡಿದನು ಮತ್ತು ಈಗ ನೀನು ಪಾಪವನ್ನು ಬಿಟ್ಟುಬಿಡಲು ಹಾಗೂ ಆತ್ಮೀಕವಾಗಿ ಗುಣಹೊಂದಲು ಶಾರೀರಿಕವಾಗಿ ಸಿದ್ಧನಾಗಿದ್ದೀಯ ಎಂದು ಆತನನ್ನು ಪ್ರೋತ್ಸಾಹಪಡಿಸಿದನು. “ಇನ್ನು ಮುಂದೆ ಪಾಪ ಮಾಡಬೇಡ ಅಥವಾ ಏನಾದರೂ ಹೀನವಾದದ್ದು ಸಂಭವಿಸಬಹುದು” ಎಂಬ ಪದಗಳು, ಆ ವ್ಯಕ್ತಿಯು ಏನೋ ತಪ್ಪನ್ನು ಮಾಡಿರುವದರಿಂದಲೇ ಅಸ್ವಸ್ಥನಾಗಿದ್ದನು ಎಂದು ಯೇಸುವಿಗೆ ಗೊತ್ತಿತ್ತು ಎಂಬದು ಕೆಲವರ ನಂಬಿಕೆಯಾಗಿದೆ. ಏನೇಆದರೂ, ಯೇಸು ಕ್ರಿಸ್ತನಿಗೆ ಆ ಮನುಷ್ಯನ ಆತ್ಮವು ಅತ್ಯಂತ ಪ್ರಾಮುಖ್ಯವಾದದ್ದಾಗಿತ್ತು.

ಇದಾದ ಮೇಲೆ, ನನ್ನನ್ನು ಗುಣಪಡಿಸಿದವನು ಯೇಸು ಕ್ರಿಸ್ತನೆಂದು ಆ ವ್ಯಕ್ತಿಯು ಅಧಿಕಾರಿಗಳಿಗೆ ತಿಳಿಸಿದನು. ನಮ್ಮ ಸಬ್ಬತ್ ದಿನದ ನಿಯಮಗಳನ್ನು ಮುರಿದಿರುವದು ಆತನಿಗೆ ಚೆನ್ನಾಗಿ ಗೊತ್ತು ಎಂಬದನ್ನು ಅವರು ತಿಳಿದುಕೊಂಡು, ಯೆಹೂದ್ಯ ನಾಯಕರು ಆತನಿಗೆ ವಿರುದ್ಧವಾಗಿ ವೈರತ್ವದ ಅಭಿಯಾನವನ್ನು ಪ್ರಾರಂಭಿಸಿದರು. ಒಂದೂವರೆ ವರ್ಷಗಳಾದ ಮೇಲೆ ಆತನನ್ನು ಶಿಲುಬೆಗೆ ಏರಿಸಿದರು ಆದರೆ ಅಲ್ಲಿಯವರೆಗೂ ಅವರು ಆತನನ್ನು ಯಾವುದರಲ್ಲಾದರೂ ಸಿಕ್ಕಿಸಲು

ಪ್ರಯತ್ನಿಸುತ್ತಲೇ ಇದ್ದರು.

ಆದರೆ ತನಗೆ ವಿರುದ್ಧವಾಗಿ ಎದುರಾಗುತ್ತಿದ್ದ ಪರಿಸ್ಥಿತಿಗಳನ್ನೇ ಯೇಸು ಕ್ರಿಸ್ತನು ತಾನು ಯಾರೆಂಬದನ್ನು ತನ್ನ ವಿರೋಧಿಗಳಿಗೆ ತಿಳಿಯಪಡಿಸಲು ಪ್ರಯತ್ನಿಸಿದನಾದರೂ ಆತನ ಮಾತುಗಳು ಅವರ ಮೇಲೆ ಯಾವುದೇ ಪ್ರಭಾವವನ್ನೂ ಬೀರಲು ಆಗಲಿಲ್ಲ. ನನ್ನ ತಂದೆಯ ಚಿತ್ತಕ್ಕನುಸಾರವಾಗಿ ಕಾರ್ಯಗಳನ್ನು ಮಾಡುವ ದೇವಕುಮಾರನು ನಾನೇ ಎಂದು ಆತನು ಘೋಷಿಸಿದನು. ಈ ತಂದೆ–ಮಗನ ಸಂಬಂಧದಲ್ಲಿ ಜೀವವನ್ನು ಕೊಡಲು ಶಕ್ತಿ ಮತ್ತು ಅಧಿಕಾರವನ್ನು, ಮನುಷ್ಯರ ಪಾಪಗಳನ್ನು ವಿಚಾರಿಸುವ ಅಧಿಕಾರ ಮತ್ತು ನನ್ನನ್ನು ಕಳುಹಿಸಿಕೊಟ್ಟಿರುವ ತಂದೆಯೊಂದಿಗೆ ಸಮನಾದ ಗೌರವವನ್ನು ಪಡೆದುಕೊಳ್ಳುವ ಅಧಿಕಾರವನ್ನು ನನಗೆ ಕೊಡಲಾಗಿದೆ ಎಂದು ಯೇಸು ಕ್ರಿಸ್ತನು ಹೇಳಿಕೊಂಡನು. ಮಗನ ಮೂಲಕವಾಗಿ ತಂದೆಯ ಮಾತುಗಳನ್ನು ಕೇಳುವವರು ನ್ಯಾಯವಿಚಾರಣೆಯನ್ನು ತಪ್ಪಿಸಿಕೊಳ್ಳುವರು ಮತ್ತು ನಿತ್ಯಜೀವವನ್ನು ಪಡೆದುಕೊಳ್ಳುವರು ಎಂದು ಯೇಸು ಕ್ರಿಸ್ತನು ಪ್ರಕಟಿಸಿದನು. ನಾನು ತಂದೆಯ ಕೆಲಸವನ್ನು ಮಾಡುತ್ತಿರುವದರಿಂದ ಭವಿಷ್ಯದಲ್ಲಿ ಜನರು ಸತ್ತವರೊಳಗಿಂದ ಎಬ್ಬಿಸಲ್ಪಡುವರು3 ಎಂದು ಆತನು ಅವರಿಗೆ ಹೇಳಿದನು.

ಈ ಮಾತುಗಳು ಯೇಸುವನ್ನು ಕೊಲ್ಲಬೇಕೆಂದ ಯೆಹೂದ್ಯ ನಾಯಕರ ದೃಢ ಸಂಕಲ್ಪವನ್ನು ಹೆಚ್ಚಿಸಿತು. ಇಷ್ಟಾದರೂ, ತನ್ನ ಹೇಳಿಕೆಗಳಿಗೆ ಪೂರವಾದ ವಿಷಯಗಳನ್ನು ಸತತವಾಗಿ ಕೊಡುವದರ ಮೂಲಕ ಸತ್ಯವನ್ನು ನಿರಾಕರಿಸುವ ಅವರ ಸ್ವಭಾವವನ್ನು ಬದಲಾಯಿಸಲು ಪ್ರಯತ್ನಿಸಿದನು. ಯೇಸು ಕ್ರಿಸ್ತನೇ ಮೆಸ್ಸೀಯನು ಮತ್ತು ದೇವಕುಮಾರನೆಂದು ಪ್ರಭಾವಿತ ಪ್ರವಾದಿಯಾದ ಸ್ನಾನಿಕನಾದ ಯೋಹಾನನು ಸಹ ಸಾಕ್ಷಿಯನ್ನು ಕೊಟ್ಟಿದ್ದನು. ಯೇಸು ಕ್ರಿಸ್ತನು ಮಾಡುತ್ತಿದ್ದ ಸೌಖ್ಯತೆಯ ಸೂಚಕಕಾರ್ಯಗಳನ್ನು ದೇವರಲ್ಲದೇ ಬೇರೆ ಯಾರಿಂದಲೂ ಮಾಡಲು ಸಾಧ್ಯವಿಲ್ಲ ಮತ್ತು ಇವುಗಳು ಆತನ ಮಗನ ಹೇಳಿಕೆಗಳಿಗೆ ದೇವರ ಪುರಾವೆಗಳಾಗಿದ್ದವು. ಯೇಸು ಕ್ರಿಸ್ತನು ದೀಕ್ಷಾಸ್ನಾನವನ್ನು ಮಾಡಿಸಿಕೊಂಡಾಗ ತಂದೆಯು ತಾನಾಗಿಯೇ ಯೇಸುವಿನ ಬಗ್ಗೆ ಸಾಕ್ಷಿಯನ್ನು4 ಕೊಟ್ಟನು ಮತ್ತು ಇಡೀ ಸತ್ಯವೇದದಾದ್ಯಂತ ನೋಡುವದಾದರೆ, ಆತನೇ ಮೆಸ್ಸಿಯನೆಂಬದಕ್ಕೆ ಸತ್ಯವೇದದಲ್ಲಿ ಅನೇಕ ನಿರ್ದಿಷ್ಟವಾದ ಪುರಾವೆಗಳಿವೆ.5

ನಂತರ, ಅವರ ಹೃದಯಗಳನ್ನು ಬಲ್ಲವನಾಗಿದ್ದ ಯೇಸು ಕ್ರಿಸ್ತನು, ದೇವರನ್ನು ಮತ್ತು ಸತ್ಯವನ್ನು ಕಾಣದಂತೆ ಅವರನ್ನು ಅಡ್ಡಿಪಡಿಸುತ್ತಿದ್ದ ಯೆಹೂದ್ಯ ನಾಯಕರ ಗರ್ವದ ಬಗ್ಗೆ ಯೇಸು ಕ್ರಿಸ್ತನು ನೇರವಾಗಿ ಅವರೊಂದಿಗೆ ಮಾತನಾಡಿದನು. "ನಾನು ನಿಮ್ಮನ್ನು ತಿಳಿದಿದ್ದೇನೆ" ಎಂದು ಆತನು ಅವರಿಗೆ ಹೇಳಿದನು. "ನಿಮ್ಮ ಹೃದಯದಲ್ಲಿ ದೇವರ ಮೇಲೆ ಪ್ರೀತಿ ಇಲ್ಲ ಎಂದು ನನಗೆ ಗೊತ್ತು. ಪರಸ್ಪರ ಒಬ್ಬರಿಂದೊಬ್ಬರಿಗೆ ಸಿಕ್ಕುವ ಹೊಗಳಿಕೆಯನ್ನು ನೀವು ನಂಬಿಕೊಂಡು, ಒಬ್ಬನೇ ದೇವರಿಂದ ಬರುವ ಹೊಗಳಿಕೆಯನ್ನು ಪಡೆಯಲು ಯಾವುದೇ ರೀತಿಯಲ್ಲಿಯೂ ಪ್ರಯತ್ನಪಡದಿರುವದಾದರೆ ಅದನ್ನು ನಂಬಲು ನಿಮ್ಮಿಂದ ಹೇಗೆ ಸಾಧ್ಯ?" ಯೆಹೂದ್ಯ ನಾಯಕರು ಹೆಚ್ಚಾಗಿ ಅಂಟುಕೊಂಡದಂಥ, ಪರಮೋನ್ನತವಾದ ನಿಯಮಗಳನ್ನು ಕೊಡುವವನಾದ ಮೋಶೆಯು ಸಹ, ಅವರನ್ನು ಕೊನೆಯಲ್ಲಿ ವಿಚಾರಣೆಗೆ ಗುರಿಪಡಿಸುವ ಮೆಸ್ಸೀಯನ ಕುರಿತಾದ ಪ್ರವಾದನೆಯನ್ನು6 ಬರೆದಿದ್ದಾನೆ ಎಂದು ಯೇಸು ಕ್ರಿಸ್ತನು ಹೇಳಿದನು.

## ಯೋಹಾನ 5:1–18 ಓದಿರಿ.

1. ಯೇಸು ಕ್ರಿಸ್ತನು ಗುಣಪಡಿಸಿದ ದುರ್ಬಲ ಪರಿಸ್ಥಿತಿ ಏನಾಗಿತ್ತು? ಆತನಿಗೆ ಸಹಾಯ ಮಾಡುವಂತೆ ಯೇಸುವನ್ನು ಪ್ರೇರೇಪಿಸಿದ್ದು ಏನು (5:5–7)?

2. ಗುಣಹೊಂದಿದ ಮನುಷ್ಯನ ಸುತ್ತಲೂ ಜನರು ಸೇರುತ್ತಿದ್ದಂತೆಯೇ, ಯೇಸು ಅಲ್ಲಿಂದ ಹೊರಟುಹೋದನು. ಯೆಹೂದ್ಯರು ಯಾವುದರ ಮೇಲೆ ಕೇಂದ್ರೀಕೃತರಾಗಿದ್ದರು (5:10)?

3. **Reference**: ನೋಟ್ 1, ಯೆಹೂದ್ಯರು ಪುಟ50, ಮತ್ತು ನೋಟ್ 2, "ಹಿರಿಯರ ಕಟ್ಟಳೆಗಳು", ಪುಟ 50.

## ಯೋಹಾನ 5:19–30 ಓದಿರಿ.

4. ಯೇಸು ಕ್ರಿಸ್ತನು ತಂದೆಯೊಂದಿಗಿನ ತನ್ನ ಸಂಬಂಧವನ್ನು ಹೇಗೆ ವಿವರಿಸಿದನು (5:19–20).

5. ಏನನ್ನು ಮಾಡುವದಕ್ಕಾಗಿ ತಂದೆಯು ನನಗೆ ಶಕ್ತಿ ಮತ್ತು ಅಧಿಕಾರವನ್ನು ಕೊಟ್ಟಿದ್ದಾನೆ ಎಂದು ಯೇಸು ಕ್ರಿಸ್ತನು ಹೇಳಿದನು (5:21–22,27).

**Reference**: ನೋಟ್ 3, ಮರಣದಿಂದ ಜೀವಕ್ಕೆ, ಪುಟ 50.

6. ಯೇಸು ಕ್ರಿಸ್ತನು ಯಾವ ಮಹಿಮೆಯನ್ನು ಘೋಷಿಸಿದನು (5:23)?

7. ತನ್ನಲ್ಲಿ ನಂಬಿಕೆಯನ್ನಿಡುವವನಿಗೆ ಏನನ್ನು ಕೊಡುವೆನೆಂದು ಯೇಸು ಕ್ರಿಸ್ತನು ಘೋಷಿಸಿದ್ದಾನೆ (5:24–26)?

**ಗಮನಿಸಿರಿ:** ಭವಿಷ್ಯದಲ್ಲಿ ನಾಶವಾಗದಿರುವ ದೇಹಗಳನ್ನು (1 ಕೊರಿಂಥ 15:42–54) ವಿಶ್ವಾಸಿಗಳು ಧರಿಸಿಕೊಳ್ಳುತ್ತಾರೆ ಎಂಬದರ ಬಗ್ಗೆ ಮಾತ್ರ ವಚನ 25ರಲ್ಲಿ ಸೂಚಿಸಲಾಗಿಲ್ಲ ಬದಲಾಗಿ ಕ್ರಿಸ್ತನು ಈಗಲೂ ನಮಗೆ ಜೀವವನ್ನು ಕೊಡುತ್ತಾನೆ ಎಂದು ಸೂಚಿಸಲಾಗಿದೆ. ಆತ್ಮೀಕವಾದ ಸತ್ತಿರುವವರು ಆತನ ಶಬ್ದವನ್ನು ಕೇಳುವದರಿಂದ ಜೀವವನ್ನು ಪದೆದುಕೊಳ್ಳುತ್ತಾರೆ. *The NIV Study Bible*, page 1604. Reference: ನೋಟ್ 6, ವಿಶ್ವಾಸಿಗೆ ಮರಣ, ಪುಟ 120.

## ಯೋಹಾನ 5:31–47.

8. ಯೇಸು ಕ್ರಿಸ್ತನು ಯೆಹೂದ್ಯ ನಾಯಕರೊಂದಿಗೆ ಮಾತನಾಡುವಾಗ, ನಾನು ದೇವರಿಗೆ ಸಮಾನನಾಗಿದ್ದೇನೆ (5:18), ಜೀವದ ಮೂಲವು ನಾನೇ (5:26), ನಿತ್ಯಜೀವವನ್ನು ಕೊಡುವವನು ನಾನೇ (5:26) ಮತ್ತು ಪಾಪಗಳನ್ನು ಕ್ಷಮಿಸುವವನ್ನು ನಾನೇ ಎಂದು ಸ್ಪಷ್ಟವಾಗಿ ಘೋಷಿಸಿದ್ದಾನೆ.

ಯೇಸು ಕ್ರಿಸ್ತನು ಕೇವಲ ತನ್ನ ಸಾಕ್ಷಿಗಳ ಮೂಲಕವಾಗಿ ಮಾತ್ರವೇ ತಾನು ದೈವೀಕನು ಎಂಬ ತನ್ನ ಹೇಳಿಕೆಗಳನ್ನು ಬೆಂಬಲಿಸಲಿಲ್ಲ. ತನ್ನ ಪರವಾಗಿ ಸ್ನಾನಿಕನಾದ ಯೋಹಾನನ ಕೊಟ್ಟ ಸಾಕ್ಷಿ (5:33) ಮತ್ತು (ಕುಂಟನನ್ನು ಗುಣಪಡಿಸುವಂಥ) ಸೂಚಕಕಾರ್ಯಗಳನ್ನು ಮಾಡುವಂತೆ ತನ್ನನ್ನು ಪ್ರೋತ್ಸಾಹಪಡಿಸಿದ ದೇವರ ಕಾರ್ಯಗಳನ್ನು ಆತನು ಸೂಚಿಸಿದನು (5:36). ತಂದೆಯ ಸ್ವರ4 (5:37), ಯೇಸು ಕ್ರಿಸ್ತನ ಕುರಿತಾದ ಪ್ರವಾದನೆಗಳು5 (5:39) ಮತ್ತು ಮೋಶೆಯ ಪ್ರವಾದನೆಗಲು6 (5:46) ಸಹ ಯೇಸುವಿನ ಹೇಳಿಕೆಗಳು ನಿಜವೆಂದು ಸಾಬೀತುಪಡಿಸಿದವು.

ಇಷ್ಟೆಲ್ಲಾ ಪುರಾವೆಗಳು ತಮ್ಮ ಕಣ್ಣ ಮುಂದೆ ಇದ್ದರೂ ಯೆಹೂದ ನಾಯಕರು ಮಾತ್ರ ನಂಬಲಿಲ್ಲ. ನನ್ನನ್ನು ಗುರುತಿಸುವ ಹೃದಯವು ನಿಮಗಿಲ್ಲ ಎಂದು ಯೇಸು ಕ್ರಿಸ್ತನು ಅವರ ವಿಷಯವಾಗಿ ಯಾಕೆ ಹೇಳಿದನು?

ಯೋಹಾನ 5:37–38

ಯೋಹಾನ 5:39–40

ಯೋಹಾನ 5:41–44

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವದು

## ಗರ್ವಕ್ಕೆ ವಿರುದ್ಧವಾಗಿ ಎಚ್ಚರವನ್ನುವಹಿಸುವದು

ತಮ್ಮ ಆಳ್ವಿಕೆಯ ಸಮಯದಲ್ಲಿ ಯೆಹೂದ್ಯ ನಾಯಕರು ಜನರ ಮೇಲೆ ಅಪಾರವಾದ ಅಧಿಕಾರವುಳ್ಳವರಾಗಿದ್ದರು. ಇವರಲ್ಲಿ ಕೆಲವು ನಾಯಕರು ನಿಸ್ಸಂದೇಹವಾಗಿ ನಂಬಿಗಸ್ಥರಾಗಿದ್ದರು, ಆದರೂ ಅಧಿಕಾರ, ಮಾನ್ಯತೆ ಮತ್ತು ಗರ್ವವನ್ನು ತೃಪ್ತಿಪಡಿಸಿಕೊಳ್ಳಲು ಅನೇಕ ನಾಯಕರು ತಮ್ಮ ಆತ್ಮೀಕ ಅಧಿಕಾರವನ್ನು ಉಪಯೋಗಿಸಿಕೊಳ್ಳುವಲ್ಲಿ ಅತ್ಯಂತ ದಯನೀಯವಾದ ರೀತಿಯಲ್ಲಿ ವರ್ತಿಸಿಕೊಳ್ಳುತ್ತಿದ್ದರು.

ಹೆಚ್ಚಾಗುತ್ತಿದ್ದ ಯೇಸು ಕ್ರಿಸ್ತನ ಪ್ರಖ್ಯಾತಿಯು, ಜನರ ಮೇಲೆ ನಿಯಂತ್ರಣವನ್ನು ಸಾಧಿಸುತ್ತಿದ್ದ ಧಾರ್ಮಿಕ ನಾಯಕರ ಅಧಿಕಾರಕ್ಕೆ ಕಡಿತವನ್ನು ಸೂಚಿಸುವಂಥದ್ದಾಗಿತ್ತು. ಯೇಸು ಕ್ರಿಸ್ತನ ದೇವರ ಸಮ್ಮತಿಯ ವಿಷಯದ ಬಗ್ಗೆ ಮಾತ್ರ ಚಿಂತಿಸುತ್ತಿದ್ದನು. ಆತನು ಸರಳವಾಗಿ ಜೀವಿಸಿದನು, ಆಸ್ತಿ ಅಂತಸ್ತು ಆತನಿಗಿರಲಿಲ್ಲ ಆದರೂ ಬಡವರು ಮತ್ತು ಸಾಮಾನ್ಯರಾದ ಜನರ ನಡುವೆ ಆತನು ಐಶ್ವರ್ಯವಂತನಂತೆ ಆತನು ಕಾಣಿಸಿಕೊಂಡನು. ಆತನು ಮಾಡಿದ ಸೂಚಕಕಾರ್ಯಗಳು ಮತ್ತು ಅಧಿಕಾರದಿಂದ ಹಾಗೂ ಪಕ್ಷಪಾತವಿಲ್ಲದ ಬೋಧನೆ ಜನರು ಆತನ ಕಡೆಗೆ ಬರುವಂತೆ ಮಾಡಿತು. ಅವರು ಆತನನ್ನು ಪ್ರೀತಿಸಿದರು. ಆದರೆ ಯೇಸು ಕ್ರಿಸ್ತನು ಧಾರ್ಮಿಕ ನಾಯಕರ ಕಪಟವನ್ನು ಬಹಿರಂಗಪಡಿಸುತ್ತಿದ್ದನು ಮತ್ತು ನಾನೇ ದೇವಕುಮಾರನೆಂದು ಹೇಳಿಕೊಳ್ಳುವದರ ಮೂಲಕ ಆತ್ಮೀಕವಾಗಿ ನಾನೇ ನಿಮಗಿಂತಲೂ ಹೆಚ್ಚಿನವನು ಎಂದು ಅವರಿಗೆ ಮನವರಿಗೆ ಮಾಡಿಸಲು ಪ್ರಯತ್ನಿಸಿದರಿಂದ ಅವರು ಯೇಸುವಿನ ವಿಷಯದಲ್ಲಿ ಹೆಚ್ಚು ಕೋಪೋದ್ರೇಕವುಳ್ಳವರಾದರು.

ಯೆಹೂದ್ಯ ನಾಯಕರು ಒಂದುವೇಳೆ ದುರಾಸೆ ಮತ್ತು ಸ್ಥಾನಮಾನಗಳಿಗೆ ಗುಲಾಮರಾಗಿರದಿದ್ದರೆ, ದೇವರು ಅವರ ಬಳಿಗೆ ಕಳುಹಿಸಿದ ಕ್ರಿಸ್ತನನ್ನು ಗುರುತಿಸುತ್ತಿದ್ದರು. ಅವರಿಗೆ ದೇವರ ಮೇಲಿದ್ದ ಪ್ರೀತಿ ಮತ್ತು ಅವರಲ್ಲಿದ್ದ ದೇವರ ಕುರಿತಾದ ಜ್ಞಾನವನ್ನು ಅವರ ಗರ್ವ ಮತ್ತು ಜಂಭವು ನಾಶಪಡಿಸದೆ ಹೋಗಿದ್ದರೆ, ಯೇಸು ಕ್ರಿಸ್ತನು ಅವರ ಮಧ್ಯದಲ್ಲಿದ್ದದ್ದರಿಂದ ಅವರು ಖಂಡಿತವಾಗಿಯೂ ದೇವರ ಸ್ವರವನ್ನು ಕೇಳಿಸಿಕೊಳ್ಳುತ್ತಿದ್ದರು. ತಮಗೆ ಅಧಿಕಾರ ಮತ್ತು ನಿಯಂತ್ರಣವನ್ನು ಕೊಟ್ಟ ಮನುಷ್ಯರ ಹೊಗಳಿಕೆಗಳಿಂದ ಪ್ರೇರಿತರಾಗದೆ ದೇವರ ಸಮ್ಮತಿಗಳಿಂದ ಒಂದುವೇಳೆ ಅವರೇನಾದರು ಪ್ರೇರಿತರಾಗಿದ್ದರೆ, ಅವರು ತಮ್ಮ ರಕ್ಷಕನನ್ನು ತಿಳಿದುಕೊಳ್ಳುತ್ತಿದ್ದರು ಮತ್ತು ಆತನನ್ನು ಅಂಗೀಕರಿಸಿಕೊಳ್ಳುತ್ತಿದ್ದರು.

ಇಲ್ಲಿ ನಮ್ಮೆಲ್ಲರಿಗೂ ಒಂದು ಮಹದಾದ ಎಚ್ಚರಿಕೆಯನ್ನು ಕೊಡಲಾಗಿದೆ. ನಾವು ನಿಯಂತ್ರಣದಲ್ಲಿದ್ದೇವೆ ಅಥವಾ ಇತರರಿಗಿಂತಲೂ ಉತ್ತಮರಾಗಿದ್ದೇವೆ ಎಂಬ ಭಾವನೆಯನ್ನು ನಮ್ಮಲ್ಲಿ ಮೂಡಿಸುವ ಹೆಗ್ಗಳಿಗೆ ಅಥವಾ ಸ್ಥಾನವಾಗಲಿ ನಮಗಿರುವದಾದರೆ ನಾವು ಸಹ ಸುಲಭವಾಗಿ ಅವುಗಳಿಗೆ ಗುಲಾಮರಾಗುತ್ತೇವೆ. ನಮ್ಮ ಸುತ್ತಲಿರುವ ಲೌಕಿಕರು ಅಥವಾ ನಮ್ಮ ಕುಟುಂಬದ ಪರಂಪರೆಯೇ ಒಂದುವೇಳೆ ಇಂಥ ಆಚರಣೆಗಳನ್ನು ಪ್ರೋತ್ಸಾಹಪಡಿಸಬಹುದು ಆದರೆ ದೇವರಿಗೆ ಇದರಲ್ಲಿ ಯಾವುದೇ ಪಾತ್ರವಿಲ್ಲ. ದೇವರನ್ನು ತಿಳಿದುಕೊಳ್ಳುವ ಮತ್ತು ದೇವರನ್ನು ಹಾಗು ಇತರರನ್ನು ಪ್ರೀತಿಸುವದರಿಂದ ದೊರೆಯುವ

ಸತ್ಯತೆಯ ಪರಿಪೂರ್ಣವಾದ ಅನುಭವವನ್ನು ಗರ್ವವು ಭಂಗಪಡಿಸುತ್ತದೆ ಎಂಬದು ಆತನಿಗೆ ಗೊತ್ತು.

ಜಂಭ ಮತ್ತು ಬೇರೆಯವರಿಗಿಂತ ನಾವೇ ಮೇಲಾಗಿದ್ದೇವೆ ಎಂಬ ಭಾವನೆಯು ಬಾರದಂತೆ ಎಚ್ಚರವಹಿಸಬೇಕು ಮತ್ತು ದೇವರ ಸಹಾಯದಿಂದ, ವ್ಯತ್ಯಸ್ಥವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಪ್ರಾಮುಖ್ಯವಾದ ಈ ತತ್ವಗಳ ಮೇಲೆ ಸತ್ಯವೇದದ ಕೆಲವು ವಚನಗಳ ಮೇಲೆ ವೀಕ್ಷಣೆಯನ್ನು ಮಾಡೋಣ.

1. ಅಹಂಕಾರ ಅಥವಾ ಜಂಭವನ್ನು ನೀವು ಹೇಗೆ ವಿವರಿಸುತ್ತೀರ?

2.ಎ. ನಿಮ್ಮ ಸುತ್ತಲಿರುವ ಸಮಾಜದಲ್ಲಿ ಟೊಳ್ಳು ವರ್ತನೆ ಮತ್ತು ಅಹಂಕಾರವನ್ನು ನೀವು ಎಲ್ಲಿ ನೋಡುತ್ತೀರ?

ಬಿ. ಟೊಳ್ಳು ವರ್ತನೆಯನ್ನು ಯುಕ್ತಿಯಿಂದ ಹೇಗೆ ನಿಭಾಯಿಸಲಾಗುತ್ತದೆ? ಗರ್ವ ಮತ್ತು ಅಹಂಕಾರವು ಒಬ್ಬ ವ್ಯಕ್ತಿಯ ಬಗ್ಗೆ ಏನನ್ನು ಪ್ರಕಟಪಡಿಸುತ್ತದೆ?

ಸಿ. ಗರ್ವ ಮತ್ತು ಅಹಂಕಾರವು ಕುಟುಂಬ, ಕೆಲಸದ ಸ್ಥಳ ಅಥವಾ ಸಮುದಾಯದಲ್ಲಿ ಸಂಬಂಧಗಳನ್ನು ಹೇಗೆ ಹಾಳು ಮಾಡುತ್ತದೆ?

3. ಅಹಂಕಾರ ಮತ್ತು ಗರ್ವದಿಂದ ಆಗುವ ಯಾವ ಪರಿಣಾಮಗಳ ಬಗ್ಗೆ ಸತ್ಯವೇದವು ನಮ್ಮನ್ನು ಎಚ್ಚರಿಸುತ್ತದೆ?

ಜ್ಞಾನೋಕ್ತಿ 11:2

ಜ್ಞಾನೋಕ್ತಿ 16:18

ಯಾಕೋಬ 4:6ಬಿ

4.ಎ. ಗರ್ವವು ಬಹಿರಂಗವಾಗಿ ಅರಿಕೆ ಮಾಡಿಕೊಳ್ಳುವ ವಿಶ್ವಾಸಿಯನ್ನು ಕಪಟತನಕ್ಕೆ ನಡೆಸುತ್ತದೆ ಎಂಬದನ್ನು ಧಾರ್ಮಿಕ ನಾಯಕರು ಪ್ರದರ್ಶಿಸಿದರು. ಯೇಸು ಕ್ರಿಸ್ತನು ಕಪಟವನ್ನು ಹೇಗೆ ವಿವರಿಸಿದ್ದಾನೆ?

ಮತ್ತಾಯ 23:28

ಬಿ. ಕಪಟತ್ವವನ್ನು ಗುರುತಿಸಿಕೊಳ್ಳಲು ಮತ್ತು ತಡೆಗಟ್ಟಲು ಕೆಳಗೆ ಕೊಡಲ್ಪಟ್ಟಿರುವ ವಚನಭಾಗಗಳಲ್ಲಿ ಯಾವ ತತ್ವಗಳು ಕೊಡಲ್ಪಟ್ಟಿವೆ?

ಕೀರ್ತನೆ 36:2

ಯಾಕೋಬ 1:22,25

ರೋಮಾ 12:2

5.ಎ. ಯೇಸು ಕ್ರಿಸ್ತನು, ಪೂರ್ಣವಾಗಿ ಮನುಷ್ಯನಾಗಿ, ಪೂರ್ಣವಾಗಿ ದೇವರಾಗಿ ಅಹಂಕಾರವನ್ನು ಹೇಗೆ ತಡೆಗಟ್ಟಿದನು?

ಮತ್ತಾಯ 20:28

ಯೋಹಾನ 5:30;41

**ಗಮನಿಸಿರಿ:** "ನಾನು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸುವದಿಲ್ಲ" (5:41). *The Message Translation.*

ಬಿ. ಇತರರೊಂದಿಗಿನ ನಮ್ಮ ಸಂಬಂಧದಲ್ಲಿ ಅಹಂಕಾರವನ್ನು ಮತ್ತು ಸ್ವಾರ್ಥವನ್ನು ಹೇಗೆ ತಡೆಗಟ್ಟಬೇಕೆಂದು ಸತ್ಯವೇದವು ನಮಗೆ ಸೂಚಿಸುತ್ತದೆ?

ಯಾಜಕಕಾಂಡ 19:15

ಫಿಲಿಪ್ಪಿ 2:4–8

ಕೊಲೊಸ್ಸೆ 3:12,14

## ಸಾರಾಂಶ

6.ಎ. ಅಹಂಕಾರ ಅಥವಾ ಇತರರಿಗಿಂತ ಹೆಚ್ಚಿನವರೆಂಬ ಭಾವನೆ ಅಥವಾ ಹಣವನ್ನು ಉಪಯೋಗಿಸಬೇಕೆಂಬ ಶೋಧನೆ ಅಥವಾ ನಿಯಂತ್ರಣವನ್ನು ವಹಿಸಿಕೊಳ್ಳಲು ಸ್ಥಾನ ಇವುಗಳ ವಿಷಯದಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ನೀವಿನ್ನೂ ಕಷ್ಟಗಳನ್ನು ಅನುಭವಿಸುತ್ತಿದ್ದೀರ?

ಬಿ. ದೇವರು ನಿಮಗೆ ಕೊಟ್ಟಿರುವ ಸಾಮರ್ಥಗಳನ್ನು ಮತ್ತು ವರಗಳನ್ನು ನೀವು ಶ್ಲಾಘಿಸಬೇಕೆಂದು ಆತನು ಬಯಸುತ್ತಿರುವಾಗ, ನಿಜವಾದ ನೆರವೇರಿಕೆಗೆ ನಡೆಸುವಂಥ ಸಮತೋಲನ ಏನೆಂದು ಆತನಿಗೆ ಗೊತ್ತು?

7. ಯೇಸು ಕ್ರಿಸ್ತನ ಮೂಲಕವಾಗಿ ದೇವರೊಂದಿಗೆ ಪರಿಪೂರ್ಣವಾದ ಸಂಬಂಧದ ಅನುಭವವನ್ನು ಹೊಂದದಂತೆ ಅಹಂಕಾರ ಮತ್ತು ಜಂಭವು ಹೇಗೆ ಅಡ್ಡಿಯನ್ನುಂಟು ಮಾಡುತ್ತದೆ?

8. ಈ ಪಾಠದಿಂದ ಗರ್ವದ ಬಗ್ಗೆ ಕೊಡಲಾಗಿರುವ ಯಾವ ಎಚ್ಚರಿಕೆ ನಿಮಗೆ ಸೂಕ್ತವೆನಿಸುತ್ತದೆ?

## ಪಾಠ 6 ನೋಟ್ಸ್

1 ಯೆಹೂದ್ಯರು (5:10) ಯೋಹಾನನು ಈ ಪದವನ್ನು ತನ್ನ ಸುವಾರ್ತೆಯಲ್ಲಿ 70 ಬಾರಿ ಉಪಯೋಗಿಸಿದ್ದಾನೆ. ಸಾಮಾನ್ಯವಾಗಿ ಇದರ ಅರ್ಥ ಪಟ್ಟಣದ ನಾಯಕರು ಮತ್ತು ಯೇಸುವಿನ ವಿಷಯದಲ್ಲಿ ರೌದ್ರಾವೇಷವುಳ್ಳವರಾಗಿದ್ದ ಯೆಹೂದ್ಯ ನಾಯಕರು.

2 'ಹಿರಿಯರ ಕಟ್ಟಳೆ' ಗಳಿಗನುಸಾರವಾಗಿ ಸಬ್ಬತ್ ದಿನದಂದು ಮೂವತ್ತೊಂಭತ್ತು ರೀತಿಯದ್ದಾದ ಕೆಲಸಗಳನ್ನು ಯಾರೂ ಮಾಡುವಂತಿರಲಿಲ್ಲ; ಅವುಗಳಲ್ಲಿ ಮೂವತ್ತೊಂಭತ್ತನೆಯದು ಒಬ್ಬನ ಹೊರೆಯನ್ನು ಮತ್ತೊಬ್ಬನು ಹೊರಬಾರದು. ಈ ವಿಧಾನವಾಗಿ ಯೋಚಿಸುವದಾದರೆ ಒಬ್ಬ ವ್ಯಕ್ತಿಯು ತನ್ನ ಹಾಸಿಗೆಯನ್ನು ಹೊತ್ತುಕೊಂಡು ಹೋಗುವದರ ಮೂಲಕ ಸಬ್ಬತ್ ದಿನದ ನಿಯಮವನ್ನು ಉಲ್ಲಂಘಿಸಿದನು.
ಯೇಸು ಕ್ರಿಸ್ತನು ಪ್ರಾರಂಭದಲ್ಲಿ ಸಬ್ಬತ್ ದಿನದ ನಿಯಮದ ವಿಷಯದಲ್ಲಿ ಧಾರ್ಮಿಕ ನಾಯಕರ ವ್ಯಾಖ್ಯಾನವನ್ನು (ಮೋಶೆಯ ಧರ್ಮಶಾಸ್ತ್ರವನ್ನಲ್ಲ ಬದಲಾಗಿ ಅದಕ್ಕೆ ಅವರು ನೀಡಿದ ವ್ಯಾಖ್ಯಾನಕ್ಕೆ) ಉಲ್ಲಂಘಿಸಿದ್ದರಿಂದ ಗಂಭೀರವಾದ ಘರ್ಷಣೆಯನ್ನು ಎದುರಿಸಿದ. ಯೇಸು ಕ್ರಿಸ್ತನು ತನ್ನನ್ನೆ ಕರ್ತನೆಂದು ಘೋಷಿಸಿದಾಗ, ಅಂದರೆ ಸಬ್ಬತ್ ದಿನದ ಮೇಲೆ ತನಗೆ ಪರಮಾಧಿಕಾರವಿದೆಯೆಂದು ಹೇಳಿದಾಗ ತನ್ನ ವಿರೋಧಿಗಳಿಂದ ತೀವ್ರವಾದ ದ್ವೇಷವನ್ನು ಎದುರಿಸಿದ (ಮಾರ್ಕ 2:28).
ನೋಟ್ 2 ಸಹ ನೋಡಿರಿ, ಆತನು ಸಬ್ಬತ್ ದಿನವನ್ನು ಆಚರಿಸುವದಿಲ್ಲ, ಪುಟ 102.

3 ಮರಣದಿಂದ ಜೀವಕ್ಕೆ. "ಯೇಸು ಕ್ರಿಸ್ತನಲ್ಲಿರುವ ಜೀವ ಕೊಡುವ ಶಕ್ತಿಯು, ಸಮಾಧಿಯೊಳಗೆ ಹೂಣಲ್ಪಟ್ಟಿರುವ ಮನುಷ್ಯನನ್ನು ಹೊರಗೆ ಕರೆಯುತ್ತದೆ (11:43), ಪ್ರತಿಯೊಬ್ಬರನ್ನು ಅವರ

ಗೋರಿಗಳಿಂದ ಹೊರಗೆ ಕರೆಯುತ್ತದೆ (5:28–29), ಅಥವಾ ಆತ್ಮೀಕವಾಗಿ ಸತ್ತಿರುವವರನ್ನು (5:24) ನಿತ್ಯಜೀವಕ್ಕೆ ನಡೆಸುತ್ತದೆ." Walvoord and Zuck, The Bible Knowledge Commentary, ಪುಟ 291.

4 ತಂದೆಯಾದ ದೇವರ ಸಾಕ್ಷಿ (5:37). ತನ್ನ ಮಗನಾದ ಯೇಸು ಕ್ರಿಸ್ತನ ದೀಕ್ಷಾಸ್ನಾನದ ಸಮಯದಲ್ಲಿ ದೇವರು ಎಲ್ಲರಿಗೂ ಕೇಳಿಸುವಂತೆಯೂ ಮತ್ತು ಕಾಣಿಸುವಂತೆಯೂ ಸಾಕ್ಷಿಯನ್ನು ಕೊಟ್ಟನು (cf. ಮತ್ತಾಯ 3:17; ಮಾರ್ಕ 1:10; ಯೋಹಾನ 1:32–33), ಆದರೆ ನರಾವತಾರವೆತ್ತಿರುವ ದೇವರ ವಾಕ್ಯವೆಂಬ (ಯೋಹಾನ 1:1–2,14), ಯೇಸು ಕ್ರಿಸ್ತನು, ದೇವರು ಪ್ರವಾದಿಗಳ ಮೂಲಕವಾಗಿ ಕೊಡಲ್ಪಟ್ಟಿರುವ ಎಲ್ಲಾ ವಚನಗಳ ನೆರವೇರಿಕೆ ಎಂದು ತನ್ನ ಕುರಿತಾಗಿ ಹೇಳಿಕೊಂಡನು.

5 ಮೆಸ್ಸೀಯನ ಕುರಿತಾಗಿ ಸತ್ಯವೇದದಲ್ಲಿ ಕೊಡಲ್ಪಟ್ಟಿರುವ ಎಲ್ಲಾ ಪ್ರವಾದನೆಗಳು ಯೇಸು ಕ್ರಿಸ್ತನಲ್ಲಿ ನೆರವೇರಿದವು. ಹಳೆಯ ಒಡಂಬಡಿಕೆಯ ಮೆಸ್ಸೀಯನ ಕುರಿತಾದ ಪ್ರವಾದನೆಗಳು ಅರಸನಾಗಿ ಬರುವ ಮೆಸ್ಸೀಯನನ್ನು ಮತ್ತು ಶ್ರಮೆಗಳನ್ನನುಭವಿಸುವ ಮೆಸ್ಸೀಯನನ್ನು ವಿವರಿಸಿವೆ. ಇಸ್ರಾಯೇಲನ್ನು ಲೋಕದಲ್ಲಿಯೇ ಬಲಿಷ್ಠವನ್ನಾಗಿ ಮಾಡುವ ಅರಸನಾದ ಮೆಸ್ಸೀಯನಿಗೆ ಯೆಹೂದ್ಯರು ಹೆಚ್ಚು ಒತ್ತು–ಕೊಟ್ಟರು (cf. ಕೀರ್ತನೆ 2:6–8; ಯೆಶಾಯ 9:6–7; 42:1–4; ದಾನಿಯೇಲ 2:44; 7:13–14). ಯೇಸು ಹೇಳಿದನು, ನನ್ನ ದೇಹಧಾರಣೆಯ ಅವಸ್ಥೆಯಲ್ಲಿ ಶ್ರಮೆಯನ್ನನುಭವಿಸಿದ ನಂತರ ನಾನು ಮತ್ತೆ ಬರುವೆನು (cf. ಮತ್ತಾಯ 26:64; ಲೂಕ 21:27; ಅ.ಕೃ 1:11; ಇಬ್ರಿಯ 9:28) ಮತ್ತು ಅರಸನಾದ ಮೆಸ್ಸೀಯನ ಕುರಿತಾದ ಎಲ್ಲಾ ಪ್ರವಾದನೆಗಳನ್ನು ನೆರವೇರಿಸುವೆನು. ಯೇಸು ಕ್ರಿಸ್ತನು ಈ ಲೋಕಕ್ಕೆ ಬರುವದರ ಮೂಲಕ ಆತನಲ್ಲಿ ನೆರವೇರಿದ ಮೆಸ್ಸೀಯನ ಕುರಿತಾದ ಪ್ರವಾದನೆಗಳು ಯಾವವೆಂದರೆ:

**ಯೇಸು ಕ್ರಿಸ್ತನಲ್ಲಿ ನೆರವೇರಿದ ಮೆಸ್ಸೀಯನ ಕುರಿತಾದ ಪ್ರಾಮುಖ್ಯವಾದ ಪ್ರವಾದನೆಗಳು**

| **ಪ್ರವಾದನೆಯ ಬಗೆ** | **ಪ್ರವಾದನೆ** | **ನೆರವೇರುವಿಕೆ** |
|---|---|---|
| "ಸ್ತ್ರೀ ಸಂತಾನ" | **ಆದಿ 3:15** | **ಗಲಾತ್ಯ 4:4** |
| ಅಬ್ರಹಾಮನ ಸಂತತಿ | **ಆದಿ 18:18** | **ಅ.ಕೃ 3:25** |
| ಇಸಾಕನ ಸಂತತಿ | **ಆದಿ 17:19** | **ಮತ್ತಾಯ 1:2** |
| ಯಾಕೋಬನ ಸಂತತಿ | **ಅರಣ್ಯ 24:17** | **ಲೂಕ 3:34** |
| ಯೆಹೂದ ಕುಲದ ಸಂತತಿ | **ಆದಿ 49:10** | **ಲೂಕ 3:33** |
| ದಾವೀದನ ಸಂತತಿ | ಯೆಶಾ 9:7 | ಮತ್ತಾಯ 1:1 |
| ಜನನದ ಸ್ಥಳ | ಮೀಕ 5:2 | ಮತ್ತಾಯ 2:1 |
| ಕನ್ಯೆಯಲ್ಲಿ ಜನನ | ಯೆಶಾ 7:14 | ಮತ್ತಾಯ 1:18 |
| ಗಲಿಲಾಯದಲ್ಲಿ ಸೇವೆ | ಯೆಶಾ 9:1–2,6 | ಮತ್ತಾ 4:12–16 |
| ಪ್ರವಾದಿಯಾಗಿ | **ಧರ್ಮೋ 18:15** | **ಯೋಹಾನ 6:14** |
| ಯೆಹೂದ್ಯರಿಂದ ಆತನ ನಿರಾಕರಣೆ | ಯೆಶಾ 53:3 | ಯೋಹಾನ 1:11 |
| ಆತನ ಕೆಲವು ಗುಣಲಕ್ಷಣಗಳು | ಯೆಶಾ 11:2 | ಲೂಕ 2:52 |
| ಆತನ ಜಯಪ್ರದವಾದ ಪ್ರವೇಶ | ಜೆಕ 9:9 | ಯೋಹಾನ 12:13–14 |
| ಮೂವತ್ತು ಬೆಳ್ಳಿ ನಾಣ್ಯಗಳಿಗೆ ಹಿಡಿದುಕೊಟ್ಟಿದ್ದು | ಜೆಕರ್ಯ 11:12 | ಮತ್ತಾಯ 26:15 |
| ಜೀವಹತ್ಯೆಯ ನೆಲದ ಹಣ ಹಿಂದಿರುಗಿಸಿದ್ದು | ಜೆಕರ್ಯ 11:13 | ಮತ್ತಾಯ 27:6–7 |
| ಆರೋಪಿಸುವಾಗ ನಿಶ್ಶಬ್ದ | ಯೆಶಾ 53:7 | ಮತ್ತಾಯ 26:62–63 |
| ಹೊಡೆದದ್ದು ಮತ್ತು ಉಗುಳಿದ್ದು | ಯೆಶಾಯ 50:6 | ಮಾರ್ಕ 14:65 |
| ಕ್ರೂರವಾಗಿ ಹಿಂಸೆಯನ್ನು ಅನುಭವಿಸಿದ್ದು | ಯೆಶಾ 53:4–5 | ಮತ್ತಾ 8:16–17 |
| ಪಾಪಿಗಳೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದು | ಯೆಶಾಯ 53:12 | ಮತ್ತಾಯ 27:38 |
| ಕೈಗಳಿಗೆ ಮತ್ತು ಕಾಲುಗಳಿಗೆ ಮೊಳೆಹೊಡೆದದ್ದು | ಕೀರ್ತನೆ 22:16 | ಯೋಹಾನ 19:29 |
| ಹಾಸ್ಯ ಮಾಡಿದ್ದು ಮತ್ತು ಅವಮಾನಪಡಿಸಿದ್ದು | ಕೀರ್ತನೆ 22:6–8 | ಮತ್ತಾಯ 27:39–40 |
| ಆತನ ಪಕ್ಕೆಗೆ ಚುಚ್ಚಿದ್ದು | ಜೆಕರ್ಯ 12:10 | ಯೋಹಾನ 19:34 |
| ಸಿಪಾಯಿಗಳು ಆತನ ಬಟ್ಟೆಗಾಗಿ ಚೀಟು ಹಾಕಿದ್ದು | ಕೀರ್ತನೆ 22:18 | ಮಾರ್ಕ 15:24 |
| ಪುಷ್ಪರ ನಡುವೆ ಹೂಣಿಟ್ಟಿದ್ದು | ಯೆಶಾಯ 53:9 | ಮತ್ತಾಯ 27:57–60 |
| ಪುನರುತ್ಥಾನ | ಕೀರ್ತನೆ 16:10 | ಮತ್ತಾಯ 28:9 |
| ಆರೋಹಣ | ಕೀರ್ತನೆ 68:18–20 | ಲೂಕ 24:50–51 |

**ಗಮನಿಸಿರಿ:** ಯೆಹೂದ್ಯರಲ್ಲದ ಮನೋಭಾವನೆಯಿಂದ ಕೆಲವೊಮ್ಮೆ ಈ ಪ್ರವಾದನೆಗಳನ್ನು ಅರ್ಥಮಾಡಿಕೊಳ್ಳುವದು ಕಷ್ಟ, ಆದರೆ ಯೆಹೂದ್ಯರಿಗೆ ಇದು ಬಹಳ ಸ್ಪಷ್ಟವಾಗಿದ್ದವು.

6. ಮೋಶೆಯು ಬರೆದ ಪ್ರವಾದನೆಯನ್ನು ಇದು ಮೆಸ್ಸೀಯನ ಕುರಿತಾದದ್ದೆ ಎಂದು ಯೆಹೂದ್ಯರು ಕಂಡುಹಿಡಿದರು. ಇದರಲ್ಲಿ ಆದಿಕಾಂಡ, ಅರಣ್ಯಕಾಂಡ ಮತ್ತು ಧರ್ಮೋಪದೇಶಕಾಂಡ ಪುಸ್ತಕಾ ವಚನಭಾಗಗಳು ಮೇಲೆ ದೊಡ್ಡದಾಗಿ ಕೊಡಲ್ಪಟ್ಟಿವೆ. ಆತನ ಬರವಣಿಗೆಯಲ್ಲಿ ವಿಮೋಚನಕಾಂಡ 12:21 ಮತ್ತು ಯಾಜಕಕಾಂಡ 16:5 ಸಹ ಒಳಗೊಂಡಿದೆ, ಇವುಗಳಲ್ಲಿ ದೇವರ ಕುರಿಮರಿಗೆ ಸೂಚನೆಯಾಗಿರುವ ಯಜ್ಞಗಳ ಬಗ್ಗೆ ಬರೆಯಲಾಗಿದೆ (cf. ನೋಟ್ 2, ದೇವರ ಕುರಿಮರಿ, ಪುಟ 18), ಮತ್ತು ಯೋಹಾನ 3:19ರಲ್ಲಿ ಸೂಚಿಸಲಾಗಿರುವ, ಅರಣ್ಯಕಾಂಡ 21:9 (cf. ಮೇಲಕ್ಕೆತ್ತಲ್ಪಟ್ಟ ಸರ್ಪ, ಪುಟ 34).

# ಪಾಠ 7

# ಯೇಸು ಕ್ರಿಸ್ತನು ಹಸಿವೆಯಲ್ಲಿರುವ ಜನರಿಗೆ ಒದಗಿಸಿಕೊಡುತ್ತಾನೆ

## ಯೋಹಾನ 6:1–34

ಯೇಸು ಕ್ರಿಸ್ತನು ತನ್ನ ಸೇವೆಯ ಎರಡನೆಯ ವರ್ಷವು ಮುಕ್ತಾಯದ ಹೊತ್ತಿಗೆ, ಆತನು ಮತ್ತು ಆತನ ಶಿಷ್ಯರು ಗಲಿಲಾಯ ಸಮುದ್ರವನ್ನು ದಾಟಿ, ಅದರ ಪೂರ್ವೋತ್ತರ ಭಾಗದಲ್ಲಿದ್ದ ಬೆಟ್ಟಕ್ಕೆ ಹೋದರು. ಅವರು ಅಲ್ಲಿ ಏಕಾಂತವಾಗಿರಲು ಸಾಧ್ಯವಾಗಲಿಲ್ಲ, ಯಾಕೆಂದರೆ ಯೇಸು ಕ್ರಿಸ್ತನು ಅನಾರೋಗ್ಯದಲ್ಲಿದ್ದವರಲ್ಲಿ ಮಾಡಿದ ಸೂಚಕಕಾರ್ಯಗಳು ಅನೇಕರಿಗೆ ಗೊತ್ತಿದ್ದರಿಂದ, ಸಾವಿರಾರು ಜನರು ಆತನನ್ನು ಮತ್ತು ಆತನ ಶಿಷ್ಯರನ್ನು ಹಿಂಬಾಲಿಸಿದರು. ಊಟದ ಸಮಯವಾಗುವಾಗ, ಇಷ್ಟು ಜನರಿಗೆ ಹೇಗೆ ಊಟ ಕೊಡಬೇಕೆಂದು ನೀವು ಆಲೋಚಿಸಿದ್ದೀರ ಎಂದು ಯೇಸು ತನ್ನ ಹನ್ನೆರೆಡು ಮಂದಿ ಶಿಷ್ಯರಿಗೆ ಕೇಳಿದನು. ಅಂಥ ದೊಡ್ಡ ಜವಾಬ್ದಾರಿಕೆಯನ್ನು ವಹಿಸಿಕೊಳ್ಳುವದು ಅವರಿಗೆ ಬಹಳ ಕಷ್ಟವಾಗಿರಬಹುದು ಎಂಬದರಲ್ಲಿ ಯಾವುದೇ ಸಂದೇಹವಿಲ್ಲ, ಯೇಸುವಿಗೆ ಉತ್ತರಿಸಲು ಶಿಷ್ಯರ ಬಳಿ ಉತ್ತರವಿರಲಿಲ್ಲ.

ಆಗ ಒಬ್ಬ ಚಿಕ್ಕ ಆ ಕೊರತೆಯನ್ನು ನೀಗಿಸಲು ಜವೆಗೋಧಿಯ ಐದು ರೊಟ್ಟಿಗಳನ್ನು ಮತ್ತು ಎರಡು ಸಣ್ಣ ಮೀನುಗಳನ್ನು ಕೊಟ್ಟನು. ಎಲ್ಲರೂ (ಐದು ಸಾವಿರ ಗಂಡಸರು ಅವರ ಜೊತೆಗೆ ಹೆಂಗಸರು ಮತ್ತು ಮಕ್ಕಳು; cf. ಮತ್ತಾಯ 14:21) ಹುಲ್ಲಿನ ಮೇಲೆ ಕೂತುಕೊಳ್ಳಿರಿ ಎಂದು ಯೇಸು ಆಜ್ಞಾಪಿಸಿದನು ಮತ್ತು ಆಹಾರಕ್ಕಾಗಿ ದೇವರ ಸ್ತೋತ್ರ ಮಾಡಿದನ್ನು ಮತ್ತು ಗುಂಪುಗುಂಪಾಗಿದ್ದ ಜನರಿಗೆಲ್ಲಾ ರೊಟ್ಟಿ ಮತ್ತು ಮೀನುಗಳು ಸಿಗಲು ಹೆಚ್ಚುತ್ತಾ ಬಂದವು! ಎಲ್ಲರೂ ಹೊಟ್ಟೆ ತುಂಬುವಷ್ಟು ತಿಂದ ಮೇಲೆ, ಇನ್ನೂ ಹನ್ನೆರೆಡು ಪುಟ್ಟಿ ರೊಟ್ಟಿ ಮಿಕ್ಕಿದವು.

ಜನರು ಬಹಳ ಉತ್ಸುಕರಾಗಿ ಯೇಸುವನ್ನು ಅರಸನನ್ನಾಗಿ ಮಾಡಬೇಕೆಂದಿದ್ದರು. ತಾನು ಕೊಡಲಿಕ್ಕಿದ್ದ ಆತ್ಮೀಕವಾದ ವಿಷಯಗಳಿಂದ ಹೆಚ್ಚಾಗಿ ಜನರು ಶಾರೀರಿಕವಾದ ಮತ್ತು ಬೌದ್ಧಿಕವಾದ ವಿಷಯಗಳ ಮೇಲೆಯೇ ಮನಸ್ಸಿಟ್ಟಿದ್ದಾರೆ ಎಂಬದನ್ನು ತಿಳಿದುಕೊಂಡ ಕೂಡಲೇ, ಒಬ್ಬೊಂಟಿಗನಾಗಿರುವದಕ್ಕಾಗಿ ಯೇಸು ಕ್ರಿಸ್ತನು ಬೆಟ್ಟಕ್ಕೆ ಹೋದನು.

ಆ ದಿನ ಸಂಜೆ, ಯೇಸುವನ್ನು ಬಿಟ್ಟು ಶಿಷ್ಯರು ತಾವಾಗಿಯೇ, ದೋಣಿಯಲ್ಲಿ ಗಲಿಲಾಯದ ಸಮುದ್ರದಿಂದ ಕಪೆರ್ನೌಮಿಗೆ ಹೊರಟರು. ಸಮುದ್ರವನ್ನೇ ಅಲ್ಲೋಲಕಲ್ಲೋಲ ಮಾಡುವಂಥ ದೊಡ್ಡ ಬಿರುಗಾಳಿ ಬೀಸಿತು. ಆದರೆ ಸಮುದ್ರದ ಮೇಲೆ ತಮ್ಮ ಕಡೆಗೆ ನಡೆದು ಬರುತ್ತಿದ್ದ ಯೇಸುವನ್ನು ನೋಡಿ ದೆವ್ವವೆಂದು ತಿಳಿದುಕೊಂಡ ಶಿಷ್ಯರು (cf. ಮಾರ್ಕ 6:49) ಬಹಳಷ್ಟು ಹೆದರಿದರು! ಆತನು ಅವರಿಗೆ ಹತ್ತಿರವಾಗುತ್ತಿದ್ದಂತೆ, “ಇದು ನಾನು; ಭಯಪಡಬೇಡಿರಿ” ಎಂದು ಹೇಳಿದನು. ಯೇಸು ಕ್ರಿಸ್ತನು ಅವರ ದೋಣಿಯೊಳಗೆ ಹೋದ ಕೂಡಲೇ ಅವರು ದಡವನ್ನು ಮುಟ್ಟಿದರು.

ಜನರು ಗುಂಪುಗುಂಪಾಗಿ ಯೇಸುವನ್ನು ಹುಡುಕುತ್ತಲೇ ಇದ್ದರು ಮತ್ತು ಅಂತಿಮವಾಗಿ ಆತನು ಅವರಿಗೆ ಕಪೆರ್ನೌಮಿನಲ್ಲಿ ಸಿಕ್ಕಿದನು. ಯೇಸು ಅವರಿಗೆ ಕೊಡುತ್ತಿದ್ದ ಸೂಚಕಗಳನ್ನೇ ಅವರು ಹೆಚ್ಚಾಗಿ ಬಯಸುತ್ತಿದ್ದರು. ಆದರೆ ಯೇಸು ಕ್ರಿಸ್ತನು ಅವರ ಗಮನವನ್ನು ವರಗಳಿಂದ ಮತ್ತು ಕೊಡುವವನಿಂದ ತಿರುಗಿಸಲು ಪ್ರಯತ್ನಿಸಿದನು. ಜನರು ದೇವಕುಮಾರನನ್ನು ಮತ್ತು ಜೀವ ಕೊಡುವ ರೊಟ್ಟಿಯನ್ನು ನಂಬಬೇಕು ಎಂಬ ಉದ್ದೇಶದಿಂದಲೇ ಆತನು ಸೂಚಕಕಾರ್ಯಗಳನ್ನು ನಡೆಸುತ್ತಿದ್ದನು. ಆತನು ವಾಗ್ದಾನ ಮಾಡಿರುವ, ಆತನೊಂದಿಗಿನ ಸಂಬಂಧವು, ಶಾಶ್ವತವಾಗಿ ಉಳಿಯುವಂಥದ್ದಾಗಿದೆ.

## ಯೋಹಾನ 6:1–15 ಓದಿರಿ.

1. ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಿದ್ದ ಜನರ ಆಸಕ್ತಿಗಳು ಏನಾಗಿದ್ದವು (6:2,14–15)?

**ಗಮನಿಸಿರಿ:** ಪ್ರವಾದಿ (6:14) ಎಂದು ಧರ್ಮೋಪದೇಶಕಾಂಡ 18:15ರಲ್ಲಿ ಮೊದಲೇ ಹೇಳಿದ್ದಾನೆ.

2.ಎ. ಜನರಿಗೆ ಹೇಗೆ ಊಟವನ್ನು ಕೊಡುತ್ತೀರಿ ಎಂದು ಯೇಸು ತನ್ನ ಶಿಷ್ಯರಿಗೆ ಯಾಕೆ ಕೇಳಿದನೆಂದು ನೀನು ನೆನೆಸುತ್ತೀರಿ (6:5–9)?

ಬಿ. ಸಾವಿರಾರು ಜನರಿಗೆ ಊಟವನ್ನು ಕೊಡಲು ಶಿಷ್ಯರು ಏನನ್ನು ಮಾಡಬೇಕಾಯಿತು (6:10–13)?

3. ಗುಂಪುಗುಂಪು ಜನರಿಗೆ ಯೇಸು ಕೊಟ್ಟ ಪ್ರತಿಕ್ರಿಯೆ ಏನು (6:15)?

## ಯೋಹಾನ 6:16–21 ಓದಿರಿ.

4. ಕೆಲವೇ ತಾಸುಗಳಲ್ಲಿ ಯೇಸು ಕ್ರಿಸ್ತನು ಅದ್ಭುತಕರವಾಗಿ ಸಾವಿರಾರು ಜನರಿಗೆ ಊಟ ಕೊಟ್ಟದ್ದನ್ನು ಮತ್ತು ಬಿರುಗಾಳಿ ಬೀಸುತ್ತಿದ್ದಾಗಲೂ ಗಲಿಲಾಯ ಸಮುದ್ರದ ಮೇಲೆ ನಡೆದದ್ದಕ್ಕೆ ಶಿಷ್ಯರು ಸಾಕ್ಷಿಗಳಾದರು. ಯೇಸುವಿನ ಬಗ್ಗೆ ಈ ಘಟನೆಗಳು ಶಿಷ್ಯರಿಗೆ ಏನನ್ನು ಕಲಿಸಿದವೆಂದು ನೀವು ನೆನೆಸುತ್ತೀರಿ?

**Reference**: ನೋಟ್ 4, ಮನುಷ್ಯಕುಮಾರನು, ಪುಟ 18.

## ಯೋಹಾನ 6:22–34 ಓದಿರಿ

5.ಎ. ಜನರು ಯೇಸುವನ್ನು ಹುಡುಕುತ್ತಿದ್ದಾಗ ಅವರ ಮನಸ್ಸಿನಲ್ಲಿರುವದೇನು ಎಂದು ಯೇಸು ತಿಳಿದುಕೊಂಡನು, ಮತ್ತು ಜನರು ಏನನ್ನು ಪಡೆದುಕೊಳ್ಳಬೇಕೆಂದು ಬಯಸಿದನು (6:26–27)?

ಬಿ. ಯೇಸು ಕ್ರಿಸ್ತನು ಯಾವ ಎರಡು ರೀತಿಯ ರೊಟ್ಟಿಗಳನ್ನು ಹೋಲಿಕೆ ಮಾಡಿದನು (6:27,30–33)?

ಸಿ. ಜನರ ಉದ್ದೇಶಗಳ ಬಗ್ಗೆ ಯೇಸು ಕೊಟ್ಟ ಹೇಳಿಕೆಗಳನ್ನು ಅವರ ಪ್ರತಿಕ್ರಿಯೆಗಳು ಹೇಗೆ ಸ್ಥಿರೀಕರಿಸಿದವು (6:30,34)?

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವದು

### ದೇಹ ಮತ್ತು ಆತ್ಮಕ್ಕೆ ಸೌಲಭ್ಯಗಳು

ಕೆಲಸಗಳು ತುಂಬಾ ಭಾರವಾದವುಗಳು ಅಥವಾ ಅವಶ್ಯಕತೆಯು ಬಹಳ ದೊಡ್ಡದಾಗಿದೆ ಎಂದು ಅನ್ನಿಸುವ ಸನ್ನಿವೇಶಗಳನ್ನು ಎಲ್ಲರೂ ಅನುಭವಿಸುತ್ತೇವೆ. ಯೇಸು ಕ್ರಿಸ್ತನು ಸಾವಿರಾರು ಜನರಿಗೆ ಊಟ ಕೊಟ್ಟದ್ದರಿಂದ ಮತ್ತು ಬಿರುಗಾಳಿ ಬೀಸುತ್ತಿದ್ದ ಸಮುದ್ರದಲ್ಲಿ ಪ್ರಯಾಣಿಸುತ್ತಿದ್ದ ತನ್ನ ಶಿಷ್ಯರನ್ನು ಸೇರಿಕೊಳ್ಳುವದಕ್ಕಿಂತ ಮುಂಚೆ ಸಮುದ್ರದ ಮೇಲೆ ನಡೆದ ಘಟನೆಗಳ ಮೂಲಕ ಇಂಥ ಸಮಯದಲ್ಲಿ ನಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳಬೇಕಾದ ಬಹಳಷ್ಟು ವಿಷಯಗಳು ನಮಗೆ ಸಿಕ್ಕುತ್ತವೆ. ಒಂದು ಸ್ಪಷ್ಟವಾದ ವಿಷಯವೆಂದರೆ ನಮ್ಮ ಅಗತ್ಯತೆಯನ್ನು ಪೂರೈಸುವದಕ್ಕಾಗಿ ದೇವರು ಅಸಾಧ್ಯವಾದದ್ದನ್ನು ಮಾಡುತ್ತಾನೆ. ನಮ್ಮ ಮಾನುಷಿಕವಾದ ಸಾಮರ್ಥ್ಯ ಮತ್ತು ಸಂಪನ್ಮೂಲಗಳು ಅಪ್ರಯೋಜನಗಳಾಗುವಾಗಲೂ, ನಮ್ಮ ಸಮಸ್ಯೆಯು ದೇವರಿಗೆ ಅಸಾಧ್ಯವಾದದ್ದಲ್ಲ.

ಆದರೆ ಈ ಕಥೆಗಳಿಂದ ಕಲಿತುಕೊಳ್ಳಬೇಕಾಗಿರುವ ಅತ್ಯಂತ ಪ್ರಾಮುಖ್ಯವಾಗಿರುವ ಮತ್ತೊಂದು ಪಾಠವು ಸಹ ಇದೆ. ನಮ್ಮ ಆತ್ಮಗಳ ಅಗತ್ಯತೆಯನ್ನು ಪೂರೈಸಬೇಕೆಂಬದೇ ದೇವರ ಪ್ರಾಧಾನ್ಯತೆಯಾಗಿದೆ ಎಂಬದೇ ಪ್ರಾಮುಖ್ಯವಾದ ಪಾಠವಾಗಿದೆ. ಇದನ್ನು ಯೇಸು ಕ್ರಿಸ್ತನ ವಿಷಯದಲ್ಲಿ ನಾವು ಕಾಣಬಹುದು ಯಾಕೆಂದರೆ ಜನರು ಆತನನ್ನು ತಮ್ಮ ಪ್ರಾಥಮಿಕವಾದ ಅಗತ್ಯತೆಗಳನ್ನು ಪೂರೈಸುವವನು ಮತ್ತು ತಾತ್ಕಾಲಿಕವಾದ ಸಮಸ್ಯೆಗಳನ್ನು ಬಗೆಹರಿಸುವವನು ಎಂಬದಾಗಿ ಕಾಣಬಾರದು ಬದಲಾಗಿ ಆತನನ್ನು ತಿಳಿದುಕೊಳ್ಳುವದರ ಮತ್ತು ಆತನೊಂದಿಗೆ ನಡೆಯುವ ವಿಷಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಬಯಸುತ್ತಿದ್ದಾನೆ. ನಮ್ಮ ಶಾರೀರಿಕ ಅಗತ್ಯತೆಗಳನ್ನು ಪೂರೈಸುವದಕ್ಕಿಂತಲೂ ಹೆಚ್ಚಾಗಿ, ಯೇಸು ಕ್ರಿಸ್ತನು ನಮಗೆ ಕೊಡುವ ಮಹದಾದ ನೆರವೇರುವಿಕೆ ಎಂದರೆ ದೇವರೊಂದಿಗೆ

ನಿಕಟವಾದ ಸಂಬಂಧ, ನಮ್ಮ ಆತ್ಮಕ್ಕೆ ಆಹಾರದ ಮೂಲ ಮತ್ತು ನಮ್ಮ ಹೃದಯದ ಭಾವನಾತ್ಮಕ ಅಗತ್ಯತೆಗಳಿಗೆ ಸೌಲಭ್ಯಗಳು.
ನಾವು ನೆರವೇರಿಕೆಯ ಅನ್ವೇಷಣೆಯ ಬಗ್ಗೆ ನಮ್ಮ ಅಧ್ಯಯನವನ್ನು ಮುಂದುವರೆಸುತ್ತಿರುವಂತೆಯೇ, ನಮ್ಮ ಎಲ್ಲಾ ಅಗತ್ಯತೆಗಳನ್ನು ಈಡೇರಿಸುವ ವಿಷಯದಲ್ಲಿ ದೇವರ ಬಯಕೆ ಏನೆಂದು ಸತ್ಯವೇದವು ತಿಳಿಯಪಡಿಸುತ್ತದೆಂದು ನೋಡಿಕೊಳ್ಳೋಣ.

1. ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಬಂದಿದ್ದ ಜನರ ಹತ್ತಿರ ಏನೂ ಇರಲಿಲ್ಲ. ರಾತ್ರಿಯ ಸಮಯದಲ್ಲಿ ಬಿರುಗಾಳಿ ಬೀಸುತ್ತಿದ್ದ ಸಮುದ್ರದಲ್ಲಿ ಶಿಷ್ಯರು ಅಪಾಯಕ್ಕೆ ಗುರಿಯಾಗಿದ್ದರು. ನಮ್ಮ ದೈನಂದಿನದ ಜೀವಿತದಲ್ಲಿ ಯಾವ ರೀತಿಯ ಭಾರವಾದ ಪರಿಸ್ಥಿತಿಗಳನ್ನು ನಾವು ಎದುರಿಸುತ್ತೇವೆ?

2.ಎ. ಕಠಿಣವಾದ ಸನ್ನಿವೇಶಗಳು ಎದುರಾಗುವ ಮನುಷ್ಯರು ನೀಡುವ ಪ್ರತಿಕ್ರಿಯೆಗಳಿಗನುಸಾರವಾಗಿ ಹಸಿವಿನಲ್ಲಿದ್ದ ಜನರ ಸಮಸ್ಯೆ ಎದುರಾದಾಗ ಶಿಷ್ಯರು ಹೇಗೆ ಆ ಸಮಸ್ಯೆಯನ್ನು ಎದುರುಗೊಂಡರು?

ಬಿ. ಯಾವ ತರಹವಾದ ಕಾರ್ಯಗಳಿಗೆ ಸಹಾಯವನ್ನು ಪಡೆಯಲು ನಾವು ದೇವರ ಕಡೆಗೆ ತಿರುಗಿಕೊಳ್ಳುತ್ತೇವೆ?

3.ಎ. ಯೇಸು ಕ್ರಿಸ್ತನು ಐದು ಸಾವಿರ ಜನರಿಗೆ ಆಹಾರವನ್ನು ಕೊಟ್ಟ ಕಥೆಯು, ನಮಗೆ ಅಸಾಧ್ಯವೆಂದೆಣಿಸುವ ಪರಿಸ್ಥಿತಿಗಳಿಗೆ ಯಾವ ರೀತಿಯ ಉದಾಹರಣೆಯನ್ನು ಕೊಡುತ್ತದೆ?

ಬಿ. ಅಸಾಧ್ಯತೆಗಳು ಎದುರಾಗುವಾಗ ಯಾವ ವಿಷಯಗಳಲ್ಲಿ ನಾವು ಭರವಸವುಳ್ಳವರಾಗಿರಬಹುದು?

ಲೂಕ 1:37

ಫಿಲಿಪ್ಪಿ 4:19

4.ಎ. ದೇವರ ಸೌಲಭ್ಯದ ಬಗ್ಗೆ ಸಣ್ಣ ಹುಡುಗನು ಮತ್ತು ಆತನ ಅತ್ಯಲ್ಪವಾದ ಕಾಣಿಕೆಯು ವ್ಯಕ್ತಪಡಿಸುತ್ತದೆ?

ಬಿ. 2 ಕೊರಿಂಥ 12:9–10 ಯಾವ ಸಲಹೆಯನ್ನು ಕೊಡುತ್ತದೆ?

5. ಐದು ಸಾವಿರ ಜನರಿಗೆ ಯೇಸು ಕ್ರಿಸ್ತನು ಆಹಾರವನ್ನು ಕೊಟ್ಟದ್ದು, ದೇವರು ನಮ್ಮ ದೈನಂದಿನದ ಅಗತ್ಯತೆಗಳ ಬಗ್ಗೆ ಚಿಂತಿಸುತ್ತಾನೆ ಎಂಬದಕ್ಕೆ ಉದಾಹರಣೆಯಾಗಿದೆ. ದೇವರ ಸಾಮರ್ಥ್ಯ ಮತ್ತು ನಮಗೆ ಒದಗಿಸಿಕೊಡಬೇಕೆಂಬ ಆತನ ಬಯಕೆಯನ್ನು ಕೆಳಗಿನ ವಚನಗಳು ಹೇಗೆ ವಿವರಿಸುತ್ತವೆ:

*ನಮ್ಮ ಪ್ರಾಯೋಗಿಕವಾದ ಅಗತ್ಯತೆಗಳು?*

ಕೀರ್ತನೆ 23:1,5

ಮತ್ತಾಯ 6:31–33

*ರಕ್ಷಣೆಯ ನಮ್ಮ ಅಗತ್ಯೆ*

ಕೀರ್ತನೆ 91:14–15

ಯೆಶಾಯ 46:4

6. ನಮ್ಮ ಅಗತ್ಯತೆಯ ವಿಷಯದಲ್ಲಿ ಏನು ಮಾಡಬೇಕೆಂದು ದೇವರು ನಮ್ಮನ್ನು ಸ್ವಾಗತಿಸುತ್ತಾನೆ?

ಕೀರ್ತನೆ 62:8

ಫಿಲಿಪ್ಪಿ 4:6–7

7. ಎಲ್ಲಿಯವರೆಗೂ ಜನರು ಯೇಸುವಿನ ಬಳಿಗೆ ತಮ್ಮ ತಾತ್ಕಾಲಿಕವಾದ ವಿಷಯಗಳ ನೆರವೇರುವಿಕೆಗಾಗಿ ಬರುವರೋ, ಆಲ್ಲಿಯವರೆಗೂ ಅವರ ಆಳವಾದ ಅಗತ್ಯತೆಗಳು ಪೂರೈಕೆಯಾಗುವದಿಲ್ಲ ಎಂದು ಯೇಸುವಿಗೆ ಗೊತ್ತಿತ್ತು. ನಮ್ಮ ಆಳವಾದ ಬಯಕೆಗಳನ್ನು ತೃಪ್ತಿಪಡಿಸುವದು ಯಾವುದೆಂದು ಸತ್ಯವೇದವು ಹೇಳುತ್ತದೆ?

ಮತ್ತಾಯ 5:6

ಎಫೆಸ 3:16–19

1 ತಿಮೊಥೆ 6:17–19

8. ಆತನು ತಂದಿರುವ ಸತ್ಯವನ್ನು ಮತ್ತು ಆತನನ್ನು ತಿಳಿದುಕೊಳ್ಳಬೇಕೆಂಬ ಬಯಕೆಯುಳ್ಳ ಮನುಷ್ಯನು ಏನನ್ನು ಪಡೆಯುವನೆಂಬದು ಯೇಸು ಕ್ರಿಸ್ತನಿಗೆ ಗೊತ್ತಿತ್ತು?

ಕೀರ್ತನೆ 37:4

ಕೀರ್ತನೆ 112:8ಎ

ಮತ್ತಾಯ 11:28–29

ಯೋಹಾನ 8:32 (ಕೀರ್ತನೆ 119:32)

## ಸಾರಾಂಶ

"ಇದು ಅಸಾಧ್ಯ" ಅಥವಾ "ನನ್ನಿಂದ ಇದನ್ನು ಮಾಡಲು ಸಾಧ್ಯವಿಲ್ಲ" ಎಂದು ನೀವು ಪ್ರಾಮಾಣಿಕವಾಗಿ ಹೇಳುವಂಥ ಪರಿಸ್ಥಿತಿಗಳು ನಿಮ್ಮ ಜೀವಿತದಲ್ಲಿ ಇವೆಯೇ. ಐದು ಸಾವಿರ ಜನರಿಗೆ ಆಹಾರವನ್ನು ಕೊಟ್ಟ ಕಥೆಯು ನಿಮ್ಮಲ್ಲಿ ಯಾವ ನಿರೀಕ್ಷೆಯನ್ನು ಹುಟ್ಟಿಸುತ್ತದೆ?

10. ಇವತ್ತು ನಿಮ್ಮ ಜೀವಿತದಲ್ಲಿ ಅಪಾಯಕಾರಿಯಾದ ಅಥವಾ ಭಯಭೀತವಾದ ಪರಿಸ್ಥಿತಿಗಳು ಇವೆಯಾ? ಯೇಸು ಕ್ರಿಸ್ತನು ಬಿರುಗಾಳಿ ಬೀಸುತ್ತಿದ್ದ ಸಮುದ್ರದಲ್ಲಿ ಶಿಷ್ಯರ ಬಳಿಗೆ ಕಥೆಯು ನಿಮಗೆ ಏನನ್ನು ಹೇಳುತ್ತದೆ?

11. ಈ ಎಲ್ಲಾ ಸಹಾಯಗಳ ಜೊತೆಗೆ, ಯೇಸುವನ್ನು ಮೊದಲಿಡುವ ಆಯ್ಕೆಯನ್ನು ನೀವು ಮಾಡುವಾಗ, ಏನೆಲ್ಲಾ ಮಹದಾದ ವರಗಳನ್ನು ನಿಮಗೆ ಕೊಡಲು ಯೇಸು ಬಯಸುತ್ತಾನೆ?

12. ಈ ಸತ್ಯತೆಗಳು ನಿಮಗೆ ಈಗಾಗಲೇ ಗೊತ್ತಿದ್ದರೆ, ನಿಮಗೆ ಇಲ್ಲಿ ಏನೆಲ್ಲಾ ವಿಷಯಗಳು ಜ್ಞಾಪಕಾರ್ಥಕವಾಗಿವೆ?

# ಪಾಠ 8

# ಯೇಸುವೇ ಜೀವ ಕೊಡುವ ರೊಟ್ಟಿ

## ಯೋಹಾನ 6:35–71

ಯೇಸು ಕ್ರಿಸ್ತನು ತಿಬೇರಿಯ ಸಮುದ್ರದ ಬಳಿಯಲ್ಲಿ ಅದ್ಭುತರವಾದ ರೀತಿಯಲ್ಲಿ ಐದು ಸಾವಿರ ಜನರಿಗೆ ಊಟವನ್ನು ಕೊಟ್ಟನು ಮತ್ತು ಅನೇಕರು ಆತನನ್ನು ತಮ್ಮ ಅರಸನನ್ನಾಗಿ ಮಾಡಬೇಕೆಂದಿದ್ದರು. ಯೇಸು ಕ್ರಿಸ್ತನು ಆ ಜನರಿಂದ ತಪ್ಪಿಸಿಕೊಳ್ಳಬೇಕೆಂದು ಬಯಸಿದನಾದರೂ, ಕಪೆರ್ನೌಮಿನಲ್ಲಿ ಆತನು ಅಂತಿಮವಾಗಿ ಅವರಿಗೆ ಸಿಕ್ಕಿದನು.

ನಾನು ಇವರಿಗೆ ಊಟ ಮತ್ತು ಸ್ವಸ್ಥತೆಯನ್ನು ಕೊಡುವ ಸಾಮರ್ಥ್ಯವುಳ್ಳವನಾಗಿದ್ದರಿಂದಲೇ ಇವರು ನನ್ನನ್ನು ಅವರ ಅರಸನನ್ನಾಗಿ ಮಾಡಿಬೇಕೆಂದಿದ್ದಾರೆ ಎಂದು ತಿಳಿದುಕೊಂಡು, ನಾನು ನಿಮಗೆ ಕೊಡುವ ಊಟವು ಅತ್ಯಂತ ಬೆಲೆಯುಳ್ಳದ್ದಾಗಿದೆ ಎಂದು ಯೇಸು ಅವರಿಗೆ ವಿವರಿಸಿದನು. ಅರಣ್ಯದಲ್ಲಿ ಇಸ್ರಾಯೇಲರಿಗೆ ಊಟ ಮಾಡಿಸುವದಕ್ಕಾಗಿ ದೇವರು ಪರಲೋಕದಿಂದ ಕೊನೆಗೊಳ್ಳುವ ಮನ್ನವವನ್ನು ಸುರಿಸಿದಂತೆ (ಧರ್ಮೋಪದೇಶಕಾಂಡ 16:4), ಈಗ ದೇವರು ಪರಲೋಕದಿಂದ ಕಳುಹಿಸಿರುವ ಜೀವಕೊಡುವ ರೊಟ್ಟಿಯು ಮರಣದ ಮೇಲೆ ಜಯವನ್ನು ಕೊಡುವದಾಗಿದೆ. ನಾನೇ ಜೀವಕೊಡುವ ರೊಟ್ಟಿ ಎಂದು ಯೇಸು ಘೋಷಿಸಿದನು ಮತ್ತು ನನ್ನನ್ನು ತಮ್ಮ ಹೃದಯಗಳಲ್ಲಿ ಅರಸನನ್ನಾಗಿ ಮಾಡಿಕೊಳ್ಳುವವರು, ಕೊನೆಗೊಳ್ಳದಿರುವ ಆಹಾರವನ್ನು ತಮ್ಮ ಜೀವಿತದಲ್ಲಿ ಪಡೆಯುವರು ಎಂದು ಪ್ರಕಟಪಡಿಸಿದನು. ಆತನೊಂದಿಗೆ ಅನ್ಯೋನ್ಯವಾಗುವವನು, ಅಥವಾ, ಸಾಂಕೇತಿಕವಾಗಿ ಮಾತನಾಡುವದಾದರೆ, "ಈ ರೊಟ್ಟಿಯನ್ನು ತಿಂದು, ಈ ರಕ್ತವನ್ನು ಕುಡಿಯುವವರು"1 ಎಂದೆಂದಿಗೂ ಜೀವಿಸುವರು.

ಯೇಸು ಕ್ರಿಸ್ತನು ನರಭಕ್ಷಣೆಯ ಬಗ್ಗೆ ಮಾತನಾಡುತ್ತಿಲ್ಲ ಎಂದು ಯೆಹೂದ್ಯರಾದ ಕೇಳುಗರಿಗೆ ಚೆನ್ನಾಗಿ ಗೊತ್ತಿತ್ತು, ಆದರೆ ಪದದ ಚಿತ್ರಣವು ಅವರ ಧರ್ಮಶಾಸ್ತ್ರದ ನಿಮಿತ್ತವಾಗಿ ಪರಿಪೂರ್ಣವಾಗಿ ಹೊಲಸಾಗಿತ್ತು (cf. ಯಾಜಕಕಾಂಡ 17:10–11). ಈ ಕಾರಣದಿಂದ ಯೇಸು ಕ್ರಿಸ್ತನು ಅನೇಕ ಶಿಷ್ಯರು ಆತನನ್ನು ಹಿಂಬಾಲಿಸುವದನ್ನು ಬಿಟ್ಟುಬಿಟ್ಟರು. ಆಗ ಆತನು ತನ್ನ ಹನ್ನೆರೆಡು ಮಂದಿ ಶಿಷ್ಯರ ಕಡೆಗೆ ತಿರುಗಿಕೊಂಡು, ನೀವು ನನ್ನನ್ನು ಬಿಟ್ಟು ಹೋಗುತ್ತೀರ ಎಂದು ಅವರನ್ನು ಕೇಳಿದನು. ಅವರ ಪರವಾಗಿ ಮಾತನಾಡುವವನಾಗಿದ್ದ ಪೇತ್ರನು ಹೇಳಿದ್ದೇನೆಂದರೆ, "ಕರ್ತನೇ, ನಿನ್ನನ್ನು ಬಿಟ್ಟು ನಾವು ಎಲ್ಲಿಗೆ ಹೋಗೋಣ? ನಿತ್ಯಜೀವವನ್ನು ಕೊಡುವ ವಾಕ್ಯಗಳು ನಿನ್ನಲ್ಲಿಯೇ ಇವೆಯಲ್ಲಾ." ಇದಕ್ಕೆ ಯೇಸು ಉತ್ತರಿಸಿದ್ದೇನೆಂದರೆ, ನಿಮ್ಮಲ್ಲಿಯೇ ಒಬ್ಬನು ನನ್ನನ್ನು ಹಿಡಿದುಕೊಡುವನು.

## ಯೋಹಾನ 6:35–51 ಓದಿರಿ.

1. ತನ್ನನ್ನು ಜೀವಕೊಡುವ ರೊಟ್ಟಿಯಾಗಿ ಸ್ವೀಕರಿಸಿಕೊಳ್ಳುವ ವ್ಯಕ್ತಿಗೆ ಯೇಸು ಕ್ರಿಸ್ತನು ಏನನ್ನು ವಾಗ್ದಾನ ಮಾಡಿದ್ದಾನೆ (6:35)?

2.ಎ. ಯೇಸು ಕ್ರಿಸ್ತನಿಗನುಸಾರವಾಗಿ, ನಾವು ನಂಬಿಕೆಯಲ್ಲಿ ಹೇಗೆ ಆತನಿಗೆ ಹತ್ತಿರವಾಗುತ್ತೇವೆ (6:37,44)?

**Reference**: ನೋಟ್ 2, ತಂದೆಯು ನನಗೆ ಕೊಡುವ ಎಲ್ಲವೂ, ಪುಟ 66.

ಬಿ. ತಂದೆಯು ತನ್ನ ಕಡೆಗೆ ಸೆಳೆದುಕೊಳ್ಳುವವರ ವಿಷಯವಾಗಿ ಯೇಸು ಮಾಡಿರುವ ವಾಗ್ದಾನಗಳನ್ನು ಪಟ್ಟಿ ಮಾಡಿರಿ (6:37–40)?

**Reference**: ನೋಟ್ 3, ಕಡೆಯ ದಿವಸಗಳಲ್ಲಿ ಅವರನ್ನು ಎಬ್ಬಿಸು, ಪುಟ 66.

3.ಎ. "ಪರಲೋಕದಿಂದ ಬಂದವನು" ಎಂದು ಯೇಸು ಘೋಷಿಸಿದಾಗ ಗಲಿಲಾಯದ ಯೆಹೂದ್ಯರಿಗೆ ಹೇಗೆ ತೊಂದರೆಯಾಯಿತು (6:42)?

ಬಿ. "ತಂದೆಯ ಸ್ವರವನ್ನು ಕೇಳಿ" ಆತನನ್ನು ನಂಬುವವನ ವಿಷಯವಾಗಿ ಯೇಸು ಏನೆಂದು ಘೋಷಿಸಿದ್ದಾನೆ (6:45–47)?

4. ದೇವರು ಪರಲೋಕದಿಂದ ಇಸ್ರಾಯೇಲರಿಗೆ ಸುರಿಸಿದ ಮನ್ನ ಮತ್ತು ಯೇಸು ಕ್ರಿಸ್ತನು ಕೊಡುವ ರೊಟ್ಟಿಯ ನಡುವೆ ಯೇಸು ಹೇಗೆ ವ್ಯತ್ಯಾಸವನ್ನು ತೋರಿಸಿದನು (6:48–51)?

ಮನ್ನಾ

ಜೀವಕೊಡುವ ರೊಟ್ಟಿ

## ಯೋಹಾನ 6:52–59 ಓದಿರಿ.

5. ಒಬ್ಬ ವ್ಯಕ್ತಿಯು ನಿತ್ಯಜೀವವನ್ನು ಪಡೆಯಬೇಕೆಂದರೆ ಏನು ಮಾಡಬೇಕೆಂದು ಯೇಸು ಸಾರಿದನು (6:56–58)?

**Reference**: ನೋಟ್ 1, ನನ್ನ ದೇಹವನ್ನು ತಿನ್ನುವವನು, ಪುಟ 66

## ಯೋಹಾನ 6:60–71 ಓದಿರಿ.

6. ನಿಮಗೆ ಜೀವವನ್ನು ಕೊಡುವ ಆತ್ಮನಿಂದ ನನ್ನ ಬೋಧನೆಗಳು ಬರುತ್ತವಾದ್ದರಿಂದ ಅವುಗಳನ್ನು ಅಂಗೀಕರಿಸಿಕೊಳ್ಳಿರಿ ಮತ್ತು ನಿಮ್ಮ ಮಾನುಷಿಕವಾದ ಪ್ರತಿಕ್ರಿಯೆಗಳಿಂದ ತಿರಸ್ಕರಿಸಬೇಡಿರಿ ಎಂದು ಯೇಸು ತನ್ನ ಶಿಷ್ಯರನ್ನು ಪ್ರೋತ್ಸಾಹಪಡಿಸಿದನು. ಏನಾಯಿತು (6:66)?

7.ಎ. ಯೇಸು ಕ್ರಿಸ್ತನು ತನ್ನ ಹನ್ನೆರೆಡು ಶಿಷ್ಯರಿಗೆ ನೀವು ನನ್ನನ್ನು ಬಿಟ್ಟು ಹೋಗಬೇಕೆಂದಿದ್ದೀರ ಎಂದು ಕೇಳಿದಾಗ, ಪೇತ್ರನ ಪ್ರತಿಕ್ರಿಯೆ ಏನಾಗಿತ್ತು (6:67–69)?

ಬಿ. ಪೇತ್ರನ ಹೇಳಿಕೆಯಲ್ಲಿದ್ದ ಸ್ವಲ್ಪ ನಿರ್ದಿಷ್ಟತೆ ಇಲ್ಲದ ವಿಷಯ ಬಗ್ಗೆ ಯೇಸು ಏನೆಂದು ಪ್ರಕಟಿಸಿದನು (6:70–71)?

**Reference**: ನೋಟ್ 4, ನಿಮ್ಮಲ್ಲಿ ಒಬ್ಬನು ದುರಾತ್ಮನು, ಮತ್ತು ನೋಟ್ 5, ಸೈತಾನ, ದುರಾತ್ಮ, ಪುಟ 66.

ಸಿ. ಯೇಸುವಿನ ಸ್ವಭಾವದ ಬಗ್ಗೆ ಈ ಜ್ಞಾನವು ಏನನ್ನು ಪ್ರದರ್ಶಿಸುತ್ತದೆ?

## ಮೂಲಭೂತವಾದ ವಿಷಯದ ಮೇಲೆ ಕಟ್ಟಲ್ಪಡುವದು

## ಹೃದಯದ ಹಸಿವನ್ನು ತೃಪ್ತಿಗೊಳಿಸುವದು

ಫ್ರೆಂಚ್‌ನ ಭೌತವಿಜ್ಞಾನಿ ಮತ್ತು ತತ್ವಜ್ಞಾನಿಯಾದ ಪಾಸ್ಕಲ್ ಹೇಳಿದ್ದೇನೆಂದರೆ, "ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿಯೂ ದೇವರ–ರೂಪವುಳ್ಳ ಬರಿದಾದ ಸ್ಥಳವಿದೆ, ಅದನ್ನು ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕವಾಗಿ, ದೇವರು ಮಾತ್ರವೇ ಮುಚ್ಚಲು ಶಕ್ತನಾಗಿದ್ದಾನೆ. ಜೀವಕೊಡುವ ರೊಟ್ಟಿಯಿಂದ ತುಂಬಲ್ಪಡಬೇಕಾಗಿರುವ ಮನುಷ್ಯನ ಹೃದಯದಲ್ಲಿರುವ ಹಸಿವಿನ ಬಗ್ಗೆ ಆತನು ವಿವರಿಸುತ್ತಿದ್ದಾನೆ.

ಜನರು ಈ ಹಸಿವನ್ನು ನೀಗಿಸಿಕೊಳ್ಳಲು ವಿವಿಧ ವಿಷಯಗಳಾದ: ಸಂಬಂಧಗಳು, ನೆರವೇರಿಕೆಗಳು, ಹೊಸ ಗಳಿಕೆಗಳು, ಪ್ರಯಾಣ, ಅತಿಯಾದ ಕೆಲಸ ಅಥವಾ ಆಟಗಳನ್ನು ಪ್ರಯತ್ನಿಸುತ್ತಾರೆ. ನಮಗೆ ಇನ್ನೂ ಸಿಗದಿರುವ ವಿಷಯವು ಕೊನೆಯದಾಗಿ ನಮ್ಮೊಳಗಿನ ಹಸಿವನ್ನು ನೀಗಿಸುತ್ತದೆ ಎಂಬ ಭ್ರಾಂತಿಯಲ್ಲಿ ನಾವು ಜೀವಿಸುವದರಿಂದ, ಅದನ್ನು ಭದ್ರಪಡಿಸಿಕೊಳ್ಳುವದಕ್ಕಾಗಿ ನಾವು ಹೋರಾಡುತ್ತೇವೆ. ಒಂದುವೇಳೆ ನಾವು ಯಶಸ್ವಿಯಾಗುವದಾದರೆ, ಖಾಲಿಯಾಗಿರುವ ಜಾಗವನ್ನು ಅದು ತುಂಬಿಸಲಾರದು ಎಂಬದನ್ನು ನಾವು ಕಂಡುಕೊಳ್ಳುತ್ತೇವೆ. ಸಂಬಂಧಗಳು ಕೆಲಸವನ್ನು ತೆಗೆದುಕೊಳ್ಳುತ್ತವೆ: ಸ್ನೇಹಿತರು, ಗಂಡ–ಹೆಂಡತಿ ಮತ್ತು ಮಕ್ಕಳು ಯಾವಾಗಲೂ ನಮ್ಮನ್ನು ನಿರಾಸೆಪಡಿಸುತ್ತಾರೆ. ಬೌಧಿಕವಾದ ವಿಷಯಗಳು ಕಾರ್ಯನಿರ್ವಹಣೆಯನ್ನು ವಹಿಸಿಕೊಳ್ಳುತ್ತವೆ ಮತ್ತು ಸಮಯದೊಂದಿಗೆ ಕೊನೆಗೊಳ್ಳುತ್ತವೆ. ಹೊಸ ಅನುಭವಗಳು ನೆನಪುಗಳಾಗಿ ಉಳಿದುಬಿಡುತ್ತವೆ. ಖಾಲಿ ಜಾಗವನ್ನು ತುಂಬಲು ಮಾಡುವ ಅನ್ವೇಷಣೆಯು ನಮ್ಮ ತೀವ್ರವಾದ ಭ್ರಮೆಯನ್ನು ನೀಗಿಸುವೆಡೆಗೆ ಮತ್ತು ನಿರೀಕ್ಷೆಯಿಲ್ಲದಿರುವ ಕಡೆಗೆ ನಡೆಸುತ್ತದೆ. ಶಾಶ್ವತವಾಗಿ ನೆರವೇರಲ್ಪಡಬೇಕೆಂಬ ಉದ್ದೇಶದಿಂದ ನಮ್ಮಲ್ಲಿರುವ ಹಸಿವೆಯು ಹಾಗೆಯೇ ಉಳಿದುಕೊಂಡು ಬಿಡುತ್ತದೆ.

ಜೀವಕೊಡುವ ರೊಟ್ಟಿ ನಾನೇ ಎಂದು ಯೇಸು ಕ್ರಿಸ್ತನು ಪ್ರಕಟಪಡಿಸಿದಾಗ, ಆತನು ಶ್ರೇಷ್ಟವಾದ ಸಂದೇಶವನ್ನು ಕೊಡುತ್ತಿದ್ದನು. ಆತನು ವೈಯಕ್ತಿಕವಾಗಿ ತಿಳಿದುಕೊಳ್ಳುವದೇ ಹಸಿದಿರುವ ಹೃದಯವನ್ನು ತೃಪ್ತಿಪಡಿಸುವದು ಎಂದು ಆತನು ಹೇಳುತ್ತಿದ್ದನು. ಆತನು ತನ್ನನ್ನೇ ಜೀವಕೊಡುವ ರೊಟ್ಟಿ ಎಂದು ಹೇಳುಕೊಳ್ಳುವದರ ಮೂಲಕವಾಗಿ, ಆತನೊಂದಿಗೆ ನಿತ್ಯವಾದ ಸಂಬಂಧದಲ್ಲಿ ಮತ್ತು ಪ್ರೀತಿಯಲ್ಲಿ ನಡೆದುಕೊಳ್ಳುವ ಅವಶ್ಯಕತೆ ನಮಗೆ ಪ್ರತಿದಿನವೂ ಬೇಕು ಎಂಬದನ್ನು ವ್ಯಕ್ತಪಡಿಸುವ ಚಿತ್ರಣವನ್ನು ಯೇಸು ಕ್ರಿಸ್ತನು ವಿವರಿಸಿದನು. ನಮ್ಮ ಸೃಷ್ಟಿಕರ್ತನೊಂದಿಗೆ ಸುಭದ್ರವಾದ ಸಂಬಂಧವನ್ನು ಇಟ್ಟುಕೊಳ್ಳಲು ಮತ್ತು ಆ ಸಂಬಂಧದಲ್ಲಿ ಶಾಶ್ವತವಾಗಿ ಉಳಿಯಲು, ದೇವರು ನಮ್ಮೊಳಗೆ ಉಂಟು ಮಾಡಿರುವ ಹಸಿವನ್ನು ನೀಗಿಸಲು, ಆತನು ತನ್ನನ್ನೇ ನಮಗೆ "ಮನ್ನವಾಗಿ" ಕೊಡುವವನಾಗಿದ್ದಾನೆ.

ಹಿಪ್ಪೋದ ಸಂತ ಅಗಸ್ಟಿನ್‌ರವರು ನೂರಾರು ವರ್ಷಗಳ ಹಿಂದೆ ಬರೆದಿರುವದೇನೆಂದರೆ, "ಓ ದೇವರೇ ನೀನು ನಮ್ಮನ್ನು ನಿನಗೋಸ್ಕರವೇ ಸೃಷ್ಟಿ ಮಾಡಿದ್ದೀಯ ಆದರೂ, ನಮ್ಮ ಹೃದಯಗಳು ನಿನ್ನಲ್ಲಿ ವಿಶ್ರಾಂತಿಯನ್ನು ಪಡೆಯುವವರೆಗೂ ವಿಶ್ರಾಂತಿಯಿಲ್ಲದವುಗಳಾಗಿವೆ." ಹೃದಯದ ಹಸಿವನ್ನು ನೀಗಿಸುವದಕ್ಕಾಗಿ ಯೇಸು ಕ್ರಿಸ್ತನು ವಿಶ್ರಾಂತಿ ಮತ್ತು ಶಾಶ್ವತವಾದ ನೆರವೇರುವಿಕೆಯನ್ನು ಹೇಗೆ ಕೊಡುತ್ತಾನೆಂದು ನೋಡಿಕೊಳ್ಳೋಣ.

1. ನಮ್ಮ ಹೃದಯಗಳು ಯಾವುದಕ್ಕಾಗಿ ಹಂಬಲಿಸುತ್ತವೆ? ಮನುಷ್ಯನ ಹೃದಯದ ಹಸಿವೆಯನ್ನು ನೀವು ಹೇಗೆ ವಿವರಿಸುತ್ತೀರ?

2.ಎ. ಈ ಹಸಿವೆಯನ್ನು ತೃಪ್ತಿಪಡಿಸಿಕೊಳ್ಳಲು ಜನರು ಏನೆಲ್ಲಾ ರೀತಿಯಲ್ಲಿ ಪ್ರಯತ್ನಿಸುತ್ತಾರೆ?

ಬಿ. ಈ ವಿಧದಲ್ಲಿ ಹಸಿವೆಯನ್ನು ನೀಗಿಸಿಕೊಳ್ಳಲು ಪ್ರಯತ್ನಿಸುವದರಿಂದ ಸಿಗುವ ಫಲಿತಾಂಶಗಳು ಏನು? ಅಂತಿಮವಾಗಿ ನಾವು ಕಂಡುಕೊಳ್ಳುವದು ಏನು?

3. ಸುಪ್ರಸಿದ್ಧರಾದ ಚರಿತ್ರೆಗಾರನು ಮತ್ತು ತತ್ವಜ್ಞಾನಿಯಾದ ಹೆಚ್. ಜಿ. ವೆಲ್ಸ್ ರವರು ತಮ್ಮ 61ನೇ ವಯಸ್ಸಿನಲ್ಲಿ ಹೇಳಿದ್ದೇನೆಂದರೆ, "ನನಗೆ ಸಮಾಧಾನವಿಲ್ಲ. ಜೀವಿತವೆಲ್ಲಾ ಅದರ ಜ್ಞಾನಕ್ಷೇತ್ರದ ಕೊನೆಯಲ್ಲಿದೆ." ಸಾಹಿತ್ಯ ಪಂಡಿತನಾದ, ಥೆರಾವು ಹೇಳಿದ್ದೇನೆಂದರೆ, "ಅನೇಕ ಜನರು ತಮ್ಮ ಜೀವಿತಗಳನ್ನು ಹತಾಶರಾಗಿಯೇ ಜೀವಿಸುತ್ತಾರೆ."

ಜನರು ತಾವು ಅನುಭವಿಸುವ ನೂನ್ಯತೆ ಮತ್ತು ಭ್ರಾಂತಿಯಿಂದ ತಪ್ಪಿಸಿಕೊಳ್ಳಲು ಹೇಗೆ ಪ್ರಯತ್ನಿಸುತ್ತಾರೆ?

4.ಎ. ಆಂತರ್ಯದ ಉತ್ಕಟವಾದ ಇಚ್ಛೆಗಳನ್ನು ನೆರವೇರಿಸಿಕೊಳ್ಳಲು ನಾವು ಮಾಡುತ್ತಿರುವ ಅನ್ವೇಷಣೆಯ ವಿಷಯದಲ್ಲಿ ಏನು ಮಾಡಬೇಕೆಂದು ಯೇಸು ಕ್ರಿಸ್ತನು ಸೂಚಿಸಿದ್ದಾನೆ?

ಯೋಹಾನ 6:27

ಬಿ. ಯೋಹಾನ 6:35ರಲ್ಲಿ ಆತನು ಯಾವ ವಾಗ್ದಾನವನ್ನು ಮಾಡಿದ್ದಾನೆ?

5. ಮಾನವನ ಆಳವಾದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಯೇಸು ಕ್ರಿಸ್ತನೊಂದಿಗಿನ ಸಂಬಂಧ ಏನನ್ನು ಕೊಡುತ್ತದೆ?

ಯೋಹಾನ 14:27; 16:33

ಯೋಹಾನ 15:11

ಯೋಹಾನ 15:9

ರೋಮಾ 8:35,38–39

6.ಎ. ಇಸ್ರಾಯೇಲರು ಅರಣ್ಯದಲ್ಲಿ ಅಲೆದಾಡುತ್ತಿದ್ದಾಗ ಅವರಿಗೆ ದೇವರು ಪರಲೋಕದಿಂದ ಕಳುಹಿಸಿಕೊಟ್ಟ ಮನ್ನಕ್ಕೆ ಯೇಸು ಕ್ರಿಸ್ತನು ತನ್ನನ್ನು ಹೋಲಿಸಿಕೊಂಡನು. ಮನ್ನವನ್ನು ಶೇಖರಿಸಿಕೊಳ್ಳುವದರ ವಿಷಯದಲ್ಲಿ ದೇವರು ಇಸ್ರಾಯೇಲರಿಗೆ ಕೊಟ್ಟ ಸೂಚನೆ ಏನು?

ವಿಮೋಚನಕಾಂಡ 16:4

ಬಿ. ಕ್ರಿಸ್ತನ ಜೀವಿತವನ್ನು ನಮ್ಮಲ್ಲಿ ಪೋಷಿಸಿಕೊಳ್ಳುವದರ ಬಗ್ಗೆ ಇದು ನಮಗೆ ಯಾವ ಸೂಚನೆಯನ್ನು ಕೊಡುತ್ತದೆ?

ಸಿ. ಕರ್ತನ ಪ್ರಾರ್ಥನೆ ಇದನ್ನು ಹೇಗೆ ಪ್ರತಿಬಿಂಬಿಸುತ್ತದೆ?

ಮತ್ತಾಯ 6:11

7. ದೇವರಿಂದ ಪೋಷಿಸಲ್ಪಡುವದರಲ್ಲಿ ಏನು ಒಳಗೊಂಡಿರುತ್ತದೆ?

ಕೀರ್ತನೆ 105:1–5

ಮತ್ತಾಯ 11:28–30

8. ಜೀವಕೊಡುವ ರೊಟ್ಟಿಯ ಮೂಲಕವಾಗಿ ನಮ್ಮ ಆಂತರ್ಯದ ಹಸಿವೆಯನ್ನು ನೀಗಿಸಿಕೊಳ್ಳಲು ಪ್ರಯತ್ನಿಸುವಾಗ ನಮಗೆ ಏನು ವಾಗ್ದಾನ ಮಾಡಲ್ಪಟ್ಟಿದೆ?

ಮತ್ತಾಯ 5:6

ಕೀರ್ತನೆ 34:8

ಕೀರ್ತನೆ 16:11

## ಸಾರಾಂಶ

9.ಎ. ಬೇರೆ ಕಾರ್ಯಗಳಿಗಿಂತ ಹೆಚ್ಚಾಗಿ ಕ್ರಿಸ್ತನೊಂದಿಗಿನ ಸಂಬಂಧವನ್ನು ನೆರವೇರಿಸಿಕೊಳ್ಳಬೇಕೆಂಬ ದೈನಂದಿನದ ಅಗತ್ಯತೆಯನ್ನು ಹೇಗೆ ಪೂರೈಸಿಕೊಳ್ಳಬೇಕೆಂದು ನಿಮಗೆ ಅಥವಾ ನಿಮ್ಮಲ್ಲಿ ಯಾರಿಗಾದರೂ ಗೊತ್ತೇ?

ಬಿ. ಇದರ ಫಲಿತಾಂಶವೇನು?

10. ಕರ್ತನನ್ನು ಜೀವಕೊಡುವ ರೊಟ್ಟಿಯನ್ನಾಗಿ ಅಂಗೀಕರಿಸಿಕೊಳ್ಳುವಾಗ ಆತನು ನಿಮಗೆ ಕೊಟ್ಟಿರುವ ವಾಗ್ದಾನ ಏನು?

## ಪಾಠ 8 ನೋಟ್ಸ್

1 ನನ್ನ ದೇಹವನ್ನು ತಿನ್ನುವವನು (6:56) "ಯೇಸು ಕ್ರಿಸ್ತನು ತನ್ನ ದೇಹವನ್ನು ನಮಗೆ ರೊಟ್ಟಿಯಂತೆ ತಿನ್ನಲು ಹೇಗೆ ಕೊಡುವನು? ಜೀವಕೊಡುವ ರೊಟ್ಟಿಯನ್ನು ತಿನ್ನುವದೆಂದರೆ ಕ್ರಿಸ್ತನನ್ನು ನಮ್ಮ ಜೀವಿತದಲ್ಲಿ ಅಂಗೀಕರಿಸಿಕೊಳ್ಳುವದು ಮತ್ತು ಆತನೊಂದಿಗೆ ಐಕ್ಯವಾಗುವದು. ನಾವು ಕ್ರಿಸ್ತನೊಂದಿಗೆ ಎರಡು ವಿಧದಲ್ಲಿ ಐಕ್ಯರಾಗುತ್ತೇವೆ: (1) ಆತನ ಮರಣ (ಆತನ ಶರೀರದ ಯಜ್ಞ) ಮತ್ತು ಪುನರುತ್ಥಾನವನ್ನು ನಂಬುವದರಿಂದ ಮತ್ತು (2) ಮಾರ್ಗದರ್ಶನಗಳಿಗಾಗಿ ಆತನ ಬೋಧನೆಗಳ ಮೇಲೆ ಆತುಕೊಂಡು, ಪವಿತ್ರಾತ್ಮನ ಶಕ್ತಿಯಲ್ಲಿ ಭರವಸೆಯನ್ನಿಡುವದರ ಮೂಲಕ ಆತನ ಬಯಕೆಗನುಸಾರವಾಗಿ ಜೀವಿಸಲು ನಮ್ಮ ಜೀವಿತಗಳನ್ನು ಒಪ್ಪಿಸಿಕೊಡುವದರಿಂದ." *NIV Life Application Bible*, ಪುಟ 1888.
ಸಮಾನಾರ್ಥಕವಾಗಿರುವ ಈ ವಿಷಯಗಳಲ್ಲಿ ಸ್ಪಷ್ಟವಾಗಿರುವದೇನೆಂದರೆ: (1) ಪಾಪಗಳಿಗಾಗಿ ಯೇಸು ಕ್ರಿಸ್ತನು ಅನುಭವಿಸುವಂಥ ಸ್ವಬಯಕೆಯ ಮತ್ತು ಅತ್ಯಂತ ಘೋರವಾದ ಮರಣ (ಯೆಶಾಯ 52:13–53:12), ಮತ್ತು ಆತನನ್ನು ಅಂಗೀಕರಿಸಿಕೊಳ್ಳುವ ವ್ಯಕ್ತಿಯ ಆತ್ಮವನ್ನು ತೃಪ್ತಿಗೊಳಿಸುವ ಒಗ್ಗಟ್ಟು ಮತ್ತು ಅನ್ಯೋನ್ಯತೆ.

2 ತಂದೆಯು ನನಗೆ ಕೊಟ್ಟಿರುವ ಎಲ್ಲವೂ (6:37). "ದೇವರ ಕ್ರಿಯೆ (ವಚನ 44; 10:29; 17:6; 18:9 ನೋಡಿರಿ), ಮನುಷ್ಯನದಲ್ಲ (ವಚನ 28), ರಕ್ಷಣೆಯಲ್ಲಿ ಇದುವೇ ಪ್ರಾಥಮಿಕವಾದದ್ದು, ಮತ್ತು ಕ್ರಿಸ್ತನ ಕರುನೆಯು ಸೋಲದಿರುವಂಥದ್ದಾಗಿದೆ (ವಚನ 31–40; 10:28; 17:9,12,15,19; 18:9 ನೋಡಿರಿ). The NIV Study Bible, ಪುಟ 1607.

3 ಕೊನೆಯ ದಿನದಲ್ಲಿ ಆತನನ್ನು ಎಬ್ಬಿಸು (6:39). ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದರಿಂದಲೇ ದೇವರೊಂದಿಗೆ ಶಾಶ್ವತವಾಗಿ ಜೀವಿಸುವಂಥದ್ದು ಪ್ರಾರಂಭವಾಗುತ್ತದೆ.

ಆ ಸಮಯದಲ್ಲಿಯೇ ಹೊಸ ಜೀವಿತವು ಪ್ರಾರಂಭಗೊಳ್ಳುತ್ತದೆ (2 ಕೊರಿಂಥ 5:17). ನಾವಿನ್ನೂ ಶಾರೀರಿಕವಾದ ಮರಣವನ್ನು ಎದುರಿಸುತ್ತಿರುವಾಗಲೇ, ಕ್ರಿಸ್ತನು ಹಿಂದಿರುಗುವಾಗ ಕೊನೆಗೊಳ್ಳದಿರುವ ಜೀವಿತಕ್ಕಾಗಿ ನಾವು ಎಬ್ಬಿಸಲ್ಪಡುತ್ತೇವೆ ಎಂದು ಸತ್ಯವೇದವು ಹೇಳುತ್ತದೆ (1 ಕೊರಿಂಥ 15; 1 ಥೆಸಲೋನಿಕ 4:13–17).

4 ನಿಮ್ಮಲ್ಲಿ ಒಬ್ಬನು ದುರಾತ್ಮನು (6:70). ಸೈತಾನನ ಬಲ ನಿಮಿತ್ತ ಕೊನೆಯಲ್ಲಿ ಯೂದನು ನನ್ನನ್ನು ಅಲ್ಲಗಳೆಯುವನು ಮತ್ತು ನನಗೆ ವಿರುದ್ಧವಾಗಿ ನಿಂತುಕೊಳ್ಳುವನು ಎಂದು ಯೇಸು ಕ್ರಿಸ್ತನಿಗೆ ಮೊದಲಿನಿಂದಲೇ ಗೊತ್ತಿತ್ತು (13:2,18–30).

5 ಸೈತಾನನು, ದುರಾತ್ಮಗಳು. ಯೇಸು ಕ್ರಿಸ್ತನು ಜನರನ್ನು ದುರಾತ್ಮಗಳಿಂದ ಬಿಡುಗಡೆಗೊಳಿಸಿದ ಅನೇಕ ಘಟನೆಗಳನ್ನು ಉಳಿದ ಸುವಾರ್ತೆಗಳಲ್ಲಿ ಕೊಡಲಾಗಿದೆ. ಸೈತಾನ ಮತ್ತು ದೆವ್ವಗಳೆಂದು ಕರೆಯಲ್ಪಡುವ ದುರಾತ್ಮಗಳು ಕೆಲವರಿಗೆ ನಂಬಲಾಗದ ವಿಷಯಗಳಾಗಿವೆಯಾದರೂ, ಅವುಗಳ ಬಗ್ಗೆ ಸತ್ಯವೇದವು ಏನು ಹೇಳುತ್ತದೆ ಎಂಬದನ್ನು ತಿಳಿದುಕೊಳ್ಳುವದು ಬಹಳ ಪ್ರಾಮುಖ್ಯವಾಗಿದೆ. ಸೈತಾನನು ದೇವರಿಗೆ ವಿರುದ್ಧವಾಗಿ ಪ್ರತಿಭಟನೆಯನ್ನು ಮಾಡಿದ ದೂತನೆಂದು ಸತ್ಯವೇದವು ಹೇಳುತ್ತದೆ. ಇದರ ಪರಿಣಾಮವಾಗಿ ದೇವರು ಆತನನ್ನು ಮತ್ತು ಆತನೊಂದಿಗೆ ತಿರುಗಿಬಿದ್ದ ದೂತರನ್ನು ಪರಲೋಕದಿಂದ ಹೊರಕ್ಕೆ ದೊಬ್ಬಿದನು (2 ಪೇತ್ರ 2:4; ಪ್ರಕಟನೆ 12:7–9). ಸೈತಾನನ ನಾಯಕತ್ವದಡಿಯಲ್ಲಿ, ದೆವ್ವಗಳೆಂದು ಕರೆಯಲ್ಪಡುವ ಈ ದೂತರು ಮನುಷ್ಯರ ಮೇಲೆ ನಡೆಸುವ ಕುತಂತ್ರ ಮತ್ತು ಆಕ್ರಮಣಗಳ ವಿಷಯದಲ್ಲಿ ಯೋಜನಾಬದ್ಧವುಗಳಾಗಿವೆ (ಎಫೆಸ 6:12). ಸೈತಾನನು ಮತ್ತು ಆತನ ಸೈನ್ಯವು ಜನರು ಸೈತಾನನನ್ನು ಆರಾಧಿಸುವಂತೆ ಮಾಡಲು ಪ್ರಯತ್ನಿಸುತ್ತಾರೆ (ಲೂಕ 4:7) ಮತ್ತು ವ್ಯಕ್ತಿಗಳು ದೇವರ ಕಡೆಗೆ ತಿರುಗದಂತೆ ಮಾಡುತ್ತಾರೆ (ಲೂಕ 4:8). ಸೈತಾನನ ಸೋಲನ್ನು ಆದಿಕಾಂಡ 3:15ರಲ್ಲಿ ವಾಗ್ದಾನ ಮಾಡಲಾಗಿದೆ ಮತ್ತು ಶಿಲುಬೆಯ ಮೇಲೆ ಯೇಸು ಕ್ರಿಸ್ತನು ಅದನ್ನು ಪೂರೈಸಿದ್ದಾನೆ (ಕೊಲೊಸ್ಸೆ 2:15). ಯೇಸು ಕ್ರಿಸ್ತನು ಲೋಕವನ್ನು ವಿಚಾರಣೆ ಮಾಡುವದಕ್ಕಾಗಿ ಹಿಂದಿರುಗಿ ಬರುವವರೆಗೂ ಆತನಿನ್ನೂ ಸೈನ್ಯವೆಂಬದಾಗಿಯೇ ಪರಿಗಣಿಸಲ್ಪಡುತ್ತಾನೆ (ಮತ್ತಾಯ 16:27). ತಮ್ಮ ಜೀವಿತಗಳಲ್ಲಿ ದೇವರ ನಾಯಕತ್ವಕ್ಕೆ ಒಪ್ಪಿಸಿಕೊಡಲು ಮನಸ್ಸುಳ್ಳವರಾಗಿ ಸೈತಾನನನ್ನು (ಅಥವಾ ಸೈತಾನನ ಸೈನ್ಯವನ್ನು) ಸತತವಾಗಿ ಎದುರಿಸಬೇಕೆಂದು ಯಾಕೋಬ 4:7 ವಿಶ್ವಾಸಿಗಳಿಗೆ ಸೂಚಿಸುತ್ತದೆ.

# ಪಾಠ 9

# ಗುಡಾರದ ಹಬ್ಬದಲ್ಲಿ

## ಯೋಹಾನ 7

ಯೂದಾಯಕ್ಕೆ ಹೋಗುವದಕ್ಕಿಂತಲೂ ಧಾರ್ಮಿಕ ನಾಯಕರು ತನ್ನನ್ನು ಕೊಲ್ಲಲು ಸಮಯ ನೋಡುತ್ತಿದ್ದ ಗಲಿಲಾಯದಲ್ಲಿಯೇ ಯೇಸು ಕ್ರಿಸ್ತನು ಸುವಾರ್ತೆಯನ್ನು ಸಾರಲು ಮತ್ತು ಸೂಚಕಕಾರ್ಯಗಳನ್ನು ಮಾಡಲು ಮುಂದುವರೆಸಿದನು. ಗುಡಾರಗಳ ಹಬ್ಬವು ಸಮೀಪಿಸುತ್ತಿದ್ದ ಶರತ್ಕಾಲದಲ್ಲಿ ಯೆರೂಸಲೇಮಿಗೆ ಹೋಗಿ ನಿನ್ನ ಸೂಚಕಕಾರ್ಯಗಳನ್ನು ಅಲ್ಲಿ ನಡೆಸು ಎಂದು ಯೇಸುವಿನ ಸಹೋದರರು ಆತನನ್ನು ಒತ್ತಾಯಪಡಿಸಿದರು.1 ನಂತರ ಸಮಯದಲ್ಲಿ ಅವರೆಲ್ಲರೂ ಯೇಸುವಿನ ಶಿಷ್ಯರಾದರು (cf. ಅ.ಕೃ 1:14), ಈ ಸಮಯದಲ್ಲಿ ಆತನು ಅರಸನಾಗಿರುವ ಮೆಸ್ಸಿಯನೆಂಬ ಅವರ ನಿರೀಕ್ಷೆಯನ್ನು ಯೇಸು ಕ್ರಿಸ್ತನು ಹುಸಿಗೊಳಿಸಿದನು,2 ಮತ್ತು ಅವರು ಆತನನ್ನು ನಂಬಲಿಲ್ಲ. ನಾನು ಅಲ್ಲಿಗೆ ಹೋಗಿ ನನ್ನ ಶಕ್ತಿಯನ್ನು ಪ್ರದರ್ಶಿಸುವ ದೇವರ ಸಮಯ ಇದಾಗಿಲ್ಲ ಎಂದು ಯೇಸು ಕ್ರಿಸ್ತನು ಅವರಿಗೆ ವಿವರಿಸಿದನು. ಹಾಗೆ ಮಾಡಬೇಕಾದರೆ ಆತನು ತನ್ನ ಮರಣಕ್ಕಾಗಿ ಆತುರಪಡಬೇಕಾಗಿತ್ತು.

ಆದರೆ ತನ್ನ ಕುಟುಂಬದವರು ಹೋದ ಮೇಲೆ, ಯೇಸು ಕ್ರಿಸ್ತನು ಜನರಿಗೆ ಗೊತ್ತಾಗದಂತೆ ಯೆರೂಸಲೇಮಿನಲ್ಲಿ ನಡೆಯುತ್ತಿದ್ದ ಆಚರಣೆಗೆ ಹೋದನು, ಯಾಕೆಂದರೆ ಆತನನ್ನು ನೋಡಬೇಕೆಂಬದು ಎಲ್ಲರ ಬಯಕೆಯಾಗಿತ್ತು. ಗುಡಾರಗಳ ಹಬ್ಬದ ಅರ್ಧದಲ್ಲಿಯೇ, ಆತನು ದೇವಾಲಯದಲ್ಲಿ ಬೋಧಿದಲು ಪ್ರಾರಂಭಿಸಿದನು. ಆತನ ಬೋಧನೆಯನ್ನು ಕೇಳಿ ಯೆಹೂದ್ಯರು ಅತ್ಯಾಶ್ಚರ್ಯಪಟ್ಟರು; ಆದರೂ ಯಾವ ಅಧಿಕಾರದಿಂದ ನೀನು ಇವುಗಳನ್ನು ಕಲಿಸುತ್ತೀಯ ಎಂದು ಅವರು ಆತನನ್ನು ಪ್ರಶ್ನಿಸಿದರು. ಈ ಹಿಂದೆ ಉತ್ತರಿಸಿದಂತೆಯೇ ಯೇಸು ಕ್ರಿಸ್ತನು ಈಗಲೂ ಅವರಿಗೆ ಉತ್ತರಿಸಿದನು. ನನ್ನ ಮಾತುಗಳು ಸತ್ಯವಾಗಿವೆ ಮತ್ತು ನನ್ನನ್ನು ಕಳುಹಿಸಿಕೊಟ್ಟಿರುವ ದೇವರ ಪ್ರಸನ್ನತೆಯ ಸಂದೇಶವೇ ನನ್ನ ಬೋಧನೆಗಳಾಗಿವೆ ಎಂದು ಆತನು ಪ್ರಕಟಪಡಿಸಿದನು.

ಕೆಲವರ ದ್ವೇಷವು ಆತನಿಗೆ ಗೊತ್ತಿತ್ತು ಆದ್ದರಿಂದಲೇ, ಅವರ ಕೊಲೆಪಾತಕದ ಉದ್ದೇಶಗಳನ್ನು ಯೇಸು ಕ್ರಿಸ್ತನು ಗದರಿಸಿದನು. ಯೇಸುವನ್ನು ಕೊಲ್ಲಬೇಕೆಂಬ ಕೆಲವರ ಆಲೋಚನೆಯು ಅಲ್ಲಿದ್ದ ಜನರಿಗೆ ಗೊತ್ತಿರಲಿಲ್ಲ ಮತ್ತು ಆತನ ದೋಷಾರೋಪಣೆಯ ನಿಮಿತ್ತ ಈತನು ದುರಾತ್ಮಪೀಡಿತನು ಎಂದು ಕೆಲವರು ಆರೋಪಿಸಿದರು. ಕ್ರಿಸ್ತನ ವ್ಯಕ್ತಿತ್ವದ ವಿಷಯದಲ್ಲಿ ಜನರು ಗೊಂದಲಕ್ಕೊಳಗಾಗಿದ್ದರು. ಯೇಸು ಕ್ರಿಸ್ತನಲ್ಲಿ ಭರವಸೆಯಿಡುವವರನ್ನು ತಮ್ಮ ಜಾತಿಯಿಂದ ಹೊರಹಾಕುವದಾಗಿ ಧಾರ್ಮಿಕ ನಾಯಕರು ಜನರಲ್ಲಿ ಭಯವನ್ನು ಹುಟ್ಟಿಸಿದ್ದರಿಂದ ಈ ವಿಷಯದ ಕುರಿತಾಗಿ ಬಹಿರಂಗವಾಗಿ ಚರ್ಚಿಸಲು ಅವರು ಹೆದರುತ್ತಿದ್ದರು.

ಯೇಸುವಿನ ಮರಣದ ಸಮಯವು ಇನ್ನೂ ಬಂದಿರಲಿಲ್ಲವಾದ್ದರಿಂದ, ಆತನನ್ನು ಕೊಲ್ಲಬೇಕೆಂದು ಅನೇಕರು ಪ್ರಯತ್ನಪಡುತಿದ್ದರಾದರೂ ಆತನ ಮೇಲೆ ಕೈಯನ್ನು ಹಾಕಲು ಯಾರಿಗೂ ಸಾಧ್ಯವಾಗಲಿಲ್ಲ. ಆಗ ಯೇಸು ಕ್ರಿಸ್ತನು ಅವರಿಗೆ ನಾನು ಹೋಗುವಲ್ಲಿಗೆ ನೀವು ಬರಲಾರಿರಿ ಎಂದು ಕಲಿಸಲು ಪ್ರಾರಂಭಿಸಿದನು. ಯೇಸು ಕ್ರಿಸ್ತನು ಯಾರಾಗಿದ್ದಾನೆ ಎಂಬ ವಿಷಯದಲ್ಲಿ ಈಗಾಗಲೇ ಗೊಂದಲದಲ್ಲಿದ್ದ ಜನರು, ಈಗ ಆತನು ಎಲ್ಲಿಗೆ ಹೋಗುತ್ತಾನೆ ಎಂಬ ವಿಷಯದಲ್ಲಿ ಅವರೊಂದಿಗೆ ಧಾರ್ಮಿಕ ನಾಯಕರು ಸಹ ಗೊಂದಲಕ್ಕೊಳಗಾದರು.

ಹಬ್ಬದ ಕೊನೆಯ ದಿವಸದಂದು, ಯೇಸು ಕ್ರಿಸ್ತನು ನಿಂತುಕೊಂಡು ನನ್ನನ್ನು ಹಿಂಬಾಲಿಸಿರಿ ಎಂಬ ದೊಡ್ಡ ಆಹ್ವಾನವನ್ನು ಜನರಿಗೆ ನೀಡಿದನು. "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ," ಎಂದು ಆತನು ಹೇಳಿದನು. "ನನ್ನಲ್ಲಿ ನಂಬಿಕೆಯಿಡುವವನಲ್ಲಿ" "ಜೀವಕರವಾದ ನೀರಿನ ಹೊಳೆಗಳು ಹರಿಯುವವು" ಎಂದು ಆತನು ವಾಗ್ದಾನ ಮಾಡಿದ್ದಾನೆ (7:37–38).

ಯೇಸುವನ್ನು ಬಂಧಿಸಿರಿ ಎಂದು ಸೂಚಿಸಲಾಗಿದ್ದ ದೇವಾಲಯದ ಅರಕ್ಷಕರು, ಆತನನ್ನು ಬಂಧಿಸಲಿಕ್ಕಾಗದೆ ಪ್ರಧಾನ ಯಾಜಕರ ಬಳಿಗೂ ಮತ್ತು ಫರಿಸಾಯರ ಬಳಿಗೂ ಹಿಂದಿರುಗಿದರು. ಈ ಮನುಷ್ಯನ ಹಾಗೆ ಮಾತನಾಡುವವರನ್ನು ನಾವು ಎಲ್ಲಿಯೂ ನೋಡಿಲ್ಲ ಎಂದು ಅವರು ವಿವರಿಸಿದರು. ಧಾರ್ಮಿಕ ನಾಯಕರು ಕಾವಲುಗಾರರ ಮಾತುಗಳನ್ನು ಕೇಳಿ ಕೋಪಗೊಂಡರು ಮತ್ತು ಯೇಸುವಿಗೆ ಆಕರ್ಷಕರಾಗುತ್ತಿದ್ದ ಜನರ ಗುಂಪುಗಳನ್ನು ಶಪಿಸಿದರು.

ನಂತರ, ಇದಕ್ಕೂ ಮುಂಚೆ ಯೇಸುವಿನೊಂದಿಗೆ ಮಾತನಾಡಿದ್ದ ಫರಿಸಾಯನಾದ ನಿಕೊದೇಮನು (ಯೋಹಾನ 3:1–15), ನಿಮಗೆ ಸರಿ ಅನ್ನಿಸುವ ನಿಯಮಗಳ ಆಧಾರದ ಮೇರೆಗೆ ಯೇಸುವಿನ ಮೇಲೆ ತಪ್ಪುಗಳನ್ನು ಹೊರಿಸಬೇಡಿರಿ ಎಂದು ನಾಯಕರನ್ನು ಗದರಿಸಿದನು. ಆದರೆ ಗರ್ವದಿಂದ ಅಂಧರಾಗಿದ್ದ ನಾಯಕರು ಯೇಸುವನ್ನೇ ಕೊಲ್ಲಲೇಬೇಕೆಂದು ಪೀಡಿಸುತ್ತಿದ್ದರು. ಅವರು ಮಿತಿಮೀರಿದವರಾಗಿ ನಡೆದುಕೊಳ್ಳುತ್ತಿದ್ದರು.

## ಯೋಹಾನ 7:1–13 ಓದಿರಿ.

1.ಎ. ಯೇಸುವಿನ ಸಹೋದರರನ್ನು ಗೊಂದಲಕ್ಕೆ ಗುರಿಪಡಿಸಿದ್ದು ಏನು? ತಮ್ಮ ಅಪನಂಬಿಕೆಯ ಮೂಲಕ ಅವರು ಕೊಟ್ಟ ಸಲಹೆ ಏನು (7:1–5)?

**Reference**: ನೋಟ್ 5, ಮೆಸ್ಸೀಯನ ಕುರಿತಾದ ಸತ್ಯವೇದದ ಪ್ರವಾದನೆಗಳು, ಪುಟ 50–51.

ಬಿ. ಯೇಸು ಕ್ರಿಸ್ತನು ಒತ್ತಡದ ಸಮಯದಲ್ಲಿ ಹೇಗೆ ಪ್ರತಿಕ್ರಿಯಿಸಿದನು (7:6–10)?

2. ಯೇಸು ಕ್ರಿಸ್ತನು ಬರುವದಕ್ಕಿಂತ ಮೊದಲೇ ಯೆರೂಸಲೇಮಿನಲ್ಲಿ ಏನು ನಡೆಯುತಿತ್ತು (7:11–13)?

## ಯೋಹಾನ 7:14–24 ಓದಿರಿ.

3. ಯೆಹೂದ್ಯ ನಾಯಕರನ್ನು ಆಶ್ಚರ್ಯಪಡಿಸಿದ್ದು ಏನು (7:14–15)?

4.ಎ. ತನ್ನ ಕಲಿಕಾ ಬೋಧನೆಯ ವಿಷಯದಲ್ಲಿ ಯೆಹೂದ್ಯರು ಆಶ್ಚರ್ಯಗೊಂಡಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಯೇಸು ಏನನ್ನು ಪ್ರಕಟಿಸಿದನು(7:16)?

ಬಿ. ತನ್ನ ಬೋಧನೆಯ ವಿಷಯದಲ್ಲಿ ಒಬ್ಬನ ವಿವೇಚನೆಯ ಬಗ್ಗೆ ಯೇಸು ಏನು ಹೇಳಿದನು (7:17)?

ಸಿ. ಯೇಸು ಕ್ರಿಸ್ತನು ಯಾವ ತತ್ವದ ಘನತೆಯನ್ನು ಪ್ರಕಟಪಡಿಸಿದನು (7:18)? ಆತನು ಮಾಡಿದ ಅನ್ವಯವಾಗುವಂಥ ಹೋಲಿಕೆ ಯಾವುದು?

5.ಎ. ಯೆಹೂದ್ಯ ನಾಯಕರ ವಿಷಯದಲ್ಲಿ ಯೇಸು ಕ್ರಿಸ್ತನು ಬಹಿರಂಗವಾಗಿ ಏನನ್ನು ಪ್ರಕಟಪಡಿಸಿದನು (7:19)?

ಬಿ. ಯೇಸು ಕ್ರಿಸ್ತನು ಫರಿಸಾಯರಿಗೆ ಏನನ್ನು ಮಾಡುವಂತೆ ಹೇಳಿದನು (7:21–24)?

**ಗಮನಿಸಿರಿ:** 21ನೇ ಯೇಸು ಕ್ರಿಸ್ತನು ಸಬ್ಬತ್ ದಿನದಲ್ಲಿ ಕುಂಟನನ್ನು ಗುಣಪಡಿಸಿದ್ದನ್ನು ಬಹುಶಃ ಸೂಚಿಸುತ್ತಿದ್ದಾನೆ (5:1–9). ಆತನು ಅನೇಕ ಸೂಚಕಕಾರ್ಯಗಳನ್ನು ಮಾಡಿದನು, ಅವುಗಳಲ್ಲಿ ಹೆಚ್ಚಿನವುಗಳನ್ನು ಗಲಿಲಾಯದಲ್ಲಿ ಮಾಡಿದನು. Cf. ನೋಟ್ ಯೇಸುವಿನ ಸೂಚಕಕಾರ್ಯಗಳು, ಪುಟ 75.

## ಯೋಹಾನ 7:25–32 ಓದಿರಿ.

6.ಎ. ಯೆಹೂದ್ಯ ಅಧಿಕಾರಿಗಳ ಹತಾಶೆಯನ್ನು ಹೆಚ್ಚಿಸಿದ್ದು ಏನು (7:25–26,30–31)?

ಬಿ. ಧಾರ್ಮಿಕ ನಾಯಕರು ಏನು ಮಾಡಬೇಕೆಂದು ನಿಶ್ಚಯಿಸಿಕೊಂಡರು (7:32)?

7. ತಾನು ಯಾರೆಂಬ ಗೊಂದಲವು ಜನರಲ್ಲಿ ಹೆಚ್ಚಾದಾಗ ಯೇಸು ಕ್ರಿಸ್ತನು ಏನನ್ನು ಪ್ರಕಟಪಡಿಸಿದನು (7:33–36)?

8. ಹಬ್ಬದ ಕೊನೆಯ ದಿವಸದಂದು ಯೇಸು ಕ್ರಿಸ್ತನು ಬಹಿರಂಗವಾಗಿ ಕೊಟ್ಟ ಆಹ್ವಾನ ಏನು (7:37–39)?

**Reference**: ನೋಟ್ 3, ಪವಿತ್ರಾತ್ಮನ ದೀಕ್ಷಾಸ್ನಾನ, ಪುಟ 18 ಮತ್ತು ನೋಟ್ 2, ಪವಿತ್ರಾತ್ಮನು, ಪುಟ 33.

## ಯೋಹಾನ 7:40–52 ಓದಿರಿ.

9.ಎ. ಯೇಸು ಕ್ರಿಸ್ತನ ಪ್ರಸನ್ನತೆ ಮತ್ತು ಬೋಧನೆಗೆ ಸಾಮಾನ್ಯವಾದ ಪ್ರತಿಕ್ರಿಯೆ ಏನು (7:40–43)?

ಬಿ. ಗೊಂದಲ ಮತ್ತು ದ್ವೇಷದ ನಡುವೆ ನೆಲೆನಿಂತದ್ದು ಯಾವುದು (7:44–46)?

10. ಧಾರ್ಮಿಕ ನಾಯಕರು, ಜನರಿಗೆ, ಕಾವಲುಗಾರರಿಗೆ ಮತ್ತು ತಮ್ಮವನೇ ಆದ ನಿಕೊದೇಮನಿಗೆ ನೀಡಿದ ಪ್ರತಿಕ್ರಿಯೆಯನ್ನು ವಿವರಿಸಿರಿ (7:47–52)?

**ಗಮನಿಸಿರಿ:** ಪ್ರವಾದಿಯು ಗಲಿಲಾಯದಿಂದ ಬರುವದಿಲ್ಲ (7:52). ಮೆಸ್ಸೀಯನು ಬೆತ್ಲೇಹೇಮಿನಲ್ಲಿ (ಮೀಕ 5:2), ದಾವೀದನ ವಂಶದಲ್ಲಿ ಹುಟ್ಟುವನು (ಯೆಶಾಯ 9:7) ಈ ಎರಡೂ ಯೇಸು ಕ್ರಿಸ್ತನ ವಿಷಯದಲ್ಲಿ ನೆರವೇರಿದವು. ಅತಿಜಾಗರೂಕರಾದ ಧಾರ್ಮಿಕ ನಾಯಕರು ಸಾಮಾನ್ಯವಾಗಿ ಈ ವಿಷಯಗಳನ್ನು ಎದುರುನೋಡುತ್ತಿರಲಿಲ್ಲ, ಆದರೆ ಸತ್ಯವನ್ನು ಮುಚ್ಚಲು ಪ್ರಯತ್ನಿಸುತ್ತಿದ್ದರು. ಯೆಶಾಯ 9:1–3,6 ನೋಡಿರಿ.

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಪರಿಪೂರ್ಣವಾದ ಸಮಯವನ್ನು ಅರ್ಥಮಾಡಿಕೊಳ್ಳುವದು

ಯೋಹಾನನ ಸುವಾರ್ತೆಯಾದ್ಯಂತೆ ಮತ್ತು ವಿಶೇಷವಾಗಿ ಯೋಹಾನ 7ನೇ ಅಧ್ಯಾಯದಲ್ಲಿ, ದೇವರ ಸಮಯವನ್ನು ಸೂಚಿಸುವ ಹಲವು ವಚನಭಾಗಗಳಿವೆ. ಯೆರೂಸಲೇಮಿಗೆ ಯಾವಾಗ ಹೋಗಬೇಕು ಮತ್ತು ಅಲ್ಲಿ ಏನು ಮಾಡಬೇಕು ಎಂಬ ವಿಷಯದಲ್ಲಿ ದೇವರ ಸಮಯಕ್ಕೆ ಯೇಸು ಕ್ರಿಸ್ತನು ಹೆಚ್ಚು ಒತ್ತುಕೊಟ್ಟನು. ಮತ್ತೆ ಮತ್ತೆ ಪ್ರಯತ್ನಿಸಿದಾಗಲೂ ಯೇಸುವಿನ ಮೇಲೆ ಕೈ ಹಾಕಲು ಯೆಹೂದ್ಯ ನಾಯಕರಿಗೆ ಸಾಧ್ಯವಾಗಲಿಲ್ಲ, ಯಾಕೆಂದರೆ ಆತನ ಮರಣದ ಸಮಯವು ಇನ್ನೂ ಬಂದಿರಲಿಲ್ಲ. ಆದರೂ, ನನ್ನನ್ನು ನೋಡಲು, ನನ್ನ ಮಾತುಗಳನ್ನು ಕೇಳಲು ಮತ್ತು ನನ್ನನ್ನು ಮುಟ್ಟಲು ಆಗದಿರುವ ಸಮಯವು ಆದಷ್ಟು ಬೇಗ ಬರುತ್ತದೆ ಎಂದು ಯೇಸು ಕಲಿಸುತ್ತಿದ್ದನು. ನಾನು ಬೇಗ ತಂದೆಯ ಬಳಿಗೆ ಹೋಗುತ್ತೇನೆ. ಆದರೆ ಪ್ರತಿಯೊಬ್ಬ ವಿಶ್ವಾಸಿಯಲ್ಲಿ ನೆಲೆಸುವ ಪವಿತ್ರಾತ್ಮನ ಬರುವ ಸಮಯದ ಬಗ್ಗೆ ಆತನು ಮಾತನಾಡಿದನು.3

ಯೇಸು ಕ್ರಿಸ್ತನು ದೇವರ ಪರಿಪೂರ್ಣವಾದ ಸಮಯಕ್ಕೆ ಸತತವಾಗಿ ತನ್ನನ್ನು ಒಪ್ಪಿಸಿಕೊಡುತ್ತಿದ್ದನಾದರೂ, ದೇವರ ಯೋಜನೆಗಳಿಗೆ ತನ್ನನ್ನು ಒಪ್ಪಿಸಿಕೊಡುವದರಲ್ಲಿ ಕಷ್ಟಗಳನ್ನು ಸಹ ಎದುರಿಸಿದನು. ಏನೇ ಆದರೂ ಆತನು ತನಗೆ ಶೋಧನೆಗಳು ಎದುರಾದಾಗ ಬಿದ್ದುಹೋಗಲಿಲ್ಲ ಬದಲಾಗಿ ಪರಿಸ್ಥಿತಿಗಳ ನಿಯಂತ್ರಣದಲ್ಲಿ ಜೀವಿಸಬೇಕೆಂಬ ಬಯಕೆಯೊಡನೆ ನಾವು ಹುಟ್ಟಿದ್ದೇವೆ ಎಂಬದನ್ನು ಆತನು ಅನುಭವಿಸಿದನು. ನಮಗೆ ಬೇಕೆನಿಸುವಾಗ ಏನು ಬೇಕೆಂದುಕೊಳ್ಳುತ್ತೇವೋ ಅದು ನಮಗೆ ಆಗಲೇ ಬೇಕು, ಈ ರೀತಿ ನಮ್ಮ ಜೀವಿತಗಳಲ್ಲಿ ಕಾರ್ಯಗಳು ಆಗದಿರುವಾಗ ನಾವು ಬಹಳ ಹತಾಶೆಗೊಳಗಾಗುತ್ತೇವೆ.

ಯೇಸು ಕ್ರಿಸ್ತನಿಗೆ ಮನುಷ್ಯರ ಕಷ್ಟಗಳು ಗೊತ್ತು ಯಾಕೆಂದರೆ ಆತನು ಇದನ್ನು ಅನುಭವಿಸಿದ್ದಾನೆ, ಆದರೂ ದೇವರ ಯೋಜನೆ ಮತ್ತು ಪರಿಪೂರ್ಣವಾದ ಸಮಯವನ್ನು ಆತನು ಅರ್ಥಮಾಡಿಕೊಂಡವನಾಗಿದ್ದರಿಂದ, ತನ್ನ ಈ ಲೋಕದಲ್ಲಿನ ನಿಯೋಗದ ಕಠಿಣವಾದ ಮಾರ್ಗದಲ್ಲಿಯೂ ಸಮಾಧಾನ ಮತ್ತು ಸಂತೋಷವನ್ನು (ಇಬ್ರಿಯ 12:2) ಕಂಡುಕೊಂಡನು. ತಾನು ಎದುರಿಸಿದ ಮರಣ ಮತ್ತು ಭೀಕರವಾದ ಟೀಕೆಗಳ ನಡುವೆಯೂ ನಿಷ್ಠೆಯುಳ್ಳವನಾಗಿರಬೇಕೆಂಬ ಪ್ರೇರಣೆಯುಳ್ಳವನಾಗಿದ್ದನು. ತನ್ನ ಸೇವೆಯನ್ನು ಅಂಗೀಕರಿಸಿಕೊಂಡ ಜನರಲ್ಲಿ ಆತನು ಸಂತೋಷವನ್ನು ಕಂಡನು (ಯೋಹಾನ 15:11) ಮತ್ತು ತನ್ನ ಶಿಷ್ಯರಿಗಾಗಿ ಆಳವಾದ ಪ್ರೀತಿಯನ್ನು ಅನುಭವಿಸಿದನು (ಯೋಹಾನ 15:9).

ದೇವರ ಸಮಯದಲ್ಲಿ ನಾವು ಭರವಸೆಯನ್ನು ಇಡದಿರುವದಾದರೆ, ಇನ್ನೆಂದು ಬರದಂಥ ಸದ್ಯದ ಪರಿಸ್ಥಿತಿಯ ಒಳ್ಳೆಯ ವಿಷಯಗಳನ್ನು ದುಃಖ ಮತ್ತು ಗೊಂದಲಮಯವಾದ ಪರಿಸ್ಥಿತಿಗಳು ಕದ್ದುಕೊಳ್ಳುತ್ತವೆ. ದೇವರ ಪ್ರಸನ್ನತೆಯಲ್ಲಿರುವ ಸೌಭಾಗ್ಯವನ್ನು ಜನರು ಹೇಗೆ ಹೊಗಳಲಿಲ್ಲವೋ ಹಾಗೆಯೇ ಕಷ್ಟಗಳ ಮೂಲಕವಾಗಿ ದೇವರು ನಮ್ಮಲ್ಲಿ ಉತ್ಪಾದಿಸಲು ಬಯಸುವ ಆಶೀರ್ವಾದ ಮತ್ತು ಪರಿಪೂರ್ಣತೆಯನ್ನು ನಾವು ಕಳೆದುಕೊಳ್ಳುತ್ತೇವೆ. ಆದರೆ ನಮ್ಮ ವೈಯಕ್ತಿಕ ಜೀವಿತಗಳಿಗಾಗಿ

ನಾವು ಆತನ ಯೋಜನೆ ಮತ್ತು ಸಮಯವನ್ನು ಎದುರುಗೊಳ್ಳುವದಾದರೆ, ನಮಗೆ ಸಮಾಧಾನ ಮತ್ತು ನೆರವೇರುವಿಕೆಯನ್ನು ಸತ್ಯವೇದವು ವಾಗ್ದಾನ ಮಾಡಿದೆ.
ದೇವರ ಸಮಯದೊಂದಿಗೆ ಯೇಸು ಕ್ರಿಸ್ತನು ಪರಿಪೂರ್ಣವಾಗಿ ಮತ್ತು ಭಯವಿಲ್ಲದವನಾಗಿ ಮುಂದೆ ಸಾಗಿದನು ನಾವು ಸಹ ಹಾಗೆಯೇ ಮುಂದೆ ಸಾಗಬಹುದು. ನಮ್ಮ ನೆರವೇರುವಿಕೆಯ ಅನ್ವೇಷಣೆಗೆ ದೇವರ ಸಮಯವನ್ನು ಅಪ್ಪಿಕೊಳ್ಳುವದು ಮತ್ತು ತಿಳಿದುಕೊಳ್ಳುವದು ಹೇಗೆ ಪ್ರಾಮುಖ್ಯವಾದದ್ದಾಗಿದೆ ಎಂದು ನೋಡಿಕೊಳ್ಳೋಣ

1. ಕೆಳಗಿನ ವಚನಗಳಲ್ಲಿ ದೇವರ ಸಮಯದ ಬಗ್ಗೆ ಏನನ್ನು ಹೇಳಲಾಗಿದೆ?

ಪ್ರಸಂಗಿ 3:1

ಪ್ರಸಂಗಿ 8:5ಬ್–6

2. ದೇವರ ಸಮಯವನ್ನು ಎದುರುನೋಡುತ್ತಿರುವಾಗ ದೇವರ ಮಾರ್ಗಗಳ ಬಗ್ಗೆ ನಾವು ಏನನ್ನು ಮನವರಿಕೆಮಾಡಿಕೊಳ್ಳಬೇಕು?

ಕೀರ್ತನೆ 18:30,32

ಕೀರ್ತನೆ 25:10

ಯೆಶಾಯ 55:8–9

ಯೆರೆಮೀಯ 29:11

ರೋಮಾ 8:28

ರೋಮಾ 8:32

3. ಯೇಸು ಕ್ರಿಸ್ತನಿಗೆ ತನ್ನ ತಂದೆಯ ಸಮಯ ಹೇಗೆ ಗೊತ್ತಿತ್ತು?

ಲೂಕ 5:16; 6:12

4. ದೇವರ ಪರಿಪೂರ್ಣವಾದ ಸಮಯವನ್ನು ತಿಳಿದುಕೊಳ್ಳಲು ಮತ್ತು ಅದನ್ನು ಆತುಕೊಳ್ಳಲು ನಾವು ಏನನ್ನು ಮಾಡಬೇಕು? ಕೆಳಗಿನ ವಚನಭಾಗಗಳು ಏನನ್ನು ಸೂಚಿಸುತ್ತವೆ?

ಕೀರ್ತನೆ 46:10ಎ

ಕೀರ್ತನೆ 130:5 (ಕೀರ್ತನೆ 27:14)

5. ದೇವರ ಸಮಯವನ್ನು ವಿವೇಚಿಸಲು ಜ್ಞಾನವು ಬೇಕು. ಜ್ಞಾನವು ನಮಗೆ ಎಲ್ಲಿ ಸಿಕ್ಕುತ್ತದೆ?

ಕೊಲೊಸ್ಸೆ 2:2ಸಿ–3

ಜ್ಞಾನೋಕ್ತಿ 2:6 (ಯಾಕೋಬ 1:5)

6. ಯೆಶಾಯ 9:6ರಲ್ಲಿ ಯೇಸು ಕ್ರಿಸ್ತನನ್ನು ಶ್ರೇಷ್ಠನಾದ ಸಲಹೆಗಾರನೆಂದು ಸೂಚಿಸಲಾಗಿದೆ. ದೇವರ ಪರಿಪೂರ್ಣವಾದ ಮಾರ್ಗ ಮತ್ತು ಸಮಯವನ್ನು ವಿವೇಚಿಸಲು ನಾವು ಮುಂದಾಗುವಾಗ ಆತನು ನಮಗೆ ಏನನ್ನು ವಾಗ್ದಾನ ಮಾಡಿದ್ದಾನೆ?

ಕೀರ್ತನೆ 23:1–3

ಯೆಶಾಯ 45:2–3

## ಸಾರಾಂಶ

7.ಎ. ದೇವರ ಸಮಯಕ್ಕೆ ಒಪ್ಪಿಸಿಕೊಡಬೇಕಾಗಿರುವ ಯಾವುದಾದರೂ ಕ್ಷೇತ್ರ ನಿಮ್ಮ ಜೀವಿತದಲ್ಲಿದೆಯೇ?

ಬಿ. ಸತ್ಯವೇದದನುಸಾರವಾಗಿ, ಈ ಕ್ಷೇತ್ರದಲ್ಲಿ ದೇವರ ಯೋಜನೆ ಮತ್ತು ಸಮಯಕ್ಕೆ ಒಪ್ಪಿಸಿಕೊಡುವದರಿಂದ ಸಿಗುವ ಫಲಿತಾಂಶ ಏನು?

8.ಎ. ನಿಮ್ಮ ಪರಿಸ್ಥಿತಿಯಲ್ಲಿ ದೇವರ ಸಮಯವನ್ನು ಅನುಭವಿಸುವಲ್ಲಿ ನಿಮ್ಮ ಪಾತ್ರ ಏನು?

ಬಿ. ಕೀರ್ತನೆ 31:14–15ಎ ರಲ್ಲಿ ವಿವರಿಸಲಾಗಿರುವ ವಾಗ್ದಾನವು ನಮಗೆ ಹೇಗೆ ಸಮಾಧಾನವನ್ನು ಕೊಡುತ್ತದೆ?

## ಪಾಠ 9 ನೋಟ್ಸ್

1 ಯೇಸುವಿನ ಸೂಚಕಕಾರ್ಯಗಳು. ಯೇಸು ಕ್ರಿಸ್ತನು ಅನೇಕ ಅದ್ಭುತಗಳನ್ನು ನಡೆಸಿದನು ಆದರೆ ಅವುಗಳನ್ನು ತನ್ನ ಸುವಾರ್ತೆಯಲ್ಲಿ ದಾಖಲಿಸಲಾಗಿಲ್ಲ ಎಂದು ಯೋಹಾನನು ಬಹಳ ಸ್ಪಷ್ಟವಾಗಿ ವಿವರಿಸಿದ್ದಾನೆ (20:30; 21:25). ಜೀವವನ್ನು ಕೊಡುವದಕ್ಕಾಗಿ ನಾನು ದೇವರಿಂದ ಕಳುಹಿಸಲ್ಪಟ್ಟವನಾಗಿದ್ದೇನೆ ಎಂದು ಯೇಸು ಕ್ರಿಸ್ತನು ಕೊಟ್ಟ ಹೇಳಿಕೆಗಳು ಸತ್ಯ ಮತ್ತು ಆತನ ದೈವೀಕತೆಯನ್ನು ಪ್ರಕಟಪಡಿಸುವದಕ್ಕಾಗಿ ಯೇಸುವಿನ ಎಂಟು ಸೂಚಕಕಾರ್ಯಗಳನ್ನು ಮಾತ್ರವೇ ಆತನು ಆರಿಸಿಕೊಂಡಿದ್ದಾನೆ. ಸುವಾರ್ತೆಗಳಲ್ಲಿ ಯೇಸು ಕ್ರಿಸ್ತನು ಮಾಡಿದ ಸೂಚಕಕಾರ್ಯಗಳ ಪಟ್ಟಿ. (*ಸಬ್ಬತ್ ದಿನದಲ್ಲಿ ಗುಣಪಡಿಸಿದ್ದು.)

ನೀರು ದ್ರಾಕ್ಷಾರಸವಾದದ್ದು, ಯೋಹಾನ 2:9
ಪ್ರಧಾನನ ಮಗನು ಗುಣವಾದದ್ದು, ಯೋಹಾನ 4:46
ಮೀನುಗಳನ್ನು ಹಿಡಿದದ್ದು, ಲೂಕ 5:6
*ದೇವಾಲಯದಲ್ಲಿದ್ದ ದುರಾತ್ಮಪೀಡಿತನು ಬಿಡುಗಡೆ ಹೊಂದಿದ್ದು, ಮಾರ್ಕ 1:26; ಲೂಕ 4:35.
*ಪೇತ್ರನ ಅತ್ತೆ ಗುಣವಾದದ್ದು, ಮತ್ತಾಯ 8:14; ಮಾರ್ಕ 1:31; ಲೂಕ 4:38
ಕುಷ್ಠರೋಗಿಯನ್ನು ಶುದ್ಧಪಡಿಸಿದ್ದು; ಮತ್ತಾಯ 8:3; ಮಾರ್ಕ 1:41; ಲೂಕ 5:13
ಪಾರ್ಶವಾಯು, ಮತ್ತಾಯ 9:2; ಮಾರ್ಕ 2:3; ಲೂಕ 5:18
*ಮೂವತ್ತೆಂಟು ವರ್ಷದಿಂದ ರೋಗಿಯಾಗಿದ್ದವನು ಗುಣವಾದದ್ದು, ಯೋಹಾನ 5:5
*ಕೈಬಸ್ತಿದವನು ಗುಣವಾದದ್ದು, ಮತ್ತಾಯ 12:10; ಮಾರ್ಕ 3:1; ಲೂಕ 6:6
ಶತಾಧಿಪತಿಯ ಆಳು ಗುಣವಾದದ್ದು, ಮತ್ತಾಯ 8:5; ಲೂಕ 7:2
ಸತ್ತುಹೋಗಿದ್ದ ವಿಧವೆಯ ಮಗನನ್ನು ಎಬ್ಬಿಸಿದ್ದು, ಲೂಕ 7:11
ದೆವ್ವಪೀಡಿತರು ಗುಣವಾದದ್ದು, ಮತ್ತಾಯ 12:22; ಲೂಕ 11:14
ಸಮುದ್ರವನ್ನು ಶಾಂತಪಡಿಸಿದ್ದು, ಮತ್ತಾಯ 8:26; ಮಾರ್ಕ 4:39; ಲೂಕ 8:24
ಗದರೇನರ ಸೀಮೆಯಲ್ಲಿ ದೆವ್ವಹಿಡಿಯಲ್ಪಟ್ಟವರು, ಮತ್ತಾಯ 8:28; ಮಾರ್ಕ 5:1; ಲೂಕ 8:26
ಯಾಯೀರನ ಮಗಳನ್ನು ಬದುಕಿಸಿದ್ದು, ಮತ್ತಾಯ 9:18; ಮಾರ್ಕ 5:42; ಲೂಕ 8:41
ರಕ್ತಕುಸುಮ ರೋಗಿಯನ್ನು ಗುಣಪಡಿಸಿದ್ದು, ಮತ್ತಾಯ 9:20; ಮಾರ್ಕ 5:25; ಲೂಕ 8:43
ಕುರುಡನಿಗೆ ಕಣ್ಣು ಕೊಟ್ಟದ್ದು, ಮತ್ತಾಉಅ 9:27 ದೆವ್ವಪೀಡಿತನಿಗೆ ಬಿಡುಗಡೆ, ಮತ್ತಾಯ 9:32
ಐದು ಸಾವಿರ ಜನರಿಗೆ ಊಟ ಕೊಟ್ಟದ್ದು, ಮತ್ತಾಯ 14:15; ಮಾರ್ಕ 6:41; ಲೂಕ 9:12; ಯೋಹಾನ 6:5
ಸಮುದ್ರದ ಮೇಲೆ ನಡೆದದ್ದು, ಮತ್ತಾಯ 14:25; ಮಾರ್ಕ 6:49; ಯೋಹಾನ 6:19
ಕಾನಾನ್ಯಳ ಅಥವಾ ಅನ್ಯಮತಸ್ಥಳ ಮಗಳು, ಮತ್ತಾಯ 15:22; ಮಾರ್ಕ 7:25
ನಾಲ್ಕು ಸಾವಿರ ಜನರಿಗೆ ಊಟ ಕೊಟ್ಟದ್ದು, ಮತ್ತಾಯ 15:32; ಮಾರ್ಕ 8:8
ಕಿವುಡರು ಮತ್ತು ಮೂಕರು ಗುಣವಾದದ್ದು, ಮಾರ್ಕ 7:33
ಕುರುಡ ಮನುಷ್ಯನು, ಮಾರ್ಕ 8:23 ಮಲ್ಕನು ಗುಣವಾದದ್ದು, ಲೂಕ 22:51
ಮೂರ್ಛಾರೋಗದಿಂದ ಬಳಲುತ್ತಿದ್ದ ಮಗು, ಮತ್ತಾಯ 17:14; ಮಾರ್ಕ 9:26; ಲೂಕ 9:37
ಮೀನಿನ ಬಾಯೊಳಗಿಂದ ಹಣವನ್ನು ತೆಗೆದದ್ದು, ಮತ್ತಾಯ 17:24
ಹತ್ತು ಮಂದಿ ಕುಷ್ಠರೋಗಿಗಲು, ಲೂಕ 17:12
*ಕುರುಡ ಮನುಷ್ಯನು, ಯೋಹಾನ 9:1
ಲಾಜರನು ಎಬ್ಬಿಸಲ್ಪಟ್ಟದ್ದು, ಯೋಹಾನ 11
*ದುರಾತ್ಮಪೀಡಿತಳಾದ ಸ್ತ್ರೀಯ ಬಿಡುಗಡೆ, ಲೂಕ 13:11
*ಜಲೋದರವುಳ್ಳ ಮನುಷ್ಯನು, ಲೂಕ 14:2ಅಂಜೂರದ ಮರವನ್ನು ಶಪಿಸಿದ್ದು, ಮತ್ತಾಯ 21:19
ಕುರುಡ ಮನುಷ್ಯನು, ಮತ್ತಾಯ 20:30; ಮಾರ್ಕ 10:46
ಎರಡನೇ ಸಾರಿ ಮೀನನ್ನು ಹಿಡಿದದ್ದು, ಯೋಹಾನ 21:6
ಆತನ ಪುನರುತ್ಥಾನ, ಲೂಕ 24:6; ಯೋಹಾನ 10:18
ಪುನರುತ್ಥಾನದ ಬಳಿಕ ಕಾಣಿಸಿಕೊಂಡದ್ದು, ಮಾರ್ಕ 16:9; ಮತ್ತಾಯ 28:9,17; ಲೂಕ 24:15,36,50
Reference: ನೋಟ್ 5, ಮೆಸ್ಸೀಯನ ಕುರಿತಾದ ಸತ್ಯವೇದದ ಪ್ರವಾದನೆಗಳು, ಪುಟ 50.
Reference: ನೋಟ್ 3, ಪವಿತ್ರಾತ್ಮನ ದೀಕ್ಷಾಸ್ನಾನ, ಪುಟ 18.

# ಪಾಠ 10

# ಕ್ರಿಸ್ತನು ತನ್ನ ಬೋಧನೆಗಳನ್ನು ದೃಢಪಡಿಸಿದನು

## ಯೋಹಾನ 8:1–30

ಹಬ್ಬವು ಮುಗಿದ ನಂತರ, ಜನರೆಲ್ಲರೂ ತಮ್ಮ ಮನೆಗಳಿಗೆ ಹೊರಟುಹೋದರು, ಆದರೆ ಯೇಸು ಕ್ರಿಸ್ತನು ಮಾತ್ರ ಆ ರಾತ್ರಿಯನ್ನು ಎಣ್ಣೇ ಮರಗಳ ಗುಡ್ಡದಲ್ಲಿ ಕಳೆದನು. ತನ್ನ ಮಾತುಗಳನ್ನು ಕೇಳುವದಕ್ಕಾಗಿ ಗುಂಪುಗುಂಪಾಗಿ ಬಂದಿದ್ದ ಜನರಿಗೆ ಬೋಧಿಸುವದಕ್ಕಾಗಿ ಆತನು ಬೆಳಗ್ಗೆ ದೇವಾಲಯಕ್ಕೆ ಬಂದನು. ಯೇಸುವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಬೇಕೆಂಬ ಉದ್ದೇಶದಿಂದ ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಸ್ತ್ರೀಯನ್ನು ಶಾಸ್ತ್ರಿಗಳು ಮತ್ತು ಫರಿಸಾಯರು ಯೇಸುವಿನ ಬಳಿಗೆ ಕರತಂದು, ಇವಳ ವಿಷಯದಲ್ಲಿ ನೀನೇ ತೀರ್ಪುಕೊಡು ಎಂದು ಆತನಿಗೆ ಹೇಳಿದರು. ಇಂಥ ವ್ಯಕ್ತಿಗಳಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ಮೋಶೆಯ ಧರ್ಮಶಾಸ್ತ್ರವು ಹೇಳುತ್ತದೆ (ಯಾಜಕಕಾಂಡ 20:10), ಆದರೆ ರೋಮನ್ ಸರ್ಕಾರವು ಶಿಕ್ಷೆಯನ್ನು ವಿಧಿಸುವದಕ್ಕಿಂತ ಮುಂಚೆ ಹಕ್ಕುಗಳನ್ನು ಪಡೆಯಬೇಕೆಂದು ವಿಧಿಸಿತ್ತು. ಒಂದುವೇಳೆ ಯೇಸು ಕ್ರಿಸ್ತನು ಆಕೆಯನ್ನು ಕ್ಷಮಿಸುವದಾದರೆ, ಜನರಿಗೆ ವ್ಯಭಿಚಾರ ಮಾಡುವಂತೆ ಪ್ರೋತ್ಸಾಹಪಡಿಸುತ್ತಾನೆಂಬ ಆರೋಪವು ಅವನ ಮೇಲೆ ಬರುವದು ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಮೀರಿದಂತಾಗುವದು. ಒಂದುವೇಳೆ ಆತನು ಆಕೆಗೆ ಶಿಕ್ಷೆಯನ್ನು ವಿಧಿಸುವದಾದರೆ, ಹೇಗೂ, ಆತನು ರೋಮನ್ ಅಧಿಕಾರವನ್ನು ಉಲ್ಲಂಘಿಸುವವನಾಗುವನು.

"ನಿಮ್ಮಲ್ಲಿ ಯಾರು ಪಾಪ ಮಾಡಿಲ್ಲವೋ, ಆತನೇ ಆಕೆಯ ಮೇಲೆ ಮೊದಲು ಕಲ್ಲನ್ನು ಎಸೆಯಲಿ" ಎಂದು ಯೇಸು ಕ್ರಿಸ್ತನು ಅವರ ಪ್ರಶ್ನೆಗೆ ಉತ್ತರಿಸಿದನು. ಆತನ ಉತ್ತರವು ಆ ಸ್ತ್ರೀಯ ಪಾಪವನ್ನು ಕ್ಷಮಿಸಲೂ ಇಲ್ಲ ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಉಲ್ಲಂಘಿಸಲೂ ಇಲ್ಲ ಬದಲಾಗಿ ಯೆಹೂದ್ಯ ನಾಯಕರ ದಂಡನೆಯನ್ನು ವಿಧಿಸುವ ಕಠಿಣವಾದ ಕ್ರಮಗಳ ಕಡೆಗೆ ಎಲ್ಲರ ಗಮನವನ್ನು ತಿರುಗುವಂತೆ ಮಾಡಿತು. ಆತನ ಈ ಹೇಳಿಕೆಗೆ ಪ್ರತಿಕ್ರಿಯೆಯಾಗಿ, ದೊಡ್ಡವರಿಂದ ಮೊದಲುಗೊಂಡು ಎಲ್ಲರೂ ಒಬ್ಬೊಬ್ಬರಾಗಿ ಹೊರಟು ಹೋದರು. ಯೇಸು ಕ್ರಿಸ್ತನು ಮಾತ್ರವೇ ಆ ಸ್ತ್ರೀಯ ಹತ್ತಿರದಲ್ಲಿದ್ದನು ಮತ್ತು ಆತನು ಆಕೆಗೆ ಹೇಳಿದ್ದೇನೆಂದರೆ, "ನಾನೂ ನಿನಗೆ ಶಿಕ್ಷೆವಿಧಿಸುವದಿಲ್ಲ, ಹೋಗು ಇನ್ನು ಮೇಲೆ ಪಾಪ ಮಾಡಬೇಡ" (8:11). ಕ್ರಿಸ್ತನನ್ನು ಕಷ್ಟದಲ್ಲಿ ಸಿಕ್ಕಿಸಬೇಕೆಂಬ ಉದ್ದೇಶದಿಂದ ಧಾರ್ಮಿಕ ನಾಯಕರು ಸ್ತ್ರೀಯ ಪರಿಸ್ಥಿತಿಯನ್ನು ಉಪಯೋಗಿಸಿಕೊಳ್ಳಲು ಪ್ರಯತ್ನಿಸಿದರು ಆದರೆ ಸ್ತ್ರೀಯನ್ನು ಬಿಡುಗಡೆಗೊಳಿಸುವದಕ್ಕಾಗಿ ಆತನು ಈ ಸಂಧಿಗ್ಧ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡನು ಮತ್ತು ಆಕೆಯನ್ನು ಹಿಂಸೆಪಡಿಸುತ್ತಿದ್ದವರ ಕಣ್ಣುಗಳನ್ನು ತೆರೆಯಲು ಪ್ರಯತ್ನಿಸಿದನು.

ಆತನು ದೇವಾಲಯದಲ್ಲಿ ಬೋಧಿಸುವದನ್ನು ಮುಂದುವರೆಸುತ್ತಿದ್ದಂತೆಯೇ, ಯೋಹಾನನ ಸುವಾರ್ತೆಯಲ್ಲಿ ದಾಖಲಿಸಲಾಗಿರುವ "ನಾನೇ" ಏಳು ಹೇಳಿಕೆಗಳಲ್ಲಿ ಎರಡನೆಯ ಹೇಳಿಕೆಯನ್ನು ಯೇಸು ಮಾಡಿದನು.1 "ನಾನೇ ಲೋಕಕ್ಕೆ ಬೆಳಕು" ಎಂದು ಆತನು ಹೇಳಿದನು. "ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು" (8:12).

ಯೆಹೂದ್ಯರ ಆಲೋಚನೆಗನುಸಾರವಾಗಿ, “ಬೆಳಕು” ಎಂದರೆ ದೇವರು ಅಥವಾ ಮೆಸ್ಸೀಯ ಎಂದಾಗಿ–ತ್ತು. (Cf. ಕೀರ್ತನೆ 27:1; ಯೋಬ 29:3; ಮೀಕ 7:8; ಯೆಶಾಯ 60:19.) ಯೇಸು ಕ್ರಿಸ್ತನು ತನ್ನ ಕುರಿತಾಗಿ ತಾನೇ ಹೇಳಿಕೊಳ್ಳುತ್ತಿರುವ ಮಾತುಗಳು ಸಾಕಾಗಲಾರವು ಎಂದು ಯೆಹೂದ್ಯ ನಾಯಕರು ಹೇಳುತ್ತಿದ್ದರು. ಆತನ ಹೇಳಿಕೆಗಳನ್ನು ಒಂದಕ್ಕಿಂತ ಹೆಚ್ಚು ಸಾಕ್ಷಿಗಳು ಬೆಂಬಲಿಸಬೇಕಾಗಿತ್ತು. ಹಿಂದಿನ ಸಮಯದಲ್ಲಿ, ದೇವರು ಸೂಚಕಕಾರ್ಯಗಳನ್ನು2 ಮಾಡುವಂತೆ ತನ್ನನ್ನು ಬಲಪಡಿಸಿದ್ದರಿಂದ ಮತ್ತು ಮೆಸ್ಸೀಯನ ಕುರಿತಾದ ಹಳೆಯ ಒಡಂಬಡಿಕೆಯ ಮೆಸ್ಸೀಯನ3 ಪ್ರವಾದನೆಗಳಿಂದ ಯೇಸು ಕ್ರಿಸ್ತನು ತನ್ನ ಹೇಳಿಕೆಗಳನ್ನು ಸಮರ್ಥಿಸಿಕೊಂಡನು. ಆದರೆ ಈ ಸಮಯದಲ್ಲಿ ತನ್ನನ್ನು ಕಳುಹಿಸಿದ ತಂದೆಯಾದ ದೇವರ ಸಾಕ್ಷಿಯನ್ನು ಮಾತ್ರವೇ ಯೇಸು ಕ್ರಿಸ್ತನು ಉಪಯೋಗಿಸಿಕೊಂಡನು. ನಿಮಗೆ ತಂದೆಯು ಗೊತ್ತಿದ್ದರೆ ನೀವು ತಂದೆಯ ಮಾತುಗಳನ್ನು ಕೇಳಿಸಿಕೊಳ್ಳುವಿರಿ ಮತ್ತು ಆತನ ಸಾಕ್ಷಿಯನ್ನು ಸ್ವೀಕರಿಸಿಕೊಳ್ಳುವಿರಿ ಎಂದು ಯೇಸು ಹೇಳಿದನು. ಯಾರೆಲ್ಲಾ ಆತನ ನಂಬಿಕೆಯನ್ನಿಡುವದಿಲ್ಲವೋ ಅವರೆಲ್ಲರೂ ದೇವರ ಮಾರ್ಗಗಳನ್ನು ತಿಳಿಯದವರಾಗಿ ತಮ್ಮ ಪಾಪಗಳಲ್ಲಿ ಸಾಯುವರು ಎಂದೂ ಯೇಸು ಕ್ರಿಸ್ತನು ಹೇಳಿದನು.

ಧಾರ್ಮಿಕ ನಾಯಕರ ವೈರತ್ವವು ಬೆಳೆಯುತ್ತಾ ಹೋಯಿತು. ದ್ವೇಷದ ಮಧ್ಯದಲ್ಲಿಯೂ ಯೇಸು ಕ್ರಿಸ್ತನ ಮಾತುಗಳನ್ನು ಕೇಳಿಸಿಕೊಂಡ ಅನೇಕರು ಆತನಲ್ಲಿ ನಂಬಿಕೆಯನ್ನಿಟ್ಟರು.

## ಯೋಹಾನ 8:1–11 ಓದಿರಿ.

1. ಯೋಹಾನ 7:53–8:2ರವರೆಗೆ ಯೇಸುವಿನಲ್ಲಿ ನೀವು ಏನನ್ನು ವೀಕ್ಷಿಸುತ್ತೀರ?

2. ಫರಿಸಾಯರು ಆ ಸ್ತ್ರೀಯ ಪರಿಸ್ಥಿತಿಯನ್ನು ಹೇಗೆ ಉಪಯೋಗಿಸಿಕೊಂಡರು? ಆಕೆಯ ವಿಷಯದಲ್ಲಿ ಅವರ ಮನೋಭಾವನೆ ಏನಾಗಿತ್ತು (8:3–6)?

3. ಆಕೆಯ ಜೀವಿತದಲ್ಲಿ ಮತ್ತು ಅವರಲ್ಲಿ ಯಾವ ಪಾಪ ಇರುವದನ್ನು ಯೇಸು ಒಪ್ಪಿಕೊಂಡನು (8:7–11)?

4. ಈ ಕಥೆಯಲ್ಲಿ ಯೇಸುವಿನ ಕರುಣೆಯ ಬಗ್ಗೆ ನೀವು ಏನನ್ನು ಗಮನಿಸುತ್ತೀರ? ಆತನ ಕರುಣೆಯು ಆಕೆಯ ಜೀವಿತದಲ್ಲಿ ಯಾವ ಸಾಧ್ಯತೆಯನ್ನು ಬರಮಾಡಿತು?

## ಯೋಹಾನ 8:12–19 ಓದಿರಿ.

5. ತನ್ನಲ್ಲಿ ನಂಬಿಕೆಯನ್ನಿಡುವವನಿಗೆ ಯೇಸು ಕ್ರಿಸ್ತನು ಏನನ್ನು ವಾಗ್ದಾನ ಮಾಡಿದ್ದಾನೆ (8:12)?

**Refrence**: ನೋಟ್ 1, ಯೇಸುವಿನ "ನಾನೇ" ಎಂಬ ಹೇಳಿಕೆಗಳು, ಪುಟ 84.

6. ಧಾರ್ಮಿಕ ನಾಯಕರಿಗೆ ಗೊತ್ತಿಲ್ಲದ ಯಾವ ವಿಷಯವನ್ನು ತಿಳಿಯಪಡಿಸುವದಕ್ಕಾಗಿ ಯೇಸು ತನ್ನ ಕುರಿತಾಗಿ ಈ ಹೇಳಿಕೆಯನ್ನು ನೀಡಿದನ್ (8:14)?

7. ತನ್ನ ಮತ್ತು ಫರಿಸಾಯರ ನಡುವೆಯಿಡುವ ತೀರ್ಪನ್ನು ವಿಧಿಸುವ ಕ್ರಮದ ಬಗ್ಗೆ ಯೇಸು ಕ್ರಿಸ್ತನು ನೀಡಿದ ವ್ಯತ್ಯಾಸವೇನು (8:15–16)?

**ಗಮನಿಸಿರಿ:** "ಫರಿಸಾಯರ ಶಿಕ್ಷೆ ಮೇರೆಯುಳ್ಳದ್ದಾಗಿತ್ತು ಮತ್ತು ಲೌಕಿಕವಾಗಿತ್ತು. ಅವರು ಹೇಳಿದ ಅರ್ಥದಲ್ಲಿ, ನಾನು ಯಾರಿಗೂ ಶಿಕ್ಷೆಯನ್ನೇ ವಿಧಿಸಲು ಎಂಬದನ್ನು ಯೇಸು ಕ್ರಿಸ್ತನು ಸ್ಪಷ್ಟಪಡಿಸಿದನು. ಸರಿಯಾದ ಅರ್ಥದಲ್ಲಿ ನೋಡುವದಾದರೆ, ಖಂಡಿತವಾಗಿಯೂ, ಆತನು ಶಿಕ್ಷೆಯನ್ನು ವಿಧಿಸಿದನು (ವಚನ 26)." *The NIV Study Bible*, ಪುಟ 1612.

8.ಎ. ತನ್ನ ವಿರೋಧಿಗಳ ದ್ವೇಶವು ಹೆಚ್ಚಾಗುವಂತೆ ಯೇಸು ಕ್ರಿಸ್ತನು ನೀಡಿದ ಹೇಳಿಕೆಗಳೇನು (8:19)?

ಬಿ. ಯೋಹಾನ 14:9–10ರಲ್ಲಿ ಯೇಸು ಕ್ರಿಸ್ತನು ಈ ಹೇಳಿಕೆಯನ್ನು ಹೇಗೆ ನೀಡಿದ್ದಾನೆ?

## ಯೋಹಾನ 8:21–30 ಓದಿರಿ.

9.ಎ. ತನ್ನನ್ನು ಎದುರಿಸುವವರಿಗೆ ಯೇಸು ಮಾಡಿರುವ ವಾಗ್ದಾನ ಏನು (8:21,23–24)?

**Refrence**: ನೋಟ್ 4, ತಮ್ಮ ಪಾಪಗಳಲ್ಲಿಯೇ ಸಾಯುವರು, ಪುಟ 84.
ಬಿ. ತನ್ನಲ್ಲಿ ನಂಬಿಕೆಯನ್ನಿಡುವವರಿಗೆ ಯೇಸು ಮಾಡಿರುವ ವಾಗ್ದಾನ ಏನು (ಯೋಹಾನ 11:25–26; 14:2–3)?

10. ತನ್ನನ್ನು ಶಿಲುಬೆಗೆ ಹಾಕುವವರೊಂದಿಗೂ ಸಹ ಯೇಸು ಕ್ರಿಸ್ತನು ವಿನಯದಿಂದ ಶಾಂತವಾಗಿ ಮಾತನಾಡಿದನು. ತನ್ನ ವ್ಯಕ್ತಿತ್ವದ ಕುರಿತು ಯೇಸು ಕ್ರಿಸ್ತನು ಯೆಹೂದ್ಯರಿಗೆ ಏನೆಂದು ಹೇಳಿದನು (8:28)?

**ಗಮನಿಸಿರಿ:** ಮೇಲಕ್ಕೆತ್ತಲ್ಪಡಲಾಗುವದು ಎಂದು ಮಾತನಾಡುವದರ ಮೂಲಕ ಯೇಸು ಕ್ರಿಸ್ತನು ಮುಂದೆ ಬರಲಿಕ್ಕಿದ್ದ ತನ್ನ ಶಿಲುಬೆಯ ಮರಣ ಮತ್ತು ಪುನರುತ್ಥಾನದ ಬಗ್ಗೆ ಸೂಚಿಸಿದನು.
Refrence: ನೋಟ್ 4, ಮನುಷ್ಯಕುಮಾರನು, ಪುಟ 18.

11. ಯೇಸು ಕ್ರಿಸ್ತನು ತನ್ನ ತಂದೆಯನ್ನು ಮೆಚ್ಚಿಸಲು ಜೀವಿಸುವಾಗ ಆತನಿಗೊಂದು ಭರವಸೆಯಿತ್ತು, ನಮಗೂ ಆ ಭರವಸೆ ಸಿಗುತ್ತದೆ. ಆತನಿಗಿದ್ದ ಭರವಸೆ ಏನು (8:29)?

12.ಎ. ಧಾರ್ಮಿಕ ನಾಯಕರ ವೈರತ್ವವಿದ್ದಾಗಲೂ ನಡೆದದ್ದು ಏನು (8:30)?

ಬಿ. ಕಡ್ಡಾಯವಲ್ಲದ ಪ್ರಶ್ನೆ: ಯೇಸುವಿನಲ್ಲಿ ನಂಬಿಕೆ ಇಡುವಂತೆ ಜನರನ್ನು ಪ್ರೇರೇಪಿಸಿದ್ದು ಏನೆಂದು ನಿಮಗೆ ಅನ್ನಿಸುತ್ತದೆ?

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಕರುಣೆಯ ಪ್ರಾಮುಖ್ಯತೆ

ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀಗೆ ಯೇಸು ನೀಡಿದ ಪ್ರತ್ಯುತ್ತರವು, ಕರುಣೆಯ: ನೆರವೇರುವಿಕೆಗೆ ಬೇಕಾದ ಅತ್ಯಂತ ಪ್ರಾಮುಖ್ಯವಾದ ಸ್ವಭಾವಕ್ಕೆ ಉದಾಹರಣೆಯಾಗಿದೆ.

ಶಿಕ್ಷೆಯನ್ನು ವಿಧಿಸುವ ವಿಧಾನಗಳಿಗೆ ಮತ್ತು ದಯೆತೋರಿಸದ ವಿಷಯಗಳಿಗೆ ಸೋತುಹೋಗುವದರ ಬದಲಾಗಿ ಕರುಣೆಯ ಹೃದಯವುಳ್ಳವರಾಗಿ ನಡೆದುಕೊಳ್ಳಬೇಕಾದರೆ ಸ್ವಾರ್ಥವು ಇರಬಾರದು. ಅಂತಿಮವಾಗಿ ಹೇಗೇಆದರೂ, ಈ ಆಯ್ಕೆಯಿಂದ ಅಪಾರವಾದ ಆಶೀರ್ವಾದಕ್ಕೆ ಮುನ್ನಡೆಸುತ್ತದೆ. ತನಗೋಸ್ಕರವಾಗಿಯೇ ಜೀವಿಸುತ್ತಾ ಕರುಣೆಯ ಹೃದಯವನ್ನು ಬೆಳೆಸಿಕೊಳ್ಳದ ವ್ಯಕ್ತಿಯು ಅಂತಿಮವಾಗಿ ತನ್ನ ಜೀವಿತವು ಬರಿದಾಗಿಯೂ, ನೆರವೇರಲ್ಪಡದಾಗಿಯೂ ಮತ್ತು ಉದ್ದೇಶವಿಲ್ಲದ್ದಾಗಿಯೂ ಇದೆ ಎಂದು ತಿಳಿದುಕೊಳ್ಳುವನು.

ಅಸಹಾಯಕರಿಗೆ ಕರುಣೆ ತೋರಿಸುವ ಗುಣವು ಸಾಮಾನ್ಯವಾಗಿ ನಮ್ಮೆಲ್ಲರಲ್ಲಿಯೂ ಕಾಣಿಸಿಕೊಳ್ಳುತ್ತದೆ, ಆದರೆ ತಪ್ಪು ಮಾಡುವವರಿಗೆ ಕರುಣೆಯನ್ನು ತೋರಿಸುವದು ಬಹಳ ಕಷ್ಟ ಮತ್ತು ಯಾರೆಲ್ಲಾ ತಮ್ಮನ್ನು ನಮ್ಮ ವೈರಿಗಳೆಂದು ಹೇಳಿಕೊಳ್ಳುತ್ತಾರೋ ಅವರಿಗೆ ದಯೆಯನ್ನು ತೋರಿಸುವದು ಅಸಾಧ್ಯ. ಯೇಸು ಕ್ರಿಸ್ತನು ವಿವಿಧ ತರಹವಾದ ಜನರೊಂದಿಗೆ ವಿವಿಧ ತರಹವಾಗಿ ಪ್ರತಿಕ್ರಿಯಿಸಿದನು. ಆದರೆ ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀಯೊಂದಿಗೆ ಕರುಣೆಯಿಂದ ನಡೆದುಕೊಂಡನು, ಆದರೆ ಕಪಟಿಗಳಾದ ಧಾರ್ಮಿಕ ನಾಯಕರೊಂದಿಗೆ ಸ್ಥಿರನಾಗಿ ನಡೆದುಕೊಂಡನು ಅವರು ಅವರ ಆಲೋಚನೆಗಳಿಗೆ ಬಾಗಲಿಲ್ಲ. ಆ ಸ್ತ್ರೀಯ ವಿಷಯದಲ್ಲಾದರೋ, ಕರುಣೆ ಮತ್ತು ಅಂಗೀಕಾರ ಆಕೆಯ ಜೀವಿತವನ್ನೇ ಬದಲಾಯಿಸುವವು ಎಂದು ಆತನಿಗೆ ಗೊತ್ತಿತ್ತು. ಆದರೆ ಫರಿಸಾಯರ ವಿಷಯವು ಬರುವಾಗ, ಅವರ ನಿರಾಕರಣೆ ವಿರೋಧವನ್ನು ಹೋಗಲಾಡಿಸಬೇಕಾದರೆ ಇರುವ ಒಂದೇ ಮಾರ್ಗವೆಂದರೆ ಅವರ ಕಪಟತನವನ್ನು ಪ್ರದರ್ಶಿಸುವದು ಮತ್ತು ತನ್ನ ವಿಷಯವಾದ ಸತ್ಯವನ್ನು ಮತ್ತೆಮತ್ತೆ ಹೇಳುವದು, ಎಂದು ಯೇಸು ಕ್ರಿಸ್ತನಿಗೆ ಚೆನ್ನಾಗಿ ಗೊತ್ತಿತ್ತು. ಸಾಮಾನ್ಯವಾಗಿ ರಕ್ಷಿಸಿಕೊಳ್ಳುವ ಕೊಡಲಾಗುವ ಪ್ರತಿಕ್ರಿಯೆಗಳಾದ ಪ್ರತೀಕಾರ ಮತ್ತು ಸತ್ಯದೊಂದಿಗೆ ಸಂಧಾನವನ್ನು ಮಾಡಿಕೊಳ್ಳುವ ಆಯ್ಕೆಯನ್ನು ಯೇಸು ಕ್ರಿಸ್ತನು ನಿರಾಕರಿಸಿದನು, ಆದರೆ ಅವರಿಗೆ ಪಶ್ಚತ್ತಾಪವು ದೊರೆಯುವಂತೆ ಸಹಾಯ ಮಾಡುವ ಮಾರ್ಗದಲ್ಲಿಯೇ ಮುಂದುವರೆದನು.

ನಾವು ಕರುಣೆಯುಳ್ಳ ಜೀವಿತವನ್ನು ನಡೆಸಬೇಕೆಂದರೆ, ಸತತವಾಗಿ ಇತರರ ಒಳಿತನ್ನು ಮಾತ್ರವೇ ಬಯಸುವವರಾಗಿರಬೇಕು. ನಮ್ಮ ಮನಸ್ಸಿನೊಳಗೆ ಈ ಗುರಿ ಇರುವದಾದರೆ, ನಮಗೆದುರಾಗುವ ಪ್ರತಿಯೊಂದು ಸನ್ನಿವೇಶದಲ್ಲಿಯೂ ನಾವು ನಮ್ಮ ಸಾಮರ್ಥ್ಯಕ್ಕನುಸಾರವಾಗಿ ಉತ್ತಮರಾಗಿ ಕಾಣಿಸಿಕೊಳ್ಳುತ್ತೇವೆ. ಜ್ಞಾನ ಅಥವಾ ಕೌಶಲ್ಯವುಳ್ಳವರಾಗಿ ಜೀವಿಸುವದೆಂದರೆ, ಎದುರಾಗುವ ಪರಿಸ್ಥಿತಿ ಮತ್ತು ವ್ಯಕ್ತಿಯೊಂದಿಗೆ ಯಾವ ವಿಧವಾದ ಕರುಣೆಯೊಂದಿಗೆ ನಡೆದುಕೊಳ್ಳುತ್ತೇವೆ ಎಂಬದೇ ಆಗಿದೆ.

ನಮ್ಮ ನೆರವೇರುವಿಕೆಯ ಅನ್ವೇಷಣೆಗೆ ದೇವರು ನಮಗೆ ಜ್ಞಾನ ಮತ್ತು ಕರುಣೆಯನ್ನು ಕೊಡಬೇಕೆಂದು

ಬಯಸುವವನಾಗಿದ್ದಾನೆ. ಈ ಪಾಠದಲ್ಲಿ, ನಾವು ಕರುಣೆಯುಳ್ಳ ಜೀವಿತಕ್ಕೆ ಸಂಬಂಧಪಟ್ಟ ಸತ್ಯವೇದದನುಸಾರವಾಗಿ ಮಾರ್ಗದರ್ಶನಗಳನ್ನು ನೋಡಿಕೊಳ್ಳೋಣ.

1.ಎ. ಆ ಸ್ತ್ರೀಯ ವಿಷಯದಲ್ಲಿ ಧಾರ್ಮಿಕ ನಾಯಕರು ಎಂಥಾ ಮನೋಭಾವನೆಯನ್ನು ವ್ಯಕ್ತಪಡಿಸಿದರು? ತಪ್ಪು ಮಾಡುವವರಿಗೆ ವಿರುದ್ಧವಾಗಿ ಇವುಗಳು ಹೇಗೆ ಸಾಂಕೇತಿಕವಾದ ಪ್ರತಿಕ್ರಿಯೆಗಳಾಗಿವೆ?

2. ಯೇಸು ಆಕೆಯೊಂದಿಗೆ ಹೇಗೆ ಪ್ರತಿಕ್ರಿಯಿಸಿದನು? ಆತನು ಆಕೆಗಾಗಿ ಏನನ್ನು ಬಯಸಿದನು?

2.ಎ. ಫರಿಸಾಯರು ತಮ್ಮ ಪಾಪಗಳ ವಿಷಯದಲ್ಲಿ ಗರ್ವವುಳ್ಳವರು ಮತ್ತು ಅಂಧರಾಗಿದ್ದರಿಂದ ಆ ಸ್ತ್ರೀಯನ್ನು ತಮಗಿಂತಲೂ ಕನಿಷ್ಠವಾದವಳು ಮತ್ತು ಅಯೋಗ್ಯಳು ಎಂದು ಭಾವಿಸಿದರು. ಇಲ್ಲಿ ನಮಗೆ ಕೊಡಲಾಗಿರುವ ಎಚ್ಚರಿಕೆ ಏನು?

ಬಿ. ಜನರ ವಿಷಯದಲ್ಲಿ ಕರುಣೆಯುಳ್ಳವರಾಗಿ ನಡೆದುಕೊಳ್ಳುವಂತೆ ನಮ್ಮನ್ನು ಬಲಗೊಳಿಸುವದು ಏನು?

ಫಿಲಿಪ್ಪಿ 2:5–8

3. ನಮ್ಮಲ್ಲಿ ಇಂಥ ನಿಸ್ವಾರ್ಥತೆಯನ್ನು ಉತ್ಪಾದಿಸಲು ದೇವರು ಹೇಗೆ ವಾಗ್ದಾನವನ್ನು ಮಾಡಿದ್ದಾನೆ?

ರೋಮಾ 5:5

**Refrence**: ನೋಟ್ 2, ಪವಿತ್ರಾತ್ಮನು, ಪುಟ 33.

4.ಎ. ದೀನತೆಯುಳ್ಳ, ಬಯಕೆಯುಳ್ಳ ಹೃದಯದಲ್ಲಿ ಪವಿತ್ರಾತ್ಮನು ಪ್ರೀತಿಯನ್ನು ಉತ್ಪಾದಿಸುವ ವಿಧಾನವನ್ನು ಪೌಲನು ಹೇಗೆ ವಿವರಿಸಿದ್ದಾನೆ?

1 ಕೊರಿಂಥ 13:4–8ಎ

ಬಿ. 1 ಕೊರಿಂಥ 13:1–3ರಲ್ಲಿ ಪೌಲನು ಯಾವುದರ ಬಗ್ಗೆ ಎಚ್ಚರಿಕೆಯನ್ನು ಕೊಟ್ಟಿದ್ದಾನೆ?

5.ಎ. ಸ್ತ್ರೀಯೊಂದಿಗೆ ಪ್ರತಿಕ್ರಿಯಿಸಿದ ಹಾಗಲ್ಲದೇ ಯೇಸು ಕ್ರಿಸ್ತನು ಫರಿಸಾಯರೊಂದಿಗೆ ವ್ಯತ್ಯಸ್ಥವಾಗಿ ಹೇಗೆ ಪ್ರತಿಕ್ರಿಯಿಸಿದನು?

ಬಿ. ಚಿಂತಿಸುವ ಪ್ರತಿಕ್ರಿಯೆಗಳು ವಿಭಿನ್ನವಾದ ಸನ್ನಿವೇಶಗಳಲ್ಲಿ ಯಾಕೆ ವಿಭಿನ್ನವಾಗಿರಬೇಕು?

ಸಿ. ಬುದ್ಧಿವಂತರಾಗಿ ಪ್ರತಿಕ್ರಿಯಿಸಲು ನಾವು ಮುಂದಾಗುವಾಗ ದೇವರು ನಮಗೆ ಏನನ್ನು ಕೊಡಲು ಬಯಸುತ್ತಾನೆ?

ಯಾಕೋಬ 1:5

ಜ್ಞಾನೋಕ್ತಿ 15:4ಎ,23

ಜ್ಞಾನೋಕ್ತಿ 16:21

6. ಆತನು ಅವರ ವಿಷಯದಲ್ಲಿ ದೃಢವಾಗಿ ನಡೆದುಕೊಳ್ಳುತ್ತಿದ್ದನು, ಆದರೂ ತಾನು ಶಿಲುಬೆಯ ಮೇಲೆ ತೂಗಾಡುತ್ತಿರುವಾಗಲೂ ಯೇಸು ಕ್ರಿಸ್ತನು ತನ್ನ ವೈರಿಗಳ ಎದುರಿನಲ್ಲಿ ಎಂಥಾ ಮನೋಭಾವನೆಯನ್ನು ವ್ಯಕ್ತಪಡಿಸಿದನು?

ಲೂಕ 23:33–34

2 ಪೇತ್ರ 3:9

7. ಕರುಣೆಯನ್ನು ವಿಸ್ತರಿಸುವಾಗ, ಯೇಸು ಕ್ರಿಸ್ತನು ಸತ್ಯದೊಂದಿಗೆ ಎಂದಿಗೂ ಸಂಧಾನ ಮಾಡಿಕೊಳ್ಳಲಿಲ್ಲ. ಜನರಿಗೆ ನಿಜವಾಗಿಯೂ ಸಹಾಯವನ್ನು ಮಾಡಲು ನಾವು ಯಾವಾಗಲೂ ಏನನ್ನು ಮಾಡುವವರಾಗಿರಬೇಕು?

ಎಫೆಸ 4:15

ಯೋಬ 23:11

8. ಜನರೊಂದಿಗೆ ಕರುಣೆಯ ಹೃದಯವುಳ್ಳವರಾಗಿ ನಡೆದುಕೊಳ್ಳುವಾಗ ಕೆಲವೊಮ್ಮೆ ತ್ಯಾಗಗಳನ್ನು ಮಾಡಬೇಕು ಮತ್ತು ಕೆಲವೊಮ್ಮೆ ಮಾನಸಿಕವಾಗಿ ಹಾಗೂ ಶಾರೀರಿಕವಾಗಿ ಕಷ್ಟಗಳನ್ನೂ ಅನುಭವಿಸಬೇಕು. ಇತರರ ಅಗತ್ಯತೆಗಳ ಪೂರೈಕೆಗಾಗಿ ತ್ಯಾಗಪೂರ್ಣವಾಗಿ ತನ್ನನ್ನೇ ಒಪ್ಪಿಸಿಕೊಡುವವನ ಕುರಿತಾಗಿ ಸತ್ಯವೇದವು ಏನನ್ನು ಹೇಳುತ್ತದೆ?

ಜ್ಞಾನೋಕ್ತಿ 11:25

ಜ್ಞಾನೋಕ್ತಿ 28:27

ಲೂಕ 6:38

9. ದೇವರು ತನ್ನ ಮಗನಂತೆ, ತನ್ನ ಜನರಲ್ಲಿ ಏನನ್ನು ನೋಡಲು ಬಯಸುತ್ತಾನೆ?

ಕೊಲೊಸ್ಸೆ 3:12–14

## ಸಾರಾಂಶ

10. ಯಾವುದಾದರೂ ವ್ಯಕ್ತಿ ಅಥವಾ ಗುಂಪಿಗೆ ಕರುಣೆ ತೋರಿಸಲು ಸಾಧ್ಯವಾಗದೆ ನೀವು ಕಷ್ಟಪಡುತ್ತಿದ್ದೀರ? ಯೇಸು ಕ್ರಿಸ್ತನ ಉದಾಹರಣೆಯಲ್ಲಿ ಮತ್ತು ಈ ಪಾಠದಲ್ಲಿ ನಾವು ಕಲಿತಿರುವ ಉದಾಹರಣೆಗಳ ಮೂಲಕ ನಿಮಗೆ ಸಹಾಯಕವಾದವುಗಳೆಂದು ಏನೆಂದು ನಿಮಗೆ ಅನ್ನಿಸಿವೆ?

11.ಎ. ನಿಮ್ಮ ವೈಯಕ್ತಿಕವಾದ ನೆರವೇರುವಿಕೆಯ ಅನ್ವೇಷಣೆಯಲ್ಲಿ ಜನರೊಂದಿಗೆ ಕರುಣೆಯುಳ್ಳವರಾಗಿ ನಡೆದುಕೊಳ್ಳುವದು ಯಾಕೆ ಪ್ರಾಮುಖ್ಯವಾಗಿದೆ?

ಬಿ. ಕರುಣೆಯ ಹೃದಯವುಳ್ಳವರಾಗಿ ನಡೆದುಕೊಳ್ಳದಂತೆ ನಿಮಗೆ ಅಡ್ಡಿಪಡಿಸುವದು ಏನು?

12. ನಿಮ್ಮ ಜೀವಿತದ ಈ ಕ್ಷೇತ್ರಕ್ಕಾಗಿ ನೀವು ಏನೆಂದು ಪ್ರಾರ್ಥಿಸುತ್ತೀರ?

## ಪಾಠ 10 ನೋಟ್ಸ್

1 ಯೇಸುವಿನ "ನಾನೇ" ಎಂಬ ಹೇಳಿಕೆಗಳು. ಯೋಹಾನನ ಸುವಾರ್ತೆಯಲ್ಲಿ "ನಾನೇ" ಎಂಬ ಏಳು ಹೇಳಿಕೆಗಳು ಬರೆಯಲ್ಪಟ್ಟಿವೆ:

| | |
|---|---|
| 6:35 | ಜೀವಕೊಡುವ ರೊಟ್ಟಿ |
| 8:12;9:5 | ಲೋಕಕ್ಕೆ ಬೆಳಕು |
| 10:7,9 | ದೇವರ ಬಳಿಗೆ ಹೋಗಲು ಬಾಗಿಲು |
| 10:11,14 | ಒಳ್ಳೇ ಕುರುಬನು |
| 11:25 | ಪುನರುತ್ಥಾನವೂ ಜೀವವೂ |
| 14:6 | ಮಾರ್ಗವೂ, ಸತ್ಯವೂ ಮತ್ತು ಜೀವವೂ |
| 15:1,5 | ದ್ರಾಕ್ಷೇಬಳ್ಳಿ |

**Refrence**: ನೋಟ್ 1, ಯೇಸುವಿನ ಸೂಚಕಕಾರ್ಯಗಳು, ಪುಟ 75.
**Refrence**: ನೋಟ್ 5, ಮೆಸ್ಸೀಯನ ಕುರಿತಾದ ಸತ್ಯವೇದದ ಪ್ರವಾದನೆಗಳು ಯೇಸು ಕ್ರಿಸ್ತನಲ್ಲಿ ನೆರವೇರಿದವು, ಪುಟ 50.

4 ನಿಮ್ಮ ಪಾಪಗಳಲ್ಲಿಯೇ ಸಾಯಿರಿ (8:24; 8:21). "'ಪಾಪ' ಎಂದು ಸೂಚಿಸಲಾಗಿರುವ ಏಕವಚನ [8:21ರಲ್ಲಿ ಮತ್ತು 8:24ರಲ್ಲಿ ಅದನ್ನು ಬಹುವಚನವನ್ನಾಗಿ ಮಾಡಲಾಗಿದೆ] ರಕ್ಷಣೆ ಕೊಡುವವನು ನಿರಾಕರಿಸುವದಾಗಿದೆ (cf. 16:9). ಅವರು 'ಸಾಯುತ್ತಾರೆ' ಯಾಕೆಂದರೆ ಪಾಪದ ಸಾಮ್ರಾಜ್ಯದ ಅಧಿಕಾರದ ಅಡಿಯಲ್ಲಿಯೇ ಜೀವಿಸುವವರಾಗಿದ್ದಾರೆ. ದೇವರಿಂದ ಶಾಶ್ವತವಾಗಿ ದೂರವಾಗುವದಕ್ಕೆ ಅವರ ಶಾರೀರಿಕ ಮರಣವೇ ಮುನ್ನುಡಿಯಾಗಿರುತ್ತದೆ. ದೇವರ ಪ್ರಕಟನೆಯಾಗಿರುವ ಯೇಸು ಕ್ರಿಸ್ತನನ್ನು ಅವರು ನಿರಾಕರಿಸುವದಾದರೆ, ತಮ್ಮ ರಕ್ಷಣೆಯ ನಿರೀಕ್ಷೆಯನ್ನೇ ಅವರು ಕಳೆದುಕೊಳ್ಳುತ್ತಾರೆ." Walvoord and Zuck, *The Bible Knowledge Commentary*, New Testament, ಪುಟ 304.

# ಪಾಠ 11

# ಹೆಚ್ಚು ಸಾರ್ವಜನಿಕ ಚರ್ಚೆ

## ಯೋಹಾನ 8:31–59

ಇನ್ನೂ ದೇವಾಲಯದಲ್ಲಿ ಬೋಧಿಸುತ್ತಾ, ನನ್ನಲ್ಲಿ ನಂಬಿಕೆಯನ್ನಿಟ್ಟಿರುವವರು ನನ್ನ ಬೋಧನೆಯನ್ನು ಬಿಡದೆ ಹಿಡಿದುಕೊಳ್ಳಿರಿ ಎಂದು ಯೇಸು ಕ್ರಿಸ್ತನು ಅವರಿಗೆ ಸಲಹೆಯನ್ನು ನೀಡಿದನು. "ಆಗ ನಿಮಗೆ ಸತ್ಯವು ಗೊತ್ತಾಗುವದು." ಆತನು ವಾಗ್ದಾನ ಮಾಡಿದ್ದೇನೆಂದರೆ, "ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು" (8:32).

ಈ ಹೇಳಿಕೆಯ ನಿಮಿತ್ತವಾಗಿ, ಯೆಹೂದ್ಯರಲ್ಲಿ ಗರ್ವವು ಬಹಳವಾಗಿ ಹೆಚ್ಚಿಕೊಂಡಿತು.1 ಖಂಡಿತವಾಗಿಯೂ, ರೋಮ್ ಆಡಳಿತದಲ್ಲಿ ದಾಸರಾಗಿರುವಾಗಲೂ ಅದನ್ನು ಗಣನೆಗೆ ತೆಗೆದುಕೊಳ್ಳದೆ, ನಾವು ಅಬ್ರಹಾಮನ ಸಂತತಿಯವರಾಗಿದ್ದೇವೆ ಮತ್ತು ಯಾವುದೇ ಮನುಷ್ಯರಿಗೆ ದಾಸರಲ್ಲ ಎಂದು ಪ್ರಕಟಿಸಿದರು. ಆದರೆ ಮನುಷ್ಯರ ಮೇಲೆ ಅಧಿಕಾರವನ್ನು ನಡೆಸುವ ಮತ್ತು ಅವರನ್ನು ನಿಯಂತ್ರಿಸುವ ಪಾಪದ ದಾಸತ್ವದ ಬಗ್ಗೆ ತಾನು ಮಾತನಾಡುತ್ತಿರುವದಾಗಿ ಯೇಸು ಕ್ರಿಸ್ತನು ವಿವರಿಸಿದನು. ಕುಮಾರನಾಗಿ, ಪಾಪದಿಂದ ಜನರನ್ನು ಬಿಡಿಸುವ ಅಧಿಕಾರವು ತನಗಿದೆ ಮತ್ತು ದೈವೀಕವಾದ ಸತ್ಯದ ಬಗ್ಗೆ ಹೆಚ್ಚಿನ ಜ್ಞಾನವನ್ನು ಕೊಡುವ ಅಧಿಕಾರವು ತನಗಿದೆ ಎಂದು ಆತನು ಹೇಳಿದನು. "ಆಗ ನಿಮಗೆ ಸತ್ಯವು ಗೊತ್ತಾಗುವದು," ಎಂದು ಆತನು ಹೇಳಿದನು, ಮತ್ತು "ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು" (8:32).

ಯೆಹೂದ್ಯರ ಹೇಳಿಕೆಯ ಪ್ರಕಾರ, ಅವರು ಅಬ್ರಹಾಮನಿಗೆ ಸಂಬಂಧಪಟ್ಟವರೆಂಬದನ್ನು ಯೇಸು ಕ್ರಿಸ್ತನು ಒಪ್ಪಿಕೊಂಡನು, ಆದರೆ ಅಬ್ರಹಾಮನಿಗೆ ಆತ್ಮೀಕವಾಗಿ ಸಂಬಂಧಿಯಾಗಿರುವವನು, ನಿರ್ದೋಷಿಯಾಗಿರುವ ನನ್ನನ್ನು ಕೊಲ್ಲಲು ಪ್ರಯತ್ನಪಡುವದಿಲ್ಲ ಎಂಬದನ್ನು ಸಹ ಅವರಿಗೆ ಖಂಡಿತವಾಗಿ ಹೇಳಿದನು. ಇದು ಮಾತ್ರವಲ್ಲದೆ ಆತನು ಹೇಳಿದ್ದೇನೆಂದರೆ, ದೇವರು ಅಬ್ರಹಾಮನಿಗೆ ವಿಧೇಯನಾದ ಹಾಗೆ, ತಂದೆಯಾದ ದೇವರೇ ಯೇಸು ಕ್ರಿಸ್ತನನ್ನು ಕಳುಹಿಸಿದ್ದಾನೆ ಎಂಬದನ್ನು ಸಹ ನಂಬುವನು.

ಇದರಿಂದ ಇನ್ನೂ ಕುಪಿತರಾದ ಯೆಹೂದ್ಯರು ಯೇಸುವಿನ ಕನ್ಯಾ ಜನನದ ಕುರಿತಾಗಿ ಪ್ರಶ್ನಿಸಿ ಕೇಳಿದ್ದೇನೆಂದರೆ: "ನಾವು ಹಾದರದಿಂದ ಹುಟ್ಟಿದ ಮಕ್ಕಳಲ್ಲ. ತಂದೆಯಾದ ದೇವರೊಬ್ಬನೇ ನಮ್ಮ ತಂದೆ" (8:41).
"ಒಂದುವೇಳೆ ದೇವರೇ ನಿಮ್ಮ ತಂದೆಯಾಗಿದ್ದರೆ," ಯೇಸು ಅವರಿಗೆ ಉತ್ತರಿಸಿದ್ದೇನೆಂದರೆ, "ನೀವು ನನ್ನನ್ನು ಪ್ರೀತಿಸುತ್ತಿದ್ದಿರಿ, ಯಾಕೆಂದರೆ ನಾನು ದೇವರಿಂದಲೇ ಬಂದವನು..ನನ್ನನ್ನು ಕಳುಹಿಸಿದವನು ಆತನೇ" (8:42). ಯಾವುದೇ ಅಪರಾಧವನ್ನು ಮಾಡದಿರುವ ನನ್ನನ್ನು ಕೊಲ್ಲಲು ನೀವು ಬಯಸುತ್ತಿದ್ದೀರ, ಆದ್ದರಿಂದ ನೀವು ದೇವರಾತ್ಮನಿಗನುಸಾರವಾಗಿ ನಡೆದುಕೊಳ್ಳುವವರಲ್ಲ ಬದಲಾಗಿ,

ಸುಳ್ಳು ಮತ್ತು ಕೊಲೆಗೆ ಮೂಲಪುರುಷನಾಗಿರುವ ಸೈತಾನನ2 ಪೇರಣೆಯುಳ್ಳವರಾಗಿದ್ದೀರ ಎಂದು ಹೇಳಿದನು.  ಯೇಸು ಕ್ರಿಸ್ತನ ಅಧಿಕಾರ ಮತ್ತು ಆತನ ಮಾತುಗಳನ್ನು ಅಲ್ಲಗಳೆಯುವದಕ್ಕಾಗಿ, ಯೆಹೂದ್ಯ ನಾಯಕರು ಯೇಸು ಕ್ರಿಸ್ತನನ್ನು ದೆವ್ವಹಿಡಿದವನಾಗಿರುವ ಸಮಾರ್ಯದವನೆಂದು ಕರೆದರು.3 ಹುರುಳಿಲ್ಲದ ಈ ಎಲ್ಲಾ ಆರೋಪಗಳನ್ನು ನಿರಾಕರಿಸಿದ ಮೇಲೆ, ನಾನು ನನಗೆ ಮಾನಸಿಗಬೇಕೆಂದು ಬಯಸುವದಿಲ್ಲ ಎಂದು ಹೇಳಿದನು. ಆದರೆ ತಂದೆಯಾದ ದೇವರೇ ಕಳುಹಿಸಿದ ತನ್ನ ಮಗನಿಗೆ ಮಾನವನ್ನು ಕೊಡಹೋದದರಿಂದ ನೀವು ತಂದೆಗೆ ಉತ್ತರವನ್ನು ಕೊಡಲೇಬೇಕೆಂದು ಆತನು ವೈರಿಗಳನ್ನು ಎಚ್ಚರಿಸಿದನು. ನಿತ್ಯವಾದ ಶಕ್ತಿಯ ಬಗ್ಗೆ ಯಾರಿಂದಲೂ ಪ್ರಶ್ನೆಯೇ ಮಾಡಲಾಗದಂಥ ಹೇಳಿಕೆಯನ್ನು ಯೇಸು ಕ್ರಿಸ್ತನು ಧೈರ್ಯವಾಗಿ ಮಾಡಿದನು. “ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯಗಳನ್ನು ಕೈಕೊಂಡು ಅದರಂತೆ ನಡೆಯುವವನು ಎಂದಿಗೂ ಸಾಯುವದೇ ಇಲ್ಲ” ಎಂದು ಆತನು ಹೇಳಿದನು (8:51).

ಯೇಸುವಿನ ಹೇಳಿಕೆಗಳು ಆತನನ್ನು ನಿತ್ಯನನ್ನಾಗಿ ಮತ್ತು ಅಬ್ರಹಾಮ ಹಾಗೂ ಪ್ರವಾದಿಗಳಿಗಿಂತಲೂ ಪ್ರಖ್ಯಾತನನ್ನಾಗಿ ಮಾಡುವವುಗಳಾಗಿದ್ದರಿಂದ, ಯೇಸುವಿಗೆ ದೆವ್ವ ಹಿಡಿದಿದೆ ಎಂಬ ಆರೋಪವನ್ನು ಆತನ ವೈರಿಗಳು ಮತ್ತೆ ಹೊರಿಸಿದರು.

“ನಿಮ್ಮ ಮೂಲಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು:”4 ಎಂದು ಯೇಸು ಹೇಳಿದನು. “ಅದನ್ನು ನೋಡಿ ಸಂತೋಷಗೊಂಡನು” (8:56). ಯೇಸು ಕ್ರಿಸ್ತನಿಗೆ ಇನ್ನೂ 50 ವರ್ಷವೂ ಆಗಿರಲಿಲ್ಲವಾದರೂ, ನಾನು ಅಬ್ರಹಾಮನನ್ನು ನೋಡಿದ್ದೇನೆ ಎಂದು ನೀಡಿದ ಹೇಳಿಕೆ ಅವರನ್ನು ಮತ್ತೆ ಕಸಿವಿಸಿಗೊಳಪಡಿಸಿತು:

ಯೇಸು ಉತ್ತರಿಸಿದ್ದೇನೆಂದರೆ, “ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ” “ಅಬ್ರಹಾಮನು ಹುಟ್ಟುವದಕ್ಕಿಂತ ಮೊದಲೇ ನಾನಿದ್ದೆನು!” ಹೀಗೆ ಯೇಸು ಕ್ರಿಸ್ತನು ಹಳೆಯ ಒಡಂಬಡಿಕೆಯ “ಇರುವಾತನು” ಎಂಬ ದೇವರ ಹೆಸರಿಗೆ ತನ್ನನ್ನು ಸೂಚಿಸುತ್ತಿದ್ದಾನೆ (ವಿಮೋಚನಕಾಂಡ 3:14)5, ದೇವರ ವಿಷಯವಾಗಿ ತಿರಸ್ಕರಿಸದ ಹೇಳಿಕೆಯನ್ನು ಇದರ ಮೂಲಕ ಕೊಟ್ಟನು.

ತಕ್ಷಣವೇ, ಯೇಸು ದೇವದೂಷಣೆಯ ಮಾತುಗಳನ್ನು ಆಡಿದನೆಂದು ಅವನನ್ನು ಕಲ್ಲೆಸೆದು ಕೊಲ್ಲಲು ಯೆಹೂದ್ಯ ನಾಯಕರು ಕಲ್ಲುಗಳನ್ನು ತೆಗೆದುಕೊಂಡರು, ಆದರೆ ಯಾರೂ ಮುಟ್ಟದ ರೀತಿಯಲ್ಲಿ ಆತನು ದೇವಾಲಯದಿಂದ ತಪ್ಪಿಸಿಕೊಂಡನು.

## ಯೋಹಾನ 8:31–41 ನೋಡಿರಿ.

1.ಎ. ಶಿಷ್ಯರಲ್ಲಿ ಏನಿರಬೇಕೆಂದು ಯೇಸು ಹೇಳಿದ್ದಾನೆ (8:31), ವಾಸ್ತವದಲ್ಲಿ ಇದರ ನಿಜವಾದ ಅರ್ಥವೇನು?

ಬಿ. ಆತನು ಯಾವ ಬಹುಮಾನವನ್ನು ವಾಗ್ದಾನ ಮಾಡಿದ್ದಾನೆ (8:32)?

2.ಎ. ನಾವು ಯಾರಿಗೂ ದಾಸರಲ್ಲ ಎಂದು ಯೆಹೂದ್ಯರು ಹೇಳಿದಾಗ, ಯೇಸು ಕ್ರಿಸ್ತನು ತಾನು ಸೂಚಿಸುತ್ತಿದ್ದ ದಾಸತ್ವವನ್ನು ಹೇಗೆ ವಿವರಿಸಿದನು (8:34)?

ಬಿ. ಈ ದಾಸತ್ವದ ಬಂಧನದಿಂದ ತಾನು ಕೊಡುವ ಸ್ವತಂತ್ರದ ಬಗ್ಗೆ ಯೇಸು ನೀಡಿದ ವಿವರಣೆ ಏನು (8:35–36: ಯೋಹಾನ 1:12 ಸಹ ನೋಡಿರಿ)?

3. ನಾವು ದೇವರ ಎದುರಿನಲ್ಲಿ ನೀತಿವಂತರಾಗಿದ್ದೇವೆ ಮತ್ತು ಸುಭದ್ರರಾಗಿದ್ದೇವೆ ಎಂದು ಯಾವ ಆಧಾರದ ಮೇಲೆ ಯೆಹೂದ್ಯರು ಹೇಳಿದರು (8:33,39)?

**Reference**: ನೋಟ್ 1, ಯೆಹೂದ್ಯರು, ಪುಟ 93.

4. ಯೆಹೂದ್ಯರು ಅಬ್ರಹಾಮನ ಸಂತತಿಯವರೆಂದು ಯೇಸು ಒಪ್ಪಿಕೊಂಡನು, ಆದರೆ ಅಬ್ರಹಾಮನ ಹಾಗೆ ನಾವೂ ನೀತಿವಂತರು ಎಂದು ಅವರು ನೀಡಿದ ಹೇಳಿಕೆಯು ತಪ್ಪೆಂದು ಆತನು ಹೇಗೆ ನಿರೂಪಿಸಿದನು (8:37,39–40,56)? ಅವರ ನಡತೆಗಳಲ್ಲಿ ಯೇಸು ಕ್ರಿಸ್ತನು ತಿಳಿಯಪಡಿಸಿದ ಅಸ್ಥಿರತೆಗಳೇನು?

**Reference**: ನೋಟ್ 4, ನನ್ನ ದಿನವನ್ನು ನೋಡಲು ಅಬ್ರಹಾಮನು ಸಂತೋಷಿಸಿದನು, ಪುಟ 93.

## ಯೋಹಾನ 8:42–47 ಓದಿರಿ.

5. ದೇವರೇ ನಮ್ಮ ತಂದೆ ಎಂದು ಯೆಹೂದ್ಯರು ನೀಡಿದ ಹೇಳಿಕೆಗೆ ಯೇಸು ಹೇಗೆ ಪ್ರತಿಕ್ರಿಯಿಸಿದನು (8:42)?

6. ಅವರು ಯೇಸುವನ್ನು ಕೊಲ್ಲಲು ಸಮಯವನ್ನು ನೋಡುತಿದ್ದರಿಂದ, ಯೆಹೂದ್ಯ ನಾಯಕರನ್ನು ಯೇಸು ಯಾರಿಗೆ ಹೋಲಿಸುತ್ತಿದ್ದಾನೆ ಮತ್ತು ಯಾಕೆ (8:44)?

**Reference**: ನೋಟ್ 5, ಸೈತಾನನು, ದೆವ್ವಗಳು, ಪುಟ 66.

7. ಯೆಹೂದ್ಯ ನಾಯಕರ ಅಪನಂಬಿಕೆಯನ್ನು ಯೇಸು ಹೇಗೆ ವಿವರಿಸಿದನು (8:47)?

8. ಯೇಸುವಿನ ಬೋಧನೆಯನ್ನು ಅಲ್ಲಗಳೆಯುವ ನಿಟ್ಟಿನಿಲ್ಲಿ ಯೆಹೂದ್ಯ ನಾಯಕರು ಯೇಸುವನ್ನು ಏನೆಂದು ಕರೆದರು (8:48)?

**Reference**: ನೋಟ್ 3, ಸಮಾರ್ಯದವನು, ಪುಟ 93.

9.ಎ. ಪ್ರತ್ಯುತ್ತರವಾಗಿ ಯೇಸು ನೀಡಿದ ಅಂಶಗಳೇನು (8:49–50)?

ಬಿ. ಯಾವ ವಾಗ್ದಾನ (8:51)?

10.ಎ. ಯೇಸು ಕ್ರಿಸ್ತನು ನಾನು ನಿತ್ಯಜೀವವನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದಾಗ, ಯೇಸು ಕ್ರಿಸ್ತನು ತನ್ನ ಬಗ್ಗೆ ಏನನ್ನು ಹೇಳುತ್ತಿದ್ದಾನೆಂದು ಯೆಹೂದ್ಯರು ಅರ್ಥಮಾಡಿಕೊಂಡರು (8:52–53)?

ಬಿ. "ನಿನ್ನನ್ನು ಯಾರಂತ ಮಾಡಿಕೊಳ್ಳುತ್ತೀ" ಎಂದು ಕೇಳಿದ ಪ್ರಶ್ನೆಗೆ ಪ್ರತ್ಯುತ್ತರವಾಗಿ ಯೇಸು ಹೇಳಿದ ಅಂಶಗಳನ್ನು ಸಂಕ್ಷಿಪ್ತವಾಗಿ ಪಟ್ಟಿ ಮಾಡಿರಿ (8:54–58)?

**Reference**: ನೋಟ್ 5, ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚೆ ನಾನಿದ್ದೆನು. ಪುಟ 93.

ಸಿ. ಯೇಸು ಕ್ರಿಸ್ತನು ತಾನೇ ದೇವರೆಂದು ಹೇಳಿದಾಗ, ಯೆಹೂದ್ಯರು ಅದನ್ನು ಅರ್ಥಮಾಡಿಕೊಂಡರು ಎಂಬದಕ್ಕೆ ಸಾಕ್ಷಿ ಏನು (8:59)?

# ಮೂಲಭೂತವಾದ ವಿಷಯಗಳ ಮೇಲೆ ಕಟ್ಟುವದು

## 1ನೇ ಸತ್ಯದ ಪರವಾಗಿ ನಿಂತುಕೊಳ್ಳುವದು

ನಮ್ಮ ಲೋಕದಲ್ಲಿ ಸುಳ್ಳು ಮತ್ತು ಮೋಸಗಳೇ, ಅನೀತಿವಂತಿಕೆ, ಸ್ವಾರ್ಥಪರವಾದ ಆಕಾಂಕ್ಷೆ ಮತ್ತು ದ್ವೇಷಗಳಿಗೆ ಮೂಲಭೂತವಾದ ಹಂತಗಳಾಗಿವೆ. ಯಾಕೆಂದರೆ, ನಮ್ಮ ಲೋಕದ ಅಪ್ರಮಾಣಿಕತೆ ಮತ್ತು ಮೋಸವನ್ನು ಅನುಭವಿಸಿದ್ದಾನಾದ್ದರಿಂದ, ಇಲ್ಲಿ ನಾವು ಅನುಭವಿಸುವ ಶ್ರಮೆಗಳನ್ನು ಆತನು ತಿಳಿದವನಾಗಿದ್ದಾನೆ ಮತ್ತು ಅರ್ಥಮಾಡಿಕೊಳ್ಳುತ್ತಾನೆ. ಮುಗ್ಧರಾದ ಜನರು ಕಷ್ಟಪಡುವಂತೆ ಮಾಡುವ ಸುಳ್ಳಿನ ಮೂಲಕ ಆಗುವ ನಮ್ಮ ಶ್ರಮೆಗಳು ಆತನಿಗೆ ಗೊತ್ತು. ಪರಿಪೂರ್ಣವಾಗಿ ಪ್ರಾಮಾಣಿಕರಾಗಿರಲು ಮತ್ತು ಸತ್ಯದೊಂದಿಗೆ ಸಂಧಾನ ಮಾಡಿಕೊಳ್ಳದಿರಲು ಮಾಡುವ ಧೈರ್ಯ ಅಥವಾ ಅಸತ್ಯತೆಯ ವಿಷಯದಲ್ಲಿ ಬೇಸರವನ್ನು ವ್ಯಕ್ತಪಡಿಸುವ ನಮ್ಮ ಮಾನುಷಿಕರವಾದ ಕಷ್ಟಗಳನ್ನು ಆತನು ಅರ್ಥಮಾಡಿಕೊಳ್ಳುವವನಾಗಿದ್ದಾನೆ. ಆತನ ಸಹಾಯವನ್ನು ಹೊರಪಡಿಸಿ ಯಾವುದು ಸರಿ ಮತ್ತು ತಪ್ಪು ಎಂಬದರ ವಿಷಯದಲ್ಲಿ ನಮಗಿರುವ ಗೊಂದಲವನ್ನು ಆತನು ಬಲ್ಲವನಾಗಿದ್ದಾನೆ.

ಇಷ್ಟು ಪರಿಪೂರ್ಣವಾದ ತಿಳುವಳಿಕೆಯೊಂದಿಗೆ, ಯೇಸು ಕ್ರಿಸ್ತನು ನಮ್ಮನ್ನು ಸುಳ್ಳು ಮತ್ತು ಮೋಸಗಳ ಅಧಿಕಾರದಿಂದ ಬಿಡಿಸುವ ವಾಗ್ದಾನವನ್ನು ಮಾಡಿದ್ದಾನೆ. ಕಲಿಸಲ್ಪಡುವ ಹೃದಯಗಳಿಗೆ ಹೆಚ್ಚೆಚ್ಚು ಸತ್ಯಗಳನ್ನು ಪ್ರಕಟಪಡಿಸುವ ಮೂಲಕ, ತಾನು ಸತ್ಯದ ಪರ ನಿಂತುಕೊಂಡ ಹಾಗೆ ನಾವು ಧೈರ್ಯವಾಗಿ ಮತ್ತು ಬುದ್ಧಿಪೂರ್ವಕವಾಗಿ ನಿಂತುಕೊಳ್ಳುವದಕ್ಕಾಗಿ ನಮಗೆ ಬಲವನ್ನು ಮತ್ತು ಜ್ಞಾನವನ್ನು ಕೊಡುವದಾಗಿ ಆತನು ವಾಗ್ದಾನ ಮಾಡಿದ್ದಾನೆ. ನಾನು ಕಲಿಸುವ ಸತ್ಯವನ್ನು ನೀವು ಹಿಡಿದುಕೊಳ್ಳುವದರಿಂದ ನೀವು ದೇವರ ನಿತ್ಯವಾದ ಕುಟುಂಬದಲ್ಲಿ ಸದಸ್ಯರಾಗುವದು ಮಾತ್ರವಲ್ಲ ಬದಲಾಗಿ ನಮ್ಮ ಹೃದಯದಲ್ಲಿ ಮತ್ತು ನಮ್ಮ ಸುತ್ತಮುತ್ತಲಿನಲ್ಲಿರುವ ಲೋಕದ ಪಾಪದ ಮೋಸಗಳಿಂದ ಸ್ವತಂತ್ರತೆಯನ್ನು ಅನುಭವಿಸುವೆವು ಎಂಬ ವಾಗ್ದಾನವನ್ನು ಯೇಸು ಮಾಡಿದ್ದಾನೆ.

ಸತ್ಯವನ್ನು ತಿಳಿದುಕೊಳ್ಳುವದರಲ್ಲಿಯೂ ಮತ್ತು ಸತ್ಯಕ್ಕಾಗಿ ನಿಂತುಕೊಳ್ಳುವದರಲ್ಲಿಯೂ ಸ್ವತಂತ್ರ ಮತ್ತು ನೆರವೇರುವಿಕೆಯಿದೆ. ಸತ್ಯದ ವಿಷಯವಾಗಿ ಸತ್ಯವೇದದಲ್ಲಿರುವ ಸುಂದರವಾದ ತತ್ವಗಳನ್ನು ಪರಿಶೀಲನೆ ಮಾಡೋಣ ಮತ್ತು ನಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ಸತ್ಯದ ಕಡೆ ನಿಂತುಕೊಳ್ಳುವ ಸ್ಥಾನವನ್ನು ಸಹ ತಿಳಿದುಕೊಳ್ಳೋಣ.

1.ಎ. ನಿಮ್ಮ ಸುತ್ತಲಿರುವ ಲೋಕದಲ್ಲಿ ಅಪ್ರಾಮಾಣಿಕತೆಯನ್ನು ನೀವು ಎಲ್ಲಿ ಕಾಣುವಿರಿ?

ಬಿ. ಅಪ್ರಾಣಿಕತೆಯಿಂದ ಆಗುವ ಪರಿಣಾಮಗಳೇನು?

2.ಎ. ಸುಳ್ಳು ಹೇಳುವಂತೆ ಜನರನ್ನು ಪ್ರೇರೇಪಿಸುವದು ಏನು? ಸುಳ್ಳಿನ ತಾತ್ಕಾಲಿಕವಾದ ವಾಗ್ದಾನ ಏನು?

ಬಿ. ನಾವು ಸುಳ್ಳು ಹೇಳುವಾಗ ಏನಾಗುತ್ತದೆ? ನಾವು ಬಯಸುವ ನೆರವೇರಿಕೆಯು ಆಗದಂತೆ

ಅಪ್ರಾಮಾಣಿಕತೆಯು ಹೇಗೆ ಅಡಚಣೆಯನ್ನುಂಟು ಮಾಡುತ್ತದೆ?

3. ಕೆಳಗಿನ ವಚನಗಳಲ್ಲಿ ಸತ್ಯವೇದವು ನಮಗೆ ಸುಳ್ಳಿನ ಬಗ್ಗೆ ಯಾವ ಎಚ್ಚರಿಕೆಯನ್ನು ಕೊಡುತ್ತದೆ?

ಜ್ಞಾನೋಕ್ತಿ 12:22

1 ಪೇತ್ರನು 3:10,12

4. ಸುಳ್ಳಿನ ಬಗ್ಗೆ ಕೆಳಗಿನ ವಚನಗಳು ಸ್ಪಷ್ಟವಾಗಿ ಕೊಡುವ ಆಜ್ಞೆಗಳೇನು?

ಯಾಜಕಕಾಂಡ 19:11

ಜೆಕರ್ಯ 8:16

5. ಅಪ್ರಾಮಾಣಿಕರಾಗುವಂತೆ ಸಾಮಾನ್ಯವಾಗಿ ಪ್ರೇರೇಪಿಸುವಂಥದ್ದು ದುರಾಸೆಯಾಗಿದೆ. ಯೇಸುವಿಗೆ ವಿರೋಧವನ್ನು ವ್ಯಕ್ತಪಡಿಸಿದ ಅನೇಕ ನಾಯಕರ ಸ್ಥಿತಿಯೂ ಹೀಗೇ ಇತ್ತು. ಸುಳ್ಳು ಹೇಳುವದರ ಬಗ್ಗೆ ಮತ್ತು ಬೌದ್ಧಿಕ ಲಾಭಗಳ ಬಗ್ಗೆ ಕೆಳಗಿನ ವಚನಗಳು ಕೊಡುವ ಎಚ್ಚರಿಕೆ ಏನು?

ಜ್ಞಾನೋಕ್ತಿ 21:6

1 ತಿಮೊಥೆ 6:10

6. ದೇವರ ಸಹಾಯವಿಲ್ಲದೆ ಸತ್ಯವನ್ನು ನಿಖರವಾಗಿ ವಿವೇಚಿಸಲು ನಮ್ಮಿಂದ ಸಾಧ್ಯವಿಲ್ಲ ಎಂದು ಸತ್ಯವೇದವು ಯಾಕೆ ಹೇಳುತ್ತದೆ?

ಯೆರೆಮೀಯ 17:9

ಜ್ಞಾನೋಕ್ತಿ 14:12

ಬಿ. ಪ್ರತಿಯೊಬ್ಬ ಮನುಷ್ಯನಲ್ಲಿರುವ ಶಾರೀರಿಕವಾದ ಅಥವಾ ಪಾಪದ ಸ್ವಭಾವವನ್ನು ಹೇಗೆ ವಿವರಿಸುತ್ತದೆ?

ರೋಮಾ 8:7

7. ಯೋಹಾನ 8:34–36ರಲ್ಲಿ, ನಮ್ಮ ಸ್ವಾರ್ಥಪರ ಸ್ವಭಾವದ ದಾಸತ್ವದಿಂದ ನಮ್ಮನ್ನು ಬಿಡುಗಡೆಗೊಳಿಸುವ ಸಾಮರ್ಥ್ಯವು ನನಗಿದೆ ಎಂದು ಯೇಸು ಹೇಳಿದ್ದಾನೆ. ಕೆಳಗಿನ ವಚನಗಳಿಗನುಸಾರವಾಗಿ ಇದನ್ನು ಸಾಧ್ಯವಾಗಿಸುವದು ಏನು?

ಯೆಹೆಜ್ಕೇಲ 36:26–27

**Reference**: ನೋಟ್ 2, ಪವಿತ್ರಾತ್ಮನು, ಪುಟ 33.

8. ನಮ್ಮ ಸತ್ಯದ ಹುಡುಕಾಟದಲ್ಲಿ, ದೇವರ ವಾಕ್ಯವಾಗಿರುವ ಸತ್ಯವೇದದಲ್ಲಿ ಏನೆಲ್ಲಾ ತತ್ವಗಳು ಸಿಗುವ ಭರವಸೆ ನಮಗಿದೆ?

ಕೀರ್ತನೆ 19:7–10

9. ಯೇಸು ಮತ್ತು ಸತ್ಯದ ಬಗ್ಗೆ ಸತ್ಯವೇದವು ಏನು ಹೇಳುತ್ತದೆ?

ಯೋಹಾನ 1:14ಬಿ

ಯೋಹಾನ 14:6

ಯೋಹಾನ 18:37

10.ಎ. ಯೋಹಾನ 8:44ಬಿ ರಲ್ಲಿ ಸುಳ್ಳಿನ ಮೂಲದ ಬಗ್ಗೆ ಯೇಸು ಕ್ರಿಸ್ತನು ಏನನ್ನು ಪ್ರಕಟಪಡಿಸಿದ್ದಾನೆ?

**Reference**: ನೋಟ್ 5, ಸೈತಾನ, ದೆವ್ವಗಳು, ಪುಟ 66.
ಬಿ. ಈ ವೈರಿಯಿಂದ ದೇವರು ನಮಗೆ ರಕ್ಷಣೆಯ ಭರವಸೆಯನ್ನು ಹೇಗೆ ಕೊಟ್ಟಿದ್ದಾನೆ (ಎಫೆಸ 6:14,17)?

8. ನಮಗೆ ಎಷ್ಟೇ ಕಷ್ಟವಾದರೂ, ನಾವು ಸತ್ಯದ ಕಡೆ ನಿಂತುಕೊಳ್ಳುವಾಗ ನೆರವೇರುವ ಮಾರ್ಗದ ಬಗ್ಗೆ ಯೇಸು ಕ್ರಿಸ್ತನು ಮಾಡಿರುವ ವಾಗ್ದಾನ ಏನು?

ಯೋಹಾನ 8:32,36

## ಸಾರಾಂಶ

9. ನಿಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ಸತ್ಯವು ನಿರ್ವಹಿಸುವ ಪಾತ್ರ ಏನು? ಪ್ರಾಮಾಣಿಕರಾಗಿರಲು ವಿಫಲರಾಗುವಾಗ ನಿಮಗೆ ಅರ್ಥವಾಗಿರುವ ವಿಷಯವೇನು?

10. ಪ್ರಾಮಾಣಿಕತೆಯನ್ನು ವಿವೇಚಿಸುವದರಲ್ಲಿ ಮತ್ತು ನಿಮ್ಮ ಸ್ವಂತ ಮೋಸಗಳಿಂದ ಸ್ವತಂತ್ರತೆಯನ್ನು ಪಡೆಯಲು, ಸತ್ಯವೇದದನುಸಾರವಾಗಿ, ಯೇಸು ಕ್ರಿಸ್ತನಲ್ಲಿರುವ ನಿಮ್ಮ ನಂಬಿಕೆಯು ಯಾವ ಪಾತ್ರವನ್ನು ನಿರ್ವಹಿಸಬೇಕು?

11. ಎಷ್ಟೇ ದುಬಾರಿಯಾದರೂ, ನಿಮ್ಮ ನೆರವೇರುವಿಕೆಯ ಪ್ರಯತ್ನದಲ್ಲಿ ನೀವು ಏನು ಮಾಡಬೇಕೆಂದು ದೇವರು ನಿಮಗೆ ಆಜ್ಞಾಪಿಸಿದ್ದಾನೆ?

ಜ್ಞಾನೋಕ್ತಿ 23:23

## ಪಾಠ 11 ನೋಟ್ಸ್

1 ಯೆಹೂದ್ಯರು (8:48) ಯೇಸು ಕ್ರಿಸ್ತನಿಗೆ ವೈರಿಗಳಾಗಿದ್ದ ಯೆಹೂದ್ಯ ನಾಯಕರಿಗೆ ಹೋಲಿಕೆಯಾಗಿದೆ. ಯೋಹಾನನು ಈ ಪದವನ್ನು ತನ್ನ ಸುವಾರ್ತೆಯಲ್ಲಿ 70 ಬಾರಿ ಉಪಯೋಗಿಸಿದ್ದಾನೆ, ಕೆಲವೊಮ್ಮೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ (ಉದಾ. 4:22), ಇನ್ನು ಕೆಲವೊಮ್ಮೆ ನಿಷ್ಪಕ್ಷಪಾತಿಯಾದ ರೀತಿಯಲ್ಲಿ, ಆದರೂ ಯೇಸುವಿನ ವೈರಿಗಳು ಎಂದು ತಿಳಿಸಲು ಉಪಯೋಗಿಸಿದ್ದಾನೆ. The NIV Study Bible, ಪುಟ 1594.

2 **Reference**: ನೋಟ್ 5 ಸೈತಾನನು, ದೆವ್ವಗಳು, ಪುಟ 66.

3 ಸಮಾರ್ಯದವನು (8:48). ಸಮಾರ್ಯದವರು ಫರಿಸಾಯರಂತೆ ಪೂರ್ಣಪಾರಾಂಗತರಾಗಿರಲಿಲ್ಲ ಮತ್ತು ಅವರ ಆಚರಣೆಗಳು ಯೆಹೂದ್ಯ ಮತ್ತು ಅನ್ಯದೇವತೆಗಳ ಕ್ರಮಗಳಿಗನುಸಾರವಾದವುಗ ಳಾಗಿದ್ದವು (ನೋಟ್ 1, ಸಮಾರ್ಯದವರು, ಪುಟ 42 ನೋಡಿರಿ). ಯೆಹೂದ್ಯ ನಾಯಕರು ಯೇಸು ಕ್ರಿಸ್ತನನ್ನು ಸಮಾರ್ಯದವನೆಂದು ದೂಷಿಸಲು ಕಾರಣವೇನೆಂದರೆ, ಆತನ ಬೋಧನೆಗಳ ಅಸಂಪ್ರದಾಯಕತೆ ಅಥವಾ ಆತನ ಜನನದ ಹಿನ್ನಲೆಯಾಗಿತ್ತು.

4 ನನ್ನ ದಿನವನ್ನು ನೋಡಲು ಅಬ್ರಹಾಮನು ಸಂತೋಷಿಸಿದನು (8:56). ಆತನ ನಂಬಿಗಸ್ಥಿಕೆಗಾಗಿ, ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದೇನೆಮ್ದರೆ, ಇಡೀ ಲೋಕದ ಆಶೀರ್ವಾದಕ್ಕೆ ಕಾರಣವಾಗುವ ಸಂತಾನವು ನಿನ್ನಿಂದ ಉತ್ಪತ್ತಿಯಾಗುವದು. ಅಬ್ರಹಾಮನ ಸಂತೋಷದ ಬಗ್ಗೆ ಆತನು ನೀಡಿದ ಹೇಳಿಕೆಯಲ್ಲಿ, ಇಡೀ ಲೋಕಕ್ಕೆ ಆಶೀರ್ವಾದವನ್ನು ನೀಡಲು ನರಾವತಾರವನ್ನೆತ್ತಿರುವ ಯೇಸು ಕ್ರಿಸ್ತನು ಮೂಲಕ ದೇವರು ನೆರವೇರಿಸಿದ ವಿಷಯದಲ್ಲಿ ಅಬ್ರಹಾಮನು ಸಂತೋಷಿಸಿದನೆಂದು ಯೇಸು ಕ್ರಿಸ್ತನು ಬಹುಶಃ ಇಲ್ಲಿ ಹೇಳುತ್ತಿರಬಹುದು. (ಆದಿಕಾಂಡ 18:18). ನಂಬಿಕೆಯ ಮೂಲಕ ಅಬ್ರಹಾಮನು ಕ್ರಿಸ್ತನ ದಿನವನ್ನು ಬಹುದೂರದಿಂದಲೇ ನೋಡಿದನು ಮತ್ತು ಸಂತೋಷಿಸಿದನು. The NIV Study Bible, ಪುಟ 1614.

5 ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚೆಯೇ, ನಾನಿದ್ದೆನು! (8:58). ಯೇಸು ಕ್ರಿಸ್ತನು "ಆಗ ನಾನಿದ್ದೆನು" ಎಂದು ಹೇಳುವ ಬದಲು "ನಾನೇ ಇರುವಾತನು" ಎಂದು ಹೇಳಿದಾಗ, ಹಳೆಯ ಒಡಂಬಡಿಕೆಯಲ್ಲಿ, ನಾನು ಇರುವಾತನು ಎಂದು ದೇವರು ತನ್ನನ್ನು ಸೂಚಿಸಲು ಉಪಯೋಗಿಸಿದ ಪರಿಶುದ್ಧವಾದ ಹೆಸರನ್ನೇ ಇಲ್ಲಿ ಉಪಯೋಗಿಸಿದ್ದಾನೆ (ವಿಮೋಚನಕಾಂಡ 3:14). ಈ ವ್ಯಕ್ತಿತ್ವದ ಮೂಲಕವಾಗಿ, ತಂದೆಯಾದ ದೇವರೊಂದಿಗೆ ನಾನು ಅನಾದಿಕಾಲದಿಂದಲೂ ಐಕ್ಯವಾಗಿದ್ದೇನೆ ಎಂದು ಹೇಳಿದನು. ಈ ಹೇಳಿಕೆಯೊಂದಿಗೆ, ನಿಜವಾದ ವಿಶ್ವಾಸಿಗಳಿಗೆ ಕೊನೆಗೊಳ್ಳದಿರುವ ಜೀವವನ್ನು ಕೊಡುವ ತನ್ನ ಸಾಮರ್ಥ್ಯ ಮತ್ತು ಅಬ್ರಹಾಮನೊಂದಿಗಿನ ತನ್ನ ಪರಿಚಯವನ್ನು ವಿವರಿಸಿದನು (8:56–57). ಯೇಸು ಕ್ರಿಸ್ತನ "ನಾನೇ" ಎಂಬ ಹೇಳಿಕೆಗಳನ್ನು ನೋಟ್ 1, ಪುಟ 84ರಲ್ಲಿ ನೋಡಿರಿ. ಯೋಹಾನ 8:58ರಲ್ಲಿ ಯೇಸು ಕ್ರಿಸ್ತನು ನೀಡಿದ ಹೇಳಿಕೆಯು ದೈವೀಕತೆಯ ಬಗ್ಗೆ ಆತನು ಮಾಡಿದ ಅತ್ಯಂತ ಪ್ರಭಾವಶಾಲಿಯಾದ ಮತ್ತು ಪ್ರಾಮುಖ್ಯವಾದ ಪ್ರಕಟನೆಯಾಗಿದೆ. ಈ ಕಾರಣ–ಕ್ಕಾಗಿಯೇ, ಹಳೆಯ ಒಡಂಬಡಿಕೆಯ ಯೂದಾಯ ಧರ್ಮದ ಪ್ರಕಾರ ಮುಖ್ಯ ಅಪರಾಧವಾದ ದೇವದೂಷಣೆಯನ್ನು ಯೇಸು ಮಾಡಿದ್ದನೆಂದು ಆತನನ್ನು ಕೊಲ್ಲಲು ಯೆಹೂದ್ಯರು ತಕ್ಷಣವೇ ಕಲ್ಲುಗಳನ್ನು ತೆಗೆದುಕೊಂಡರು.

**ಗಮನಿಸಿರಿ:** ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವದು ಈ ಪಾಠದಲ್ಲಿ ಸ್ವಲ್ಪ ಜಾಸ್ತಿಯಿದೆ.

# ಪಾಠ 12

## ಕುರುಡನಾಗಿ ಹುಟ್ಟಿದ ಮನುಷ್ಯನ ಗುಣಪಡಿಸುವಿಕೆ

### ಯೋಹಾನ 9

ಅಂದು ಸಬ್ಬತ್ ದಿನವಾಗಿತ್ತು, ಬಹುಶಃ ಯೇಸು ಕ್ರಿಸ್ತನು ದೇವಾಲಯದಲ್ಲಿ ಕೋಪಗೊಂಡಿದ್ದ ಜನರನ್ನು ಹೊರಡಿಸಿದ್ದ ಮಾರನೆಯ ದಿನವಾಗಿರಬಹುದು (8:59). ತನ್ನ ಶಿಷ್ಯರೊಂದಿಗೆ ನಡೆದುಕೊಂಡು ಹೋಗುತ್ತಿದ್ದಾಗ, ಹುಟ್ಟು ಕುರುಡನಾಗಿದ್ದ ಭಿಕ್ಷಿಕನೊಬ್ಬನನ್ನು ಆತನು ನೋಡಿದನು. ಯೆಹೂದ್ಯರಾದ ಗುರುಗಳ ಅಭಿಪ್ರಾಯವೇನೆಂದರೆ ಜನರು ಅಂಗವಿಕಲರಾಗಿ ಕಷ್ಟಪಡಲು ಕಾರಣವೇನೆಂದರೆ ಅವರು ಪಾಪವನ್ನು ಮಾಡಿರಬಹುದು ಅಥವಾ ಅವರ ತಂದೆತಾಯಿಗಳು ಪಾಪವನ್ನು ಮಾಡಿರಬಹುದು.1 ಈ ಮನುಷ್ಯನು ಕುರುಡನಾಗಿರುವದಕ್ಕೆ ಇವನ ಯಾವುದೇ ಪಾಪಗಳು ಕಾರಣವಲ್ಲ, ಬದಲಾಗಿ ಈ ಮನುಷ್ಯನ ಜೀವಿತದಲ್ಲಿ ತನ್ನ ಕಾರ್ಯಗಳನ್ನು ಪ್ರಕಟಿಸುವದಕ್ಕಾಗಿ ದೇವರು ಈತನ ಪರಿಸ್ಥಿಯನ್ನು ಉಪಯೋಗಿಸಿಕೊಳ್ಳುವನು ಎಂದು ಯೇಸು ಅವರಿಗೆ ವಿವರಿಸಿದನು. ಇದರೊಂದಿಗೆ, ಯೇಸು ಕ್ರಿಸ್ತನು ಆ ಮನುಷ್ಯನ ಕಣ್ಣುಗಳ ಮೇಲೆ ಮಣ್ಣನ್ನು ಅಂಟಿಸಿದನು ಮತ್ತು ಹೋಗಿ ಶಿಲೋವ ಕೊಳದಲ್ಲಿ ತೊಳೆದುಕೊಳ್ಳುವಂತೆ ಸೂಚಿಸಿದನು. ಅಲ್ಲಿ ಕುರುಡನಾಗಿದ್ದವನಿಗೆ ಕಣ್ಣು ಬಂತು.

ನಡೆದ ಘಟನೆಯು ಜನರಿಗೆ ಗೊತ್ತಾಗುತ್ತಿದ್ದಂತೆಯೇ ತಕ್ಕ ಮಟ್ಟಿಗೆ ಗಲಿಬಿಲಿಯು ಎದುರಾಯಿತು. ಏನೇಆದರೂ ಈ ಆಚರಣೆಗೆ ಕಾರಣವಾಗಲಿಲ್ಲ ಬದಲಾಗಿ ಈ ಘಟನೆ ಮತ್ತು ಯೇಸು ಕ್ರಿಸ್ತನ ಬಗ್ಗೆ ಹೆಚ್ಚು ಚರ್ಚೆಗಳು ಪ್ರಾರಂಭಗೊಂಡವು. ಯೇಸು ಕ್ರಿಸ್ತನು ಆ ಮನುಷ್ಯನನ್ನು ಸಬ್ಬತ್ ದಿನದಂದು ಗುಣಪಡಿಸಿ ತಮ್ಮ ನಿಯಮವನ್ನು ಉಲ್ಲಂಘನೆ ಮಾಡಿದ್ದರಿಂದ ಅವರು ಆತನನ್ನು ಫರಿಸಾಯರ ಬಳಿಗೆ ಕರಕೊಂಡು ಹೋದರು.2 ಆತನು ಕುರುಡನಾಗಿ ಹುಟ್ಟಿದ್ದರ ಮತ್ತು ಹೇಗೆ ಗುಣವಾದನೆಂಬದರ ಬಗ್ಗೆ ಅವರು ಆತನನ್ನು ಮತ್ತು ಆತನ ತಂದೆತಾಯಿಗಳನ್ನು ಸತತವಾಗಿ ವಿಚಾರಿಸಿದರು. ಅಂತಿಮವಾಗಿ ಯೇಸು ಕ್ರಿಸ್ತನು ದೇವರಿಂದ ಕಳುಹಿಸಲ್ಪಟ್ಟವನಾಗಿದ್ದಾನೆಯೋ ಅಥವಾ ಪಾಪಿಯಾಗಿದ್ದಾನೆಯೋ ಎಂಬ ವಿಷಯದಲ್ಲಿ ಫರಿಸಾಯರಲ್ಲಿಯೇ ಬೇಧವುಂಟಾಯಿತು, ಆದ್ದರಿಂದ ನಿನ್ನನ್ನು ಗುಣಪಡಿಸಿದ ಯೇಸು ಯಾರೆಂದು ನೀನು ಅಂದುಕೊಂಡಿದ್ದೀಯ ಎಂದು ಅವರು ಆತನನ್ನೇ ಕೇಳಿದರು. ಅದಕ್ಕೆ ಆ ಮನುಷ್ಯನು ಅವರಿಗೆ ಕೊಟ್ಟ ಉತ್ತರ ಅವರನ್ನು ನಿಬ್ಬೆರಗಾಗಿಸಿತು: ಯೇಸು ಕ್ರಿಸ್ತನು ಖಂಡಿತವಾಗಿಯೂ ದೇವರಿಂದಲೇ ಬಂದವನಾಗಿದ್ದಾನೆ, ಯಾಕೆಂದರೆ ಗುಣಪಡಿಸುವಂಥ ಸೂಚಕಕಾರ್ಯವನ್ನು ಮಾಡಲು ದೇವರು ಪಾಪಿಗಳಿಗೆ ಅವಕಾಶವನ್ನು ಕೊಡುವದಿಲ್ಲ.

ಆ ಮನುಷ್ಯನು ಅವರಿಗೆ ಕೊಟ್ಟ ಉತ್ತರ ಮತ್ತು ಯೇಸು ಕ್ರಿಸ್ತನಲ್ಲಿ ಆತನು ತೋರಿದ ತನ್ನ ನಂಬಿಕೆಯ ವಿಷಯದಲ್ಲಿ ಧಾರ್ಮಿಕ ನಾಯಕರು ಮತ್ತಷ್ಟು ಅವನ ಮೇಲೆ ಕೋಪ ಮಾಡಿಕೊಂಡು, “ನೀನು ಹುಟ್ಟಿದಂದಿನಿಂದಲೇ ಪಾಪಿ” ನಮಗೆ ಉಪದೇಶ ಮಾಡುವಷ್ಟು ಯೋಗ್ಯತೆ ನಿನಗಿಲ್ಲ ಎಂದು ಹೇಳಿ, ಅವನನ್ನು ದೇವಾಲಯದಿಂದ ಹೊರಗೆ ಹಾಕಿದರು. ನಡೆದ ಘಟನೆಗಳನ್ನೆಲ್ಲಾ ಯೇಸು ಕ್ರಿಸ್ತನು ಕೇಳಿ, ಆ ಮನುಷ್ಯನು ತನಗೆ ಸಿಕ್ಕಿದಾಗ, ಮೆಸ್ಸೀಯನು ನಾನೇ ಎಂದು ಅವನಿಗೆ ಪ್ರಕಟಿಸಿದನು. ಆಗ ಮನುಷ್ಯನು ತಕ್ಷಣವೇ ಯೇಸುವಿನ ಮಾತುಗಳನ್ನು ನಂಬಿದನು ಮತ್ತು ಆತನನ್ನು ಆರಾಧಿಸಿದನು.

ನಂತರ, ಯೇಸು ಕ್ರಿಸ್ತನು ಫರಿಸಾಯರ ಕಡೆಗೆ ತಿರುಗಿಕೊಂಡು ಅವರಿಗೆ ಹೇಳಿದ್ದೇನೆಂದರೆ, "ನಾನು ನ್ಯಾಯತೀರ್ಪಿಗಾಗಿ ಈ ಲೋಕಕ್ಕೆ ಬಂದಿದ್ದೇನೆ, ಆ ತೀರ್ಪು ಏನೆಂದರೆ, ಕಣ್ಣಿಲ್ಲದವರಿಗೆ ಕಣ್ಣು ಬರುವವು, ಕಣ್ಣಿದ್ದವರು ಕುರುಡರಾಗುವರು" (9:39). ಯೇಸು ಕ್ರಿಸ್ತನು ಮಾಡಿದ ಸೂಚಕಕಾರ್ಯಗಳನ್ನು3 ನೋಡಿದ ಫರಿಸಾಯರು ಅದಕ್ಕೆ ಪ್ರತ್ಯುತ್ತರವಾಗಿ ನಾವು ಆಂತರ್ಯದಲ್ಲಿ ಆತ್ಮೀಕರಾಗಿದ್ದೇವೆ ಎಂದು ಹೇಳಿದರಾದರೂ ಸತ್ಯವನ್ನು ನಿರಾಕರಿಸಿದರು. ಅವರು ಹೀಗೆ ಮಾಡಿದ್ದರಿಂದ, ನ್ಯಾಯತೀರ್ಪಿಗೆ ಗುರಿಯಾದರು.

## ಯೋಹಾನ 9:1–13 ಓದಿರಿ.

1.ಎ. ಯೇಸುವಿನ ಶಿಷ್ಯರು ಆತನಿಗೆ ಕುರುಡನ ಬಗ್ಗೆ ಕೇಳಿದಾಗ, ಅದಕ್ಕೆ ಪ್ರತ್ಯುತ್ತರವಾಗಿ ಆತನು ಶ್ರಮೆಗಳ ಬಗ್ಗೆ ಯಾವ ತತ್ವವನ್ನು ತಿಳಿಸಿದನು (9:1–3)?

**Reference**: ನೋಟ್ 1, ಯಾರು ಪಾಪ ಮಾಡಿದರು...? ಪುಟ 102.

ಬಿ. ಆಯ್ಕೆಯ ಪ್ರಶ್ನೆ: ಇಂದಿನ ವಿಶ್ವಾಸಿಗಳಿಗೂ ಅನ್ವಯಿಸುವಂಥ ಯಾವ ತತ್ವವನ್ನು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಕೊಟ್ಟನು (9:4–5)?

2.ಎ. ಗುಣಹೊಂದಿದ ಮನುಷ್ಯನು ಮೊದಲನೆಯ ಬಾರಿಗೆ ವಿವಿಧ ಬಣ್ಣಗಳನ್ನು ಮತ್ತು ಚಿತ್ರಗಳನ್ನು ನೋಡಿದಾಗ ಆತನು ಹೇಗೆ ಅನ್ನಿಸಿರಬಹುದು ಎಂದು ನಿಮಗೆ ಅನ್ನಿಸುತ್ತದೆ?

ಬಿ. ಆತನನ್ನು ತಿಳಿದಿದ್ದ ಜನರು ಹೇಗೆ ಪ್ರತಿಕ್ರಿಯಿಸಿದರು (9:8–13)?

## ಯೋಹಾನ 9:14–34 ಓದಿರಿ.

3. ಕುರುಡನು ಗುಣವಾದಾಗ ಫರಿಸಾಯರು ಹೇಗೆ ಪ್ರತಿಕ್ರಿಯಿಸಿದರು (9:14–17)?

4. ಕುರುಡನ ತಂದೆತಾಯಿಗಳು ಫರಿಸಾಯರ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಿದ್ದಾಗ ಎಚ್ಚರದಿಂದಿರುವಂತೆ ಅವರನ್ನು ಪ್ರೇರೇಪಿಸಿದ್ದು ಏನು (9:18–23)?

5.ಎ. ಫರಿಸಾಯರು ಕುರುಡನನ್ನು ಎರಡನೆ ಬಾರಿ ಸಂಧಿಸಿದಾಗ ಆತನು ನೀಡಿದ ಹೇಳಿಕೆ ಏನು (9:24–25)?

ಬಿ. ಫರಿಸಾಯರ ಕಾರಣವಿಲ್ಲದ ಸ್ವಭಾವಕ್ಕೆ ಉತ್ತರವಾಗಿ ಕುರುಡನಾಗಿದ್ದ ಮನುಷ್ಯನು ಸಣ್ಣ ಸಂದೇಶವನ್ನೇ ಕೊಟ್ಟನು. ಆತನು ಹೇಳಿದ ಅಂಶಗಳೇನೇನು (9:30–33)?

## ಯೋಹಾನ 9:35–41 ಓದಿರಿ.

6. ಆತನು ಕುರುಡನಾಗಿದ್ದವನನ್ನು ನೋಡಿದಾಗ, ತಾನು ಯಾರೆಂದು ಆತನಿಗೆ ಪ್ರಕಟಿಸಿದನು? ಅದಕ್ಕೆ ಆ ಮನುಷ್ಯನು ನೀಡಿದ ಪ್ರತಿಕ್ರಿಯೆ ಏನು (9:35–38)?

**Reference**: ನೋಟ್ 4, ಮನುಷ್ಯಕುಮಾರನು, ಪುಟ 18.

7.ಎ. ಫರಿಸಾಯರಿಗೆ ಆತನು ನೀಡಿದ ಎಚ್ಚರಿಕೆಯಲ್ಲಿ, ಆತ್ಮೀಕವಾಗಿ ತೆರೆಯಲ್ಪಟ್ಟವರು ಮತ್ತು ಸ್ವ–ನೀತಿವಂತರೆಂದು ಭಾವಿಸಿಕೊಳ್ಳುತ್ತಿದ್ದವರೊಂದಿಗೆ ಹೇಗೆ ವರ್ತಿಸುವನೆಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದ್ದಾನೆ (9:39)?

ಬಿ. ಆತ್ಮೀಕ ತಿಳುವಳಿಕೆ ಅವರಿಗಿತ್ತು ಆದರೂ ಸತ್ಯವನ್ನು ಕಾಣುವದನ್ನು ಅವರು ನಿರಾಕರಿಸಿದರು, ಆದ್ದರಿಂದ ಯಾವ ವಿಷಯದಲ್ಲಿ ಅವರು ಅಪರಾಧಿ ಮನೋಭಾವನೆಯುಳ್ಳವರಾಗಿದ್ದರು (9:41)?

**ಗಮನಿಸಿರಿ:** “ಫರಿಸಾಯರು ಆತ್ಮೀಕವಾಗಿ ಕುರುಡರಾಗಿದ್ದಾರೆ ಎಂದು ಯೇಸು ಕಲಿಸುತ್ತಿರುವದನ್ನು ಕೇಳಿ ಫರಿಸಾಯರಿಗೆ ಅಘಾತವಾಯಿತು (9:40). ಅವರ ಸ್ವಭಾವಕ್ಕೆ ಕ್ಷಮೆಸಿಗಬೇಕಾದರೆ ಅದು ಕೇವಲ ಕುರುಡುತನವೇ (ಮೊಂಡತನ ಮತ್ತು ಮೂರ್ಖತನ) ಆಗಿದೆ ಎಂದು ಯೇಸು ಹೇಳಿದನು. ಯಾರೆಲ್ಲಾ ಕಣ್ಣುಳ್ಳವರಾಗಿದ್ದಾಗಲೂ ಸತ್ಯವನ್ನು ಕಾಣದಂತೆ ಪಾಪವು ನಮ್ಮನ್ನು ಕುರುಡರನ್ನಾಗಿಸಿದೆ ಎಂಬದನ್ನು ತಿಳಿದುಕೊಂಡರೋ ಅಂಥವರಿಗೆ ಆತನು ತಿಳುವಳಿಕೆ ಮತ್ತು ಆಂತರ್ಯದ ಜ್ಞಾನವನ್ನು ದಯಪಾಲಿಸಿದನು. ಆದರೆ ಯಾರೆಲ್ಲಾ ಅತೃಪ್ತರು, ಸ್ವತೃಪ್ತಿ ಮತ್ತು ಕುರುಡರಾಗಿದ್ದರೋ ಅಂಥವರನ್ನು ಆತನು ನಿರಾಕರಿಸಿದನು.” *NIV Life Application Bilbe*, ಪುಟ 1897. ನೋಟ್ 1, ಫರಿಸಾಯರು, ಪುಟ 33 ಸಹ ನೋಡಿರಿ.

# 2ನೇ ಸತ್ಯದ ಪರವಾಗಿ ನಿಂತುಕೊಳ್ಳುವದು

ಕುರುಡ ಮನುಷ್ಯನು ಜೀವನ ಪರ್ಯಂತ ಅನುಭವಿಸಬೇಕಾಗಿದ್ದ ಅಂಗವಿಕಲತೆಯನ್ನು ಯೇಸು ಕ್ರಿಸ್ತನು ಅಮೋಘವಾಗಿ ಗುಣಪಡಿಸಿದನು ಮತ್ತು ಭಿಕ್ಷೆ ಬೇಡುವದನ್ನು ತಪ್ಪಿಸಿ ಜವಾಬ್ದಾರಿಯುಳ್ಳ ಪೌರನಾಗುವಂತೆ ಅವನನ್ನು ಶಾಶ್ವತವಾಗಿ ಸ್ವತಂತ್ರನನ್ನಾಗಿಸಿದನು. ಆದರೂ ಕುರುಡ ಮನುಷ್ಯನ ಜೊತೆಯಲ್ಲಿದ್ದ ಜನರು ಅವನು ಬಿಡುಗಡೆ ಹೊಂದದ್ದಕ್ಕಾಗಿ ಸಂತೋಷಿಸುವ ಬದಲಾಗಿ ಯೇಸುವಿನ ಶಕ್ತಿಯನ್ನು ಕಡೆಗಾಣಿಸಬೇಕೆಂಬದ ಮೇಲೆ ಗಮನವನ್ನು ಹರಿಸಿದರು. ಸ್ವಸ್ಥತೆದಕ್ಕಿದ್ದಕ್ಕಾಗಿ ಸಂತೋಷಿಸಬೇಕಾದ ಮನುಷ್ಯನು ಸಂತೋಷಪಡುವದರ ಬದಲಾಗಿ ಧಾರ್ಮಿಕ ನಾಯಕರ ರಾಜಕೀಯಕ್ಕೆ ಸಿಲುಕಿ ನಲುಗಿದನು.

ಆತ್ಮೀಕ ಸತ್ಯವನ್ನು ಕಾಣಲು ಮತ್ತು ಯೇಸು ಯಾರೆಂದು ಅರ್ಥಮಾಡಿಕೊಳ್ಳಲು ನಮ್ಮ ಕಣ್ಣುಗಳು ಪ್ರಾಥಮಿಕವಾಗಿ ತೆರೆಯಲ್ಪಡುವಾಗ, ನಾವು ಆತನಲ್ಲಿ ಭರವಸೆಯನ್ನಿಡಲು ಪ್ರಾರಂಭಿಸುವಾಗ ನಮ್ಮ ಪ್ರತಿಕ್ರಿಯೆ ಸಂತೋಷವಾಗಿರುತ್ತದೆ. ಆದರೆ ಇತರರು ನಮ್ಮ ನಂಬಿಕೆಯ ಬಗ್ಗೆ ನಮ್ಮನ್ನು ಪ್ರಶ್ನಿಸುವಾಗ, ಯೋಹಾನ 9ರಲ್ಲಿ ಗುಣಹೊಂದಿದ ಮನುಷ್ಯನು ನೀಡಿದಂಥ ಉತ್ತರವನ್ನೇ ನಾವು ಕೊಡುವವರಾಗಿರುತ್ತೇವೆ. ನಮಗೆ ಪ್ರೋತ್ಸಾಹವು ದೊರೆಯುವ ಬದಲು, ತಮ್ಮದೇ ಆದ ಆಲೋಚನೆ ಮತ್ತು ವಿಚಾರಗಳಿಗನುಸಾರವಾಗಿ ನಡೆಯಲು ಬಯಸುವ ಜನರಿಂದ ನಿರಾಸೆಗಳು ಎದುರಾಗುತ್ತವೆ.

ಈ ಕಥೆಯಲ್ಲಿ ಎರಡು ಪ್ರಾಮುಖ್ಯವಾದ ವಿಷಯಗಳಿಗೆ ಅವುಗಳನ್ನು ನಾವು ಈಗ ನೋಡಿಕೊಳ್ಳೋಣ. ಸತ್ಯದ ವಿಷಯದಲ್ಲಿ ದೂರದೃಷ್ಟಿಯುಳ್ಳವರಾಗಿರುವದು ಮತ್ತು ವಾಸ್ತವಕ್ಕೆ ಹೊಂದಿಕೆಯಾಗದ ಬೋಧನೆಯಲ್ಲಿ ನಿಲ್ಲುವದಕ್ಕೆ ಒಪ್ಪಿಕೊಳ್ಳದಿರುವದು ಮೊದಲನೆಯದಾಗಿದೆ. ಎರಡನೆಯದಾಗಿ, ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದರ ನಿಮಿತ್ತವಾಗಿ ಎದುರಾಗುವ ಹಿಂಸೆಗಳನ್ನು ಹೇಗೆ ಎದುರಿಸಬೇಕೆಂದು ಸತ್ಯವೇದದ ತತ್ವಗಳನ್ನು ತಿಳಿದುಕೊಳ್ಳುವದರ ಪ್ರಾಮುಖ್ಯತೆಯಾಗಿದೆ.

ನಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ಸತ್ಯದ ಕಡೆ ನಿಂತುಕೊಳ್ಳುವದರ ಪ್ರಾಮುಖ್ಯತೆಯ ಬಗ್ಗೆ ಕಲಿಯಲು ನಾವು ಮುಂದುವರೆಸುತ್ತಿದ್ದಂತೆಯೇ, ಅತ್ಯಂತ ಪ್ರಾಮುಖ್ಯವಾಗಿರುವ ಈ ವಿಷಯಕ್ಕೆ ಸಂಬಂಧಪಟ್ಟಿರುವ ಕೆಲವು ಸತ್ಯವೇದದ ವಚನಗಳನ್ನು ನೋಡಿಕೊಳ್ಳೋಣ.

## ಎ. ಕಲಿಸುವ ಮನೋಭಾವನೆಯನ್ನು ಪಾಲಿಸುವದು

1.ಎ. ಧಾರ್ಮಿಕ ನಾಯಕರ ಮುಖ್ಯ ಚಿಂತೆ ಏನಾಗಿತ್ತು, ಆ ಮನುಷ್ಯನೋ ಅಥವಾ ಅವರ ಸ್ವಂತ ಆಲೋಚನೆಗಳೋ?

ಬಿ. ನಮ್ಮ ನಂಬಿಕೆಯನ್ನು ನಿರಾಸೆಪಡಿಸುವವರ ವಿಷಯದಲ್ಲಿ ನಿರಾಕರಣೆಯ ಬಗ್ಗೆ ಇದು ಏನನ್ನು ಕಲಿಸುತ್ತದೆ?

2.ಎ. ಸತ್ಯವನ್ನು ಕಾಣದಂತೆ ಧಾರ್ಮಿಕ ನಾಯಕರಿಗೆ ಅಡಚಣೆಯನ್ನುಂಟು ಮಾಡಿದ್ದು ಏನು?

ಬಿ. ಸತ್ಯವನ್ನು ಗಣನೆಗೆ ತೆಗೆದುಕೊಳ್ಳುವಂಥ ನಮ್ಮ ಸಾಮರ್ಥ್ಯವನ್ನು ನಾಶಮಾಡುವಂಥದ್ದು ಏನು?

ಲೂಕ 8:11–14

**Reference**: ನೋಟ್ 5, ಸೈತಾನನು ಪುಟ 66.

ಸಿ. ಲೂಕ 8:15 ಯೇಸು ಕ್ರಿಸ್ತನು ಕಲಿಸುವ ಹೃದಯವನ್ನು ಹೇಗೆ ವಿವರಿಸಿದ್ದಾನೆ?

3.ಎ. ಕಲಿಸುವ ಮನೋಭಾವನೆಯನ್ನು ಪಾಲಿಸುವದರ ಪ್ರಾಮುಖ್ಯತೆಯ ಬಗ್ಗೆ ಕೆಳಗಿನ ವಚನಗಳು ಏನನ್ನು ಪ್ರಕಟಿಸುತ್ತವೆ?

ಜ್ಞಾನೋಕ್ತಿ 2:1–8

ಬಿ. ದೇವರ ವಿಷಯದಲ್ಲಿನಾವು ಕಲಿಸುವ ಮನೋಭಾವನೆಯನ್ನು ಪಾಲಿಸದಿರುವದಾದರೆ ಏನಾಗುತ್ತದೆ?

ರೋಮಾ 1:21

4. ಆತ್ಮೀಕ ತಿಳುವಳಿಕೆಯಲ್ಲಿ ಬೆಳೆಯುವದರ ಬಗ್ಗೆ ಸತ್ಯವೇದವು ನಮಗೆ ಕೊಡುವ ಸೂಚನೆ ಏನು?

ಯಾಕೋಬ 1:21–22

ಜ್ಞಾನೋಕ್ತಿ 1:5

5. ದೇವರ ವಾಕ್ಯವಾಗಿರುವ ಸತ್ಯವೇದದೊಂದಿಗೆ, ಆತ್ಮೀಕವಾದ ಹೊಸ ತಿಳುವಳಿಕೆಯು ಸ್ಥಿರತೆಯುಳ್ಳದ್ದಾಗಿರಬೇಕು. ಕೀರ್ತನೆ 119:160 ಇದರ ಬಗ್ಗೆ ಏನನ್ನು ಹೇಳುತ್ತದೆ?

## ಬಿ. ನಂಬಿಕೆಗಾಗಿ ಹಿಂಸೆಗಳನ್ನು ಎದುರಿಸುವದು.

6. ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿರುವ ವಿಶ್ವಾಸಿಗಳಿಗೆ ಸತ್ಯವೇದವು ಕೊಡುವ ಎಚ್ಚರಿಕೆ ಏನು?

ಯೋಹಾನ 15:20

2 ತಿಮೊಥೆ 3:12

7. ನಂಬಿಕೆಗಾಗಿ ಹಿಂಸೆಗಳನ್ನೆದುರಿಸುವವರಿಗೆ ವಾಗ್ದಾನ ಮಾಡಲ್ಪಟ್ಟಿರುವ ಬಹುಮಾನಗಳೇನು?

ಮತ್ತಾಯ 5:10–12

ರೋಮಾ 5:3–5

8.ಎ. ಕ್ರಿಸ್ತನನ್ನು ಅರಿಯದಿರುವವರ ಬಗ್ಗೆ 1 ಕೊರಿಂಥ 2:14 ನಮಗೆ ಏನನ್ನು ಜ್ಞಾಪಕಪಡಿಸುತ್ತದೆ?

ಬಿ. ಆಯ್ಕೆ: ದೇವರನ್ನು ತಡೆಯುವವರ ಪರಿಸ್ಥಿತಿ ಹೇಗಿರುವದೆಂದು ಎಫೆಸ 4:17–19ರಲ್ಲಿ ಹೇಗೆ ವಿವರಿಸಲಾಗಿದೆ?

ಸಿ. ನಮ್ಮನ್ನು ಹಿಂಸೆಪಡಿಸುವವರ ವಿಷಯವಾಗಿ ತೀರ್ಪುಗಳನ್ನು ಹೊರಡಿಸುವವರಾಗಿ ಪ್ರತಿಕ್ರಿಯಿಸದೆ, ಏನನ್ನು ನೆನಪಿಗೆ ತಂದುಕೊಂಡು ನಾವು ಪ್ರತಿಕ್ರಿಯಿಸುವವರಾಗಿರಬೇಕು?

ತೀತ 3:3–5

9. ನಮ್ಮ ನಂಬಿಕೆಯ ನಿಮಿತ್ತವಾಗಿ ಇತರರು ನಮ್ಮ ಮೇಲೆ ಆಕ್ರಮಣಗಳನ್ನು ಮಾಡುವಾಗ ನಾವು ಹೇಗೆ ಪ್ರತಿಕ್ರಿಯಿಸಬೇಕೆಂದು ಸತ್ಯವೇದವು ನಮಗೆ ಸೂಚಿಸುತ್ತದೆ?

1 ಕೊರಿಂಥ 15:58

1 ಪೇತ್ರ 2:21–23

10.ಎ. ಮತ್ತಾಯ 5:14ರಲ್ಲಿ, ಯೇಸು ಕ್ರಿಸ್ತನು ವಿಶ್ವಾಸಿಗಳನ್ನು "ಲೋಕಕ್ಕೆ ಬೆಳಕು" ಎಂದು ಹೇಳಿದ್ದಾನೆ. ನಮ್ಮ ಸುತ್ತಲಿನ ಲೋಕದಲ್ಲಿ ನಾವು ಉತ್ತಮರಾದ ಸಾಕ್ಷಿಗಳಾಗಿರಲು ಹೇಗೆ ಸಾಧ್ಯ?

2 ತಿಮೊಥೆ 2:24–26

1 ಪೇತ್ರ 3:15–16*

ಬಿ. 1 ಯೋಹಾನ 4:7ರ ಪ್ರಕಾರ ಒಬ್ಬ ಕ್ರೈಸ್ತನ ಗುರುತು ಏನಾಗಿರಬೇಕು?

* ಕ್ರೈಸ್ತತ್ವದ ಬಗ್ಗೆ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ಸಹಾಯವಾಗುವ ಕೆಲವು ಪುಸ್ತಕಗಳು:

Peter Kreeft, Ronald K. Tacelli, Handbook of Christian Apologetics, Intervarsity Press.
Kenneth Boa, Larry Moody, I'm Glad You Asked, Victor Books.
Josh McDowell, More Than a Carpenter, Here's Life Publishers.
Paul Little, Know Why You Believe, Inter Varsity Press.
John Warwick Montgomery, History and Christianity, Here's Life Publishers.
C.S.Lewis, Mere Christianity.

11. ನಮ್ಮ ಜೀವಿತಗಳನ್ನು ತುಂಬಿಸು ಎಂದು ನಾವು ಪವಿತ್ರಾತ್ಮನನ್ನು ಕೇಳಿಕೊಳ್ಳುವಾಗ (ಎಫೆಸ 5:18ಬಿ), ನಮ್ಮ ನಂಬಿಕೆಗೆ ಎದುರಾಗುವ ಹಿಂಸೆಗಳನ್ನು ಜಯಿಸಲು ಆತನು ನಮಗೆ ಹೇಗೆ ಸಹಾಯವನ್ನು ಮಾಡುತ್ತಾನೆ?

ಲೂಕ 12:11–12

**Reference**: ನೋಟ್ 2, ಪವಿತ್ರಾತ್ಮನು ಪುಟ 33.

## ಸಾರಾಂಶ

12. ಆತ್ಮೀಕ ಸತ್ಯದಲ್ಲಿ ಬೆಳವಣಿಗೆಯನ್ನು ಕಾಣದಂತೆ ನಿಮಗೆ ಅಡ್ಡಿಪಡಿಸುತ್ತಿರುವದು ನಿಮ್ಮ ಜೀವಿತದಲ್ಲಿ ಏನಾದರೂ ಇದೆಯೇ?

13. ಆತ್ಮೀಕವಾದ ಹೊಸ ಸತ್ಯವನ್ನು ಕೇಳುವಾಗ ಯಾವ ವಿಷಯದಲ್ಲಿ ನೀವು ಎಚ್ಚರಿಕೆಯನ್ನು ವಹಿಸಬೇಕು?

14.ಎ. ನಿಮ್ಮ ನಂಬಿಕೆಗೆ ನೀವು ಅಡಚಣೆಯನ್ನನುಭವಿಸಿದ್ದು ಯಾವಾಗ? ಕ್ರಿಸ್ತನು ಯಾರಾಗಿದ್ದಾನೆ ಮತ್ತು ಆತನು ನಿಮ್ಮ ಜೀವಿತದಲ್ಲಿ ಮಾಡಿರುವ ಕಾರ್ಯಗಳ ಬಗ್ಗೆ ನಿಶಬ್ದರಾಗಿರುವಂತೆ ಅಥವಾ ಅತೃಪ್ತರಾಗಿ ಕಾಣಿಸಿಕೊಳ್ಳುವಂತೆ ನಿಮ್ಮನ್ನು ಶೋಧನೆಗೆ ಒತ್ತಾಯಪಡಿಸುವ ಪರಿಸ್ಥಿತಿಗಳೇನು?

ಬಿ. ಈ ಅಧ್ಯಯನವು ನಿಮ್ಮನ್ನು ಏನು ಮಾಡುವಂತೆ ಪ್ರೋತ್ಸಾಹಪಡಿಸಿದೆ?

## ಪಾಠ 12 ನೋಟ್ಸ್

1 ಯಾರು ಪಾಪ ಮಾಡಿದರು...? (9:2). 'ಪಾಪವಿಲ್ಲದೆ ಮರಣವಿಲ್ಲ ಮತ್ತು ಅಪರಾಧವಿಲ್ಲದೆ ಶ್ರಮೆಗಳಿಲ್ಲ' ಎಂಬ ತತ್ವವನ್ನು ರಬ್ಬೂನಿಗಳು ಬೆಳೆಸಿಕೊಂಡಿದ್ದರು. ತಾಯಿಯ ಗರ್ಭದಲ್ಲಿರುವ ಮಗು ಅಥವಾ ಇನ್ನೂ ಅಸ್ತಿತ್ವಕ್ಕೆ ಬಾರದಿರುವ ಹಂತದಲ್ಲಿಯೇ ಅದರ ಆತ್ಮವು ಪಾಪ ಮಾಡಿರುತ್ತದೆ ಎಂದು ಅವರು ಆಲೋಚಿಸುತ್ತಿದ್ದರು. ಮಾತ್ರವಲ್ಲದೇ, ಕೆಲವರಿಗೆ ಅಘೋರವಾದ ಶಿಕ್ಷೆ ಪ್ರಾಪ್ತವಾಗಿರುವದಕ್ಕೆ ಕಾರಣ ಅವರ ತಂದೆತಾಯಿಗಳು ಮಾಡಿರುವ ಪಾಪ ಎಂಬದಾಗಿಯೂ ಅವರು ಹೇಳುತ್ತಿದ್ದರು. *The NIV Study Bible*, ಪುಟ 1614.

"ಆದರೆ ನಂಬಿಕೆಯ ಬಗ್ಗೆ ಕಲಿಸಲು ಮತ್ತು ದೇವರನ್ನು ಮಹಿಮೆಪಡಿಸಲು ಯೇಸು ಕ್ರಿಸ್ತನು ಆ ಮನುಷ್ಯನ ಕಷ್ಟವನ್ನು ಬಳಸಿಕೊಂಡನು. ಒಳ್ಳೇ ನಡೆಗಳಿಗೆ ಯಾವಾಗಲೂ ಹೊಗಳಿಕೆಗಳು ಮತ್ತು

ಕೆಟ್ಟ ನಡತೆಗಳಿಗೆ ಯಾವಾಗಲೂ ಶಿಕ್ಷೆ ಸಿಗದಿರುವಂಥ ಪಾಪಮಯವಾದ ಲೋಕದಲ್ಲಿ ನಾವು ಜೀವಿಸುತ್ತಿದ್ದೇವೆ. ಆದದ್ದರಿಂದ, ಮುಗ್ಧ ಜನರು ಕೆಲವೊಮ್ಮೆ ಕಷ್ಟಗಳಿಗೆ ಗುರಿಯಾಗುತ್ತಾರೆ. ನಾವು ಕೇಳಿಕೊಳ್ಳುವಾಗಲೆಲ್ಲಾ ದೇವರು ನಮ್ಮ ಶ್ರಮೆಗಳನ್ನು ತೆಗೆದುಬಿಡುವದಾದರೆ ನಾವು ಆತನನ್ನು ನಮ್ಮ ರಕ್ಷಣೆ ಮತ್ತು ಅನುಕೂಲತೆಗಳಿಗಾಗಿ ಹಿಂಬಾಲಿಸುತ್ತೇವೆಯೇ ಹೊರತು ಪ್ರೀತಿ ಮತ್ತು ಭಯಭಕ್ತಿಯ ಕಾರಣದಿಂದಲ್ಲ. ನಮ್ಮ ಶ್ರಮೆಗಳಿಗೆ ಕಾರಣಗಳು ಏನೇ ಆಗಿರಬಹುದು, ಅವುಗಳನ್ನು ಬಗೆಹರಿಸಿಕೊಳ್ಳಲು ಯೇಸು ಕ್ರಿಸ್ತನು ನಮಗೆ ಸಹಾಯ ಮಾಡುವವನಾಗಿದ್ದಾನೆ. ನೀವು ಅನಾರೋಗ್ಯ, ದುಃಖ ಅಥವಾ ಅಂಗವಿಕಲರಾಗಿ ಕಷ್ಟಪಡುತ್ತಿರುವದಾದರೆ, 'ಇದು ನನಗೆ ಯಾಕೆ ಸಂಭವಿಸಿದೆ? ಅಥವಾ 'ನಾನು ಮಾಡಿರುವ ತಪ್ಪಾದರೂ ಏನು?' ಎಂದು ಪ್ರಶ್ನಿಸಲು ಮುಂದಾಗಬೇಡಿರಿ ಬದಲಾಗಿ ನಿಮ್ಮ ಜೀವಿತದಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಬದಲಾಯಿಸಿಕೊಳ್ಳಲು ಬಲ ಸಾಮರ್ಥ್ಯ ಮತ್ತು ಅದರ ಸ್ಪಷ್ಟ ಚಿತ್ರಣವನ್ನು ಕೊಡುವಂತೆ ದೇವರನ್ನು ಕೇಳಿಕೊಳ್ಳಿರಿ." *NIV Life Application Bibe*, ಪುಟ 1895.

2 ಆತನು ಸಬ್ಬತ್ ದಿನವನ್ನು ಪಾಲಿಸುವದಿಲ್ಲ (9:16). ಯೇಸು ಕ್ರಿಸ್ತನು ಮಣ್ಣಿನಿಂದ ಕೆಸರನ್ನು ಮಾಡಿ ಕುರುಡನಾಗಿ ಹುಟ್ಟಿದವನನ್ನು ಗುಣಪಡಿಸಿದಾಗ, ಸಬ್ಬತ್ ದಿನದಲ್ಲಿ ಯಾವ ಕೆಲಸವನ್ನೂ ಮಾಡಬಾರದಾಗಿದ್ದರೂ ಆತನು ಕೆಸರು ಮಾಡಿ, ಗುಣಪಡಿಸಿದ್ದರಿಂದ ಸಬ್ಬತ್ ದಿನದ ನಿಯಮವನ್ನು ಉಲ್ಲಂಘಿಸಿದನು. ಸಬ್ಬತ್ ದಿನದಲ್ಲಿ ಫರಿಸಾಯರು ಯಾವುದೇ ಕೆಲಸವನ್ನು ಮಾಡದೆ ತಮ್ಮ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ರಬ್ಬಿಗಳ ಬೋಧನೆಯು ಬೇರೆ ಯಾವುದೇ ವಿಷಯಗಳಿಗಿಂತಲೂ ಇದಕ್ಕೆ ಹೆಚ್ಚಿನ ಒತ್ತು ಕೊಡುತ್ತದೆ. ಇದರಲ್ಲಿ ಬರೆಯಲ್ಪಟ್ಟಿರುವದನ್ನೆಲ್ಲಾ ಎಷ್ಟೇ ಹೊರಯಾದದ್ದಾಗಿದ್ದರೂ, ಗೊಂದಲಮಯವಾಗಿದ್ದರೂ, ಯಾವ ಕೆಲಸವನ್ನೂ ಮಾಡದೆ, ಪರಿಪೂರ್ಣವಾಗಿ ವಿಶ್ರಾಂತಿಯನ್ನು ಪಡೆದು, ಸಬ್ಬತ್ ದಿನದಲ್ಲಿ ಸಂತೋಷಿಸಬೇಕೆಂಬದೇ ಪ್ರಧಾನ ಉದ್ದೇಶವಾಗಿದೆ." ಸಬ್ಬತ್ ದಿನದ ಕುರಿತಾಗಿ ರಬ್ಬಿಗಳು ಕೊಟ್ಟಿರುವ ನಿಯಮಗಳೆಲ್ಲವೂ ಈ ಅಧ್ಯಯನಕೆ ಬಹಳಷ್ಟು ದೊಡ್ಡದಾಗಿವೆ. ನಿಜವಾಗಿ ನೋಡುವದಾದರೆ, ಬಾಬೇಲಿನ ತಾಲ್ಮುಡ್‌ನಲ್ಲಿ ಸಬ್ಬತ್ ದಿನದ ನಿಯಮಗಳ ಬಗ್ಗೆ 24 ಅಧ್ಯಾಯಗಳಿವೆ ಮತ್ತು ಅವೆಲ್ಲವುಗಳನ್ನು ಒಂದೇ ನಿಯಮದಡಿಯಲ್ಲಿ ತರಲು ಒಬ್ಬ ರಬ್ಬಿ ಎರಡೂವರೆ ವರ್ಷಗಳು ಕೇವಲ ಅಧ್ಯಯನದಲ್ಲಿಯೇ ಕಳೆದರೆಂದು ಹೇಳಲಾಗಿದೆ. A. Edersheim, *The Life and Times of Jesus the Messiah*, Appendix XVII, ಪುಟ 777.

3 **Reference**: ನೋಟ್ 1, *ಯೇಸುವಿನ ಸೂಚಕಕಾರ್ಯಗಳು*, ಪುಟ 75.

# ಪಾಠ 13

# ಯೇಸು ಕ್ರಿಸ್ತನೇ ಒಳ್ಳೇ ಕುರುಬನು

## ಯೋಹಾನ 10

ಕುರುಡನಾಗಿ ಹುಟ್ಟಿದವನನ್ನು ಯೇಸು ಕ್ರಿಸ್ತನು ಗುಣಪಡಿಸಿದಾಗ, ಯೆಹೂದ್ಯ ನಾಯಕರಲ್ಲಿ ಬಹಳಷ್ಟು ತುಮುಲವುಂಟಾಯಿತು (ಅಧ್ಯಾಯ 9). ಅಂತಿಮವಾಗಿ ಗುಣಹೊಂದಿದ ವ್ಯಕ್ತಿಯು ಯೇಸು ಕ್ರಿಸ್ತನ ಕುರಿತಾಗಿ ನೀಡಿದ ಸಾಕ್ಷಿಯ ನಿಮಿತ್ತವಾಗಿ ಅವನನ್ನು ದೇವಾಲಯದಿಂದ ಹೊರಗೆ ಹಾಕಿದರು. ಆದರೆ ಯೇಸು ಕ್ರಿಸ್ತನಿಗೆ ಈ ಮನುಷ್ಯನು ಹೊರಗೆ ಸಿಕ್ಕಿದನು, ಆತನೊಂದಿಗೆ ತನ್ನ ಸಂಬಂಧವನ್ನು ಆತನು ಬೆಳೆಸಿದನು ಮತ್ತು ತನ್ನ ಹಾಗೂ ಒಳ್ಳೆಯ ಕುರುಬನ ಕುರಿತಾಗಿ ಆತನಿಗೆ ಮತ್ತು ಕೂಡಿಬಂದಿದ್ದ ಜನರಿಗೆ ಕೆಲವು ವಿಷಯಗಳನ್ನು ಹೇಳಲು ಆ ಸಂದರ್ಭವನ್ನು ಬಳಸಿಕೊಂಡನು.

ಧಾರ್ಮಿಕ ನಾಯಕರು ತಮ್ಮನ್ನು ಕುರುಬರೆಂದು ಹೇಳಿಕೊಳ್ಳುತ್ತಿದ್ದರು ಆದರೆ ಕುರುಡನಾಗಿ ಹುಟ್ಟಿದವನನ್ನು ಅವರು ಕರುಣಿಸಲೇ ಇಲ್ಲ, ಯೇಸು ಕ್ರಿಸ್ತನು ಅವರಂತೆ ನಡೆದುಕೊಳ್ಳದೆ ತನ್ನನ್ನು ಒಳ್ಳೇ ಕುರುಬನಾಗಿ ಪ್ರದರ್ಶಿಸಿಕೊಂಡನು. ಕುರಿಗಳು ಒಳಗೆ ಬರಲು ನಾನೇ ಬಾಗಿಲು ಅಥವಾ ದಾರಿ ಎಂದು ಯೇಸು ಕ್ರಿಸ್ತನು ಹೇಳಿದನು. ಆತನ ಮೂಲಕ ಒಳಗೆ ಪ್ರವೇಶಿಸುವವರೆಲ್ಲರೂ ರಕ್ಷಣೆಯನ್ನು ಹೊಂದುವರು ಮತ್ತು ಸಮೃದ್ಧಿಕರವಾದ ಜೀವವನ್ನು ಪಡೆಯುವರು. ಕಳ್ಳರು, ಖದೀಮರು, ಮತ್ತು ತೋಳಗಳು ಚದುರಿಸಲು ಮತ್ತು ಕೊಲ್ಲಲು ಬರುತ್ತವೆ, ಆದರೆ ನಾನಾದರೋ ಕುರಿಗಳಿಗಾಗಿ ನನ್ನ ಸ್ವಂತ ಪ್ರಾಣವನ್ನೇ ಕೊಡಲು ಬಂದಿದ್ದೇನೆ ಎಂದು ಯೇಸು ಕ್ರಿಸ್ತನು ಹೇಳಿದನು. ತನ್ನ ಸ್ವರವನ್ನು ಕೇಳಿ, ತನ್ನ ಹಿಂಡಿನೊಳಗೆ ಸೇರಿಕೊಳ್ಳುವ ಬೇರೆ ಕುರಿಗಳ (ಯೆಹೂದ್ಯರಲ್ಲ) ಬಗ್ಗೆಯೂ ಆತನು ಮಾತನಾಡಿದನು. ಕುರಿಗಳಿಗಾಗಿ ನನ್ನ ಪ್ರಾಣವನ್ನು ಕೊಟ್ಟು ಮತ್ತೆ ತನ್ನ ಪ್ರಾಣವನ್ನು ಪಡೆದುಕೊಳ್ಳುವ ಅಧಿಕಾರವನ್ನು ತಂದೆಯಾದ ದೇವರು ನನಗೆ ಕೊಟ್ಟಿದ್ದಾನೆ ಎಂದು ಸಹ ಯೇಸು ಕ್ರಿಸ್ತನು ಪ್ರಕಟಪಡಿಸಿದನು.

ಯೇಸು ಕ್ರಿಸ್ತನ ಮಾತುಗಳನ್ನು ಕೇಳಿ ಯೆಹೂದ್ಯರ ಪ್ರತಿಕ್ರಿಯೆಗಳು ವಿಭಜನೆಗೊಂಡವು. ಯೇಸುವಿಗೆ ದೆವ್ವ ಹಿಡಿದಿದೆ ಎಂದು ಕೆಲವರು ಹೇಳಿದರು ಆದರೆ ಇನ್ನೂ ಕೆಲವರು ದೆವ್ವ ಹಿಡಿದಿರುವ ಯಾವ ವ್ಯಕ್ತಿಯು ಕುರುಡರಿಗೆ ಕಣ್ಣು ಕೊಡಲಾರನು ಅಥವಾ ಹೀಗೆ ಬೋಧಿಸಲಾರನು ಎಂದು ವಾದಿಸಿದರು.

ಪ್ರತಿಷ್ಠೆಯ ಹಬ್ಬದ ಎಂಟನೆಯ ದಿವಸದಲ್ಲಿ, ಯೇಸು ಕ್ರಿಸ್ತನು ದೇವಾಲಯದಲ್ಲಿ ನಡೆದಾಡುತ್ತಿದ್ದಾಗ, ನೀನೇ ಮೆಸ್ಸೀಯನೆಂದು ಬಹಿರಂಗವಾಗಿ ಪ್ರಕಟಿಸು ಎಂದು ಯೆಹೂದ್ಯರು ಯೇಸುವಿಗೆ ಸವಾಲನ್ನು ಹಾಕಿದರು. ಈಗಾಗಲೇ ನಾನದನ್ನು ಮಾಡಿದ್ದೇನೆ ಎಂದು ಯೇಸು ಉತ್ತರಿಸಿದನು, ಆತನ ಸೂಚಕಕಾರ್ಯಗಳು1 ಮತ್ತು ಯಥಾರ್ಥತೆಯು ಅವನ ಮಾತುಗಳನ್ನು ನಿರೂಪಿಸಿದ್ದವು, ಆದರೂ ಅವರು ಆತನ ಕುರಿಗಳಾಗಿರಲಿಲ್ಲವಾದ್ದರಿಂದ ಆತನ ಮಾತುಗಳನ್ನು ನಂಬಲಿಲ್ಲ. ನನ್ನ ಕುರಿಗಳು ನನ್ನ ಮಾತುಗಳನ್ನು ಕೇಳುವವು, ಅರ್ಥಮಾಡಿಕೊಳ್ಳುವವು ಮತ್ತು ನನ್ನನ್ನು ಹಿಂಬಾಲಿಸುವವು ಎಂದು ಯೇಸು ಮತ್ತೊಮ್ಮೆ ಹೇಳಿದನು. ಅವುಗಳು ಯೇಸುವಿನ ಮತ್ತು ತಂದೆ ಕೈಗಳಲ್ಲಿ ಶಾಶ್ವತವಾಗಿ

ಸುರಕ್ಷಿತವಾಗಿರುವವು. ನಂತರ ಯೇಸು ಕ್ರಿಸ್ತನು ದೈವೀಕತೆಯ ಕುರಿತಾಗಿ ಸ್ಪಷ್ಟವಾದ ಹೇಳಿಕೆಯನ್ನು ನೀಡಿದನು: "ನಾನೂ ತಂದೆಯು ಒಂದೇ ಆಗಿದ್ದೇವೆ" (10:30). (ನಾನು ದೇವರು ಒಂದೇ ಎಂದು ಆತನು ಹೇಳಿದಾಗ) ಯೇಸುವು ದೇವದೂಷಣೆ ಮಾಡಿದನೆಂದು ಅವನನ್ನು ಕೊಲ್ಲಲು ಯೆಹೂದ್ಯರು ಕಲ್ಲುಗಳನ್ನು ತೆಗೆದುಕೊಂಡಾಗ, ನನ್ನ ಹೇಳಿಕೆಗಳನ್ನು ನಿರೂಪಿಸುವ ಪುರಾವೆಗಳನ್ನು ನಿಮ್ಮ ಕಣ್ಣು ತೆರೆದು ನೋಡಿರಿ ಎಂದು ಅವರಿಗೆ ಹೇಳಿದನು. ಆತನಲ್ಲಿ ಯಾವುದೇ ಪಾಪಮಯವಾದ ಮಾತುಗಳಾಗಲಿ ಅಥವಾ ಕ್ರಿಯೆಗಳಾಗಲಿ ಅವರಿಗೆ ಸಿಗಲಿಲ್ಲ ಮತ್ತು ಆತನು ಮಾಡಿದ ಕರುಣೆಯ ಕಾರ್ಯಗಳೆಲ್ಲವೂ ತಂದೆಯಾದ ದೇವರ ಸ್ವಭಾವವೇ ಆತನ ಜೀವಿತದಲ್ಲಿ ಪ್ರತಿಬಿಂಬಿಸಿತು. ಯೇಸು ಏನೇ ಹೇಳಿದರೂ, ಆತನ ವೈರಿಗಳು ಆತನನ್ನು ಸಿಕ್ಕಿಸಲು ಪ್ರಯತ್ನಿಸುತ್ತಿದ್ದರು, ಆದರೆ ಆತನು ಅವರ ಆಲೋಚನೆಗಳನ್ನು ತಿಳಿದುಕೊಂಡು ತಪ್ಪಿಸಿಕೊಳ್ಳುತ್ತಿದ್ದನು.

ಇದಾದ ಮೇಲೆ ಯೇಸು ಕ್ರಿಸ್ತನು ಯೋರ್ದಾನ್ ಹೊಳೆಯನ್ನು ದಾಟಿ, ಸ್ನಾನಿಕನಾದ ಯೋಹಾನನು ಮೊದಲು ಸೇವೆಯನ್ನು ಮಾಡುತ್ತಿದ್ದ ಸ್ಥಳಕ್ಕೆ ಹೋದನು. ಅನೇಕ ಜನರು ಅಲ್ಲಿಯೂ ಯೇಸುವಿನ ಬಳಿಗೆ ಬಂದರು ಮತ್ತು ಆತನಲ್ಲಿ ನಂಬಿಕೆಯನ್ನಿಟ್ಟರು.

## ಯೋಹಾನ 10:1–21 ಓದಿರಿ.

1.ಎ. ಕುರಿಗಳು ಮತ್ತು ಅವುಗಳ ಕುರುಬನ ಉದಾಹರಣೆಯನ್ನು ಉಪಯೋಗಿಸುವದರ ಮೂಲಕ, ದೇವರ ಮಂದೆಯಾಗಿರುವ ಇಸ್ರಾಯೇಲಿನಲ್ಲಿನ (ನಂಬಿಗಸ್ಥರ ವಿಷಯವಾಗಿ) ಒಳ್ಳೇ ಕುರುಬನಾಗಿರುವ ತನ್ನ ಮತ್ತು ಧಾರ್ಮಿಕ ನಾಯಕರ ನಡುವೆಯಿದ್ದ ವ್ಯತ್ಯಾಸವನ್ನು ಯೇಸು ಹೇಗೆ ವ್ಯಕ್ತಪಡಿಸಿದನು (10:1–5)?

**Reference**: ನೋಟ್ 3, ಪುರಾತನ ಕಾಲದಲ್ಲಿ ಪೂರ್ವದಲ್ಲಿ ಕುರಿಕಾಯುವದು, ಪುಟ 111.

ಬಿ. ಯೆಹೆಜ್ಕೇಲ 34:2–5,10ರಲ್ಲಿ ವಿವರಿಸಲಾಗಿರುವ ಇಸ್ರಾಯೇಲಿನ ಅಪನಂಬಿಗಸ್ಥರಾದ ನಾಯಕರ (ಕುರುಬರ) ಗುಣಲಕ್ಷಣಗಳನ್ನು ಪಟ್ಟಿ ಮಾಡಿರಿ?

**Reference**: ನೋಟ್ 2, ದೇವ ಜನರ ಕುರುಬನು, ಪುಟ 111.

2. ಜನರು ತನ್ನ ಮಾತುಗಳನ್ನು ಅರ್ಥಮಾಡಿಕೊಳ್ಳದಿದ್ದಾಗ, ಕುರಿಗಳು ಹಟ್ಟಿಯೊಳಗೆ ಪ್ರವೇಶಿಸುವ ಬಾಗಿಲು ನಾನೇ ಎಂದು ಯೇಸು ತನ್ನ ಕುರಿತಾಗಿ ವಿವರಿಸಿದನು. ನಾನೊಬ್ಬನೇ ಕೊಡಲು ಶಕ್ತನು ಎಂದು ಯೇಸು ಯಾವುದರ ಬಗ್ಗೆ ಹೇಳಿದನು (10:9; 14:6 ಸಹ ನೋಡಿರಿ)?

**ಗಮನಿಸಿರಿ:** ನನಗಿಂತಲೂ ಮುಂಚೆ...ಇದ್ದ ಎಲ್ಲರೂ (10:8). ಇಲ್ಲಿ ಯೇಸು ಕ್ರಿಸ್ತನು "ಸುಳ್ಳು ಕುರುಬರ" ಬಗ್ಗೆ ಮಾತನಾಡುತ್ತಿದ್ದಾನೆ, ಹೇಗೆಂದರೆ ಇಸ್ರಾಯೇಲರ ಚರಿತ್ರೆಯಾದ್ಯಂತ ಫರಿಸಾಯರು ಮತ್ತು ಮಹಾಯಾಜಕರಿದ್ದರು ಆದರೆ ಅವರು ಹಳೆಯ ಒಡಂಬಡಿಕೆಯ ನಂಬಿಗಸ್ಥ ಪ್ರವಾದಿಗಳಾಗಿರಲಿಲ್ಲ.

3. ಯೇಸು ಕ್ರಿಸ್ತನು ತನ್ನ ಮತ್ತು ಕುರಿಗಳ ವೈರಿಗಳ ನಡುವೆಯಿದ್ದ ವ್ಯತ್ಯಾಸವನ್ನು ಹೇಗೆ ತಿಳಿಯಪಡಿಸಿದನು (10:10)?

4.ಎ. ತನ್ನ ಮತ್ತು ಇಸ್ರಾಯೇಲಿನಲ್ಲಿ ತಮ್ಮನ್ನೇ ಕುರುಬರೆಂದು ಹೇಳಿಕೊಳ್ಳುತ್ತಿದ್ದರ ಬಗ್ಗೆ ಯೇಸು ತಿಳಿಸಿದ ಮತ್ತಷ್ಟು ವ್ಯತ್ಯಾಸಗಳೇನು (10:11–13)?

ಬಿ. ತನ್ನ ಮತ್ತು ತನ್ನ ಕುರಿಗಳ ನಡುವೆಯಿರುವ ಸಂಬಂಧವನ್ನು ಯೇಸು ಕ್ರಿಸ್ತನು ಹೇಗೆ ವಿವರಿಸಿದನು (10:14–16)?

**ಗಮನಿಸಿರಿ:** ಈ ಹಟ್ಟಿಗೆ ಸೇರದ ಕುರಿಗಳು (10:16) ಮುಂದೆ ನಂಬುವ ಅನ್ಯರನ್ನು ಸೂಚಿಸುತ್ತದೆ.

5.ಎ. ಒಳ್ಳೇ ಕುರುಬನಾಗಿ ತನ್ನ ಜವಾಬ್ದಾರಿಕೆ ಏನೆಂದು ಮುಂದಾಗಿ ಹೇಳಿದನು (10:17–18)?

ಬಿ. ಈ ಮಾತುಗಳ ನಿಮಿತ್ತವಾಗಿ ಯೆಹೂದ್ಯರಲ್ಲಿ ಏನೆಲ್ಲಾ ಅಭಿಪ್ರಾಯಗಳು ನೆಲೆಗೊಂಡವು (10:19–21)?

## ಯೋಹಾನ 10:22–42 ಓದಿರಿ.

6. ನೀನೇ ಮೆಸ್ಸಿಯನೆಂದು ಬಹಿರಂಗವಾಗಿ ಘೋಷಿಸು ಎಂದು ಯೇಸುವಿಗೆ ಯೆಹೂದ್ಯರು ಸವಾಲನ್ನು ಹಾಕಿದಾಗ, ಆತನು ನೀಡಿದ ಪ್ರತ್ಯುತ್ತರ ಏನು (10:25–26)?

7.ಎ. ಯೋಹಾನ 10:27–29ರಲ್ಲಿ ಕೊಡಲಾಗಿರುವ ಯೇಸು ಕ್ರಿಸ್ತನ ಕುರಿಗಳ ಸ್ವಾಭಾವವನ್ನು ಪಟ್ಟಿ ಮಾಡಿರಿ?

ಬಿ. ತನ್ನ ಬೋಧನೆಯ ಯಾವ ವಿಷಯದ ಸಂಬಂಧದಲ್ಲಿ ಯೇಸು ನೀಡಿದ ಹೇಳಿಕೆ ಆತನ ವೈರಿಗಳ ದೃಷ್ಟಿಯಲ್ಲಿ ದೇವದೂಷಣೆಯಂತೆ ಕಂಡಿತು (10:30)?

**ಗಮನಿಸಿರಿ:** ನಾನೂ ನನ್ನ ತಂದೆಯು ಒಂದೇ ಆಗಿದ್ದೇವೆ (10:30) "ದೈವೀಕತೆಯ ಸಂಬಂಧದಲ್ಲಿ ಯೇಸು ಕ್ರಿಸ್ತನು ನೀಡಿದ ಅತ್ಯಂತ ಸ್ಪಷ್ಟವಾದ ಹೇಳಿಕೆ ಇದಾಗಿದೆ' ಯೇಸು ಕ್ರಿಸ್ತನು ಮತ್ತು ತಂದೆ ಇಬ್ಬರೂ ಒಂದೇ ವ್ಯಕ್ತಿಯಲ್ಲ ಬದಲಾಗಿ ಅವರಿಬ್ಬರೂ ತಮ್ಮ ಅಸ್ತಿತ್ವ ಮತ್ತು ಸ್ವಭಾವದಲ್ಲಿ ಒಂದೇ ಆಗಿದ್ದಾರೆ. ಆದ್ದರಿಂದ ಯೇಸು ಕ್ರಿಸ್ತನು ಕೇವಲ ಒಳ್ಳೆಯ ಬೋಧಕನಷ್ಟೆ ಅಲ್ಲ––ಆತನೇ ದೇವರಾಗಿದ್ದಾನೆ. ನಾನೇ ದೇವರು ಎಂದು ಆತನು ನೀಡಿದ ಹೇಳಿಕೆಯಲ್ಲಿ ಯಾವುದೇ ತಪ್ಪುಗಳಿಲ್ಲ. ಧಾರ್ಮಿಕ ನಾಯಕರು ಆತನನ್ನು ಕೊಲ್ಲಲು ಪ್ರಯತ್ನಿಸಿದರು ಯಾಕೆಂದರೆ, ಯಾರಾದರೂ ತನ್ನನ್ನೇ ದೇವರೆಂದು ಹೇಳಿಕೊಂಡರೆ ಅವನು ಸಾಯಬೇಕೆಂದು ಅವರ ಧರ್ಮಶಾಸ್ತ್ರವು ಹೇಳುತ್ತದೆ (ಯಾಜಕಕಾಂಡ 24:16)." Life Application Bible (NIV), ಪುಟ 1898.

8. ದೇವದೂಷಣೆ ಮಾಡಿದನೆಂದು ಆತನು ಕೊಲ್ಲಲು ಯೆಹೂದ್ಯರು ಕಲ್ಲುಗಳನ್ನು ತೆಗೆದುಕೊಂಡಾಗ, ಯಾವುದರಿಂದ ಅವರಿಗೆ ಸತ್ಯವು ಕಾಣಿಸುವದು ಎಂದು ಯೇಸು ಕ್ರಿಸ್ತನು ಹೇಳಿದನು (10:32)?

**Reference**: ನೋಟ್ 9, ಯೇಸುವಿನ ಸೂಚಕಕಾರ್ಯಗಳು, ಪುಟ 75.

9. ನಾಯಕರನ್ನು ಮತ್ತು ನ್ಯಾಯಾಧಿಪತಿಗಳನ್ನು ಸತ್ಯವೇದವು ದೇವರೆಂದು ಸೂಚಿಸುವದಾದರೆ (ಕೀರ್ತನೆ 82:6), ಲೋಕಕ್ಕೆ ಕಳುಹಿಸಲ್ಪಟ್ಟಿರುವ ಮನುಷ್ಯಕುಮಾರನನ್ನು ಎಷ್ಟರ ಮಟ್ಟಿಗೆ ದೇವರೆಂದು ಕರೆಯಬೇಕೆಂಬದಾಗಿ ಯೇಸು ಹೇಳಿದನು (10:34–36). ಏನನ್ನು ಮತ್ತು ಯಾಕೆ ವೀಕ್ಷಿಸಬೇಕೆಂದು ಯೇಸು ಅವರಿಗೆ ಪ್ರಬೋಧಿಸಿದನು (10:37–38)?

10. ಯೇಸು ಕ್ರಿಸ್ತನು ಯೆರೂಸಲೇಮಿನಲ್ಲಿ ತನ್ನ ವೈರಿಗಳ ಆಲೋಚನೆಗಳನ್ನು ಗ್ರಹಿಸಿಕೊಂಡು ತಪ್ಪಿಸಿಕೊಂಡಾಗ ಏನಾಯಿತು (10:39–42)?

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವದು

## ಅಭದ್ರತೆಯನ್ನು ಜಯಿಸುವದು

ಸತ್ಯವೇದದಾದ್ಯಂತೆ ದೇವರು ತನ್ನನ್ನು ಕುರುಬನೆಂದು ಹೇಳಿಕೊಂಡಿದ್ದಾನೆ. ಸತ್ಯವೇದದ ಸಮಯದಲ್ಲಿ ಜನರ ಕುರುಬನ ಪಾತ್ರದ ಬಗ್ಗೆ ಹೆಚ್ಚು ತಿಳುವಳಿಕೆಯುಳ್ಳವರಾಗಿದ್ದರು, ಯಾಕೆಂದರೆ ಕುರಿ ಸಾಕಾಣಿಕೆ ಆಗ ಅತ್ಯಂತ ಸಾಮಾನ್ಯವಾದ ವಿಷಯವಾಗಿತ್ತು. ಒಳ್ಳೇ ಕುರುಬನಾಗಿರುವ ನಾನು ನನ್ನ ಕುರಿಗಳಿಗೋಸ್ಕರ ಸ್ವಂತ ಪ್ರಾಣವನ್ನೇ ಕೊಡುವೆನೆಂದು ಯೇಸು ತನ್ನ ಬಗ್ಗೆ ಹೇಳಿಕೊಳ್ಳುತ್ತಾ, ತನ್ನ ಹಿಂಬಾಲಕರಿಗೆ ರಕ್ಷಣೆಯ ವಾಗ್ದಾನ, ಮಾರ್ಗದರ್ಶನ ಮತ್ತು ಭದ್ರತೆಯನ್ನು ಅವರಿಗೆ ಪರಿಚಿತವಾದ ರೀತಿಯಲ್ಲಿ ನೀಡಿದನು.

ಅತ್ಯಂತ ಚಂಚಲ ಪ್ರಾಣಿಯಾಗಿರುವ ಕುರಿಯಂತೆ ನಾವುಗಳು ಸಮಾಧಾನವನ್ನು ಹಾರೈಸುವವರಾಗಿರಬೇಕು. ನಮ್ಮ ಸಾಧನೆಗಳು ಅಥವಾ ಸ್ಥಾನಮಾನಗಳು ಏನೇ ಇದ್ದರೂ, ನಮ್ಮ ಚಿಂತೆ ಮತ್ತು ಸದ್ಯದ ಹಾಗು ಭವಿಷ್ಯತ್ತಿನ ಅಪಾಯಗಳಿಂದ ಬಿಡುಗಡೆ ಹೊಂದುವವರೆಗೂ ತೃಪ್ತರಾಗಲು ನಮಗೆ ಸಾಧ್ಯವಿಲ್ಲ.

ತನ್ನನ್ನೇ ಒಳ್ಳೇ ಕುರುಬನೆಂದು ಪ್ರಕಟಪಡಿಸುವದರ ಮೂಲಕ, ತನ್ನಲ್ಲಿ ಭರವಸೆಯನ್ನಿಡುವವರ ದುಃಖಗಳನ್ನು ಮತ್ತು ಅವರ ಹೆದರಿಕೆಗಳನ್ನು ತೆಗೆದುಹಾಕುತ್ತೇನೆಂಬ ವಾಗ್ದಾನವನ್ನು ಮಾಡಿದ್ದಾನೆ. ನಮ್ಮ ವೈಯಕ್ತಿಯ ನೆರವೇರುವಿಕೆಯ ಅನ್ವೇಷಣೆಯ ಬೆಳಕಿನಲ್ಲಿ ಅತ್ಯಂತ ನೂತನಕರವಾಗಿ ಮತ್ತು ನಿರೀಕ್ಷಣೆಯುಳ್ಳ ಈ ಸಂದೇಶವನ್ನು ಸೂಕ್ಷ್ಮವಾಗಿ ಗಮನಿಸೋಣ.

1.ಎ. ಒಬ್ಬ ಒಳ್ಳೇ ಕುರುಬನ ಪಾತ್ರವನ್ನು ಈ ಕುರಿಯೊಂದಿಗೆ ನೀವು ಹೇಗೆ ಹೋಲಿಸುತ್ತೀರಿ?

ಬಿ. ಜನರ “ಒಳ್ಳೇ ಕುರುಬನನ್ನು” ನೀವು ಹೇಗೆ ವಿವರಿಸುತ್ತೀರ?

2.ಎ. ಕುರುಬರು ತಮ್ಮ ಕುರಿಗಳನ್ನು ಒಳ್ಳೇ ಮತ್ತು ಕೆಟ್ಟ ರೀತಿಯಿಂದ ಪರಿಪಾಲನೆ ಮಾಡುವದರ ಫಲಿತಾಂಶಗಳೇನು?

ಬಿ. ಕುರಿಗಳು ವಾಸನೆಯುಳ್ಳ ಮತ್ತು ಬುದ್ಧಿಯಿಲ್ಲದ ಪ್ರಾಣಿಗಳಾಗಿವೆ. ಕುರಿಗಳನ್ನು ಮೇಯಿಸಲು ಕುರುಬನಾದವನಲ್ಲಿ ಏನೆಲ್ಲಾ ಒಳ್ಳೇ ಗುಣಗಳಿರಬೇಕು?

3. ತನ್ನ ಕುರುಗಳನ್ನು ಪರಿಪಾಲಿಸುವ ದೇವರ ಗುಣಲಕ್ಷಣಗಳನ್ನು ಪಟ್ಟಿ ಮಾಡಿರಿ?

ಯೆಶಾಯ 40:11

ಯೆಹೆಜ್ಕೇಲ 34:12, 14–16

**ಗಮನಿಸಿರಿ:** "ಮೃದುವಾಗಿರುವ ಮತ್ತು ಬಲಿಷ್ಠವಾದ" (ವಚನ 16) ಕುರಿಗಳ ನಡುವೆ ನ್ಯಾಯತೀರ್ಪನ್ನು ವಿಧಿಸುವದು ಇಸ್ರಾಯೇಲಿನಲ್ಲಿರುವ ದೇವರ ಮಂದೆಯಲ್ಲಿರುವ ಕುಗ್ಗಿಸಲ್ಪಟ್ಟಿರುವ ಮತ್ತು ಬಲಹೀನವಾಗಿರುವ ಕುರಿಗಳನ್ನು ಸೂಚಿಸುತ್ತದೆ.

ಯೋಹಾನ 10:11

4. 23ನೇ ಕೀರ್ತನೆಯಲ್ಲಿ ದೇವರು ಒಳ್ಳೇ ಕುರುಬನೆಂದು ಸೂಚಿಸುವದಕ್ಕಾಗಿ ಯೆಹೋವನು ಎಂಬ ಪದವನ್ನು ಬಳಸಲಾಗಿದೆ. ಇಬ್ರಿಯ ಭಾಷೆಯಲ್ಲಿ ದೇವರು ಎಂದರೆ "ಕೃಪೆಯುಳ್ಳ ದೇವರು; ದೇವರ ಮೇಲೆ ಆತುಕೊಳ್ಳಬಹುದು; ಆತನು ನಂಬಿಗಸ್ಥನು; ದೇವರು ಸ್ಥಿರತೆಯುಳ್ಳವನಾಗಿದ್ದಾನೆ ಮತ್ತು ಆತನು ಬದಲಾಗುವವನಲ್ಲ; ಆತನು ತಾನು ಮಾಡಿರುವ ವಾಗ್ದಾನಗಳನ್ನೆಲ್ಲಾ ನೆರವೇರಿಸುವವನಾಗಿದ್ದಾನೆ." ಒಬ್ಬನ ನೆರವೇರುವಿಕೆಗೆ ಈ ರೀತಿಯಾದ ಪರಿಪಾಲನೆ ಯಾಕೆ ಅವಶ್ಯ?

5.ಎ. ಸತ್ಯವೇದದ ಸಮಯದ ಕುರುಬರು ದೊಣ್ಣೆ ಮತ್ತು ಕೋಲನ್ನು ಉಪಯೋಗಿಸುತ್ತಿದ್ದರು, ಇವುಗಳು ಕುರಿಗಳ ಹಿತಕ್ಕಾಗಿಯೇ ಆಗಿದ್ದವು. ಕುರಿಗಳನ್ನು ಅಪಹರಿಸಲು ಬರುವ ವೈರಿಗಳಿಗೆ ವಿರುದ್ಧವಾಗಿ ಯುದ್ದ ಮಾಡಲು ಮರದಿಂದ ಮಾಡಲಾಗಿದ್ದ ದೊಣ್ಣೆಯನ್ನು ಕುರಿಬರು ಹೊಂದಿರುತ್ತಿದ್ದರು. ಕುರಿಗಳು ಅಲ್ಲಿಲ್ಲಿ ಓಡುವದಾದರೆ ಅವುಗಳನ್ನು ನಿಯಂತ್ರಿಸಲು ಕುರುಬರು ಕೋಲನ್ನು ಹೊಂದಿರುತ್ತಿದ್ದರು. ಒಳ್ಳೇ ಕುರುಬನಾಗಿರುವ ಯೇಸು ಕ್ರಿಸ್ತನೊಂದಿಗೆ ನಮ್ಮ ಸಂಬಂಧದಲ್ಲಿ ಈ ವಸ್ತುಗಳು  ಯಾವುದಕ್ಕೆ ಗುರುತುಗಳಾಗಿವೆ?

ಬಿ. ದೇವರು ಒಳ್ಳೇ ಕುರುಬನಾಗಿರುವದರಿಂದ ಕೆಳಗೆ ಕೊಡಲ್ಪಟ್ಟಿರುವ ವಚನಗಳು ಕೊಡುವ ಉದಾಹರಣೆಗಳೇನು?

ವಿಮೋಚನಕಾಂಡ 14:14

ಕೀರ್ತನೆ 18:2

ಸಿ. ದೇವರ ಮಾರ್ಗದರ್ಶನ ಮತ್ತು ಶಿಸ್ತಿನ ಬಗ್ಗೆ ಈ ವಚನಗಳು ಏನನ್ನು ಕಲಿಸುತ್ತವೆ?

ಕೀರ್ತನೆ 25:9

ಯೆಶಾಯ 30:21

ಯೆಶಾಯ 48:17

6.ಎ. ಕೀರ್ತನೆ 23ರಲ್ಲಿ ಒಳ್ಳೇ ಕುರುಬನ ಪರಿಪಾಲನೆಯಲ್ಲಿ ಏನೆಲ್ಲಾ ಲಾಭಗಳ ಬಗ್ಗೆ ತಿಳಿಸುತ್ತದೆ?

ಬಿ. ಒಳ್ಳೇ ಕುರುಬನ ಪರಿಪಾಲನೆಯಿಂದ ಲಾಭಗಳನ್ನು ಪಡೆಯಬೇಕಾದರೆ ಕುರಿಯು ಏನು ಮಾಡಬೇಕು?

ಜ್ಞಾನೋಕ್ತಿ 3:5–6

## ಸಾರಾಂಶ

7.ಎ. ಈಗ ನಿಮ್ಮ ಜೀವಿತದಲ್ಲಿ ನಿಮ್ಮನ್ನು ಯಾವ ಕ್ಷೇತ್ರಗಳು ಅಭದ್ರತೆಗೆ ಗುರುಪಡಿಸುತ್ತಿವೆ? ನಿಮಗೆ ಯಾವ ವಿಷಯದಲ್ಲಿ ರಕ್ಷಣೆ ಅಥವಾ ಮಾರ್ಗದರ್ಶನದ ಅವಶ್ಯಕತೆಯಿದೆ?

ಬಿ. ಯೇಸು ಕ್ರಿಸ್ತನು ತನ್ನನ್ನೇ ಒಳ್ಳೇ ಕುರುಬನೆಂದು ಹೇಳಿದಾಗ, ನಿಮ್ಮ ಅಗತ್ಯತೆಯ ಸಮಯದಲ್ಲಿ ಆತನನ್ನು ನೀವು ನಂಬುವಾಗ ನಿಮಗೆ ಏನು ಕೊಡುವದಾಗಿ ಆತನು ವಾಗ್ದಾನ ಮಾಡಿದ್ದಾನೆ?

8. ಯೇಸು ಕ್ರಿಸ್ತನು ಕೊಡುವ ಮಾರ್ಗದರ್ಶನ ಮತ್ತು ನೀಡುವ ಪರಿಪಾಲನೆಯನ್ನು ಪಡೆದುಕೊಳ್ಳದಂತೆ ನಿಮಗೆ ಅಡಚಣೆಯನ್ನುಂಟು ಮಾಡುವದು ಏನಾಗಿದೆ?

9. ಒಳ್ಳೇ ಕುರುಬನೊಂದಿಗಿನ ಸಂಬಂಧದಲ್ಲಿ ನೀವು ಅತ್ಯಧಿಕವಾಗಿ ಏನನ್ನು ಬಯಸುವವರಾಗಿದ್ದೀರಿ?

## ಪಾಠ 13 ನೋಟ್ಸ್

1 **Reference**: ನೋಟ್ 1, ಯೇಸುವಿನ ಸೂಚಕಕಾರ್ಯಗಳು, ಪುಟ 75.

2 ದೇವ ಜನರ ಕುರುಬರು. ಯೋಹಾನ 1:1–30ರವರೆಗಿನ ವಚನಗಳನ್ನು ಹಳೆಯ ಒಡಂಬಡಿಕೆ (ಪೂರ್ವದ ಪ್ರಾಚೀನ ಕಾಲ) ಕಾಲದಲ್ಲಿ "ಕುರುಬರಿಗೆ" ಇದ್ದ ಪ್ರಾಧಾನ್ಯತೆಯೊಂದಿಗೆ ಅರ್ಥಮಾಡಿಕೊಳ್ಳಬೇಕು, ಯಾಕೆಂದರೆ ಅದು ದೇವ ಜನರ ಪರಮೋನ್ನತ ಪರಿಪಾಲಕನಿಗೆ ಸೂಚನೆಯಾಗಿದೆ. ದೇವರನ್ನೇ "ಇಸ್ರಾಯೇಲಿನ ಕುರುಬನು" ಎಂದು ಕರೆಯಲಾಗಿದೆ (ಕೀರ್ತನೆ 80:1; cf. ಕೀರ್ತನೆ 23:1; ಯೆಶಾಯ 40:10–11; ಯೆಹೆಜ್ಕೇಲ 34:11–16), ಮತ್ತು ಆತನು ಇಸ್ರಾಯೇಲಿನ ನಾಯಕರಿಗೆ ("ಕುರುಬರಿಗೆ") ಮಹದಾದ ಜವಾಬ್ದಾರಿಕೆಯನ್ನು ಕೊಟ್ಟಿದ್ದಾನೆ, ಆದರೆ ಅದನ್ನು ಗೌರವಿಸಲು ಅವರು ವಿಫಲರಾದರು. ಆದ್ದರಿಂದ ದೇವರು ಈ ಸುಳ್ಳು ಕುರುಬರನ್ನು ಬಹಿರಂಗವಾಗಿ ಖಂಡಿಸಿದನು (ಯೆಶಾಯ 56:9–12; ಯೆಹೆಜ್ಕೇಲ 34) ಮತ್ತು ಕುರಿಗಳನ್ನು ಪಾಲಿಸುವದಕ್ಕಾಗಿ ನಿಜವಾದ ಕುರುಬನಾದ ಮೆಸ್ಸೀಯನನ್ನು ಕೊಡುವದಾಗಿ ವಾಗ್ದಾನ ಮಾಡಿದನು (ಯೆಹೆಜ್ಕೇಲ 34:23). The New Study Bible, ಪುಟ 1615.

3 ಪ್ರಾಚೀನ ಕಾಲದಲ್ಲಿ ಪೂರ್ವದ ಕುರಿ ಪರಿಪಾಲನೆಯಲ್ಲಿ, ಈ ಹಟ್ಟಿಯು ಕಲ್ಲಿನ ಕಟ್ಟಡವಾಗಿತ್ತು,

ಆಕಾರದಲ್ಲಿ ಚೌಕವಾಗಿದ್ದು, ಒಂದು ಕಡೆಯಲ್ಲಿ ಮಾತ್ರವೇ ದ್ವಾರವಿತ್ತು. ಈ ದ್ವಾರದ ಬಳಿಯಲ್ಲಿ ದ್ವಾರಪಾಲಕನನ್ನು ಅಥವಾ ಪಹರೆಗಾರನನ್ನು ಇರಿಸಲಾಗುತಿತ್ತು, ಆತನು ಯಾರಿಗೆಲ್ಲಾ ಒಳಗೆ ಹೋಗುವ ಅಧಿಕಾರವಿರುತ್ತದೋ ಅವರನ್ನು ಮಾತ್ರವೇ ಬಿಡುತ್ತಿದ್ದನು ಮತ್ತು ಅಕ್ರಮವಾಗಿ ಒಳಗೆ ನುಗ್ಗುವವರನ್ನು ತಡೆಯುತ್ತಿದ್ದನು. ಒಂದುವೇಳೆ ಯಾರಾದರೂ ಮತ್ತೊಂದು ಕಡೆಯಿಂದ ಹಟ್ಟಿಯ ಮೇಲೆ ಹತ್ತಲು ಪ್ರಯತ್ನಿಸುವದಾದರೆ, ಆತನು ಅಕ್ರಮವಾಗಿ ಒಳಗೆ ನುಗ್ಗಲು ಪ್ರವೇಶಿಸುತ್ತಿದ್ದಾನೆ ಮತ್ತು ಆತನು ಕೆಡುಕನು ಎಂದು ತಿಳಿದುಕೊಳ್ಳುವದು ಒಳ್ಳೇಯದಾಗಿತ್ತು. ಅಂಥವರನ್ನು ನಿರಾಸೆಗೊಳಿಸುವದಕ್ಕಾಗಿ ಗೋಡೆಯ ಮೇಲ್ಛಾವಣಿಯನ್ನು ಭದ್ರಪಡಿಸಲಾಗುತಿತ್ತು. ಒಂದೇ ಹಟ್ಟಿಯೊಳಗೆ ಹೆಚ್ಚು ಮಂದೆಗಳನ್ನು ಇರಿಸಲಾಗುತಿತ್ತು; ಆದರೆ ಕುರುಬನು ದ್ವಾರದ ಬಳಿ ನಿಂತು ಒಳಬರುವಂತೆ ಕರೆಯುತ್ತಿದ್ದನು; ಆಗ ತನ್ನ ಕುರುಬನ ಸ್ವರನ್ನು ಗುರುತುಹಿಡಿಯುತ್ತಿದ್ದ ಒಳಗೆ ಬರುತಿತ್ತು. ಇಷ್ಟು ಮಾತ್ರವಲ್ಲ: ತನ್ನ ಕುರಿಗಳನ್ನು ಒಂದೊಂದಾಗಿ ತಿಳಿಯಲು ಮತ್ತು ಹೆಸರೆಸರಾಗಿ ಅವುಗಳನ್ನು ಬೇರ್ಪಡಿಸಲು ಸಹಾಯವಾಗುವಂತೆ ಅವರ ಮಂದೆಗಳು ಚಿಕ್ಕವುಗಳಾಗಿರುತ್ತಿದ್ದವು. ಇಲ್ಲಿ ಯೇಸು ಕ್ರಿಸ್ತನು ಕೊಡುತ್ತಿರುವ ಚಿತ್ರಣವು ಕುರುಬನು ಮತ್ತು ಆತನ ಕುರಿಗಳ ನಡುವೆಯಿರುವ ವೈಯಕ್ತಿಕವಾದ ಸಂಬಂಧವಾಗಿದೆ, ಕುರಿಗಳು ಆತನ ಮಾರ್ಗದರ್ಶನಗಳನ್ನು ಆಲಿಸಿ ಅದಕ್ಕನುಸಾರವಾಗಿ ನಡೆಯುವಾಗ ಆತನೊಂದಿಗೆ ಐಕ್ಯವಾಗಿರಲು ಸಾಧ್ಯವಾಗುತ್ತದೆ: ಜಾಗತಿಕ ದಿವಸದ ಕುರುಬರ ಹಾಗೆ ಸತ್ಯವೇದದ ದಿವಸಗಳ ಕುರುಬರ ಜೊತೆಯಲ್ಲಿ ಕುರಿಗಳನ್ನು ಕಾಯಲು ನಾಯಿ ಇರುತ್ತಿರಲಿಲ್ಲ." F. F. Bruce, The Gospel of John, ಪುಟ 224.

# ಪಾಠ 14

# ಸತ್ತ ಲಾಜರನು ಎಬ್ಬಿಸಲ್ಪಟ್ಟದ್ದು

## ಯೋಹಾನ 11

ಯೋರ್ದನ್ ಹೊಳೆಯ ಸುತ್ತಣ ಪ್ರದೇಶಗಳಲ್ಲಿ ಯೇಸು ಕ್ರಿಸ್ತನು ಸೇವೆಯನ್ನು ಮಾಡುತ್ತಿದ್ದಾಗ, ಮಾರ್ಥ ಮತ್ತು ಮರಿಯಳ ಸಹೋದರನಾದ ಲಾಜರನು ಅಸ್ವಸ್ಥನಾಗಿದ್ದಾನೆಂಬ ಸುದ್ದಿಯನ್ನು ಕೇಳಿಸಿಕೊಂಡನು. ಯೇಸು ಕ್ರಿಸ್ತನಿಗೆ ಪ್ರಿಯನಾಗಿದ್ದ ಈ ಶಿಷ್ಯನು ಯೆರೂಸಲೇಮಿಗೆ ಎರಡು ಮೈಲಿ ದೂರದಲ್ಲಿ ಅಂದರೆ ಬೆಥಾನ್ಯದಲ್ಲಿ ಜೀವಿಸುತ್ತಿದ್ದನು.

ಲಾಜರನ ಪರಿಸ್ಥಿತಿಯ ಸುದ್ದಿಯನ್ನು ಕೇಳಿದ ಮೇಲೂ, ಲಾಜರನಿಗೆ ಬಂದಿರುವ ಕಾಯಿಲೆಯು ದೇವರಿಗೆ ಮತ್ತು ಆತನ ಮಗನಿಗೆ ಮಹಿಮೆಯನ್ನುಂಟು ಮಾಡುವ ಸಲುವಾಗಿ ಬಂದಿದೆ ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. ಆದರೂ ಯೇಸು ಕ್ರಿಸ್ತನು ಬೆಥಾನ್ಯಕ್ಕೆ ಹೋಗದೆ ತಾನಿದ್ದ ಸ್ಥಳದಲ್ಲಿಯೇ ಎರಡು ದಿವಸ ಉಳಿದನು. ಯೇಸು ಕ್ರಿಸ್ತನು ಯೂದಾಯಕ್ಕೆ ಹೋಗದಿರುವದಕ್ಕೆ ಕಾರಣ ಅಲ್ಲಿರುವ ಆತನ ವೈರಿಗಳೇ ಎಂದು ತಿಳಿದುಕೊಂಡರು, ಯಾಕೆಂದರೆ ಅವರು ಈಗಾಗಲೇ ಆತನನ್ನು ಕಲ್ಲೆಸೆದು ಕೊಲ್ಲಲು ಪ್ರಯತ್ನಿಸಿದ್ದರು.

ನಂತರ ಯೇಸು ಕ್ರಿಸ್ತನು ಈಗ ಬೆಥಾನ್ಯಕ್ಕೆ ಹೋಗುವ ಸಮಯವು ಬಂದಿದೆ ಆದ್ದರಿಂದ ಅಲ್ಲಿಗೆ ಹೋಗಿ ಮಲಗಿರುವ ಅಂದರೆ ಸತ್ತಿರುವ ಲಾಜರನನ್ನು ಎಬ್ಬಿಸೋಣ ಎಂದು ಪ್ರಕಟಿಸಿದನು. ಯೇಸುವಿನ ಪ್ರಾಣಕ್ಕೆ ಅಪಾಯವಿದ್ದರಿಂದ, ಅಲ್ಲಿಗೆ ಹೋಗಬಾರದೆಂದು ಆತನ ಶಿಷ್ಯರು ಪ್ರತಿರೋಧಿಸಿದರು. ಆದರೆ ಅಲ್ಲಿಗೆ ಹೋಗಲು ನಾನು ಸಂತೋಷಿಸುತ್ತೇನೆ ಯಾಕೆಂದರೆ ಅಲ್ಲಿ ನಡೆಯುವ ಘಟನೆಯು ನಿಮ್ಮ ನಂಬಿಕೆಯ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ಹೇಳಿದನು. ಆಗ ತೋಮನು ತನ್ನ ಧೈರ್ಯದ ಮಾತುಗಳ ಮೂಲಕ, ನಾವೂ ಆತನ ಜೊತೆಗೆ ಹೋಗಿ ಸಾಯೋಣ" ಎಂದು ಶಿಷ್ಯರೆಲ್ಲರನ್ನೂ ಹುರಿದುಂಬಿಸಿದನು.

ಲಾಜರನು ಸತ್ತು ನಾಲ್ಕು ದಿವಸಗಳಾದ ಮೇಲೆ ಯೇಸು ಕ್ರಿಸ್ತನು ಬೆಥಾನ್ಯದ ಹೊರವಲಯಕ್ಕೆ ಬಂದನು. ಮಾರ್ಥಳು ಆತನನ್ನು ಸಂಧಿಸಿ ತನ್ನ ನಂಬಿಕೆಯನ್ನು ವ್ಯಕ್ತಪಡಿಸಿದಳು: "ಕರ್ತನೇ ನೀನು ಇಲ್ಲೇ ಇದ್ದಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ. ಆದರೆ ಈಗಲೂ ನೀನು ಕೇಳುವದನ್ನು ದೇವರು ನಿನಗೆ ಕೊಡುವನೆಂದು ನಾನು ನಂಬುತ್ತೇನೆ" ಎಂದು ಆಕೆ ಹೇಳಿದಳು. "ನಿನ್ನ ತಮ್ಮನು ಬದುಕುತ್ತಾನೆ" ಎಂಬ ಭರವಸೆಯನ್ನು ಯೇಸು ಆಕೆಗೆ ಕೊಟ್ಟನು ಮತ್ತು "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ" ಎಂದು ಸಹ ಹೇಳಿದನು. ನನ್ನನ್ನು ನಂಬುವವನು ಸತ್ತರೂ ಬದುಕುವನು: ಮತ್ತು ನನ್ನನ್ನು ನಂಬುತ್ತಾ ಬದುಕುವನು ಎಂದಿಗೂ ಸಾಯುವದಿಲ್ಲ."[1]

ನಂತರ ಮಾರ್ಥಳು ಮರಿಯಳನ್ನು ಸಹ ಯೇಸುವಿನ ಬಳಿಗೆ ಕರತಂದಳು, ಮತ್ತು ಆತನು

ಆಕೆಯೊಂದಿಗೆ ಅತ್ತನು ಹಾಗೂ ದುಃಖಿತರಾಗಿದ್ದ ಅನೇಕ ಯೆಹೂದ್ಯರೊಂದಿಗೆ ಅವರೂ ಲಾಜರನ ಸಮಾಧಿಗೆ ಹೋದರು. ಸಮಾಧಿಗೆ ಇಟ್ಟಿದ್ದ ದೊಡ್ಡ ಕಲ್ಲನ್ನು ತೆಗೆದ ಮೇಲೆ ಯೇಸು ಕ್ರಿಸ್ತನು ಗಟ್ಟಿಯಾದ ಸ್ವರದಲ್ಲಿ ತಂದೆಯಾದ ದೇವರಿಗೆ ಪ್ರಾರ್ಥಿಸಿದನು. ಮುಂದೆ ನಡೆಯಲಿಕ್ಕಿದ್ದ ಸೂಚಕಕಾರ್ಯದ ಮೂಲಕ ತನ್ನ ಕುಮಾರನ ವಿಷಯದಲ್ಲಿ ದೇವರು ಕೊಡುವ ದೃಢತೆಯಲ್ಲಿ ಅಲ್ಲಿರುವ ಎಲ್ಲರೂ ನೋಡಬೇಕೆಂಬದು ಆತನ ಬಯಕೆಯಾಗಿತ್ತು. ಇದಾದ ಮೇಲೆ ಯೇಸು ಕ್ರಿಸ್ತನ ಗಟ್ಟಿಯಾದ ಧ್ವನಿಯಲ್ಲಿ, “ಲಾಜರನೇ, ಹೊರಗೆ ಬಾ!” ಎಂದು ಕರೆದನು. ಬಟ್ಟೆಗಳಿಂದ ಸುತ್ತಲ್ಪಟ್ಟಿದ್ದ ಲಾಜರನು ಹಾಗೇ ಹೊರಗೆ ಬಂದನು, ನಂತರ ಅಲ್ಲಿದ್ದವರಿಗೆ ಆ ಬಟ್ಟೆಗಳನ್ನು ತೆರೆಯಿರಿ ಎಂದು ಯೇಸು ಸೂಚಿಸಿದನು. ಲಾಜರನು ಜೀವಂತನಾಗಿ ಬಿಡುಗಡೆಯನ್ನು ಹೊಂದಿದನು.

ಈ ಸೂಚಕಕಾರ್ಯವನ್ನು ನೋಡಿದ ಅನೇಕ ಯೆಹೂದ್ಯರು ಆಶ್ಚರ್ಯಪಟ್ಟರು ಮತ್ತು ಯೇಸುವಿನಲ್ಲಿ ತಮ್ಮ ನಂಬಿಕೆಯನ್ನಿಟ್ಟರು. ಅವರಲ್ಲಿ ಕೆಲವರು ಯೇಸು ಮಾಡಿದ್ದನ್ನು ತಿಳಿಸುವದಕ್ಕಾಗಿ ತಮ್ಮ ಧಾರ್ಮಿಕ ಅಧಿಕಾರಿಗಳ ಬಳಿಗೆ ನೇರವಾಗಿ ಹೋದರು. ಮಂಡಳಿಯವರು2 ವಿಶೇಷವಾದ ಕೂಟವನ್ನು ಏರ್ಪಡಿಸಿದರು, ಆ ಕೂಟದಲ್ಲಿ ಮಹಾಯಾಜಕನಾದ ಕಾಯಫನು ಸಾಯಲೇಬೇಕು ಯಾಕೆಂದರೆ ಹೆಚ್ಚುತ್ತಿರುವ ಆತನ ಪ್ರಖ್ಯಾತಿ ರೋಮ್ ಸರ್ಕಾರದೊಂದಿಗೆ ಯೆಹೂದ್ಯರಿಗಿರುವ ಶಾಂತಿಯನ್ನು ಭಂಗಪಡಿಸುತ್ತದೆ ಎಂಬ ಆಭಿಪ್ರಾಯವನ್ನು ಹೇಳಿದನು. ಈ ಸಮಯದಿಂದ ಯೆಹೂದ್ಯ ನಾಯಕರು ಯೇಸುವನ್ನು ಕೊಲ್ಲಲು ಸಮಯವನ್ನು ನೋಡುತ್ತಿದ್ದರು.

ಯೇಸು ಮತ್ತು ಆತನ ಶಿಷ್ಯರು ಜನರಿಂದ ತಪ್ಪಿಸಿಕೊಂಡು ಯೆರೂಸಲೇಮಿನ ಪೂರ್ವಪಶ್ಚಿಮ ಭಾಗದಲ್ಲಿರುವ ಎಫ್ರಾಯೀಮ್ ಹಳ್ಳಿಯ ಗುಡ್ಡಗಾಡು ಪ್ರದೇಶಕ್ಕೆ ಹೊರಟುಹೋದರು. ಪಸ್ಕ ಹಬ್ಬಕ್ಕಿಂತಲೂ ಮುಂಚೆ ತಮ್ಮನ್ನು ಶುದ್ಧಪಡಿಸಿಕೊಳ್ಳುವ ಸಂಪ್ರದಾಯಕ್ಕಾಗಿ ಜನರು ಯೆರೂಸಲೇಮಿಗೆ ಬಂದಿದ್ದ ಪ್ರತಿಯೊಬ್ಬರು, ಯೇಸುವನ್ನು ಹುಡುಕುತ್ತಿದ್ದರು ಮತ್ತು ಗಲಿಲಾಯದವನಾದ ಈ ಬಡಗಿ ಹಾಗೂ ಪ್ರಭಾವಿತರಾಗಿರುವ ಧಾರ್ಮಿಕ ನಾಯಕರು ಮತ್ತು ರಾಜಕೀಯ ಅಧಿಕಾರಿಗಳ ನಡುವೆ ಹೇಗೆಲ್ಲಾ ವಾದಗಳು, ಜಗಳಗಳಾಗಬಹುದೆಂಬರ ಬಗ್ಗೆ ಚರ್ಚಿಸುತ್ತಿದ್ದರು. ಯೇಸು ಕ್ರಿಸ್ತನು ಧರ್ಮನಿಂದಕನಾಗಿದ್ದಾನೆ ಆದ್ದರಿಂದ ಆತನ ಬಗ್ಗೆ ಯಾರಿಗಾದರೂ ಏನಾದರೂ ಮಾಹಿತಿ ಸಿಗುವದಾದರೆ ಅಧಿಕಾರಿಗಳಿಗೆ ತಿಳಿಸಿದರೆ ಆತನನ್ನು ಬಂಧಿಸುವೆವು ಎಂದು ಮಹಾಯಾಜಕರು ಮತ್ತು ಫರಿಸಾಯರು ಸೂಚನೆಯನ್ನು ಹೊರಡಿಸಿದ್ದರು.

## ಯೋಹಾನ 11:1–16 ಓದಿರಿ.

1. ಲಾಜರನ ಸಮಾಚಾರವು ಯೇಸುವಿಗೆ ತಿಳಿದ ಕೂಡಲೇ ಆತನು ನೀಡಿದ ಪ್ರತಿಕ್ರಿಯೆ ಏನು (11:4–6)?

2. ಯೂದಾಯಕ್ಕೆ ಹೋಗುವ ವಿಷಯವಾಗಿ ಯೇಸುವಿನ ತೀರ್ಮಾನವನ್ನು ಕೇಳಿ ಶಿಷ್ಯರು ಯಾಕೆ ತಲ್ಲಣಗೊಂಡರು (11:8)?

3. ನಾವು ಈಗ ಹೋಗೋಣ ಎಂದು ಯೇಸು ಯಾಕೆ ಅವರಿಗೆ ಹೇಳಿದನು (11:9–15)?

**Reference**: ನೋಟ್ 3, ಹನ್ನೆರೆಡು ತಾಸು ಹಗಲು, ಪುಟ 120.

4. ಸಾಮಾನ್ಯವಾಗಿ ತೋಮನನ್ನು ಅವನ ಸಂದೇಹದ ಸ್ವಭಾವಕ್ಕಾಗಿ ನೆನಪಿಸಿಕೊಳ್ಳಲಾಗುತ್ತದೆ. ಅವನು ಇಲ್ಲಿ ಪ್ರದರ್ಶಿಸಿದ ಭಕ್ತಿ ಮತ್ತು ಧೈರ್ಯ ಎಂಥದ್ದು (11:16)?

## ಯೋಹಾನ 11:17–37 ಓದಿರಿ.

5. ಯೇಸು ಕ್ರಿಸ್ತನು ಮರಿಯ ಮತ್ತು ಮಾರ್ಥಳ ಮನೆಗೆ ಬಂದಾಗ ಅಲ್ಲಿದ್ದ ಪರಿಸ್ಥಿತಿಯನ್ನು ವಿವರಿಸಿರಿ (11:17–19).

6. ಮಾರ್ಥಳು ಯೇಸುವಿನ ಜೊತೆಯಲ್ಲಿ ನಡೆಸಿದ ಸಂಭಾಷಣೆಯ ಮೂಲಕ ನೀವು ಗಮನಿಸಬಹುದಾದ ಸಕಾರಾತ್ಮಕವಾದ ವಿಷಯಗಳು ಯಾವುವು (11:20, 21–22, 27)?

7. ಮಾರ್ಥಳು ತನಗೆ ಯೇಸು ಕ್ರಿಸ್ತನ ಮೇಲಿದ್ದ ನಂಬಿಕೆಯನ್ನು ಆತನಿಗೆ ತಿಳಿಯಪಡಿಸಿದಾಗ ಅದಕ್ಕೆ ಪ್ರತ್ಯುತ್ತರವಾಗಿ ಯೇಸು ಮಾಡಿದ ಶ್ರೇಷ್ಠವಾದ ಪ್ರಕಟನೆ ಏನು (11:23, 25–26)?

**Reference**: ನೋಟ್ 1, ನಾನೇ...ಜೀವವೂ. ಪುಟ 119.

8. ಯೇಸು ಕ್ರಿಸ್ತನು ಮರಿಯಳೊಂದಿಗೆ ಹೇಗೆ ಪ್ರತಿಕ್ರಿಯಿಸಿದನು, ಮತ್ತು ಆತನ ಪ್ರತಿಕ್ರಿಯೆ ಆತನ ಬಗ್ಗೆ ಏನನ್ನು ಪ್ರದರ್ಶಿಸಿತು (11:33, 35)?

## ಯೋಹಾನ 11:38–44 ಓದಿರಿ.

9. ಯೇಸು ಕ್ರಿಸ್ತನ ಪ್ರಾರ್ಥನೆಗನುಸಾರವಾಗಿ ಈ ಘಟನೆಯ ಉದ್ದೇಶವೇನು (11:42)?

10.ಎ. ಯೇಸುವಿನ ಆಜ್ಞೆಯ ಮೇರೆಗೆ ನಡೆದ ಅಪರಿಮಿತವಾದ ಘಟನೆ ಏನು (11:43–44)?

ಬಿ. ಈ ಸೂಚಕಕಾರ್ಯದ ಮೂಲಕ ಯೇಸು ಪ್ರಕಟಪಡಿಸಿದ ಅಧಿಕಾರ ಮತ್ತು ಸಂಬಂಧ ಎಂಥದ್ದು?

## ಯೋಹಾನ 11:45–57 ಓದಿರಿ.

11. ಯೇಸುವಿನ ಈ ಸೂಚಕಕಾರ್ಯದಿಂದ ಫಲಿತಾಂಶ ಏನು (11:45–53, 57)?

**Reference**: ನೋಟ್ 2, ಮಂಡಳಿ, ಮತ್ತು ನೋಟ್ 4, ಕಾಯಫನು.... ಪುಟ 120.

12. ಯೇಸು ಕ್ರಿಸ್ತನು ಜನರಿಂದ ದೂರ ಉಳಿದನಾದರೂ, ಆತನ ಅನುಪಸ್ಥಿತಿಯಲ್ಲಿ ತಿಳಿದು ಬಂದ ವಿಷಯಗಳೇನು (1:56)?

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವದು

## ಶಾಶ್ವತವಾದ ನೆರವೇರುವಿಕೆ

ಮಾನವನ ಅನುಭವಗಳಲ್ಲಿಯೇ ಅತ್ಯಂತ ಭಯಾನಕವಾದದ್ದು ಮರಣವಾಗಿದೆ. ಪ್ರಸಿದ್ಧವಾದ ಅಭದ್ರತೆ, ನಮ್ಮ ಜೀವಿತಗಳನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗದಷ್ಟರ ಮಟ್ಟಿಗೆ ನಾವು ಅಸಮರ್ಥರಾಗಿದ್ದೇವೆಂಬದು ನಮಗೆ ಗೊತ್ತಾಗುವದು ಮರಣವನ್ನು ಜಯಿಸಲು ನಮ್ಮಿಂದ ಆಗುವದಿಲ್ಲ ಎಂಬದನ್ನು ಮನನಮಾಡಿಕೊಳ್ಳುವಾಗಲೇ ಆಗಿದೆ. ನಾವುಗಳು ಮತ್ತು ನಾವು ಪ್ರೀತಿಸುವ ಜನರು ಸಾಯಬಾರದೆಂಬದೇ ಮನುಷ್ಯನ ಸಾಮಾನ್ಯವಾದ ಬಯಕೆಯಾಗಿದೆ.5 ಈ ಬಯಕೆಯನ್ನು ದೇವರೇ ಮನುಷ್ಯನಿಗೆ ಕೊಟ್ಟಿದ್ದಾನೆಂದು ಪ್ರಸಂಗಿ 3:11 ಹೇಳುತ್ತದೆ. “ಆತನು [ದೇವರು] ನಿತ್ಯತ್ವವನ್ನು ಮನುಷ್ಯರ ಹೃದಯಗಳಲ್ಲಿ ನೆಲೆಗೊಳಿಸಿದ್ದಾನೆ.” ನಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ಸಮಾಧಾನವನ್ನು ಅನುಭವಿಸುವದಕ್ಕಾಗಿ ನಾವು ಮರಣವನ್ನು ಜಯಿಸಿರುವ ಯೇಸು ಕ್ರಿಸ್ತನ ಶಕ್ತಿಯ ನಿರೀಕ್ಷೆಯ ಸಂದೇಶವನ್ನು ಒಪ್ಪಿಕೊಳ್ಳಬೇಕು. “ನನ್ನಲ್ಲಿ ನಂಬಿಕೆಯನ್ನಿಟ್ಟು ಜೀವಿಸುವವನು ಎಂದಿಗೂ ಸಾಯುವದಿಲ್ಲ” ಎಂಬದಾಗಿ ಯೇಸು ಕ್ರಿಸ್ತನು ಯೋಹಾನ 11:25ರಲ್ಲಿ ಹೇಳಿರುವದನ್ನು ಓದುತ್ತೇವೆ ಮತ್ತು ಇಂಥ ಅನೇಕ ನಿರೀಕ್ಷೆಯುಳ್ಳ ವಚನಗಳು ಸತ್ಯವೇದದಲ್ಲಿ ಬರೆಯಲ್ಪಟ್ಟಿವೆ. ಸತ್ತ ಲಾಜರನನ್ನು ಎಬ್ಬಿಸುವದರ ಮೂಲಕ ಯೇಸು ಕ್ರಿಸ್ತನು ತನ್ನ ಹಿಂಬಾಲಕರಿಗೆ ಸದ್ಯದಲ್ಲಿ ನಿತ್ಯಜೀವ ಮತ್ತು ಮುಂದೆ ನಿತ್ಯಜೀವವು ದೊರೆಯುವದೆಂಬ ಭರವಸೆಯನ್ನು ಕೊಟ್ಟಿದ್ದಾನೆ.

ಅರಿಕೆದಾರನಾದ ಎಡ್ವರ್ಡ್ ತಾನು ಸಾಯುವದಕ್ಕಿಂತೆ ಮುಂಚೆ: “ನಾನು ಸಾಯುತ್ತಿದ್ದೇನೆಂದು ಅಳಬೇಡಿರಿ; ಸಾಯುವವರ ಲೋಕವನ್ನು ಈಗ ನಾನು ಬಿಟ್ಟು ಹೋಗುತ್ತಿದ್ದೇನೆ ಆದರೂ ಜೀವಿಸುವವರ ಲೋಕದಲ್ಲಿ ದೇವರ ಆಶೀರ್ವಾದವನ್ನು ಕಾಣುವೆನೆಂಬ ಭರವಸೆ ನನಗಿದೆ” ಎಂದು ಹೇಳಿದನು. “ಯೇಸು ಕ್ರಿಸ್ತನ ಮೂಲಕ ನಾವು ಸೂರ್ಯಾಸ್ತಮಾನಕ್ಕಲ್ಲ ಬದಲಾಗಿ ಸೂರ್ಯೋದಯದೆಡೆಗೆ ಪ್ರಯಾಣಿಸುತ್ತಿದ್ದೇವೆಂದು ನಮಗೆ ಗೊತ್ತಿದೆ. ಇನ್ನೂ ಸ್ಪಷ್ಟವಾಗಿ ಹೇಳುವದಾದರೆ ನಾವು ಜೀವದ ಮಾರ್ಗದಲ್ಲಿ ಸಾಗುತ್ತಿದ್ದೇವೆಯೇ ಹೊರತು ಮರಣದ ಮಾರ್ಗದಲ್ಲಲ್ಲ” ಎಂದು ವಿಲ್ಲಿಯಮ್ ಬಾರ್ಕ್ಲೇ ಬರೆದಿದ್ದಾರೆ.

ಒಬ್ಬ ವಿಶ್ವಾಸಿಯ ಜೀವಿತದಲ್ಲಿ ಯೇಸು ಕ್ರಿಸ್ತನು ನಿತ್ಯತ್ವದ ನಿಮ್ಮ ತವಕವನ್ನು ನಾನು ನೆರವೇರಿಸುತ್ತೇನೆ ಎಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದ್ದಾನೆ. ಮರಣವು ಕೊನೆಯಲ್ಲ, ಮತ್ತು ಆತನ ಮಾತುಗಳು ಸತ್ಯ ಎಂದು ಸಾಬೀತುಪಡಿಸುವದಕ್ಕಾಗಿ ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು ಎಂದು ಆತನು ನಿಶ್ಚಯವಾಗಿ ಹೇಳಿದನು. ಮರಣದ ಶಕ್ತಿಯನ್ನು ನಾಶ ಮಾಡಿ ಒಬ್ಬ ವಿಶ್ವಾಸಿಗೆ ಅಂತಿಮವಾದ ನೆರವೇರುವಿಕೆಯಾದ, ನಿತ್ಯಜೀವವನ್ನು ಕೊಡಲು ಯೇಸು ಕೊಟ್ಟಿರುವ ಹೇಳಿಕೆಯನ್ನು ಸೂಕ್ಷ್ಮವಾಗಿ ನೋಡಿಕೊಳ್ಳೋಣ.

1.ಎ. ಮರಣ ಮತ್ತು ಸಾಯುವ ವಿಷಯದಲ್ಲಿ ನಮ್ಮೊಳಗೆ ಕಾಣಿಸಿಕೊಳ್ಳುವ ಕೆಲವು ಭಾವನೆಗಳು ಏನೇನು?

ಬಿ. ಮರಣದ ವಿಷಯವಾಗಿ ಮಾನವನ ಹೃದಯದ ಸಾಮಾನ್ಯವಾದ ತವಕ ಏನು?

**Reference**: ನೋಟ್ 5, ಜೀವಿಸುವ ವಿಷಯದಲ್ಲಿ ಮನುಷ್ಯನ ತವಕ, ಪುಟ 120.
2. ಕೆಳಗಿನ ವಚನಗಳಿಗನುಸಾರವಾಗಿ, ಶಾರೀರಿಕ ಮರಣದ ಕಾರಣಗಳೇನು?

ರೋಮಾ 3:23; 6:23

ಆಯ್ಕೆಗೆ *ಸಂಬಂಧಪಟ್ಟ ಗದ್ಯಭಾಗಗಳು:* ಆದಿಕಾಂಡ 2:16–17; 3:6f; ಯಾಜಕಕಾಂಡ 17:11,14; ಇಬ್ರಿಯ 9:22.

3. ಮರಣದ ಕ್ರಯವನ್ನು ಜಯಿಸುವದಕ್ಕಾಗಿ ದೇವರು ಯಾವ ರೀತಿಯಾಗಿ ಜವಾಬ್ದಾರಿಕೆಯನ್ನು ವಹಿಸಿಕೊಂಡನು?

ರೋಮಾ 5:5

4.ಎ. ಕೆಳಗಿನ ವಚನಗಳಿಗನುಸಾರವಾಗಿ ನಾವು ಮರಣದಿಂದ ಜೀವಕ್ಕೆ ಹೇಗೆ ಮಾರ್ಪಡುತ್ತೇವೆ

ಯೋಹಾನ 1:12–13; 3:3

ಬಿ. ಕೆಳಗಿನ ವಚನಗಳಿಗನುಸಾರವಾಗಿ ಮರಣದ ನಂತರ ಜೀವವನ್ನು ಕೊಡುವ ಅಧಿಕಾರ ಯಾರಿಗಿದೆ?

ಯೋಹಾನ 5:21; 6:40

5. ಯೇಸು ಕ್ರಿಸ್ತನು ಈ ಲೋಕದಲ್ಲಿ ಸೇವೆಯನ್ನು ಮಾಡುತ್ತಿದ್ದಾಗ ಸತ್ತ ಲಾಜರನನ್ನು ಮತ್ತು ಇತರರನ್ನು ಮರಣದಿಂದ ಎಬ್ಬಿಸುವ ಸಾಮರ್ಥ್ಯವನ್ನು ಕೊಡುವದರೊಂದಿಗೆ, ನಿತ್ಯಜೀವದ ಕುರಿತಾದ ಯೇಸು ಕ್ರಿಸ್ತನ ಮಾತುಗಳನ್ನು ದೇವರು ಹೇಗೆ ನಿರೂಪಿಸಿದನು?

1 ಕೊರಿಂಥ 15:3–8ಎ

ಪ್ರಾಮುಖ್ಯವಾದ ವಚನಭಾಗಗಳು: *Know Why You Believe booklet in the pocket of your notebook*, "Did Christ Raise from Dead"? page 41.

6. ದೇವರು ತನ್ನ ಮಗನ ಮೂಲಕ ನಿತ್ಯಜೀವದ ವಿಷಯವಾಗಿ ಕೊಟ್ಟಿರುವ ವಾಗ್ದಾನದ ಬಗ್ಗೆ ಕೆಳಗಿನ ವಿಷಯಗಳು ಏನನ್ನು ಪ್ರಕಟಪಡಿಸುತ್ತವೆ?

1 ಕೊರಿಂಥ 15:42–44, 54

ಪ್ರಕಟನೆ 21:4

ಪ್ರಕಟನೆ 22:5

7. ವಿಶ್ವಾಸಿಗಳು ಎದುರಿಸುವ ತಕ್ಷಣದ ಮರಣದ ಬಗೆ ಕೆಳಗಿನ ವಿಷಯಗಳು ಹೇಗೆ ವಿವರಿಸುತ್ತವೆ?

ಕೀರ್ತನೆ 17:15

2 ಕೊರಿಂಥ 5:6,8

ಫಿಲಿಪ್ಪಿ 1:23

**Reference**: ನೋಟ್ 6, ವಿಶ್ವಾಸಿಗೆ ಮರಣ, ಪುಟ 120.

8. ಯೇಸು ಕ್ರಿಸ್ತನ ಹಿಂಬಾಲಕರಾಗಿರುವ ನಾವುಗಳು, ಮರಣಕ್ಕೆ ಭಯಪಡುವ ಅವಶ್ಯಕತೆಯಿಲ್ಲ. ಮರಣಕ್ಕೆ ಸಂಬಂಧಪಟ್ಟ ನಷ್ಟಗಳು ಎದುರಾಗುವಾಗ ಅದರಿಂದಾಗುವ ದುಃಖಗಳನ್ನು ಅನುಭವಿಸದಂತೆ ಇದು ನಮಗೆ ಸಹಾಯ ಮಾಡುತ್ತದೆ. ಯೋಹಾನ ಸುವಾರ್ತೆಯ ಈ ಸುಂದರವಾದ ಅಧ್ಯಾಯದಲ್ಲಿ, ದೇವರ ಕರುಣೆಯನ್ನು ಯೇಸು ಪ್ರದರ್ಶಿಸಿದನು ಮತ್ತು ದುಃಖಕರವಾದ ಸನ್ನಿವೇಶಗಳಲ್ಲಿಯೂ ನಮ್ಮೊಂದಿಗೆ ಆತನು ನಮಗಾಗಿ ಕಷ್ಟಗಳನ್ನು ಅನುಭವಿಸಿದನು (11:33–35). ಯೋಹಾನ 11 ರಲ್ಲಿ (ಲೂಕ 7:12–13 ಸಹ ನೋಡಿರಿ) ನಮ್ಮ ದುಃಖದ ವಿಷಯದಲ್ಲಿ ಯೇಸು ಕ್ರಿಸ್ತನು ನೀಡಿದ ಪ್ರತಿಕ್ರಿಯೆಯಲ್ಲಿ ನೀವು ಗಮನಿಸಿದ ವಿಷಯವೇನು?

9. ಒಬ್ಬ ವಿಶ್ವಾಸಿಯ ಮರಣವನ್ನು ಕರ್ತನು ಹೇಗೆ ನೋಡುತ್ತಾನೆ?

ಕೀರ್ತನೆ 116:15

## ಸಾರಾಂಶ

10.ಎ. ಯೇಸು ಕ್ರಿಸ್ತನು ಕೊಡುವ ಜೀವಿತದ ವಿಷಯದಲ್ಲಿ ಈ ಪಾಠದಿಂದ ನಿಮ್ಮ ಮೇಲೆ ಬೀರಿದ ಪ್ರಭಾವ ಏನು?

ಬಿ. ನಿಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ಈ ತಿಳುವಳಿಕೆಯು ನಿಮಗೆ ಎಷ್ಟರ ಮಟ್ಟಿಗೆ ಸಹಾಯ ಮಾಡುವಂಥದ್ದಾಗಿದೆ?

11. ನಾವು ನಿತ್ಯಜೀವವನ್ನು ಪಡೆಯಬೇಕಾದರೆ ಯೇಸು ಕ್ರಿಸ್ತನು ಹೇಳಿರುವ ವಿಷಯಗಳನ್ನೆಲ್ಲಾ ನಾವು ನಂಬಬೇಕೆಂದು ಸತ್ಯವೇದವು ಹೇಳುತ್ತದೆ, ಅಂದರೆ ಯೇಸು ಕ್ರಿಸ್ತನು ಹೇಳಿರುವದೆಲ್ಲವೂ ಪರಿಪೂರ್ಣವಾಗಿಯೂ ಸತ್ಯ ಎಂದು ಅಂಗೀಕರಿಸಬೇಕು ಮತ್ತು ಪರಿಪೂರ್ಣವಾದ ಭರವಸೆಯೊಂದಿಗೆ ನಮ್ಮ ಜೀವಿತಗಳನ್ನು ಪ್ರಾರಂಭಿಸೋಣ. ನಿಮ್ಮನ್ನು ನೀವು ಇದಕ್ಕಾಗಿ ಸಮರ್ಪಿಸಿದ್ದೀರ?

## ಪಾಠ 14 ನೋಟ್ಸ್

1 ನಾನೇ...ಜೀವವು (11:25). ಯೋಹಾನನ ಸುವಾರ್ತೆಯಲಿ ಜೀವ ಎಂದು 36 ಸಾರಿ ಬರೆಯಲ್ಪಟ್ಟಿದೆ. ಯೇಸು ಕ್ರಿಸ್ತನು ಕೊಡುವ ಜೀವಿತದಲ್ಲಿ ಒಳಗೊಂಡಿರುವದೇನೆಂದರೆ ನಾವು ಮೊದಲನೆಯದಾಗಿ ಆತನ ಮಗನಲ್ಲಿ ನಂಬಿಕೆಯನ್ನಿಡುವದರ ಮೂಲಕವಾಗಿ ನಾವು ದೇವರ ಕುಟುಂಬದಲ್ಲಿ ಜನಿಸುತ್ತೇವೆ (1:4, 12–13) ಮತ್ತು ದೇವರ ಮಗುವಾಗಿ ಶಾಶ್ವತವಾಗಿ ನಿತ್ಯಜೀವವನ್ನು ಪಡೆಯುತ್ತೇವೆ (14:16–17,20,23). ನನ್ನಲ್ಲಿ ನಂಬಿಕೆಯನ್ನಿಡುವವರು ಸಾಯುವದಿಲ್ಲ ಎಂದು ಯೇಸು ಕ್ರಿಸ್ತನು ಹೇಳಿದಾಗ (11:26), ವಿಶ್ವಾಸಿಯು ಶಾರೀರಿಕವಾಗಿ ಎಂದಿಗೂ ಸಾಯುವದಿಲ್ಲ ಎಂದು ಮಾತ್ರ ಆತನು ಖಂಡಿತವಾಗಿಯೂ ಹೇಳಲಿಲ್ಲ. ಬದಲಾಗಿ ಈಗ ಆತ್ಮೀಕ ಮರಣವನ್ನು ಜಯಿಸಲು ಮತ್ತು ನಂತರ ಶಾರೀರಿಕ ಮರಣವಾದ ಮೇಲೆ ವಿಶ್ವಾಸಿಗೆ ಹೊಸ ಶರೀರವನ್ನು ಮತ್ತು ನಿತ್ಯಜೀವವನ್ನು ಕೊಡುವ ತನ್ನ ಸಾಮರ್ಥ್ಯವನ್ನು ಪ್ರಕಟಿಸುತ್ತಿದ್ದಾನೆ (cf. 1 ಕೊರಿಂಥ 15:50–57, ಮತ್ತು ವಚನಗಳು 35–44). ಯೇಸು ಕ್ರಿಸ್ತನು ತಾನೇ ಪುನರುತ್ಥಾನಗೊಂಡದ್ದು, ಆತನ ಹೇಳಿಕೆಗಳಿಗೆ ಸಾಕ್ಷಿಯಾಗಿದೆ. ಈ ಕಾರಣದಿಂದಲೇ ಯೇಸು ಕ್ರಿಸ್ತನು ಮೇಲಿನ ಕೋಣೆಯಲ್ಲಿದ್ದಾಗ: "ನಾನು ಬದುಕುವದರಿಂದ ನೀವೂ ಬದುಕುವಿರಿ" (ಯೋಹಾನ 14:19) ಎಂದು ಹೇಳಿದನು.

2 ಸೆನ್‌ಹೆಡ್ರಿನ್. ಸೆನ್‌ಹೆಡ್ರಿನ್ ಯೆಹೂದ್ಯರ ಪರಮೋಚ್ಚವಾದ ನ್ಯಾಯಾಲಯ. ಅದರಲ್ಲಿ ಯಾಜಕರು, ಶಾಸ್ತ್ರಿಗಳು ಮತ್ತು ಹಿರಿಯರಿದ್ದರು. ನ್ಯಾಯಾಲಯದಲ್ಲಿ ಎಪ್ಪತ್ತೊಂದು ಮಂದಿ ಕಾರ್ಯನಿರ್ವಹಿಸುತ್ತಿದ್ದರು ಮತ್ತು ಮಹಾಯಾಜಕನು ಅದರ ಅಧ್ಯಕ್ಷನಾಗಿದ್ದನು. ಸೆನ್‌ಹೆಡ್ರಿನ್‌ನಲ್ಲಿ ಫರಿಸಾಯರು ಮತ್ತು ಸದ್ದುಕಾಯರು ಇಬ್ಬರೂ ಇದ್ದರು. ಫರಿಸಾಯರು ರಾಜಕೀಯವಲ್ಲದ ಪಕ್ಷದವರಾಗಿದ್ದರು, ಯೆಹೂದ್ಯರ ನಿಯಮಗಳಿಗನುಸಾರವಾಗಿ ಜೀವಿಸುವದೊಂದೇ ಅವರ ಪ್ರಥಮವಾದ ಆಸಕ್ತಿಯಾಗಿತ್ತು ಮತ್ತು ಹಾಗೆ ಜೀವಿಸಲು ಸಾಧ್ಯವಾಗುವವರೆಗೂ ಅವರು ತಮ್ಮ ಆಡಳಿತವನ್ನು ನಡೆಸುತ್ತಿದ್ದರು ಯಾರೆ ಆದರೂ ಅವರಿಗೆ ಗಮನ ಕೊಡುತ್ತಿರಲಿಲ್ಲ. ಸದ್ದುಕಾಯರು ಯೆಹೂದ್ಯ ಕುಟುಂಬದವರಾಗಿದ್ದರು ಮತ್ತು ಇಸ್ರಾಯೇಲಿನಲ್ಲಿ ವೈಭವಶಾಲಿಗಳ ಆಡಳಿತವನ್ನು ಪ್ರತಿನಿಧಿಸುವವರಾಗಿದ್ದರು. ದೈವಶಾಸ್ತ್ರದನುಸಾರವಾಗಿ ಅಸಾಂಪ್ರದಾಯಿಕ, ಯೆಹೂದ್ಯ ನಿಯಮಗಳನ್ನು ಫರಿಸಾಯರು ಪಾಲಿಸುತ್ತಿದ್ದ ಶಿಸ್ತುಬದ್ಧವಾದ ಯೆಹೂದ್ಯರ ನಿಯಮವನ್ನು ಇವರು ನಯವಾಗಿ ತಿರಸ್ಕರಿಸಿದರು. ಪ್ರಾಯೋಗಿಕವಾಗಿ ಸೆನ್‌ಹೆಡ್ರಿನ್‌ನಲ್ಲಿದ್ದ ಯಾಜಕರೆಲ್ಲರೂ ಸದ್ದುಕಾಯರಾಗಿದ್ದರು,

ತಮ್ಮ ಸ್ಥಾನ ಮಾನಗಳನ್ನು ಉಳಿಸಿಕೊಳ್ಳಬೇಕೆಂಬದೆ ಅವರ ಪ್ರಮುಖ ಉದ್ದೇಶವಾಗಿತ್ತು. ಹೆಚ್ಚಾಗುತ್ತಿದ್ದ ಯೇಸು ಕ್ರಿಸ್ತನ ಪ್ರಖ್ಯಾತಿ ಜನರಲ್ಲಿ ಗೊಂದಲಗಳನ್ನು ಎಬ್ಬಿಸುತ್ತದೆ ಮತ್ತು ರೋಮನ್ ಅಧಿಕಾರವನ್ನು ಬಲ್ಲವನಾಗಿದ್ದರಿಂದ, ನಜರೇತಿನವನಿಗೆ ಕಡಿವಾಣ ಹಾಕಲು ಸದ್ದುಕಾಯರು ಸಮಯ ನೋಡುತ್ತಿದ್ದರು. ಸೆನ್ಹೆಡ್ರಿನ್ ಕೂಟದಲ್ಲಿ ಸದ್ದುಕಾಯರದ್ದೇ ಕಾರುಬಾರು ನಡೆಯುತಿತ್ತು, ಆ ಕೂಟದಲ್ಲಿ ಯೇಸುವನ್ನು ಕೊಲ್ಲಬೇಕೆಂಬ ತೀರ್ಮಾನವನ್ನು ಸಹ ತೆಗೆದುಕೊಳ್ಳಲಾಯಿತು (ಯೋಹಾನ 11:45–53). ಎ.ಡಿ. 70ರಲ್ಲಿ ಯೆಹೂದ್ಯರ ಪ್ರತಿರೋಧದ ವಿಷಯದಲ್ಲಿ ರೋಮನ್ನರು ಬೇಸತ್ತು ಹೋದರು ಮತ್ತು ಯೆರೂಸಲೇಮನ್ನು ವಶಪಡಿಸಿಕೊಂಡರು ಇದರಿಂದ ಪಟ್ಟಣವು ಹಾಳಾಯಿತು ಹಾಗೂ ಸದ್ದುಕಾಯರು ತಮ್ಮ ಆಸ್ತಿ, ಅಧಿಕಾರ ಎಲ್ಲವನ್ನೂ ಕಳೆದುಕೊಂಡರು.

3 ಹನ್ನೆರೆಡು ತಾಸುಗಳ ದಿನದಬೆಳಕು (11:9–10). "ಬೆಥಾನ್ಯಕ್ಕೆ ಹೋಗುವದು ಅಪಾಯಕಾರಿಯಲ್ಲ ಎಂಬದನ್ನು ತಿಳಿಸುವದಕ್ಕಾಗಿ ಯೇಸು ಕ್ರಿಸ್ತನು ರಹಸ್ಯವಾದ ರೀತಿಯಲ್ಲಿ ವಿವರಿಸಿದನು. ಒಂದರ್ಥದಲ್ಲಿ ಆತನು ಶಾರೀರಿಕವಾದ ಬೆಳಕು ಅಥವಾ ಅಂಧಕಾರದಲ್ಲಿ ನಡೆಯುವದರ (ಜೀವಿಸುವದರ) ಕುರಿತಾಗಿ ಮಾತನಾಡಿದನು. ಆತ್ಮೀಕ ರಂಗದಲ್ಲಿ ಒಬ್ಬನು ದೇವರ ಚಿತ್ತಕ್ಕನುಸಾರವಾಗಿ ಜೀವಿಸುವಾಗ ಆತನು ಸುರಕ್ಷಿತನಾಗಿರುತ್ತಾನೆ. ದುರಾತ್ಮನ ಚಿತ್ತಕ್ಕನುಸಾರವಾಗಿ ಜೀವಿಸುವದು ಅಪಾಯಕಾರಿಯಾಗಿದೆ. ಎಲ್ಲಿಯವರೆಗೂ ಆತನು ದೇವರ ಯೋಜನೆಗನುಸಾರವಾಗಿ ಜೀವಿಸುತ್ತಾನೋ, ನೇಮಕವಾಗಿರುವ ಸಮಯದವರೆಗೂ ಯಾವುದೇ ಹಾನಿಯು ಸಂಭವಿಸುವದಿಲ್ಲ.
ಜನರಿಗೆ ಇದನ್ನು ಹೋಲಿಸುವಾಗ, ಯೇಸುವೇ ಬೆಳಕೆಂದು ಪರಿಗಣಿಸಿ ಜನರು ಆತನಿಗೆ ಪ್ರತಿಕ್ರಿಯೆಯನ್ನು ಕೊಡಬೇಕಿತ್ತು (cf. 9:4. "ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡೆಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು"). ಆತನು ಬೇಗನೇ ಹೊರಟುಹೋಗುತ್ತಾನೆ ಮತ್ತು ಈ ಶ್ರೇಷ್ಟವಾದ ಅವಕಾಶವು ನಷ್ಟವಾಗುತ್ತದೆ. Walvoord & Zuck, *The Bible Knowledge Commentary*, page 313.

4 ಮಹಾಯಾಜಕನಾದ ಕಾಯಫನು.....ಪ್ರವಾದಿಸಿದನು (11:49–52). "ಆತನ ಕಲ್ಪನೆಗೂ ಮೀರಿದ ರೀತಿಯಲ್ಲಿ ಆತನ ಮಾತುಗಳು ಸತ್ಯವಾಗಿದ್ದವು. ಸತ್ಯವೇದದಲ್ಲಿರುವ ಪ್ರವಾದನೆಯು ಪ್ರಕಟವಾಗಿರುವ ದೈವೀಕ ಸತ್ಯದ ಭಾಗವಾಗಿದೆ. ವಾಸ್ತವದಲ್ಲಿ ನೋಡುವದಾದರೆ ಯೇಸು ಕ್ರಿಸ್ತನ ಮರಣವು ಲೋಕದ ಜನರಿಗೋಸ್ಕವಾಗಿದೆಯೇ ಹೊರತು, ರಾಜಕೀಯದ ತೊಂದರೆಗಳನ್ನು ತೆಗೆದುಹಾಕುವಂಥದ್ದಲ್ಲ, ಆದರೂ ಆತನಲ್ಲಿ ನಂಬಿಕೆಯನ್ನಿಡುವವರ ಪಾಪಗಳನ್ನು ಆತನು ತೆಗೆದುಹಾಕುತ್ತಾನೆ ಎಂಬದನ್ನು ತಿಳಿಸುತ್ತದೆ." *The NIV Study Bible*, page 1620.

5 ಶಾಶ್ವತವಾಗಿ ಜೀವಿಸಬೇಕೆಂಬ ಮನುಷ್ಯನ ತವಕದ ಕುರಿತು, ಸಿ. ಎಸ್. ಲೀವಿಸ್‌ರವರು ಬರೆದಿರುವದೇನೆಂದರೆ: "ಜೀವಿಗಳು ಬಯಕೆಗಳೊಂದಿಗೆ ಹುಟ್ಟಿಲ್ಲ, ಆದರೆ ಆ ಬಯಕೆಗಳಿಗೆ ತೃಪ್ತಿಯನ್ನು ಕಂಡುಕೊಳ್ಳುವವರೆಗೂ ಮಾತ್ರವೇ ಇದು ಸೀಮಿತವಾಗಿರುತ್ತದೆ. ಸಣ್ಣ ಮಗುವಿಗೂ ಹಸಿವೆ ಗೊತ್ತಾಗುತ್ತದೆ: ಆಹಾರವೆಂಬ ವಿಷಯವು ಸಹ ಇದೆ. ಬಾತುಕೋಳಿ ಮರಿ ಈಜಲು ಬಯಸುತ್ತದೆ; ಅದಕ್ಕೂ ಈಜಲು ನೀರಿದೆ. ನನ್ನನ್ನು ತೃಪ್ತಿಪಡಿಸದಂಥ ಬಯಕೆಯು ನನಗೆ ಈ ಲೋಕದಲ್ಲಿರುವದಾದರೆ ಅದರ ಅರ್ಥ ಸಾಮಾನ್ಯವಾಗಿ ನಾನು ಈ ಲೋಕದವನಲ್ಲ ಬದಲಾಗಿ ಬೇರೆ ಲೋಕದವನಾಗಿದ್ದೇನೆ. ನನ್ನ ನಿಜವಾದ ದೇಶದ ವಿಷಯದಲ್ಲಿ ನಾನು ಬಯಕೆಯನ್ನಿಟ್ಟುಕೊಂಡಿರಬೇಕು, ಯಾಕೆಂದರೆ ನನ್ನ ಮರಣದವರೆಗೂ ಅದನ್ನು ಕಾಣಲು ನನಗೆ ಸಾಧ್ಯವಾಗುವದಿಲ್ಲ; ಅದು ಗತಿಸಿಹೋಗುವ ಹಾಗೂ ಮತ್ತು ಮಾರ್ಪಡುವ ಹಾಗೂ ನಾನು ಅದಕ್ಕೆ ಅವಕಾಶವನ್ನು ಕೊಡಬಾರದು; ನಾನು ಇದನ್ನೇ ಕೇಂದ್ರಬಿಂದುವನ್ನಾಗಿಸಬೇಕು ಮತ್ತು ಆ ದೇಶಕ್ಕಾಗಿ ತವಕಿಸುವದರೊಂದಿಗೆ ಇತರರನ್ನೂ ಪ್ರೋತ್ಸಾಹಪಡಿಸಬೇಕು." *Mere Christianity*, page 120.

6 ವಿಶ್ವಾಸಿಯ ಮರಣವು ಯೇಸು ಕ್ರಿಸ್ತನ ಪ್ರಸನ್ನತೆಗೆ ತಕ್ಷಣ ಹೋಗುವಂಥದ್ದಾಗಿದೆ (cf. ಲೂಕ 23:42–43; 2 ಕೊರಿಂಥ 5:6,8; ಫಿಲಿಪ್ಪಿ 1:23). ಯೇಸು ಕ್ರಿಸ್ತನ ಎರಡನೇ ಬರೋಣದಲ್ಲಿ (ಮತ್ತಾಯ 24:27–31; ಯೋಹಾನ 14:2–3; ಅ.ಕೃ 1:10–11), ಯಾರೆಲ್ಲಾ ಆತನಲ್ಲಿ ನಂಬಿಕೆಯನ್ನಿಟ್ಟಿದ್ದಾರೋ ಅವರೆಲ್ಲರೂ ಪುನರುತ್ಥಾನಗೊಂಡಿರುವ ಯೇಸು ಕ್ರಿಸ್ತನ ಶರೀರದಂತೆ ಪುನರುತ್ಥಾನದ ಶರೀರವನ್ನು ಪಡೆಯುವರು (1 ಕೊರಿಂಥ 15:42–44; 1 ಥೆಸಲೋನಿಕ 4:14–17). ಈ ಸತ್ಯಗಳ ನಿಮಿತ್ತವಾಗಿ, ವಿಶ್ವಾಸಿಯ ಮರಣವು ಅಂತಿಮ ಅಥವಾ ಭಯಾನಕವಲ್ಲ ಮತ್ತು ಸತ್ಯವೇದದಲ್ಲಿ ಇದನ್ನು "ಕ್ರಿಸ್ತನಲ್ಲಿ ನಿದ್ದೆ ಹೋದವರೆಂದು" ಸೂಚಿಸಲಾಗಿದೆ (1 ಕೊರಿಂಥ 15:18; 1 ಥೆಸಲೋನಿಕ 4:13). ಯೇಸು ಕ್ರಿಸ್ತನ ಎರಡನೇ ಬರೋಣಕ್ಕಿಂತ ಮುಂಚಿತವಾಗಿ "ಕ್ರಿಸ್ತನಲ್ಲಿ ನಿದ್ದೆಹೋದವರು" ಏನನ್ನು ಅನುಭವಿಸುವರು ಎಂದು ಸತ್ಯವೇದದಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿಲ್ಲ, ಆದರೆ ಆತನನ್ನು ಅಂಗೀಕರಿಸಿಕೊಂಡವರು ಕರ್ತನಾದ ಯೇಸು ಕ್ರಿಸ್ತನೊಂದಿಗೆ ಅತ್ಯುನ್ನತವಾದ ನಿಕಟ ಸಂಬಂಧವನ್ನು ಹೊಂದಿರುತ್ತಾರೆ.

# ಪಾಠ 15

# ಸಾರ್ವತ್ರಿಕ ಸೇವೆಯ ಕೊನೆ

## ಯೋಹಾನ 12

ಪಸ್ಕ ಹಬ್ಬವು ಇನ್ನೂ ಆರು ದಿವಸ ಮುಂದೆ ಇರಲಾಗಿ ಯೇಸು ಬೆಥಾನ್ಯಕ್ಕೆ ಬಂದನು. ಕುಷ್ಠರೋಗಿಯಾಗಿದ್ದ ಸಿಮೋನನ ಮನೆಯಲ್ಲಿ ಯೇಸುವಿಗೆ ಔತಣವನ್ನು ಸಿದ್ಧಪಡಿಸಲಾಗಿತ್ತು (ಮತ್ತಾಯ 26:6) ಯೇಸುವಿಗೆ ಅಲ್ಲಿ ಔತಣ ಮಾಡಿಸಲು ಮಾರ್ಥಳು ನೆರವಾಗಿದ್ದಳು. ಯೇಸು ಸತ್ತವರೊಳಗಿಂದ ಎಬ್ಬಿಸಿದ ಲಾಜರನು ಅಲ್ಲಿದ್ದನು. ಲಾಜರನು ಆತನ ಸಂಗಡ ಊಟಕ್ಕೆ ಕೂತವರಲ್ಲಿ ಒಬ್ಬನಾಗಿದ್ದನು.

ಊಟದ ಸಮಯದಲ್ಲಿ, ಲಾಜರನ ಸಹೋದರಿಯಾದ ಮರಿಯಳು, ಒಂದು ವರ್ಷದ ಕೂಲಿಯಷ್ಟು ಬೆಲೆ ಬಾಳುವ ಸುಗಂಧ ದ್ರವ್ಯದಿಂದ ಯೇಸುವಿನ ಪಾದವನ್ನು ಅಭಿಷೇಕಿಸಲು ಮುಂದಾದಳು. ಅದರ ಸುವಾಸನೆಯು ಮನೆಯಲ್ಲೆಲ್ಲಾ ತುಂಬಿಕೊಂಡಿತು. ಆದರೆ ಯೇಸು ಕ್ರಿಸ್ತನ ಸೇವೆಗಾಗಿ ಶೇಖರಣೆ–ಯಾಗಿತ್ತಿದ್ದ ಹಣವನ್ನು ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಯೂದನು, ಈ ಸುಗಂಧ ತೈಲವನ್ನು ಮಾರಾಟ ಮಾಡಿ ಬರುವ ಹಣದಿಂದ ಬಡವರಿಗೆ ಹಂಚಬಹುದಾಗಿತ್ತೆಂದು ಹೇಳಿದನು. ತನ್ನ ಮರಣದ ಸಮಯವು ಹತ್ತಿರವಾಗಿದೆಯೆಂದು ಆತನಿಗೆ ಗೊತ್ತಿದ್ದರಿಂದ, ಯೇಸು ಕ್ರಿಸ್ತನು ಮರಿಯಳ ಭಕ್ತಿಯನ್ನು ಮೆಚ್ಚಿಕೊಂಡನು ಮತ್ತು ನನ್ನನ್ನು ಹೂಣಿಡುವದಕ್ಕಾಗಿ ಸಿದ್ದಗೊಳಿಸುತ್ತಿದ್ದಾಳೆಂದು ಘೋಷಿಸಿದನು.

ಯೇಸು ಕ್ರಿಸ್ತನು ಮತ್ತು ಲಾಜರನು ಬಂದಿದ್ದಾರೆಂಬ ವಿಷಯವನ್ನು ಕೇಳಿ ಅನೇಕರು ಸೀಮೋನನ ಮನೆಗೆ ಬಂದರು. ಯೇಸು ಕ್ರಿಸ್ತನು ಬಹಳ ಪ್ರಸಿದ್ಧನಾಗಿದ್ದರಿಂದ ಯೆರೂಸಲೇಮಿಗೆ ಬಂದಾಗ ಜನರಿಗೆ ಖಂಡಿತವಾಗಿಯೂ ಗೊತ್ತಾಗುತಿತ್ತು. ಯೇಸು ಕ್ರಿಸ್ತನು ಸತ್ತುಹೋಗಿದ್ದ ಲಾಜರನನ್ನು ಎಬ್ಬಿಸಿದ್ದರಿಂದ ಅನೇಕ ಯೆಹೂದ್ಯರು ಆತನಲ್ಲಿ ತಮ್ಮ ನಂಬಿಕೆಯನ್ನು ಇಟ್ಟಿದ್ದರು. ಇದರ ನಿಮಿತ್ತವಾಗಿ ಯೇಸು ಕ್ರಿಸ್ತನನ್ನು ಕೊಲ್ಲಬೇಕೆಂದು ಸಮಯವನ್ನು ಎದುರುನೋಡುತ್ತಿದ್ದ ಮಹಾಯಾಜಕರು ಲಾಜರನನ್ನು ಸಹ ಕೊಲ್ಲಬೇಕೆಂದು ನಿಶ್ಚಯಿಸಿಕೊಂಡರು.

ಶನಿವಾರವನ್ನು (ಸಬ್ಬತ್ ದಿನವನ್ನು) ಬೆಥಾನ್ಯದಲ್ಲಿ ಕಳೆದ ನಂತರ, ಭಾನುವಾರದಂದು ಯೇಸು ಕ್ರಿಸ್ತನು ಅಂತಿಮವಾಗಿ ಯೆರೂಸಲೇಮಿಗೆ ಪ್ರವೇಶಿಸಿದನು. ಸಮಾಧಾನದ ಗುರುತಾಗಿರುವ ಕತ್ತೇಮರಿಯ ಮೇಲೆ ಆತನು ಬಂದನು, ಇದರಿಂದ ಜೆಕರ್ಯ 9:9ರಲ್ಲಿ ಹೇಳಲಾಗಿದ್ದ ಪ್ರವಾದನೆಯು ಸಹ ನೆರವೇರಿತು. ಅತ್ಯಂತ ಉತ್ಸುಕರಾಗಿದ್ದ ಜನರು ಗುಂಪುಗುಂಪಾಗಿ ಯೇಸುವನ್ನು ಮುತ್ತಿಕೊಂಡರು. ಲಾಜರನು ತನ್ನಲ್ಲಿ ನಡೆದ ಸೂಚಕಕಾರ್ಯದ ಬಗ್ಗೆ ಜನರಿಗೆ ತಿಳಿಯಪಡಿಸಿದಾಗ ಜನರ ಸಂಖ್ಯೆಯು ಹೆಚ್ಚಾಯಿತು. ಹಾಗೆಯೇ ಯೇಸು ಕ್ರಿಸ್ತನು ಮಾಡಿದ್ದ ಸಾವಿರಾರು ಸೂಚಕಕಾರ್ಯಗಳನ್ನು ನೋಡಿದ್ದ ಗಲಿಲಾಯದವರು ಸಹ ಪಸ್ಕ ಹಬ್ಬಕ್ಕಾಗಿ ಬಂದಿದ್ದರಿಂದ ಅವರು ಜನರ ಗುಂಪುಗಳೊಂದಿಗೆ ಸೇರಿಕೊಂಡರು. ಇದಕ್ಕೂ ಮೊದಲು ಯೇಸು ಕ್ರಿಸ್ತನನ್ನು ಭೂಲೋಕದ ಅರಸನನ್ನಾಗಿ

ಮಾಡಬೇಕೆಂದು ಅವರು ಬಯಸಿದರು ಆದರೆ ಯೇಸು ಅದನ್ನು ನಿರಾಕರಿಸಿದ್ದನು. ಆದರೆ ಈಗ ಆತನು ಪ್ರವೇಶಿಸಿದ್ದರಿಂದ ಯೇಸುವಿನ ವಿಷಯದಲ್ಲಿ ಇದು "ಮಹಾ ಅರಸನ ಪಟ್ಟಣ" ಎಂದು ಘೋಷಿಸಿದರು.

ಉತ್ಸುಕರಾಗಿದ್ದ ಜನರು ಯೇಸು ಕ್ರಿಸ್ತನ ಮಾರ್ಗದಲ್ಲಿ ಅಂಜೂರದ ಗರಿಗಳನ್ನು ಹಾಕಿದರು ಮತ್ತು "ಹೋಸನ್ನ!" ("ದಯವಿಟ್ಟು ನಮ್ಮನ್ನು ಕಾಪಾಡು!" ಎಂದು ಸೂಚಿಸುವ ಸ್ತುತಿಯ ಭಾವ cf. ಕೀರ್ತನೆ 118:25) ಎಂದು ಜಯಘೋಶ ಮಾಡಿದರು. "ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ" ಎಂದು ಅವರು ಯೇಸುವನ್ನು ಕೊಂಡಾಡಿದರು. ತನ್ನ ಸುತ್ತಲೂ ಕೂಗಾಡುತ್ತಿದ್ದ ಜನರ ಮಧ್ಯದಲ್ಲಿ ಆತನು ಒಳಗೆ ಪ್ರವೇಶಿಸಿದನು.

ಇದಕ್ಕೂ ಮೊದಲೇ, ಯೇಸು ಕ್ರಿಸ್ತನ ಪ್ರಖ್ಯಾತಿಯು ಸತತವಾಗಿ ಹೆಚ್ಚಾಗುತಿತ್ತು. ಯಾವುದೇ ದೊಂಬಿಯಾಗದಂತೆ, ಯೇಸು ಕ್ರಿಸ್ತನನ್ನು ಬಂಧಿಸಲು ಮತ್ತು ಕೊಲೆ ಮಾಡಲು ಯೆಹೂದ್ಯ ನಾಯಕರು ಸಮಯವನ್ನು ನೋಡುತ್ತಿದ್ದರು. ಆತನ ಸುತ್ತಲಿದ್ದ ಜನರಲ್ಲಿ ಅನೇಕರು ಆತನಲ್ಲಿ ನಂಬಿಕೆಯನ್ನಿಟ್ಟಿರಲಿಲ್ಲವಾದರೂ, "ಇಡೀ ಲೋಕವೇ ಆತನ ಹಿಂದೆ ಹೋಗಿದೆ!" ಧಾರ್ಮಿಕ ನಾಯಕರು ತಮ್ಮೊಳಗೆ ಗುಣಗುಟ್ಟಿಕೊಳ್ಳುತ್ತಿದ್ದರು.

ಪಟ್ಟಣದೊಳಗೆ ಪ್ರವೇಶಿಸಿದ ನಂತರ, ಪಸ್ಕ ಹಬ್ಬದಲ್ಲಿ ಆರಾಧನೆಗಾಗಿ ಬಂದಿದ್ದ ದೇವರಲ್ಲಿ ಭಯಭಕ್ತಿಯುಳ್ಳ ಕೆಲವು ಗ್ರೀಕರು ಯೇಸುವಿನೊಂದಿಗೆ ಮಾತನಾಡಬೇಕೆಂದು ಕೇಳಿಕೊಂಡರು. ಈ ಅನ್ಯಜನರ ಮನವಿಯನ್ನು ಕೇಳಿದ ಕೂಡಲೇ, ತನ್ನ ಮರಣದ ಸಮಯವು ಹತ್ತಿರವಾಗಿದೆಯೆಂದು ಯೇಸು ಕ್ರಿಸ್ತನು ಅರ್ಥಮಾಡಿಕೊಂಡನು. ಯೆಹೂದ್ಯರೊಂದಿಗೆ ದೇವರ ರಕ್ಷಣೆಯ ಸಂದೇಶವನ್ನು ಸ್ವೀಕರಿಸಿಕೊಳ್ಳುವ ಸಮಯವು ಅನ್ಯಜನರಿಗೆ ಒದಗಿಬಂದಿತ್ತು.

ಯೇಸು ಕ್ರಿಸ್ತನು ತನಗೆ ಹತ್ತಿರವಾಗಿದ್ದ ಮರಣವು ತನ್ನನ್ನು ಮಹಿಮೆಗೆ ನಡೆಸುತ್ತದೆ ಎಂದು ವಿವರಿಸಲು ಪ್ರಾರಂಭಿಸಿದನು. ಗೋಧಿ ಕಾಳು ಬೆಳೆಯನ್ನು ಕೊಡುವದಕ್ಕಿಂತ ಮೊದಲು ಭೂಮಿಯಲ್ಲಿ ಬಿದ್ದು "ಸಾಯುವ" ಉದಾಹರಣೆಯನ್ನು ಆತನು ಉಪಯೋಗಿಸಿದನು. ತನ್ನ ತಂದೆಗೆ ವಿಧೇಯನಾಗಿ ಇತರರ ಪಾಪಗಳಿಗಾಗಿ ಆತನು ಅನುಭವಿಸುವ ಮರಣವು (ಯೆಶಾಯ 53:10,12) ಎಲ್ಲರಿಗೂ ಆತ್ಮೀಕ ಜೀವಿತದ ಅವಕಾಶವನ್ನು ತರುವದಾಗಿತ್ತು. ಯೇಸು ಕ್ರಿಸ್ತನು ಇದನ್ನು ಇನ್ನೂ ವಿವರಿಸಿ ಹೇಳಿದ್ದೇನೆಂದರೆ, "ತನ್ನ ಪ್ರಾಣದ ಮೇಲೆ ಮಮತೆಯನ್ನಿಡುವವನು ಅದನ್ನು ಕಳಕೊಳ್ಳುವನು, ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆ ಮಾಡುವವನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು" (12:25). ಮತ್ತೊಂದು ಮಾತಿನಲ್ಲಿ ಹೇಳುವದಾದರೆ, ತನಗೋಸ್ಕರ ಮಾತ್ರವೇ ಜೀವಿಸುವವನು ನಿತ್ಯವಾದ ನೆರವೇರುವಿಕೆಯನ್ನು ಎಂದಿಗೂ ತಿಳಿದುಕೊಳ್ಳಲಾರನು. ಆದರೂ ಇದೇ ವಚನದ ಉಳಿದಭಾಗದಲ್ಲಿ ಯೇಸು ಕ್ರಿಸ್ತನು ವಾಗ್ದಾನ ಮಾಡಿರುವದೇನೆಂದರೆ, "ನನ್ನ ಸೇವೆಯನ್ನು ಮಾಡುವವನಿಗೆ ತಂದೆಯು ಬಹುಮಾನವನ್ನು ಕೊಡುವನು" (12:26).
ಆತನು ಸಂಕಟವು ಹೆಚ್ಚಾಗುತ್ತಿದ್ದಂತೆ, ನಾನು ತ್ಯಾಗವಾಗಿ ಅರ್ಪಿತವಾಗಬೇಕಾಗಿರುವ ಈ ಅವಧಿಗಾಗಿಯೇ ಕಳುಹಿಸಲ್ಪಟ್ಟಿದ್ದೇನೆಂದು ತಿಳಿದುಕೊಂಡ ಯೇಸುವು ಅದನ್ನು ತಪ್ಪಿಸುವದಿಲ್ಲ ಎಂದು ನಿಶ್ಚಯಿಸಿಕೊಂಡನು. "ತಂದೆಯೇ, ನಿನ್ನ ಹೆಸರನ್ನು ಮಹಿಮೆಪಡಿಸಿಕೋ!" ಎಂದು ಆತನು ಹೇಳಿದಾಗ, "ಮಹಿಮೆಪಡಿಸಿದ್ದೇನೆ, ತಿರಿಗಿ ಮಹಿಮೆಪಡಿಸುವೆನು ಎಂದು ಪರಲೋಕದಿಂದ ಆಕಾಶವಾಣಿ ಆಯಿತು" (12:28).

ಈ ಲೋಕದ ಅಧಿಪತಿಯನ್ನು ಹೊರಗೆ ಹಾಕುವ ಸಮಯವು ಹತ್ತಿರವಾಗಿದೆ ಎಂದು ಯೇಸು ಕ್ರಿಸ್ತನು ವಿವರಿಸಿದನು. ಎಲ್ಲಾ ಜನರನ್ನು ದೇವರ ಕಡೆಗೆ ಸೆಳೆದುಕೊಳ್ಳುವದಕ್ಕಾಗಿ ಯೇಸು ಕ್ರಿಸ್ತನು ಶಿಲುಬೆಗೆ ಏರಿಸಲ್ಪಡಬೇಕು. ಮತ್ತೊಂದು ಸಾರಿ ಕೊನೆಯದಾಗಿ, ನಿಮಗೆ ಅವಕಾಶವಿರುವಾಗಲೇ ಬೆಳಕಿಗೆ ಪ್ರತಿಕ್ರಿಯಿಸಿರಿ ಎಂದು ಆತನು ತನ್ನ ಸುತ್ತಲಿದ್ದ ಜನರ ಗುಂಪುಗಳನ್ನು ಪ್ರೋತ್ಸಾಹಪಡಿಸಿದನು. ನಂತರ ಕೊನೆಯ ದಿನಗಳಿಗಾಗಿ ತನ್ನ ಸಿದ್ಧಪಡಿಸಿಕೊಳ್ಳಲು ಆತನು ಜನರ ಗುಂಪುಗಳನ್ನು ಬಿಟ್ಟು ಹೊರಟುಹೋದನು.

ಯೇಸು ಕ್ರಿಸ್ತನು ಅಸಂಖ್ಯವಾದ ಸೂಚಕಕಾರ್ಯಗಳನ್ನು ನಡೆಸಿದಾಗಲೂ ಅನೇಕರು ಆತನಲ್ಲಿ ತಮ್ಮ ನಂಬಿಕೆಯನ್ನಿಡಲಿಲ್ಲ. ಪ್ರವಾದಿಯಾದ ಯೆಶಾಯನು ಜನರ ಕಠಿಣ ಹೃದಯಗಳ ಬಗ್ಗೆ ನೂರಾರು ವರ್ಷಗಳ ಹಿಂದೆ ಪ್ರವಾದಿಸಿರುವದನ್ನು ಇಲ್ಲಿ ಯೋಹಾನನು ಬರೆದಿದ್ದಾನೆ. ಆದರೂ ಬಹಳ ಜನರು ಹಾಗೂ ಯೆಹೂದ್ಯ ನಾಯಕರು ಸಹ ತಮ್ಮ ಜೊತೆಯವರ ಭಯದಿಂದಾಗಲಿ ಯೇಸುವಿನಲ್ಲಿಟ್ಟಿದ್ದ ನಂಬಿಕೆಯನ್ನು ಹೊರಗೆ ಪ್ರದರ್ಶಿಸಲು ಭಯಪಟ್ಟರು.

ಪಸ್ಕದ ವಾರವೆಂದು ಈಗ ಗುರುತಿಸಲಾಗುವ ಮಂಗಳವಾರದಂದು, ಯೇಸು ಕ್ರಿಸ್ತನು ತನ್ನ ಸಾರ್ವಜನಿಕ ಸೇವೆಯ ಕೊನೆಯ ಸಮಯಗಳಿಗೆ ಬಂದನು. ತನ್ನ ಮರಣ ಮತ್ತು ಪುನರುತ್ಥಾನಗಳ ಮುಂದಿನ ಎರಡು ದಿವಸಗಳನ್ನು ಆತನು ತನ್ನ ಶಿಷ್ಯರಿಗೆ ಪ್ರತ್ಯೇಕವಾಗಿ ಪ್ರೋತ್ಸಾಹಪಡಿಸುವಿಕೆಯಲ್ಲಿ ಕಳೆದನು. ಅನೇಕ ಬಾರಿ ಆತನು ತನ್ನ ಸಂದೇಶವನ್ನು ಮತ್ತೆ-ಮತ್ತೆ ಹೇಳಿದ್ದಾನೆ: "ನನ್ನನ್ನು ನಂಬಿದವನು ನನ್ನನ್ನೇ ನಂಬುವವನಲ್ಲ; ನನ್ನನ್ನು ಕಳುಹಿಸಿಕೊಟ್ಟಾತನನ್ನು ನಂಬುವವನಾಗಿದ್ದಾನೆ. ನನ್ನನ್ನು ನಂಬುವ ಒಬ್ಬನಾದರೂ ಕತ್ತಲಲ್ಲಿ ಇರಬಾರದೆಂದು ನಾನು ಬೆಳಕಾಗಿ ಲೋಕಕ್ಕೆ ಬಂದಿದ್ದೇನೆ. ಯಾಕೆಂದರೆ ನನ್ನಷ್ಟಕ್ಕೆ ನಾನೇ ಮಾತಾಡಿದವನಲ್ಲ; ನನ್ನನ್ನು ಕಳುಹಿಸಿಕೊಟ್ಟ ತಂದೆಯೇ ನೀನು ಇಂಥಿಂಥದನ್ನು ಹೇಳಬೇಕು, ಹೀಗೆ ಹೀಗೆ ಮಾತಾಡಬೇಕು ಎಂಬದಾಗಿ ನನಗೆ ಆಜ್ಞೆ ಕೊಟ್ಟಿದ್ದಾನೆ. ಆತನ ಆಜ್ಞೆ ನಿತ್ಯಜೀವವಾಗಿದೆ ಎಂದು ಬಲ್ಲೆನು" (12:44–46,49–50ಎ).

## ಯೋಹಾನ 12:1–11 ಓದಿರಿ.

1.ಎ. ಬೆಥಾನ್ಯದಲ್ಲಿ ಯೇಸು ಕ್ರಿಸ್ತನು ಔತಣದಲ್ಲಿ ಕೂತಿದ್ದಾಗ ಮರಿಯಳು ಮಾಡಿದ ಆರಾಧನೆಯ ಅಪ್ರತಿಮವಾದ ಕಾರ್ಯ ಯಾವುದು (12:3)?

ಬಿ. ಯೂದನ ಆರೋಪಕ್ಕೆ ಯೇಸು ಕ್ರಿಸ್ತನು ನೀಡಿದ ಪ್ರತಿಕ್ರಿಯೆ ಏನು (12:7–8)?

2.ಎ. ಯೇಸು ಕ್ರಿಸ್ತನು ಬೆಥಾನ್ಯದಲ್ಲಿದ್ದಾಗ ಸಂಭವಿಸಿದ ಘಟನೆ ಏನು (12:9)?

ಬಿ. ಮಹಾಯಾಜಕರು ಏನನ್ನು ಮಾಡಲು ತೀರ್ಮಾನಿಸಿದರು ಮತ್ತು ಯಾಕೆ (12:10–11)?

## ಯೋಹಾನ 12:12–19 ಓದಿರಿ.

3.ಎ. ಯೇಸು ಕ್ರಿಸ್ತನು ಕತ್ತೆಮರಿಯ ಮೇಲೆ ಯೆರೂಸಲೇಮನ್ನು ಪ್ರವೇಶಿಸಿದಾಗ ಆತನನ್ನು ಹೇಗೆ ಸ್ವೀಕರಿಸಿಕೊಳ್ಳಲಾಯಿತು (12:12–13)?

ಬಿ. ಪ್ರಾಚೀನ ಕಾಲದಲ್ಲಿ ಒಬ್ಬ ಅರಸನು ಕತ್ತೆಮರಿಯ ಮೇಲೆ ಪಟ್ಟಣದೊಳಗೆ ಪ್ರವೇಶಿಸುವದನ್ನು ತಾಳ್ಮೆ ಮತ್ತು ಸಮಾಧಾನದ ಗುರುತು ಎಂದು ಪರಿಗಣಿಸಲಾಗುತಿತ್ತು. ಇದರ ಬಗ್ಗೆ ಮತ್ತು ಜನರ ಕ್ರಿಯೆಯ ಬಗ್ಗೆ ಶಿಷ್ಯರು ನಂತರದಲ್ಲಿ ಅರ್ಥಮಾಡಿಕೊಂಡ ವಿಷಯವೇನು (12:16)?

ಗಮನಿಸಿರಿ: 13ನೇ ವಚನವು ಕೀರ್ತನೆ 118:25–26 ವಚನಗಳನ್ನು ಹಾಗೂ ವಚನ 15 ಜೆಕರ್ಯ 9:9ರಲ್ಲಿ ಬರೆಯಲಾಗಿರುವ ಹಳೆಯ ಒಡಂಬಡಿಕೆಯ ಮೆಸ್ಸೀಯನ ಪ್ರವಾದನೆಯನ್ನು ಬರೆಯಲಾಗಿದೆ.

4. ಯೇಸು ಕ್ರಿಸ್ತನು ಸತ್ತು ಹೋಗಿದ್ದ ಲಾಜರನನ್ನು ಎಬ್ಬಿಸಿದನೆಂಬ ಸುದ್ದಿಯನ್ನು ಜನರು ಹಬ್ಬಿಸಲು ಪ್ರಾರಂಭಿಸುತ್ತಿದ್ದಂತೆ, ಯೇಸು ಕ್ರಿಸ್ತನ ಹಿಂದೆ ಇದ್ದ ಜನರ ಸಂಖ್ಯೆಯು ಹೆಚ್ಚಾಯಿತು (12:17–18). ಯೇಸು ಕ್ರಿಸ್ತನು ವಿರೋಧಿಸುತ್ತಿದ್ದ ಧಾರ್ಮಿಕ ನಾಯಕರು ಇದಕ್ಕೆ ಯಾವ ರೀತಿಯ ಪ್ರತಿಕ್ರಿಯೆಯನ್ನು ನೀಡಿದರು (12:19)?

## ಯೋಹಾನ 12:20–36ಎ

5.ಎ. ದೇವರಲ್ಲಿ ಭಯಭಕ್ತಿಯುಳ್ಳವರಾಗಿದ್ದ ಗ್ರೀಕರು ಯೇಸುವನ್ನು ನೋಡಲು ಆತನ ಬಳಿಗೆ ಬಂದಾಗ, ತನ್ನ ಮರಣದ ಸಮಯವು ಹತ್ತಿರವಾಯಿತೆಂದು ಆತನಿಗೆ ಗೊತ್ತಿತ್ತು. ರಕ್ಷಣೆಯ ಮಾರ್ಗಕ್ಕಾಗಿ ಕಾಯುತ್ತಿದ್ದ ಅನ್ಯಜನಾಂಗವು ಮತ್ತು ಯೆಹೂದ್ಯರಲ್ಲಿ ಹಲವರು, ಯೇಸು ಕ್ರಿಸ್ತನ ಮೂಲಕವಾಗಿ ರಕ್ಷಣೆಯ ಮಾರ್ಗವನ್ನು ಅರಿತುಕೊಳ್ಳುವವರಾಗಿದ್ದರು. ತನ್ನ ಮರಣದ ಸಮಯವು ಹತ್ತಿರವಾಗುತ್ತಿದ್ದಂತೆ ಯೇಸು ಕ್ರಿಸ್ತನು ವಿವರಿಸಿದ ತತ್ವ ಯಾವುದು (12:23–24)?

ಬಿ. ತನ್ನ ಸ್ವಂತ ಪ್ರಾಣವನ್ನು ತ್ಯಾಗವಾಗಿ ಅರ್ಪಿಸಬೇಕಾದ ಸಮಯವು ಎದುರಾಗುತ್ತಿದ್ದಂತೆ ಯೇಸು ಕ್ರಿಸ್ತನು ತಿಳಿಯಪಡಿಸಿದ ಆತ್ಮೀಕ ತತ್ವ ಯಾವುದು?

**ಗಮನಿಸಿರಿ:** 12:25ರಲ್ಲಿ ತನ್ನ ಪ್ರಾಣವನ್ನು ಪ್ರೀತಿಸುವ ಮನುಷ್ಯನು ಎಂದು ಬರೆಯಲ್ಪಟ್ಟಿರುವ ವಿಷಯವು ತನ್ನ ಸ್ವಂತ ಯಶಸ್ಸು, ಬಯಕೆ ಮತ್ತು ಗುರಿಗಳ ಮೇಲೆ ಗಮನಹರಿಸುತ್ತಾ, ಯೇಸು ಕ್ರಿಸ್ತನ ಮೇಲಾಗಲಿ, ಇತರರ ಅಗತ್ಯತೆಗಳ ವಿಷಯವಾಗಲಿ ಚಿಂತಿಸದಿರುವ ಸ್ವಾರ್ಥ ಮನುಷ್ಯನನ್ನು ಸೂಚಿಸುತ್ತದೆ. ತನ್ನ ಸ್ವಂತ ಪ್ರಾಣವನ್ನು ದ್ವೇಷಿಸುವವನು ದೇವರಲ್ಲಿ ಇಟ್ಟಿರುವ ಭಕ್ರಿಯು ಎಲ್ಲದಕ್ಕಿಂತಲೂ ಮಿಗಿಲಾದದ್ದಾಗಿರುತ್ತದೆ. ದೇವರಿಗಾಗಿ ಆತನು ಮಾಡಿರುವ ಸಮರ್ಪಣೆಯು ಆತನು ತನ್ನ ಕುರಿತಾಗಿ ಮಾತ್ರವೇ ಆಲೋಚಿಸಿಕೊಳ್ಳುವ ಸ್ವಾರ್ಥ ಸ್ವಭಾವವನ್ನು ಬಿಡುವಂತೆ ಮಾಡಿದೆ.
6.ಎ. ಯೇಸು ಕ್ರಿಸ್ತನು ತನ್ನ ಶಿಷ್ಯರೊಂದಿಗೆ ತನ್ನ ಮರಣದ ಬಗ್ಗೆ ಮಾತನಾಡುವಾಗ ಆತನು ಯಾವ

ಆಯ್ಕೆಯನ್ನು ಮಾಡುತ್ತಿದ್ದನು (12:27–28; ಮತ್ತಾಯ 26:38–39, 42, 53 ಸಹ ನೋಡಿರಿ)?

ಬಿ. "ತಂದೆಯೇ ನಿನ್ನ ನಾಮವನ್ನು ಮಹಿಮೆಪಡಿಸಿಕೋ" ಎಂದು ಯೇಸು ಕ್ರಿಸ್ತನು ಮಾಡಿದ ಪ್ರಾರ್ಥನೆಗೆ ಅಲ್ಲಿ ನೆರೆದಿದ್ದ ಜನರ ಮುಂದೆ ದೇವರು ಕೊಟ್ಟ ದೃಢತೆಯ ಉತ್ತರವೇನು (12:28)?

ಸಿ. ಯೇಸು ಕ್ರಿಸ್ತನು ತಾನು ಶಿಲುಬೆಯ ಮೇಲೆ ಸಾಯುವದರಿಂದ ಯಾವ ಮೂರು ಕಾರ್ಯಗಳು ಆಗುವವೆಂಬದಾಗಿ ಹೇಳಿದನು (12:31–33)?

**ಗಮನಿಸಿರಿ;** ಲೋಕಕ್ಕೆ ತೀರ್ಪಾಗುತ್ತದೆ (12:31). ""ಶಿಲುಬೆಯ ಮೇಲೆ ಯೇಸು ಕ್ರಿಸ್ತನ ಮರಣವು ಲೋಕಕ್ಕೆ ಬರುವ ನ್ಯಾಯತೀರ್ಪಾಗಿದೆ. ದುಷ್ಟತನವು ಪಶ್ಚಾತ್ತಾಪಪಡಬೇಕಾಗಿತ್ತು. ಲೋಕದ ಗುರಿಗಳು, ಗುಣಮಟ್ಟಗಳು, ಮತ್ತು ಧರ್ಮಗಳು ಮೂರ್ಖತನವಾಗಿ ತೋರಿಸಲ್ಪಟ್ಟಿವೆ." ಈ ಲೋಕದ ಅಧಿಪತಿ (12:31). "ಶಿಲುಬೆಯ ಸೈತಾನನನ್ನು ಸೋಲಿಸುವ ಸಾಧನವು ಸಹ ಆಗಿದೆ (ಪ್ರಕಟನೆ 12:10). ಈ ಲೋಕದ ಅಧಿಪತಿ ಎಂದರೆ (ಸೈತಾನನು., c.f. ಯೋಹಾನ 14:30; 16:11) ಹೊರಹಾಕಲ್ಪಡುವನು ಎಂದು ಯೇಸು ಕ್ರಿಸ್ತನು ಹೇಳಿದನು. ಪಾಪ ಮತ್ತು ಮರಣದ ಮೂಲಕ ಆತನಿಗಿದ್ದ ಅಧಿಕಾರವು ಸೋಲಿಸಲ್ಪಟ್ಟಿದೆ ಮತ್ತು ಈಗ ಅವರು ಆತನ ಆತ್ಮೀಕ ಅಂಧಕಾರ ಮತ್ತು ಪಾಪದ ದಾಸತ್ವದ ಆಡಳಿತದಿಂದ ಬಿಡುಗಡೆಯನ್ನು ಹೊಂದಿದ್ದಾರೆ (ಕೊಲೊಸ್ಸೆ 1:13–14; ಇಬ್ರಿಯ 2:14–15)." *Walvoord & Zuck*, page, 318.

**Reference**: ನೋಟ್ 5, ಸೈತಾನನು, ಪುಟ 66 ಮತ್ತು ನೋಟ್ 6, ಮೇಲಕ್ಕೆತ್ತಲ್ಪಟ್ಟ ಸರ್ಪ, ಪುಟ 34.

7. ಯೇಸು ತಾನು ಸಾಯಬೇಕೆಂದು ಹೇಳಿದ ಮಾತನ್ನು ಜನರು ಅರ್ಥಮಾಡಿಕೊಂಡರು ಆದರೆ ಇದರ ಮೂಲಕ ಮೆಸ್ಸೀಯನ ವಿಷಯವಾಗಿ ಹೇಳಲಾಗಿರುವ ಪ್ರವಾದನೆಯು ಹೇಗೆ ನೆರವೇರುವದೆಂಬದನ್ನು ಅರ್ಥಮಾಡಿಕೊಳ್ಳಲು ವಿಫಲರಾದರು. ಯೇಸುವಿನ ಅಂತಿಮ ಪ್ರತಿಕ್ರಿಯೆಯನ್ನು ನಿಮ್ಮ ಮಾತಿನಲ್ಲಿ ಹೇಳುವದಾದರೆ ನೀವು ಹೇಗೆ ಹೇಳುತ್ತೀರ (12:35–36)?

**Reference**: ನೋಟ್ 1, ಕ್ರಿಸ್ತನು, ಮೆಸ್ಸೀಯನು, ಪುಟ 17, ಮತ್ತು ನೋಟ್ 5, ಮೆಸ್ಸೀಯನ ಕುರಿತಾದ ಸತ್ಯವೇದದ ಪ್ರವಾದನೆಗಳು, ಪುಟ 50.

## ಯೋಹಾನ 12:37–43 ನೋಡಿರಿ.

8.ಎ. ಬರಹಗಾರನಿಗೆ ಆಶ್ಚರ್ಯಕರವಾದದ್ದೇನು (12:37)?

**Reference**: ನೋಟ್ 1, ಯೇಸು ಕ್ರಿಸ್ತನ ಸೂಚಕಕಾರ್ಯಗಳು, ಪುಟ 75.

ಬಿ. ಯೇಸು ಕ್ರಿಸ್ತನು ಯೆಶಾಯ 53:1 ಮತ್ತು 6:10 ಪ್ರವಾದನಾ ವಾಕ್ಯಗಳನ್ನು ಸೂಚಿಸಿದ್ದಾನೆ, ಇವುಗಳು ಜನರು ಯೇಸು ಕ್ರಿಸ್ತನಿಗೆ ನೀಡಿದ ಪ್ರತಿಕ್ರಿಯೆಯಲ್ಲಿ ನೆರವೇರಿದವು. ಆತನ ಮಗನ ಪ್ರಕಟನೆಯನ್ನು ನಂಬದೆ ನಿರಾಕರಿಸಿದ ಆ ಜನರ ಮೇಲೆ ದೇವರು ಬರಮಾಡುವ ನ್ಯಾಯತೀರ್ಪು ಏನು (12:38–42)?

**ಗಮನಿಸಿರಿ:** ಅವರು ನಂಬಲಾರದೆ ಹೋದರು (12:39), ಎಂದು ಬರೆಯಲ್ಪಟ್ಟಿರುವ ಮಾತುಗಳ ಅರ್ಥ, "ಪ್ರಶ್ನೆಯನ್ನು ಹಾಕುತ್ತಿದ್ದ ಜನರಿಗೆ ಬೇರೆ ಯಾವುದೇ ಆಯ್ಕೆ ಇರಲಿಲ್ಲ ಎಂದಲ್ಲ, ಬದಲಾಗಿ ಅವರು ಉದ್ದೇಶಪೂರ್ವಕವಾಗಿಯೇ ದೇವರನ್ನು ತಿರಸ್ಕರಿಸಿ ದುಷ್ಟತನವನ್ನು ಆರಿಸಿಕೊಂಡರು, ಆದ್ದರಿಂದ ದೇವರ ಅವರ ಕಣ್ಣುಗಳನ್ನು ಕುರುಡು ಮತ್ತು ಹೃದಯಗಳನ್ನು ಕಠಿಣ ಮಾಡುವದರ ಮೂಲಕ ಶಿಕ್ಷೆಯನ್ನು ವಿಧಿಸಿದನು ಎಂದು 40ನೇ ವಚನವು ವಿವರಿಸುತ್ತದೆ. ಆದರೂ ಯೇಸುವೇ ಮೆಸ್ಸೀಯನೆಂದು ಹಲವು ಯೆಹೂದ್ಯರು ನಂಬಿದರು (ವಚನ 42)." *The NIV Bible*, page 1622.

9. ಧಾರ್ಮಿಕ ನಾಯಕರ ಮಧ್ಯದಲ್ಲಿ ಏನು ಸಂಭವಿಸಿತು (12:42–43)?

## ಯೋಹಾನ 12:44–50 ಓದಿರಿ.

10. ಯೇಸು ಕ್ರಿಸ್ತನು ತನ್ನ ಸೇವೆಯ ಸತ್ಯದ ವಿಷಯವಾಗಿ ಮಾಡಿದ ಅಂಶಗಳನ್ನು ಪಟ್ಟಿ ಮಾಡಿರಿ (12:44–50)?

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಸರಿಯಾದ ಕೇಂದ್ರೀಕರಣ

ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದ ಉದ್ದೇಶವು ನೆರವೇರಲು ಕೇವಲ ಕೆಲವು ದಿನಗಳು ಮಾತ್ರವೇ ಉಳಿದಿದ್ದವು: ಲೋಕದ ಪಾಪದ ಪಾಲಿಗೆ ಸತ್ತು ಆತನಲ್ಲಿ ನಂಬಿಕೆಯನ್ನಿಡುವವರು ಕ್ಷಮಾಪಣೆಯನ್ನು ಮತ್ತು ನಿತ್ಯಜೀವವನ್ನು ಪಡೆಯುವರು. ಆತನಿಗೆ ವಿರುದ್ಧವಾಗಿ ಕಹಿಯಾದ ಹಗೆತನವಿತ್ತು ಮತ್ತು ಆತನ ಹೃದಯದಲ್ಲಿ ತುಮುಲವು ಹೆಚ್ಚಾಗುತಿದ್ದರಿಂದ, ಆತನು ಬುದ್ಧಿವಂತಿಕೆಯಿಂದ ತನ್ನ ನೆನಪಿಗೆ ತಂದುಕೊಂಡನು ಮತ್ತು ತಾನು ಬಂದಿರುವದು ಈ ಉದ್ದೇಶಕ್ಕಾಗಿಯೇ ಎಂದು ಇತರರಿಗೆ ಹೇಳಿದನು: ಅದೇನೆಂದರೆ, ಲೋಕಕ್ಕೆ ತೀರ್ಪು ಕೊಡುವದಕ್ಕಾಗಿಯಲ್ಲ ಬದಲಾಗಿ ಅದನ್ನು ರಕ್ಷಿಸಲು (12:47).

ಇದರ ಸಂಬಂಧವಾಗಿ, ನೆರವೇರುವಿಕೆಯ ಪ್ರಾಮುಖ್ಯವಾದ ಸಿದ್ಧಾಂತವನ್ನು ಪ್ರಕೃತಿಯ ಉದಾಹರಣೆಯ ಮೂಲಕವಾಗಿ ಆತನು ತಿಳಿಯಪಡಿಸಿದನು. "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಲೋಕದ ಪಾಲಿಗೆ ಸಾಯದಿದ್ದರೆ ಒಂದೇಯಾಗಿ ಉಳಿಯುವದು; ಆದರೆ ಅದು ಸತ್ತರೆ ಬಹಳ ಫಲಕೊಡುವದು. ಅದೇ ಪ್ರಕಾರ ಒಬ್ಬನು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವದಾದರೆ ಅದನ್ನು ಕಳಕೊಳ್ಳುತ್ತಾನೆ. ಆದರೆ ತನ್ನ ಸ್ವಂತ ಪ್ರಾಣದ ಬಗ್ಗೆ ಚಿಂತಿಸದೆ ಪ್ರೀತಿಯಿಂದ ದೇವರಿಗಾಗಿ ದುಡಿಯುವವನು ಅದನ್ನು ಉಳಿಸಿಕೊಳ್ಳುವನು ಮತ್ತು ನಿತ್ಯಜೀವವನ್ನು ಪಡೆಯುವನು" (12:24–25).

ನಿಜವಾದ ನೆರವೇರುವಿಕೆಯ ಎರಡು ವಿಷಯಗಳಿಗೆ ಯೇಸು ಕ್ರಿಸ್ತನು ಪ್ರಾಮುಖ್ಯತೆಯನ್ನು ನೀಡಿದನು. ಅದರಲ್ಲಿ ಒಂದು ಪೂರ್ಣಹೃದಯದಿಂದ ದೇವರಲ್ಲಿ ಭಯಭಕ್ತಿಯುಳ್ಳವರಾಗಿರುವದು, ಹೇಗೆಂದರೆ ಮರಿಯಳು ಯೇಸುವಿನ ಪಾದಕ್ಕೆ ಮಾಡಿದ ಅಭಿಷೇಕದ ಹಾಗೆ ಆತನಲ್ಲಿ ಭಯಭಕ್ತಿಯುಳ್ಳವರಾಗಿ ರಬೇಕು. ಮತ್ತೊಂದು ಪೂರ್ಣಹೃದಯದಿಂದ ಪರಿತ್ಯಾಗ ಮಾಡುವದು, ಇತರರ ಅಗತ್ಯತೆಗಳಿಗಾಗಿ ದೇವರನ್ನು ಹಿಂಬಾಲಿಸುತ್ತಾ ದೇವರಕುಮಾರನು ಮಾಡಿದ ಹಾಗೆ.

ನಾವು ನಮ್ಮ ನೆರವೇರುವಿಕೆಯ ಅನ್ವೇಷಣೆಯ ಬಗ್ಗೆ ಕಲಿಯುತ್ತಿರುವ ಹಾಗೆ ಈ ಪ್ರತಿಯೊಂದು ವಿಷಯಗಳನ್ನು ಗಮನಿಸೋಣ.

1. ಯೇಸು ಕ್ರಿಸ್ತನ ವೈರಿಗಳಲ್ಲಿ ಸರ್ವಸಾಮಾನ್ಯವಾಗಿ ವ್ಯಕ್ತವಾಗುತ್ತಿದ್ದ ಮನುಷ್ಯನ ಸ್ವಭಾವದ ಸಹಜವಾದ ಕೇಂದ್ರೀಕರಣ ಏನು?

2. ಒಬ್ಬನು/ಒಬ್ಬಳು ತನ್ನ ಜೀವಿತವನ್ನು ಪರಿಪೂರ್ಣವಾಗಿ ಆತನ/ಆಕೆಯ ಸ್ವಂತ ಆಸಕ್ತಿ, ಗುರಿ ಮತ್ತು ಬಯಕೆಗಳ ಮೇಲೆ ಇಡುವದರಿಂದಾಗುವ ಪರಿಣಾಮಗಳೇನು?

3.ಎ. ಯೇಸುವಿನಲ್ಲಿ ನಂಬಿಕೆಯನ್ನಿಟ್ಟ ಧಾರ್ಮಿಕ ನಾಯಕರು ಸತ್ಯವನ್ನು ತಿಳಿದುಕೊಳ್ಳುವಂತೆ ಇತರರಿಗೆ ಸಹಾಯ ಮಾಡದಿರಲು ಕಾರಣವೇನು (12:42–43)?

ಬಿ. ಜನ ಏನು ತಿಳಿದುಕೊಂಡರು ಪರವಾಗಿಲ್ಲ ಆದರೆ ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿಡುವವರಿಗೆ ದೇವರು ಮಾಡಿರುವ ವಾಗ್ದಾನ ಏನು?

2 ತಿಮೊಥೆ 1:7

4.ಎ. ಯೇಸು ಕ್ರಿಸ್ತನು ತನ್ನ ಪ್ರಾಣವನ್ನು ಕೊಡಲು ತನ್ನನ್ನೇ ಸಿದ್ಧಪಡಿಸಿಕೊಳ್ಳುತ್ತಿದ್ದಾಗ ಯಾವ ವಿಷಯದ ಮೇಲೆ ಹೆಚ್ಚು ಕೇಂದ್ರೀಕರಿಸಿದನು?

ಬಿ. ಕೆಳಗಿನ ವಚನಗಳಲ್ಲಿ ಯೇಸು ಕ್ರಿಸ್ತನ ಯಾವ ಉದ್ದೇಶಗಳು ಗೊತ್ತಾಗುತ್ತವೆ?

ಯೋಹಾನ 6:38–40

1 ತಿಮೊಥೆ 2:3–4

5.ಎ. ಲೂಕ 15:3–6ರಲ್ಲಿ ಜನರನ್ನು ಕಾಪಾಡಬೇಕೆಂಬ ತನ್ನ ಹೃದಯದ ಬಯಕೆಯನ್ನು ಯೇಸು ಹೇಗೆ ವರ್ಣಿಸಿದನು?

ಬಿ. ಈ ಕೇಂದ್ರೀಕರಣದಿಂದ ಸಿಗುವ ಬಹುಮಾನಗಳೇನು?

ಯೆಶಾಯ 53:11

ಇಬ್ರಿಯ 12:2

6. ದೇವರಿಗಾಗಿ ತಮ್ಮನ್ನೇ ತಾವು ಪೂರ್ಣಹೃದಯದಿಂದ ಒಪ್ಪಿಸಿಕೊಡುವವರಿಗೆ ಸತ್ಯವೇದವು ವಾಗ್ದಾನ ಮಾಡಿರುವದೇನು?

ಕೀರ್ತನೆ 1:3

ಕೀರ್ತನೆ 16:11

ಮತ್ತಾಯ 6:33 (31–32)

7. ತಮ್ಮನ್ನೇ ದೇವರಿಗೆ ಪೂರ್ಣಹೃದಯದಿಂದ ಒಪ್ಪಿಸಿರುವವರಿಗೆ ಮತ್ತು ದೇವರು ಇತರರಿಗೆ ಸಹಾಯ ಮಾಡುವದರ ವಿಷಯದಲ್ಲಿ ಅವರು ನೀಡುವ ಕಾರ್ಯಗಳಿಗಾಗಿ ಸತ್ಯವೇದವು ಏನನ್ನು ವಾಗ್ದಾನ ಮಾಡಿದೆ?

ಜ್ಞಾನೋಕ್ತಿ 11:25

ಮಲಾಕಿ 3:10

ಲೂಕ 6:38

2 ಕೊರಿಂಥೆ 9:6

## ಸಾರಾಂಶ

8. ಯೋಹಾನ 12ನೇ ಅಧ್ಯಾಯದಲ್ಲಿ ನಾವು ನೋಡುವ ಪ್ರಾಥಮಿಕ ಪಾತ್ರಗಳಾದ ಯೇಸು, ಮರಿಯಳು, ಶಿಷ್ಯರು, ಜನರ ಗುಂಪುಗಳು ಮತ್ತು ಧಾರ್ಮಿಕ ನಾಯಕರು ಇವರಲ್ಲಿ ಹೆಚ್ಚು ನೆರವೇರುವಿಕೆಯನ್ನು ಕಂಡವರು ಯಾರು ಮತ್ತು ಯಾಕೆ?

9.ಎ. ನೆರವೇರುವಿಕೆಯ ನಮ್ಮ ವೈಯಕ್ತಿಕ ಅನ್ವೇಷಣೆಯಲ್ಲಿ ದೇವರಿಗೆ ಕೊಡುವ ಪೂರ್ಣಹೃದಯದ ಧ್ಯಾನವು ನಿರ್ವಹಿಸುವ ಪಾತ್ರ ಏನು?

ಬಿ. ಇತರರಿಗಾಗಿ ಅಗತ್ಯತೆಗಳಿಗಾಗಿ ಚಿಂತಿಸುವ ಸ್ವಭಾವವು ನಿಮ್ಮಲಿರುವದಾದರೆ ಅದು ನಿಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ಯಾವ ಬದಲಾವಣೆಯನ್ನು ತರಬಲ್ಲದಾಗಿದೆ?

ಸಿ. ಸರಿಯಾದ ಕೇಂದ್ರೀಕರಣಕ್ಕೆ ಯೇಸು ಕ್ರಿಸ್ತನು ನಿಮ್ಮ ಜೀವಿತದಲ್ಲಿ ಹೇಗೆ ಉದಾಹರಣೆಯಾಗಿದ್ದಾನೆ?

# ಭಾಗ 2

# ಶಿಷ್ಯರ ಮಧ್ಯದಲ್ಲಿ ನಡೆಸಿದ ಖಾಸಗಿ ಸೇವೆ

## ಪಾಠ 16

## ಕಡೇ ಭೋಜನದ ಪ್ರಾರಂಭ

### ಯೋಹಾನ 13

ತನ್ನ ಶಿಲುಬೆ ಮರಣದ ಸಮಯವು ಹತ್ತಿರವಾಗುತಿದ್ದರಿಂದ, ಯೇಸು ಕ್ರಿಸ್ತನು ತನ್ನ ಶಿಷ್ಯರ ಸಂಗಡ ಹೆಚ್ಚು ಸಮಯವನ್ನು ಕಳೆಯುವದಕ್ಕಾಗಿ ಜನರಿಂದ ದೂರ ಉಳಿಯಲಾರಂಭಿಸಿದನು. ಶ್ರ್ರಮಾಮರಣ ವಾರದ ಗುರುವಾರ ಸಂಜೆಯಂದು, ಯೇರುಸಲೇಮಿನಲ್ಲಿದ್ದ ಮೇಲಿನ ಕೋಣೆಯಲ್ಲಿ ಪಸ್ಕದ ಭೋಜನವನ್ನು1 ಆಚರಿಸುವದಕ್ಕಾಗಿ ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರು ಸೇರಿ ಬಂದಿದ್ದರು. ಯೇಸು ಕ್ರಿಸ್ತನ ಶಿಲುಬೆಯ ಮರಣದ ಹಿಂದಿನ ದಿನ ಬೆಳಗ್ಗೆ 9 ಘಂಟೆಗೆ ಸಂಭವಿಸಿತು, ಇದುವೇ ನಂತರ ಕರ್ತನ ಭೋಜನವೆಂದು ಕರೆಯಲ್ಪಡುವದಾಗಿದೆ. ಮುಂದಿನ 24 ತಾಸುಗಳೊಳಗೆ ಯೇಸು ಕ್ರಿಸ್ತನು ಗೋರಿಯಲ್ಲಿರ ಬೇಕಿತ್ತು. ಯೋಹಾನ 13–17 ಅಧ್ಯಾಯಗಳಲ್ಲಿ ಯೇಸು ಕ್ರಿಸ್ತನು ತನ್ನ ಕಡೆಯ ಸಮಯಗಳಲ್ಲಿ ಹೇಳಿದ್ದನ್ನು ಮತ್ತು ಮಾಡಿದ್ದನ್ನು ಕಣ್ಣಾರೆ ಕಂಡ ಹಾಗೆಯೇ ತನ್ನ ಸುವಾರ್ತೆಯಲ್ಲಿ ಬರೆದಿದ್ದಾನೆ. ಯೇಸು ಕ್ರಿಸ್ತನು ತನ್ನ ಕೊನೆಯ ಸಮಯಗಳನ್ನು ತಾನು ತನ್ನ ಶಿಷ್ಯರನ್ನು ಮತ್ತು ತನ್ನಲ್ಲಿ ನಂಬಿಕೆಯನ್ನಿಟ್ಟಿರುವವರನ್ನು ಎಷ್ಟರ ಮಟ್ಟಿಗೆ ಪ್ರೀತಿಸುತ್ತಿದ್ದನು ಮತ್ತು ಅವರ ಬಗ್ಗೆ ಕನಿಕರವುಳ್ಳವನಾಗಿದ್ದನು ಎಂಬದನ್ನು ತೋರಿಸುವದಕ್ಕಾಗಿ ಉಪಯೋಗಿಸಿಕೊಂಡನು.

ಯೇಸು ಕ್ರಿಸ್ತನನ್ನು ಹಿಡಿದುಕೊಡುವಂತೆ ಸೈತಾನನು2 ಇಸ್ಕರಿಯೋತನಾದ ಯೂದನ ಹೃದಯದಲ್ಲಿ ಕಾರ್ಯ ಮಾಡಿದ್ದಾನೆ ಎಂಬದು ಯೇಸು ಕ್ರಿಸ್ತನಿಗೆ ಗೊತ್ತಿತ್ತು. ಮಾತ್ರವಲ್ಲದೇ ದೇವರು ನಿಯಂತ್ರಣದಲ್ಲಿದ್ದಾನೆ ಮತ್ತು ತಾನು ತಂದೆಯೊಂದಿಗೆ ಗುರುತಿಸಿಕೊಳ್ಳುವ ಮಹಿಮೆಗೆ ನಡೆಸುವದಕ್ಕಾಗಿ ಶಿಲುಬೆಯು ಮುಂಚಿತವಾಗಿಯೇ ನೇಮಿಸಲ್ಪಟ್ಟಿದೆ ಎಂಬದೂ ಆತನಿಗೆ ಗೊತ್ತಿತ್ತು. ಈ ದೃಷ್ಟಿಕೋನದಿಂದಲೇ ಯೇಸು ಕ್ರಿಸ್ತನು ತನ್ನ ನಡುವಿಗೆ ಬಟ್ಟೆಯನ್ನು ಕಟ್ಟಿಕೊಂಡು, ಪಾತ್ರೆಯಲ್ಲಿ ನೀರನ್ನು ಹೊಯ್ದು, ತನ್ನ ಶಿಷ್ಯರ ಕಾಲುಗಳನ್ನು ತೊಳೆಯಲು ಪ್ರಾರಂಭಿಸಿದನು. ಶಿಷ್ಯರು ಯೇಸುವನ್ನು ತನ್ನ ಬೋಧಕ ಮತ್ತು ಗುರು ಎಂದು ಸನ್ಮಾನಿಸುತಿದ್ದರಿಂದ ಇದರಿಂದ ಅವರಿಗೆ ಕಿರಿಕಿರಿಯಾಯಿತು. ಕಾಲು ತೊಳೆಯುವ ಕಾರ್ಯವನ್ನು ಕೇವಲ ದಾಸರು ಮಾತ್ರವೇ ಮಾಡುವವರಾಗಿದ್ದರು.
ಆದರೂ ಪೇತ್ರನನ್ನು ಬಿಟ್ಟು ಉಳಿದವರೆಲ್ಲರೂ ಸುಮ್ಮನಿದ್ದರು. ಯೇಸು ಕ್ರಿಸ್ತನು ಆತನ ಬಳಿಗೆ

ಬಂದಾಗ, ಆತನು ತನ್ನ ಯಜಮಾನನು ಅವನ ಕಾಲುಗಳನ್ನು ತೊಳೆಯುವದನ್ನು ಬೇಡ ಎಂದು ತಿರಸ್ಕರಿಸಿದನು. ಅದಕ್ಕೆ ಯೇಸು, "ನಾನು ನಿನ್ನ ಪಾದಗಳನ್ನು ತೊಳೆಯದಿರುವದಾದರೆ ನಿನಗೆ ನನ್ನಲ್ಲಿ ಪಾಲಿರುವದಿಲ್ಲ" ಎಂದು ಉತ್ತರಿಸಿದನು. ಅದಕ್ಕೆ ಪೇತ್ರನು, "ಯೇಸುವೇ ನೀನು ನನ್ನ ಕಾಲುಗಳೊಂದಿಗೆ, ಕೈಗಳನ್ನು ಮತ್ತು ತಲೆಯನ್ನು ಸಹ ತೊಳೆಯಬೇಕು" ಎಂದು ಕೇಳಿಕೊಂಡನು. ಈಗಾಗಲೇ ಸ್ನಾನ3 ಮಾಡಿಕೊಂಡಿರುವವನು, ಮತ್ತೆ ಶುದ್ಧವಾಗಲು ಕೇವಲ ತನ್ನ ಕಾಲುಗಳನ್ನು ತೊಳೆದುಕೊಂಡರೆ ಸಾಕು ಎಂದು ಯೇಸು ವಿವರಿಸುವವರೆಗೂ ಪೇತ್ರನು ಒಪ್ಪಿಕೊಳ್ಳಲಿಲ್ಲ, ಆದರೆ ನಂತರ ಒಪ್ಪಿಕೊಂಡನು.

ಯೇಸು ಕ್ರಿಸ್ತನು ಕಾಲುಗಳನ್ನು ತೊಳೆಯುವ ಕೆಲಸವನ್ನು ಮುಗಿಸಿದ ನಂತರ, ತಾನು ಮಾಡಿದ ವಿಷಯವನ್ನೇ ಸೂಚಿಸುವ ಪಾಠವನ್ನು ಕಲಿಸಲು ಪ್ರಾರಂಭಿಸಿದನು. ಈ ಊಟದ ಸಮಯದಲ್ಲಿ ಶಿಷ್ಯರೊಳಗೆ ತಮ್ಮಲ್ಲಿ ದೊಡ್ಡವನು ಯಾರು ಎಂಬ ಜಗಳವು ಉದ್ಭವಿಸಿತು ಎಂದು ಬೇರೆ ಸುವಾರ್ತೆಗಳು ತಿಳಿಸುತ್ತವೆ (cf.ಲೂಕ 22:24–27). ನಿಮ್ಮಲ್ಲಿ ದೊಡ್ಡವನಾಗಬೇಕೆಂದುಕೊಳ್ಳುವವನು ಎಲ್ಲರ ದಾಸನಾಗಿರಬೇಕೆಂದು ಯೇಸು ಕ್ರಿಸ್ತನು ಹೇಳಿದನು. ನಿಮ್ಮ ಕರ್ತನು ಮತ್ತು ಯಜಮಾನನಾಗಿರುವ ನಾನೇ ನಿಮ್ಮ ಕಾಲುಗಳನ್ನು ತೊಳೆದಿರುವಾಗ, ಇತರರ ಸೇವೆ ಮಾಡುವದೇ ನನ್ನ ಹಿಂಬಾಲಕರಾಗಿರುವ ನಿಮ್ಮ ಮುಖ್ಯ ಉದ್ದೇಶವಾಗಿರಬೇಕು. "ನಾನು ನಿಮಗೊಂದು ಉದಾಹರಣೆಯನ್ನು ತೋರಿಸಿಕೊಟ್ಟಿದ್ದೇನೆ," ಯೇಸು ಹೇಳಿದ್ದೇನೆಂದರೆ, "ನಾನು ನಿಮಗೆ ಮಾಡಿದಂತೆಯೇ ನೀವೂ ಮಾಡಬೇಕು. ಯಾವ ಆಳೂ ಯಜಮಾನನಿಗಿಂತ ದೊಡ್ಡವನಲ್ಲ. ಈಗ ಈ ವಿಷಯಗಳು ನಿಮಗೆ ಗೊತ್ತಿರುವದರಿಂದ ನೀವು ಇವುಗಳನ್ನು ಮಾಡಿದರೆ ಆಶೀರ್ವದವನ್ನು ಹೊಂದುವಿರಿ." (13:15–17).

ನಂತರ, ಯೇಸು ಕ್ರಿಸ್ತನು ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡಿದುಕೊಡುವನೆಂದು ಪರೋಕ್ಷವಾಗಿ ಯೂದನ ಮನಸ್ಸಿನಲ್ಲಿದ್ದ ವಿಷಯವನ್ನು ತಿಳಿಸಿದ ಕೂಡಲೇ, ಆತನು ಆಳವಾದ ಸಂಕಷ್ಟಕ್ಕೆ ಸಿಲುಕಿದನು. ನನ್ನಲ್ಲಿ ಭಕ್ತಿಯನ್ನಿಟ್ಟದವನೊಬ್ಬನೇ ಅತ್ಯಂತ ಕ್ರೂರಿಯಾಗಿ ನನಗೆ ವಿರುದ್ಧವಾಗಿ ನಿಂತುಕೊಳ್ಳುವನು ಈ ಕಾರಣದಿಂದಲೇ ನಾನು ಮನಗುಂದಿದವನಾಗಿದ್ದೇನೆಂದು ಆತನು ತನ್ನ ಶಿಷ್ಯರಿಗೆ ಹೇಳಿದನು. ಈ ಕಾರ್ಯವನ್ನು ಯಾರು ಮಾಡುವರು ಎಂಬದನ್ನು ತಿಳಿದುಕೊಳ್ಳುವದಕ್ಕಾಗಿ ಮೇಜಿನ ಬಳಿ ಯೇಸುವಿಗೆ ಹತ್ತಿರವಾಗಿ ಕೂತುಕೊಂಡಿದ್ದ ಪೇತ್ರನು, ಯೋಹಾನನಿಗೆ ಸನ್ನೆಯನ್ನು ಮಾಡಿದನು. ನಾನು ಈಗ ಈ ರೊಟ್ಟಿ ತುಂಡನ್ನು ಯಾರಿಗೆ ಕೊಡುತ್ತೇನೋ ಅವನೇ ನನ್ನನ್ನು ಹಿಡುಕೊಡುವವನು ಎಂದು ಯೇಸು ಕ್ರಿಸ್ತನು ಮೆಲುದನಿಯಲ್ಲಿ ಯೋಹಾನನಿಗೆ ಹೇಳಿದನು. ಆ ವ್ಯಕ್ತಿ ಯೂದನಾಗಿದ್ದನು. ಯೂದನು ರೊಟ್ಟಿ ತುಂಡನ್ನು ತೆಗೆದುಕೊಳ್ಳುತ್ತಿದ್ದಂತೆಯೇ, ಸೈತಾನನು ಅವನ ಮೇಲೆ ಪೂರ್ಣ ನಿಯಂತ್ರಣವನ್ನು ವಹಿಸಿಕೊಂಡನು.4 ಆಗ ಯೇಸು ಕ್ರಿಸ್ತನು ಯೂದನು, "ನೀನು ಮಾಡಬೇಕೆಂದುಕೊಂಡಿರುವದನ್ನು ಬೇಗನೇ ಮಾಡಿ ಮುಗಿಸು" ಎಂದು ಆಜ್ಞಾಪಿಸಿದನು. ಇದರ ಮೂಲಕ, ಯೇಸು ಕ್ರಿಸ್ತನು ತಿಳಿದವನಾಗಿಯೇ ತನ್ನನ್ನು ಮರಣಕ್ಕೆ ನಡೆಸುವವನಿಗೆ ಆದೇಶವನ್ನು ನೀಡಿದನು.5 ಯೂದನು ಕತ್ತಲೆಯಲ್ಲಿ ಹೊರಗೆ ಹೋದದ್ದರಿಂದ, ಯೋಹಾನನೂ ಸೇರಿ ಆತನ ಶಿಷ್ಯರಲ್ಲಿ ಯಾರೂ ಗಮನಕೊಡಲಿಲ್ಲ, ಯಾಕೆಂದರೆ ಯೇಸು ಯೂದನಿಗೆ ಯಾವುದಾದರೂ ಕೆಲಸವನ್ನು ಒಪ್ಪಿಸಿರಬಹುದೆಂದು ಎಲ್ಲರೂ ನೆನೆಸಿದರು.

ಈಗ ಯೇಸು ಕ್ರಿಸ್ತನು ತನ್ನ ಮರಣಕ್ಕಿಂತ ಮುಂಚೆಯ ಕೆಲವೇ ಸಮಯಗಳನ್ನು ತನ್ನ ನಂಬಿಗಸ್ಥರಾದ

ಪ್ರಿಯ ಶಿಷ್ಯರೊಂದಿಗೆ ಕಳೆದನು, "ಮೇಲಂತಸ್ತಿನ ಕೋಣೆಯ ಸಂಭಾಷಣೆ" ಎಂದು ಈಗ ಗುರುತಿಸಲ್ಪಟ್ಟಿರುವದನ್ನು ಯೇಸು ಕ್ರಿಸ್ತನೇ ಪ್ರಾರಂಭಿಸಿದನು (ಯೋಹಾನ 3:31–16:33). ತನ್ನ ಈ ಬೋಧನೆಗಳಲ್ಲಿ, ದೇವರ ಮಹಿಮೆಯ ಕಿರೀಟಧಾರಣೆಯ ಪ್ರಕಟನೆ ಹೇಗಿರುವದೆಂಬದರ ಬಗ್ಗೆ ಯೇಸು ಕ್ರಿಸ್ತನು ಬೆಳಕನ್ನು ಚೆಲ್ಲಿದನು: ಮಾನವಕುಲದವರಿಗೆ ರಕ್ಷಣೆಯನ್ನು ಕೊಡಲು ತನ್ನ ಸ್ವಂತ ಮಗನನ್ನು ಬಲಿಯಾಗಿ ಅರ್ಪಿಸಿದನು. ಯೇಸು ಕ್ರಿಸ್ತನ ಮಾತುಗಳು, ಆತನು ಪುನರುತ್ಥಾನವಾದ ಮೇಲೆ ಮಾತ್ರವೇ ಆತನ ಶಿಷ್ಯರಿಗೆ ಪೂರ್ಣವಾಗಿ ಅರ್ಥವಾದವು, ಅವುಗಳಲ್ಲಿ ಎರಡು ಪ್ರಾಮುಖ್ಯವಾದ ವಿಷಯಗಳು ಒಳಗೊಂಡಿವೆ: (1) ಆತನ ಹೊರಡುವಿಕೆ ಮತ್ತು ಕೆಲವು ಸಮಯದ ನಂತರ ಮತ್ತೆ ಅವರೊಂದಿಗೆ ಒಟ್ಟುಗೂಡುವಿಕೆ, ಮತ್ತು (2) ಯೇಸು ಕ್ರಿಸ್ತನ ಮತ್ತು ಆತನ ಜನರ ನಡುವೆ ಇರುವ ಪ್ರೀತಿಯ ಸಂಬಂಧ.

ಮಹಿಮೆಯನ್ನು ಹೊಂದಬೇಕಾದರೆ, ನೀವು ನನ್ನನ್ನು ಹಿಂಬಾಲಿಸಲು ಆಗದಿರುವ ಸ್ಥಳಕ್ಕೆ ನಾನು ಹೋಗಬೇಕು ಎಂದು ಯೇಸು ಕ್ರಿಸ್ತನು ಅವರಿಗೆ ಹೇಳಿದನು. ಇದರ ಮೂಲಕ, ನಾನು ಇಲ್ಲದಿರುವಾಗಲೂ ನೀವು ನನಗೆ ವಿಧೇಯರಾಗಬೇಕೆಂಬ ತತ್ವಬದ್ಧವಾದ ಆಜ್ಞೆಯನ್ನು ಆತನು ಅವರಿಗೆ ಕೊಟ್ಟನು. "ಒಬ್ಬರನ್ನೊಬ್ಬರು ಪ್ರೀತಿಸಿರಿ," ಯೇಸು ಹೇಳಿದನು. "ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಿರಿ. ನೀವು ಒಬ್ಬರನ್ನೊಬ್ಬರು ಪ್ರೀತಿಸುವದಾದರೆ, ಅದರ ಮೂಲಕ ನೀವು ನನ್ನ ಶಿಷ್ಯರೆಂದು ಎಲ್ಲಾ ಜನರಿಗೂ ಗೊತ್ತಾಗುವದು" (13:34–35).

ಆದರೆ ಯೇಸು ಕ್ರಿಸ್ತನು ಹೋಗುತ್ತಿರುವದು ಎಲ್ಲಿಗೆ ಮತ್ತು ತಾನು ಯಾಕೆ ಆತನನ್ನು ಹಿಂಬಾಲಿಸಲು ಆಗುವದಿಲ್ಲ ಎಂದು ತಿಳಿದುಕೊಳ್ಳಲು ಪೇತ್ರನು ಬಯಸಿದನು. "ನಾನು ನಿನಗೋಸ್ಕರ ನನ್ನ ಪ್ರಾಣವನ್ನೇ ಕೊಡುತ್ತೇನೆ," ಎಂದು ಪೇತ್ರನು ಪ್ರಕಟಿಸಿದನು. "ನೀನು ನಿಜವಾಗಿಯೂ ನಿನ್ನ ಪ್ರಾಣವನ್ನು ನನಗೆ ಕೊಡುವೆಯಾ?" ಎಂದು ಯೇಸು ಅವನನ್ನು ಕೇಳಿದನು. "ನಾನು ನಿನಗೆ ನಿಜವಾಗಿ ಹೇಳುತ್ತೇನೆ, ಕೋಳಿ ಕೂಗುವದಕ್ಕಿಂತ ಮುಂಚೆ, ನೀನು ನನ್ನನ್ನು ಅರಿಯುವದಿಲ್ಲ ಎಂದು ಮೂರು ಸಾರಿ ಹೇಳುವೆ!"

## ಯೋಹಾನ 13:1–17 ಓದಿರಿ.

1. ಈ ಸಮಯದಲ್ಲಿ ಯೇಸು ಕ್ರಿಸ್ತನಿಗೆ ಏನು ಗೊತ್ತಿತ್ತು (13:1ಎ), ಮತ್ತು ಆತನು ಏನು ಮಾಡಬೇಕೆಂದಿದ್ದನು (13:1ಬಿ)?

**ಗಮನಿಸಿರಿ:** ಯೇಸು ಕ್ರಿಸ್ತನ ಮರಣದ ಮುಂಚೆ ಆತನು ಮಾಡಿದ ಪ್ರಾರ್ಥನೆ ಮತ್ತು ಬೋಧನೆಗಳನ್ನು ಯೋಹಾನನು ತನ್ನ ಸುವಾರ್ತೆಯ 13–17 ಅಧ್ಯಾಯಗಳಲ್ಲಿ ಬರೆದಿದ್ದಾನೆ ಇವುಗಳಲ್ಲಿ 31 ಬಾರಿ ಪ್ರೀತಿ ಎಂಬ ಪದವನ್ನು ಬಳಕೆ ಮಾಡಲಾಗಿದೆ.

2. ಯೂದನು ತನ್ನನ್ನು ಹಿಡಿದುಕೊಡುತ್ತಾನೆ ಎಂಬ ವಿಷಯವನ್ನು ತನಗೆ ಗೊತ್ತಿದ್ದಾಗಲೂ, ಯೇಸು ಕ್ರಿಸ್ತನು ಯಾವ ವಿಷಯವಾಗಿ ಭರವಸೆಯುಳ್ಳವನಾಗಿದ್ದನು (13:2–3)?

3. ಪೇತ್ರನು ಯಾವ ವಿಷಯದಲ್ಲಿ ಪ್ರತಿಕ್ರಿಯಿಸಿದನು (13:4–8ಎ)?

4. ಯೇಸು ಕ್ರಿಸ್ತನು ಪೇತ್ರನಿಗೆ ಕೊಟ್ಟ ಉತ್ತರ ಏನು (13:8ಬಿ)?

**Reference**: ನೋಟ್ 3, ಸ್ನಾನ, ಪುಟ 139.

5.ಎ. ಶಿಷ್ಯರ ಕಾಲುಗಳನ್ನು ತೊಳೆಯುವದರ ಮೂಲಕ ಯೇಸು ಕ್ರಿಸ್ತನು ಯಾವ ದೈವೀಕ ಸಿದ್ಧಾಂತಗಳನ್ನು ಕಲಿಸಿದನು (13:12–17)?

ಬಿ. ಲೂಕ 22:24–27 ಈ ಬೋಧನೆಗೆ ಇನ್ನೂ ಏನೆಲ್ಲಾ ವಿಷಯಗಳನ್ನು ತಿಳಿಸುತ್ತದೆ?

ಯೋಹಾನ 13:18–30

6. ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡಿದುಕೊಡುವನೆಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಯಾಕೆ ಹೇಳಿದನು (13:18–19)?

**ಗಮನಿಸಿರಿ:** ದಾವೀದನನ್ನು ಅವನಿಗೆ ಹತ್ತಿರವಾದವನೇ ವೈರಿಗಳಿಗೆ ಹಿಡಿಕೊಟ್ಟಾಗ ಕೀರ್ತನೆ 41:9ರಲ್ಲಿ ಬರೆದಿರುವ ಶೋಕ ವಾಕ್ಯವನ್ನೇ ಯೇಸು ಕ್ರಿಸ್ತನು ವಚನ 18ರಲ್ಲಿ ಹೇಳಿದ್ದಾನೆ.

7. ಅಂಗೀಕರಿಸಿಕೊಳ್ಳುವಿಕೆಯ ಬಗ್ಗೆ ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಯಾವ ಸಿದ್ಧಾಂತವನ್ನು ಕಲಿಸಿದನು (13:20)?

8.ಎ. ಯೇಸು ತನ್ನನ್ನು ಹಿಡಿದುಕೊಡುವದರ ಬಗ್ಗೆ ಮಾತನಾಡಿದಾಗ, ಶಿಷ್ಯರು ಅದನ್ನು ಗ್ರಹಿಸದಿರುವದಕ್ಕೆ ಕಾರಣವೇನು ಮತ್ತು ಅವರ ಪ್ರತಿಕ್ರಿಯೆ ಏನಾಗಿತ್ತು (13:21–22)?

ಬಿ. ಹಿಡಿದುಕೊಡುವವನು ಯಾರಾಗಿರಬಹುದೆಂದು ಶಿಷ್ಯರು ಒಬ್ಬರ ಮುಖವನ್ನು ಒಬ್ಬರು

ನೋಡಿಕೊಳ್ಳುತ್ತಿದ್ದಾಗ, ಯೇಸು ಕ್ರಿಸ್ತನು ಯೋಹಾನನಿಗೆ ಪ್ರತ್ಯೇಕವಾಗಿ ಏನು ಹೇಳಿದನು?
**ಗಮನಿಸಿರಿ:** ಯೇಸು ಕ್ರಿಸ್ತನನ್ನು ಹಿಡಿದುಕೊಡುವವನು ಅರಿವಿಲ್ಲದೆ ಹಾಗೆ ಮಾಡಬಹುದೇನೋ ಎಂದು ಶಿಷ್ಯರು ಅಂದುಕೊಂಡಿದ್ದರು (cf. ಮಾರ್ಕ 14:19). ಮಾನವರ ಪಾಪದ ವಿಮೋಚನೆಗಾಗಿ ಯೇಸು ಸಾಯುವದು ದೇವರ ಉದ್ದೇಶವಾಗಿತ್ತು ಆದ್ದರಿಂದಲೇ ಆತನು ಯೂದನನ್ನು ತಡೆಯಲಿಲ್ಲ ಎಂಬದನ್ನು ಅವರು ಯೇಸುವಿನ ಪುನರುತ್ಥಾನದ ಬಳಿಕವಷ್ಟೇ ಅರ್ಥಮಾಡಿಕೊಂಡರು.

9. ಯೂದನ ಮನಸ್ಸಿನಲ್ಲಿದ್ದ ಆಲೋಚನೆಗಳು ಯೋಹಾನನಿಗೂ ಮತ್ತು ಉಳಿದ ಶಿಷ್ಯರಿಗೂ ಗೊತ್ತಾಗಲೇ ಇಲ್ಲ. ಯೇಸು ಕ್ರಿಸ್ತನು ಯೂದನಿಗೆ ಕೊಟ್ಟ ಸೂಚನೆ ಮತ್ತು ಅದಕ್ಕೆ ಅವನು ನೀಡಿದ ಪ್ರತಿಕ್ರಿಯೆ ಏನು (13:27,30)?

**Reference**: ನೋಟ್ 3, ಸೈತಾನನು..., ಮತ್ತು ನೋಟ 5, ಯೇಸು ಕ್ರಿಸ್ತನು ಮಾರ್ಗದರ್ಶನವನ್ನು ಕೊಟ್ಟನು... ಪುಟ 139. ಹಾಗೆಯೇ ನೋಟ್ 5, ಸೈತಾನನು, ದೆವ್ವಗಳು, ಪುಟ 66.

ಯೋಹಾನ 13:31–38 ಓದಿರಿ.

10.ಎ. ಯೇಸು ಕ್ರಿಸ್ತನು ತನ್ನ ನಂಬಿಗಸ್ಥರಾದ ಶಿಷ್ಯರೊಂದಿಗಿದ್ದಾಗ ಯಾವುದಕ್ಕೆ ಪ್ರಾಧಾನ್ಯತೆಯನ್ನು ಕೊಡಲು ಪ್ರಾರಂಭಿಸಿದನು (13:31–33)?

**ಗಮನಿಸಿರಿ:** ಮಹಿಮೆಪಡಿಸುವದೆಂದರೆ ತಾನು ಯಾರೆಂದು ಪ್ರಕಟಪಡಿಸುವದಾಗಿದೆ. ಪಾಪದ ನಿಮಿತ್ತವಾಗಿ ಶಿಲುಬೆಯ ಮೇಲೆ ಆತನ ಮರಣದಿಂದ ದೊರಕುವ ಮಹಿಮಾರ್ಥವಾದ ರಕ್ಷಣೆಯ ಬಗ್ಗೆಯೂ ಯೇಸು ಕ್ರಿಸ್ತನು ಇಲ್ಲಿ ಹೇಳಿದನು.

**Reference**: ನೋಟ್ 4, ಮನುಷ್ಯಕುಮಾರನು, ಪುಟ 18.

ಬಿ. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಆತನ ಗೈರು ಹಾಜರಿಯಲ್ಲಿ ಏನನ್ನು ಮಾಡಬೇಕೆಂದು ಆಜ್ಞಾಪಿಸಿದನು (13:34–35)?

11.ಎ. ಪೇತ್ರನು ಯಾವ ಮಾತನ್ನು ಒತ್ತಿ ಹೇಳಿದನು (13:37)?

ಬಿ. ಅದಕ್ಕೆ ಪ್ರತ್ಯುತ್ತರವಾಗಿ ಯೇಸು ಕ್ರಿಸ್ತನು ಯೇಸು ಕ್ರಿಸ್ತನು ಏನನ್ನು ಪ್ರಕಟಿಸಿದನು (13:38)?

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಕೊಟ್ಟು ಜೀವಿಸುವದರ ಬಗ್ಗೆ ಹೆಚ್ಚು ವಿಷಯಗಳು

ಯೇಸು ಕ್ರಿಸ್ತನು ಶಿಷ್ಯರ ಕಾಲುಗಳನ್ನು ತೊಳೆಯುವದಕ್ಕಾಗಿ ತನ್ನನ್ನೇ ತಗ್ಗಿಸಿಕೊಂಡಾಗ, ಮಾನವಕುಲದ ಅಗತ್ಯತೆಗಳನ್ನು ಒದಗಿಸುವದಕ್ಕಾಗಿ ದೇವಕುಮಾರನು ಮಾನವರೂಪವನ್ನು ಧರಿಸಿಕೊಂಡು ಬಂದನು ಎಂಬದನ್ನು ಸೂಚಿಸುತ್ತದೆ (cf. ಫಿಲಿಪ್ಪಿ 2:4–8). ತಮ್ಮ ಯಜಮಾನನು ಅವರ ಪಾದಗಳನ್ನು ತೊಳೆಯುವದಕ್ಕಾಗಿ ತನ್ನನ್ನು ತಗ್ಗಿಸಿಕೊಂಡಾಗ ಅವರಿಗೆ ಕಿರಿಕಿರಿಯಾದದ್ದು ನಿಜ ಆದರೆ ಅದ–ಕ್ಕೆ ಕಾರಣ ತಮ್ಮ ಯಜಮಾನನು ಲೋಕದಲ್ಲಿಯೇ ಅತ್ಯಂತ ಬಲಿಷ್ಠನಾದ ಅರಸನು ಅಂದರೆ ಮೆಸ್ಸೀಯನು ಎಂದು ಅವರು ಅಂದುಕೊಂಡಿದ್ದರು ಆದರೆ ಆತನು ಪಾದವನ್ನು ತೊಳೆಯುವದಕ್ಕೆ ಮುಂದಾದಾಗ ಅವರಿಗೆ ಕಿರಿಕಿರಿಯಾಯಿತು.

ಆದರೆ ಯೇಸು ಕ್ರಿಸ್ತನು ಈ ಲೋಕದಲ್ಲಿ ನಡೆಸಿದ ಸೇವೆಯ ಕಾಲದಲ್ಲೆಲ್ಲಾ, ದೇವರ ಪ್ರತಿನಿಧಿಗಳು ಮತ್ತು ಅತ್ಯಂತ ಪ್ರಭಾವಶಾಲಿಗಳಾದ ನಾಯಕರೆಲ್ಲರೂ ತಮ್ಮನ್ನು ತಗ್ಗಿಸಿಕೊಂಡು ಸೇವಕರಾಗಿರಬೇಕೆಂದು ಸಾರಿದನು. ಮಹಿಮೆಪಡಿಸುವ, ದೇವರ ಅಥವಾ ದೇವರ ಹೃದಯವನ್ನು ಪ್ರಕಟಪಡಿಸುವ ತನ್ನ ಉದ್ದೇಶವನ್ನು ನೆರವೇರಿಸುವಲ್ಲಿ, ಜನರ ಅಗತ್ಯತೆಗಳನ್ನು ಪೂರೈಸುವಲ್ಲಿಯೇ ಯೇಸು ಕ್ರಿಸ್ತನು ತನ್ನ ಹೆಚ್ಚಿನ ಸಮಯವನ್ನು ಕಳೆದನು. ಕಡೇ ಭೋಜನವನ್ನು ಮುಗಿಸಿದ ಕೆಲವೇ ತಾಸುಗಳ ನಂತರ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಅರ್ಪಿಸುವಾಗಲೂ, ಮನುಷ್ಯನ ಅತ್ಯಂತ ದೊಡ್ಡದಾದ ಅವಶ್ಯಕತೆಯಾದ: ಕ್ಷಮಿಸಲ್ಪಡುವ ಅವಕಾಶ ಮತ್ತು ತನ್ನ ಸೃಷ್ಟಿಕರ್ತನೊಂದಿಗೆ ನಿಜವಾದ ಪ್ರೀತಿಯ ಸಂಬಂಧವನ್ನು ಹೊಂದುವದಕ್ಕಾಗಿ, ತನ್ನನ್ನೇ ತಗ್ಗಿಸಿಕೊಂಡು ಕಠಿಣವಾದ ಮರಣವನ್ನು ಅನುಭವಿಸಿದನು. ಇದೇ ಸಮಯದಲ್ಲಿ, ಆತನೇ ತೋರಿದ ಈ ಅಮೋಘವಾದ ಪ್ರೀತಿಯ ಕೃತ್ಯವನ್ನು ಅನೇಕರು ಪುನರಾವರ್ತಿಸಿದ್ದಾರಾದರೂ, ಅದನ್ನು ಹೊಗಳುವವರು ಮಾತ್ರ ಯಾರೂ ಇಲ್ಲ.

"ಕೊಟ್ಟು ಜೀವಿಸುವದು" ಇದರ ಬಗ್ಗೆ ಕಲಿಯಬೇಕಾದ ಅನೇಕ ಪಾಠಗಳಿವೆ ಯಾಕೆಂದರೆ ಇವು ಶಾಶ್ವತವಾಗಿ ನಿಲ್ಲುವಂಥ ಫಲಗಳನ್ನು ಕೊಡುವದಾಗಿದೆ. ಕಳೆದ ವಾರದ ಮೂಲಭೂತವಾದ ವಿಷಯಗಳ ಮೇಲೆ ಕಟ್ಟಲ್ಪಡುವಿಕೆಯ ವಿಷಯದಲ್ಲಿ "ಸರಿಯಾದ ಕೇಂದ್ರೀಕರಣದ" ಬಗ್ಗೆ ಕಲಿತಿದ್ದೇವೆ, ಅದರಲ್ಲಿ ದೇವರಿಗೆ ಸಮರ್ಪಣೆಯುಳ್ಳವರಾಗಿರುವದು ಮತ್ತು ಇತರರ ಸೇವೆ ಮಾಡುವದರಲ್ಲಿಯೇ ಆಳವಾದ ನೆರವೇರಿಕೆಯು ಬರುತ್ತದೆ ಎಂಬದನ್ನು ತಿಳಿದುಕೊಂಡಿದ್ದೇವೆ. ಈ ವಾರದ ಇದೇ ವಿಷಯವನ್ನು ಮತ್ತಷ್ಟೂ ನಿಕಟವಾಗಿ ನೋಡಿಕೊಳ್ಳೋಣ. "ಕೊಟ್ಟು ಜೀವಿಸುವದು" ಈ ವಿಷಯದಲ್ಲಿ ನಾವೆಲ್ಲರೂ ಎದುರಿಸುವ ಅಡಚಣೆಗಳನ್ನು ಮತ್ತು ಸರಿಯಾದ ಪ್ರೇರಣೆಯ ವಿಷಯದಲ್ಲಿ ಕ್ರಿಸ್ತನ ತಗ್ಗಿಸಿಕೊಳ್ಳುವಿಕೆಯ ಸೇವೆಯನ್ನು ಗಂಭೀರವಾಗಿ ಗಮನಿಸೋಣ.

1.ಎ. ಜನರು ಇತರರಿಗೆ ಒಳ್ಳೇದನ್ನು ಮಾಡಲು ಉಪಯೋಗಿಸುವ ಕೆಲವು ಅನಾರೋಗ್ಯಕರವಾದ ಪೇರಣೆಗಳು ಯಾವುವು?

ಬಿ. ಈ ಪ್ರೇರಣೆಗಳಿಂದ ಸೇವೆ ಮಾಡುವದರಿಂದಾಗುವ ಫಲಿತಾಂಶಗಳೇನು?

2. ಕೆಲವು ಜನರ ನಂಬಿಕೆ ಏನೆಂದರೆ, ತಾವು ಒಳ್ಳೇ ಕೆಲಸವನ್ನು ಮಾಡುವದಾದರೆ ದೇವರು ನಮ್ಮನ್ನು ಮೆಚ್ಚುತ್ತಾನೆ. ಆದರೆ ದೇವರ ಎದುರಿನಲ್ಲಿ ನಾವು ಮೆಚ್ಚಿಕೆಯುಳ್ಳವರಾಗಿರಬೇಕೆಂದರೆ ಏನು ಮಾಡಬೇಕೆಂದು ಕೆಳಗಿನ ವಚನಗಳು ತಿಳಿಸುತ್ತವೆ?

ರೋಮಾ 3:22

ಎಫೆಸ 2:8–9

3. ಯೇಸು ಕ್ರಿಸ್ತನು ಈ ಲೋಕದಲ್ಲಿ ಸೇವೆ ಮಾಡುವಾಗ ಯಾವ ಪ್ರೇರಣೆಯುಳ್ಳ ಮಾದರಿಯನ್ನು ನಮಗೆ ತೋರಿಸಿದ್ದಾನೆ?

ಯೋಹಾನ 14:31

ಯೋಹಾನ 17:24,26

1 ಯೋಹಾನ 4:19

4. 1 ಕೊರಿಂಥ 13:1–3 ದೇವರನ್ನು ಮತ್ತು ಜನರನ್ನು ಸೇವಿಸಲು ಸರಿಯಾದ ಪ್ರೇರಣೆಗಳಿರಬೇಕಾದ ಪ್ರಾಮುಖ್ಯತೆಯ ಬಗ್ಗೆ ಏನನ್ನು ಪ್ರಕಟಪಡಿಸುತ್ತವೆ?

5.ಎ. ಯೇಸು ಕ್ರಿಸ್ತನು ಪ್ರದರ್ಶಿಸಿದ ದೇವರ ಪ್ರೀತಿ ಮತ್ತು ನಮ್ಮ ಒಳ್ಳೆಯ ಕ್ರಿಯೆಗಳನ್ನು ಪ್ರೇರೇಪಿಸಬೇಕೆಂದು ಬಯಸುವ ದೇವರ ಬಯಕೆಯ ಬಗ್ಗೆ 1 ಕೊರಿಂಥ 13:4–8ಎ ಹೇಗೆ ವಿವರಿಸಲಾಗಿದೆ?

ಬಿ. ಯೋಹಾನ 17:26ಬಿ ಗನುಸಾರವಾಗಿ ಈ ಪ್ರೀತಿಯು ಎಲ್ಲಿಂದ ಬರುತ್ತದೆ?

6.ಎ. ದೇವರ ಸ್ವಭಾವವನ್ನು ಪ್ರತಿಬಿಂಬಿಸುತ್ತಾ, ಯೂದನಂತೆ ತನ್ನ ಪ್ರೀತಿಯನ್ನು ನಿರಾಕರಿಸಿದವರನ್ನು ಸಹ ಯೇಸು ಕ್ರಿಸ್ತನು ಪ್ರೀತಿಸಿದನು. ತನ್ನ ನಿರಾಕರಿಸಿದವರನ್ನು ಸಹ ಆತನು ಸತತವಾಗಿ ಪ್ರೀತಿಸುತ್ತಲೇ ಇದ್ದನು. ತನ್ನನ್ನು ಹಿಡಿದುಕೊಡುವವನ ಪಾದವನ್ನೇ ಯೇಸು ಕ್ರಿಸ್ತನು ತೊಳೆದನು, ಇದರ ಮೂಲಕ ಆತನು ನಮಗೆ ಯಾವ ಮಾದರಿಯನ್ನು ತೋರಿಸಿದ್ದಾನೆ?
ಬಿ. ಪ್ರೀತಿಸಲು ಅಸಾಧ್ಯವಾಗಿರುವ ಅಥವಾ ಯಾವುದೇ ಪ್ರತಿಕ್ರಿಯೆಗಳನ್ನು ಕೊಡದಿರುವ ಜನರಿಗೆ ಸುವಾರ್ತೆಯನ್ನು ಸಾರಲು ಕೆಳಗಿನ ವಚನಗಳಲ್ಲಿ ಕೊಡಲ್ಪಟ್ಟಿರುವ ತತ್ವಗಳೇನು?

ರೋಮಾ 12:14,17–21

2 ತಿಮೊಥೆ 2:24–26

1 ಪೇತ್ರ 4:16,19

ಗಮನಿಸಿರಿ: ಕಠಿಣರಾದ ಜನರಿಗೆ ದೇವರ ಪ್ರೀತಿಯನ್ನು ತಿಳಿಯಪಡಿಸಲು ನಾವು ಮುಂದುವರೆಯುತ್ತಿರುವಂತೆ, ನಮಗೋಸ್ಕರವಾಗಿಯೂ ಕೆಲವು ಮೇರೆಗಳನ್ನು ಮಾಡಿಕೊಳ್ಳುವದು ಪ್ರಾಮುಖ್ಯ ಮತ್ತು ಸತ್ಯವೇದದನುಸಾರವಾಗಿದೆ.

7. ಯೇಸು ಕ್ರಿಸ್ತನು ಪೇತ್ರನ ಕಾಲುಗಳನ್ನು ತೊಳೆಯುತ್ತಿದ್ದಂತೆ, ತೀವ್ರವಾದ ಬಲಹೀನತೆಗಳುಳ್ಳವರ ಸೇವೆಯನ್ನು ಮಾಡುವಾಗ ನಮ್ಮಲ್ಲಿರಬೇಕಾದ ತಾಳ್ಮೆಯುತವಾದ ಪ್ರೀತಿಯನ್ನು ಪ್ರದರ್ಶಿಸಿದನು. ನಮಗೆ ತೊಂದರೆಗಳನ್ನು ಕೊಡುವವರೊಂದಿಗೆ ಅವರನ್ನು ಕಟ್ಟುವ ರೀತಿಯಲ್ಲಿ ನಮ್ಮ ಪ್ರತಿಕ್ರಿಯೆ ಹೇಗಿರಬೇಕೆಂದು ಕೆಳಗಿನ ವಚನಗಳು ತಿಳಿಯಪಡಿಸುತ್ತವೆ?

ಕೊಲೊಸ್ಸೆ 3:12–14

ಯಾಕೋಬ 4:11–12

8. ಯೇಸು ಕ್ರಿಸ್ತನು ಕೇವಲ ಸಾಮಾಜಿಕ ಅಂಗೀಕರಿಸಲ್ಪಡುವವರು ಮತ್ತು ಧಾರ್ಮಿಕರ ನಡುವೆ ಮಾತ್ರ ಸೇವೆ ಮಾಡಲಿಲ್ಲ. ಬದಲಾಗಿ ತಳ್ಳಲ್ಪಟ್ಟವರು ಮತ್ತು "ಪಾಪಿಗಳ" ನಡುವೆಯು ಸಹ ಆತನು ಸೇವೆಯನ್ನು ಮಾಡಿದನು. ಯಾಕೋಬ 2:1–8ರಲ್ಲಿ ಕೊಡಇತರರ ಸೇವೆ ಮಾಡುವದರ ಬಗ್ಗೆ ಕೊದಲಾಗಿರುವ ಪ್ರಾಮುಖ್ಯತೆಯನ್ನು ಸಾರಾಂಶವಾಗಿ ಬರೆಯಿರಿ?

9.ಎ. ದೇವರು ತನ್ನ ಪ್ರತೊಯೊಬ್ಬ ಮಕ್ಕಳ ವಿಷಯವಾಗಿ ಹೊಂದಿರುವ ಉದ್ದೇಶಗಳ ಬಗ್ಗೆ ಎಫೆಸ 2:10 ಏನು ಹೇಳುತ್ತದೆ?

ಬಿ. ಯೇಸು ಕ್ರಿಸ್ತನು ತನ್ನ ಸುತ್ತಮುತ್ತಲಿದ್ದ ಲೋಕದ ಅವಶ್ಯಕತೆಗಳನ್ನೆಲ್ಲಾ ಅರ್ಥ ಮಾಡಿಕೊಂಡಿದ್ದರಿಂದ, ಮೂರು ವರ್ಷಗಳಲ್ಲಿ ಆತನು ತನ್ನ ಈ ಲೋಕದ ನಿಯೋಗವನ್ನು ಮುಗಿಸಿದನು. ಎಲ್ಲಿ ಮತ್ತು ಹೇಗೆ ಸೇವೆ ಮಾಡಬೇಕೆಂಬ ವಿಷಯದಲ್ಲಿ ನೀವು ದೇವರ ಮಾರ್ಗದರ್ಶನವನ್ನು ಎದುರುನೋಡುವಾಗ ಆತನು ನಿಮಗೆ ಕೊಟ್ಟಿರುವ ವಾಗ್ದಾನಗಳು ಏನು?
ಕೀರ್ತನೆ 32:8

2 ಕೊರಿಂಥ 9:8

## ಸಾರಾಂಶ

10.ಎ. ಯೇಸು ಕ್ರಿಸ್ತನು ಮಾನವ ಕುಲದ ಸೇವೆಯನ್ನು ಮಾಡಿದಂತೆ ಆತನನ್ನು ಪ್ರೇರೇಪಿಸಿದ್ದು ಏನು?

ಬಿ. ಒಳ್ಳೇದನ್ನು ಮಾಡುವ ಸಲುವಾಗಿ ಸ್ವಾರ್ಥಪರವಾದ ಪ್ರೇರಣೆಗಳನ್ನು ಬಳಸುವ ವಿಷಯದಲ್ಲಿ, ಶಾಶ್ವತವಾಗಿ ನಿಲ್ಲುವ ನೆರವೇರುವಿಕೆಯನ್ನು ಕೊಡುವಲ್ಲಿ ಈ ಪ್ರೇರಣೆಗಳು ಯಾಕೆ?

11. ಸಹಾಯ ಮಾಡಲು ಮತ್ತು ಕಾಳಜಿಯನ್ನು ವಹಿಸಲು ಅಸಾಧ್ಯರಾದ ಜನರು ನಿಮಗೆ ಸಿಕ್ಕಿದ್ದಾ-ರೆಯೇ? ಯೇಸು ಕ್ರಿಸ್ತನು ಯೂದನಿಗೆ ಕೊಟ್ಟ ಪ್ರತಿಕ್ರಿಯೆ ಏನು, ಇಂಥ ಜನರ ಸೇವೆಯನ್ನು ಮಾಡುವ ಮತ್ತು ಅವರನ್ನು ಪ್ರೀತಿಸುವ ವಿಷಯದಲ್ಲಿ ಬೇರೆ ಕೆಲವು ವಚನಭಾಗಗಳ ಮೂಲಕ ಆತನು ಈ ಪಾಠದಲ್ಲಿ ತಿಳಿಸಿರುವ ವಿಷಯಗಳೇನು?

12. ನಿಮ್ಮ ಮೂಲಕವಾಗಿ ಜನರನ್ನು ಪ್ರೀತಿಸಲು ಮತ್ತು ಸೇವೆ ಮಾಡಲು ಆತನಿಗೆ ನೀವು ಅನುಮತಿಯನ್ನು ಕೊಡುವಾಗ ಯೇಸು ನಿಮಗೆ ಕೊಟ್ಟಿರುವ ವಾಗ್ದಾನ ಏನು?

1 ಕೊರಿಂಥ 15:58

## ಪಾಠ 16 ನೋಟ್ಸ್

1. ಪಸ್ಕದ ಊಟ. (ನೋಟ್ 1 ಸಹ ನೋಡಿರಿ, ಪಸ್ಕ ಹಬ್ಬ, ಪುಟ 25.) ಸುಮಾರು 1,500 ವರ್ಷಗಳ ಹಿಂದೆ ಇಸ್ರಾಯೇಲರು ಐಗುಪ್ತ ದೇಶದಲ್ಲಿ ಅನುಭವಿಸಿದ ದಾಸತ್ವದ ಬಂಧನದಿಂದ ಬಿಡುಗಡೆ-ಯಾದದ್ದಕ್ಕೆ ಪಸ್ಕ ಹಬ್ಬವು ಜ್ಞಾಪಕವಾದ ಆಚರಣೆಯಾಗಿದೆ. ಆ ಸಮಯದಲ್ಲಿ ಸಂಹಾರಕ ದೂತನು ಐಗುಪ್ತರ ಪ್ರತಿಯೊಂದು ಮನೆಯಿಂದಲೂ ಅವರ ಚೊಚ್ಚಲ ಮಕ್ಕಳನ್ನು ಸಂಹರಿಸುತಿದ್ದರಿಂದ ತಮ್ಮ ಮನೆಗಳಿಂದ ಚೊಚ್ಚಲ ಮಕ್ಕಳನ್ನು ಸಂಹರಿಸದ ಹಾಗೆ ಇಸ್ರಾಯೇಲರು ತಮ್ಮ ಬಾಗಿಲುಗಳಿಗೆ ಕುರಿ ಮರಿಯ ರಕ್ತವನ್ನು ಹಚ್ಚುತ್ತಿದ್ದರು. (ಈ ಚರಿತ್ರೆಯನ್ನು ತಿಳಿಯುವದಕ್ಕಾಗಿ ವಿಮೋಚನಕಾಂಡ 12:1–14 ನೋಡಿರಿ). ದೇವರು ಐಗುಪ್ತರಿಗೆ ವಿಧಿಸಿದ ಶಿಕ್ಷೆಯಿಂದ ಇಸ್ರಾಯೇಲರನ್ನು ಕುರಿಮರಿಯ ರಕ್ತವು ಬಿಡುಗಡೆಗೊಳಿಸಿತು. ಯೆಹೂದ್ಯರ ಕ್ಯಾಲೆಂಡರ್‌ಗನುಸಾರವಾಗಿ 2:30 ರಿಂದ 5:30ರೊಳಗೆ ಪ್ರಾರಂಭವಾಗುವ ಸಮಯದಲ್ಲಿ ಪ್ರತಿವರ್ಷ ಯೆಹೂದ್ಯರು ಪಸ್ಕ ಹಬ್ಬದ ವಾರವನ್ನು ಆಚರಿಸುತ್ತಿದ್ದರು. ಆ ಸಮಯದಲ್ಲಿ, ಯಾಜಕರ ಪ್ರಾಕಾರದೊಳಗೆ ಜನರ ಪಾಪಗಳಿಗಾಗಿ ಕುರಿಮರಿಯನ್ನು ಬಲಿಕೊಡಲಾಗುತಿತ್ತು. ದೇವರು "ದಾಟಿ ಹೋಗುವದಕ್ಕಾಗಿ" ಅಥವಾ ಜನರ ಪಾಪಗಳನ್ನು ಕ್ಷಮಿಸುವದಕ್ಕಾಗಿ ಈ ಪದ್ಧತಿಯನ್ನು ಆಚರಿಸಲಾಗುತಿತ್ತು. ಮುಂಬೆಳಕಿನಲ್ಲಿ ಪಸ್ಕದ ಊಟವನ್ನು ಮಾಡಲಾಗುತಿತ್ತು. ಯೇಸು ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಮಾಡಿದ ಪಸ್ಕದ ಊಟವು ಶ್ರಮೆಯ ವಾರದ ಗುರುವಾರವಾಗಿತ್ತು. "ಯಜ್ಞದ ಕುರಿಮರಿಯಾಗಿ" ಬಲಿಯಾಗುವವನು ತಾನೇ ಎಂದು ಯೇಸು ಕ್ರಿಸ್ತನಿಗೆ ಬಹಳ ಚೆನ್ನಾಗಿ ಗೊತ್ತಿತ್ತು (1 ಕೊರಿಂಥ 5:7ಬಿ). ಯೂದನು ತನ್ನನ್ನು ಹಿಡಿದುಕೊಡುವಾಗ ಯಾವುದೇ ತೊಂದರೆಗಳಾಗಬಾರದೆಂಬ ಕಾರಣಕ್ಕಾಗಿ ತನ್ನ ಶಿಷ್ಯರೊಂದಿಗಿನ ಪಸ್ಕದ ಊಟಕ್ಕಾಗಿ ಯೇಸು ಕ್ರಿಸ್ತನು ಬೇಕಾದ ಏರ್ಪಾಡುಗಳನ್ನು ಮೊದಲೇ ಮಾಡಿಕೊಂಡಿದ್ದನು ಎಂದೆನಿಸುತ್ತದೆ

(ಲೂಕ 22:7–13). ಯೇಸು ಕ್ರಿಸ್ತನು ತಾನು "ಹೊಸ ಒಡಂಬಡಿಕೆಯನ್ನು" ಸ್ಥಾಪಿಸುವನಾಗಿದ್ದರಿಂದ ಈ ಹಬ್ಬವನ್ನು ತನ್ನ ಶಿಷ್ಯರೊಂದಿಗೆ ಆಚರಿಸಬೇಕೆಂದು ಬಹಳ ಕಾತರದಿಂದ ಕಾಯುತ್ತಿದ್ದನು. ಈ ಒಡಂಬಡಿಕೆಯಲ್ಲಿ ಕ್ರಿಸ್ತನ ದೇಹ ಮತ್ತು ರಕ್ತವು, ಯೇಸುವಿನಲ್ಲಿ ನಂಬಿಕೆಯನ್ನಿಡುವ ಎಲ್ಲರಿಗೂ ಅವರ ಪಾಪಗಳಿಗೆ ಕ್ಷಮಾಪಣೆಯನ್ನು ಒದಗಿಸುತ್ತದೆ.

2. **Reference**: ನೋಟ್ 5, ಸೈತಾನನು, ಪುಟ 66.

3 ಸ್ನಾನ (ಯೋಹಾನ 13:10). ಅನೇಕ ವ್ಯಾಖ್ಯಾನಗಳಿಗನುಸಾರವಾಗಿ ನೋಡುವದಾದರೆ, ಯೇಸು ಕ್ರಿಸ್ತನು ಹೇಳಿರುವ ಸ್ನಾನವು, ಆತನಲ್ಲಿ ನಂಬಿಕೆಯನ್ನಿಡುವರಿಂದ ದೊರೆಯುವ ಆತ್ಮೀಕ ಶುದ್ಧಿಗೆ ಗುರುತಾಗಿದೆ (c.f. ತೀತ 3:5). ಕಾಲುಗಳನ್ನು ತೊಳೆಯುವದು ಪಾಪದ ಅರಿಕೆಯಿಂದ ದೊರೆಯುವ ಸತತವಾದ ಶುದ್ಧೀಕರಣಕ್ಕೆ ಗುರುತಾಗಿದೆ (c.f1 ಯೋಹಾನ 1:9). ಮತ್ತು ದೇವರೊಂದಿಗೆ ಸದಾ ಇರುವದೇ ಯಾವಾಗಲೂ ಶುದ್ಧರಾಗಿರುವದಕ್ಕೆ ಗುರುತಾಗಿದೆ.

4 ಸೈತಾನನು ಯೂದನ ಮೇಲೆ ಪೂರ್ಣ ನಿಯಂತ್ರಣವನ್ನು ವಹಿಸಿಕೊಂಡನು. ಕೂಟವನ್ನು ಏರ್ಪಡಿಸಿರುವ ವ್ಯಕ್ತಿಯೇ ಅತಿಥಿಗೆ ರೊಟ್ಟಿಯನ್ನು ಕೊಡುವದು, ಅತಿಥಿಗೆ ಆತನು ಕೊಡುವ ಮರ್ಯಾದೆಗೆ ಗುರುತಾಗಿದೆ. ಕೂಟವನ್ನು ಏರ್ಪಡಿಸಿದವನ ಎಡಭಾಗದಲ್ಲಿಯೇ ಕುಳಿತುಕೊಳ್ಳುವದು ಸಹ ಗೌರವಯುತವಾದದ್ದಾಗಿದೆ, ಯೂದನ ಸ್ಥಳವು ಇದುವೇ ಆಗಿರಬಹುದು. ಯೂದನ ವಿಷಯವಾಗಿ ಯೇಸು ಕ್ರಿಸ್ತನು ತೋರಿದ ಈ ಎರಡೂ ನಡವಳಿಕೆಯು, ಕತ್ತಲೆಯಿಂದ ತುಂಬಿದ ಆತನ ಹೃದಯವನ್ನು ಮಾರ್ಪಡಿಸುವ ಪ್ರಯತ್ನ ಎಂಬದು ಹಲವರ ಅಭಿಪ್ರಾಯವಾಗಿದೆ. ಆದರೆ ಆತನ ಮನವಿಗಳನ್ನು ತಿರಸ್ಕರಿಸಲಾಯಿತು. ಯೇಸು ಕ್ರಿಸ್ತನು ಕಳುಹಿಸಿಕೊಟ್ಟ ಕೂಡಲೇ, ಸೈತಾನನಿಗೆ "ಹೌದು" ಎಂದು ಹೇಳುವ ಅಂತಿಮ ಆಯ್ಕೆಯನ್ನು ಯೂದನು ಮಾಡಿಕೊಂಡನು, ಹೀಗೆ ಆತನ ಮೇಲೆ ಸೈತಾನನಿಗೆ ಅನುಮತಿ ಮತ್ತು ನಿಯಂತ್ರಣವನ್ನು ಕೊಟ್ಟನು. ಯೂದನು ಈ ಆಯ್ಕೆಯನ್ನು ಮಾಡಲು ಅನೇಕ ಕಾರಣಗಳಿರಬಹುದು, ಆದರೆ ತನ್ನ ಮಗನ ಮೂಲಕವಾಗಿ ದೇವರು ನಿರ್ವಹಿಸಲು ಬಯಸಿದ ಕಾರ್ಯ ಮತ್ತು ದೇವರ ಉದ್ದೇಶ ಯೇಸು ಕ್ರಿಸ್ತನ ಮರಣದಿಂದ ಹಾಳಾಗುವದು ಎಂಬದು ಸೈತಾನನ ಯೋಚನೆಯಾಗಿತ್ತು. ಆದರೆ ಯೇಸು ಕ್ರಿಸ್ತನ ಮರಣವು ಮಾನವ ಕುಲದವರಿಗೆ ವಿಮೋಚನೆಯನ್ನು ಕೊಡಬೇಕೆಂಬ ದೇವರ ಯೋಜನೆಯ ನೆರವೇರಿಕೆಯಾಗಿತ್ತು. (ನೋಟ್ 2 ದೇವರ ಕುರಿಮರಿ, ಪುಟ 18 ಮತ್ತು ನೋಟ್ 5 ಸೈತಾನನು, ಪುಟ 66 ನೋಡಿರಿ).

5 ಯೇಸು ಕ್ರಿಸ್ತನು ತನ್ನನ್ನು ಮರಣಕ್ಕೆ ನಡೆಸುವಂಥ ಮಾರ್ಗದರ್ಶನವನ್ನೇ ಕೊಟ್ಟನು, ಅಂ–ದರೆ. "ನೀನು ಮಾಡಬೇಕಾಗಿರುವದನ್ನು ಬೇಗ ಮಾಡಿ ಮುಗಿಸು" (13:27). ಯೇಸು ಕ್ರಿಸ್ತನು ನಿಯಂತ್ರಣವುಳ್ಳವನಾಗಿದ್ದನು ಎಂಬದನ್ನು ಆತನು ಮಾತುಗಳೇ ಮತ್ತೊಮ್ಮೆ ನಿರೂಪಿಸಿದವು. ತನ್ನ ಇಷ್ಟದ ಮೇರೆಗೆ ಆತನು ಸತ್ತನು, ಬದಲಾಗಿ ತನ್ನ ವಿರೋಧಿಗಳು ಬಯಸಿದಾಗಲ್ಲ." The NIV Study Bible, ಪುಟ 1624.

# ಪಾಠ 17

# ಯೇಸು ಕ್ರಿಸ್ತನು ತನ್ನ ಶಿಷ್ಯರನ್ನು ಬಲಪಡಿಸಿದನು

## ಯೋಹಾನ 14

ಅವರಿನ್ನೂ ಮೇಲಂತಸ್ತಿನಲ್ಲಿರುವಾಗಲೇ, ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಅಂತಿಮ ಬೋಧನೆಯನ್ನು ಕೊಡಲು ಪ್ರಾರಂಭಿಸಿದನು. ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡಿದುಕೊಡುವನು ಮತ್ತು ನಾನು ಹೋಗುವ ಸ್ಥಳಕ್ಕೆ ನೀವು ಬರಲಾರಿರಿ ಎಂಬ ಎಚ್ಚರಿಕೆಯನ್ನು ಆತನು ಅವರಿಗೆ ಕೊಟ್ಟದ್ದರಿಂದ ಅವರು ಕಳವಳಗೊಂಡಿದ್ದರು. ಆದರೆ ದೇವರ ಮೇಲೆ ಮತ್ತು ನಮ್ಮ ಮೇಲೆ ನಂಬಿಕೆಯನ್ನಿಡುವದರ ಮೂಲಕ ನಿಮ್ಮ ಹೃದಯಗಳನ್ನು ಶಾಂತಪಡಿಸಿಕೊಳ್ಳಿರಿ ಎಂದು ಯೇಸು ಕ್ರಿಸ್ತನು ಅವರಿಗೆ ಹೇಳಿದನು. ಯೇಸು ಕ್ರಿಸ್ತನು ಅವರನ್ನೆಂದಿಗೂ ಸೋಲಲು ಬಿಡಲಿಲ್ಲ, ನಿಮಗೆದುರಾಗುವ ಪರಿಸ್ಥಿತಿಗಳು ಎಷ್ಟೇ ಕಠಿಣವಾಗಿದ್ದರೂ ಸರಿಯೇ ನಾನು ನಿಮ್ಮನ್ನು ಎಂದಿಗೂ ಕೈಬಿಡುವದಿಲ್ಲ ಎಂಬ ಭರವಸೆಯನ್ನು ಸಹ ಆತನು ಅವರಿಗೆ ಕೊಟ್ಟಿದ್ದನು.

ನಾನು ನಿಮಗೋಸ್ಕರ ಪರಲೋಕದಲ್ಲಿ ಬಿಡಾರವನ್ನು ಸಿದ್ಧ ಮಾಡುವದಕ್ಕಾಗಿ ಹೋಗುತ್ತಿದ್ದೇನೆ ಎಂದು ವಿವರಿಸಿದನು ಮತ್ತು ನೀವು ನನ್ನೊಂದಿಗೆ ಅಲ್ಲಿ ನೆಲೆಸಲು ನಿಮ್ಮನ್ನು ಕರೆದುಕೊಂಡು ಹೋಗಲು ಬರುತ್ತೇನೆ ಎಂದು ವಾಗ್ದಾನ ಮಾಡಿದನು.1 ನೀನು ಹೋಗುವ ಸ್ಥಳದ ಮಾರ್ಗ ಯಾವುದು ಎಂದು ತೋಮನು ಯೇಸುವನ್ನು ಕೇಳಿದಾಗ, "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರಲಾರರು" ಎಂದು ಪ್ರಕಟಪಡಿಸಿದನು.2 ದೇವರಾಗಿರುವ ನಾನೇ ದೇಹಧರಿಸಿಕೊಂಡು ನಿಮ್ಮ ಮಧ್ಯದಲ್ಲಿ ಬಂದಿದ್ದೇನೆ ಎಂದು ಯೇಸು ಬಾರಿ ಹೇಳಿದನು, ಆದರೆ ಅನೇಕರು ಇದನ್ನು ನಂಬಲಿಲ್ಲ. ಆದ್ದರಿಂದ ಇಲ್ಲಿ ಆತನು ಸ್ಪಷ್ಟವಾಗಿ ಹೇಳುತ್ತಿರುವದೇನೆಂದರೆ, ನನ್ನಲ್ಲಿ ನಂಬಿಕೆಯನ್ನಿಡದ ಹೊರತು ಯಾರು ತಂದೆಯ ಬಳಿಗೆ ಹೋಗಲಾರರು. ತಂದೆಯಾದ ದೇವರು ತನ್ನನ್ನೇ ಮಾನವನ ರೂಪದಲ್ಲಿ ಯೇಸುವಿನ ಮೂಲಕ ತೋರ್ಪಡಿಸಿಕೊಂಡಿರುವದರಿಂದ, ಯೇಸುವಿನಲ್ಲಿ ನಂಬಿಯನ್ನಿಡದೆ ಯಾರೂ ದೇವರನ್ನು ನಿಜವಾಗಿ ತಿಳಿದುಕೊಳ್ಳಲಾರರು.

ಆಗ ಫಿಲಿಪ್ಪನು, "ಕರ್ತನೇ ನಮಗೆ ತಂದೆಯನ್ನು ತೋರಿಸು" ಎಂದು ಬೇಡಿಕೊಂಡನು. ಅದಕ್ಕೆ ಯೇಸು, "ನನ್ನನ್ನು ನೋಡಿರುವವನು ತಂದೆಯನ್ನು ನೋಡಿದ್ದಾನೆ. ನಾನು ತಂದೆಯಲ್ಲಿಯೂ, ತಂದೆಯು ನನ್ನಲ್ಲಿ ಇದ್ದಾನೆಂದು ನಾನು ಹೇಳುವದನ್ನು ನಂಬಿರಿ; ಅಥವಾ ನಾನು ನಡೆಸಿರುವ ಸೂಚಕಕಾರ್ಯಗಳ ಪುರಾವೆಗಳಿಂದಾದರೂ ನಂಬಿರಿ." ನಾನು ಈಗ ತಂದೆಯ ಬಳಿಗೆ ಹೋಗುತ್ತೇನೆ, ಆದರೆ ಸೇವೆಯಲ್ಲಿ ನಿರತರಾಗುವ ನನ್ನ ಶಿಷ್ಯರಾದ ನೀವು, ನಾನು ಮಾಡಿರುವದಕ್ಕಿಂತ ಹೆಚ್ಚಿನ ಸೂಚಕಕಾರ್ಯಗಳನ್ನು3 ಮಾಡುವಿರಿ ಎಂದು ಅವರಿಗೆ ವಿವರಿಸಿದನು. ನೀವು ನನ್ನ ಹೆಸರಿನಲ್ಲಿ4 ಏನೇ ಬೇಡಿಕೊಂಡರೂ, ನಿಮ್ಮ ಮೂಲಕ ತಂದೆಯ ಮಹಿಮೆಗಾಗಿ ಆತನು ಅದನ್ನು ನೆರವೇರಿಸುವನು.

ತನ್ನ ಶಿಷ್ಯರನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬಲಗೊಳಿಸುವದಕ್ಕಾಗಿ ಮತ್ತು ಅವರಿಗೆ ಭರವಸೆಯನ್ನು ಕೊಡುವದಕ್ಕಾಗಿ, ತಾನು ತಂದೆಯ ಬಳಿಗೆ ಹೋದ ನಂತರ ನಿಮಗೆ ಸಹಾಯಕನಾಗಿ ಮತ್ತು ಬೋಧಕನಾಗಿ ನಿಮ್ಮ ಜೊತೆಯಲ್ಲಿಯೇ ಇರಲು ಪವಿತ್ರಾತ್ಮನನ್ನು5 ಕಳುಹಿಸಿಕೊಡುವೆನೆಂದು ಹೇಳಿದನು. ಯೇಸು ಕ್ರಿಸ್ತನು ಅವರ ಜೊತೆಯಲ್ಲಿ ಇದ್ದ ಹಾಗೆಯೇ ಪವಿತ್ರಾತ್ಮನೂ ಇರುವನು ಮತ್ತು ಕ್ರಿಸ್ತನ ಸ್ವಭಾವವನ್ನು ಅವರಲ್ಲಿ ಹುಟ್ಟಿಸಲು ಅವರೊಂದಿಗೆ ನೆಲೆಗೊಳ್ಳುವನು ಮತ್ತು ಅವರ ಮೂಲಕ ಕಾರ್ಯ ಮಾಡುವನು.

ಯೇಸು ಕ್ರಿಸ್ತನ ಸನ್ನಿಹಿತವಾಗಿದ್ದ ಮರಣ ಮತ್ತು ಪುನರುತ್ಥಾನವನ್ನು ಆ ಸಮಯದಲ್ಲಿ ಶಿಷ್ಯರು ತಿಳಿದುಕೊಳ್ಳಲಿಲ್ಲವಾದರೂ, ಲೋಕವು ಇನ್ನು ಮುಂದೆ ನನ್ನನ್ನು ಕಾಣಲಾರದೆಂದು ಯೇಸು ಕ್ರಿಸ್ತನು ಪ್ರಕಟಿಸಿದನು. ಏನೇಆದರೂ, ನನ್ನನ್ನು ತಮ್ಮ ಆತ್ಮೀಕ ಕಣ್ಣುಗಳಿಂದ ನೋಡಿ, ನನ್ನ ಪುನರುತ್ಥಾನದ ಜೀವಿತದಲ್ಲಿ ಭಾಗಿಯಾಗುವ ನಂಬಿಗಸ್ಥರಿಗಾಗಿ6 ನಾನು ಹಿಂದಿರುಗಿ ಬರುವೆನೆಂದು ವಾಗ್ದಾನ ಮಾಡಿದನು.

ನಂತರ ಯೇಸು ಕ್ರಿಸ್ತನು ನಿಜವಾದ ಶಿಷ್ಯತ್ವದ ಗುರುತನ್ನು ವಿವರಿಸಿದನು: “ನನ್ನನ್ನು ಪ್ರೀತಿಸುವವನು, ನನ್ನ ಬೋಧನೆಗಳಿಗೆ ವಿಧೇಯನಾಗುವನು.” ಯಾರೆಲ್ಲಾ ನನ್ನ ಬೋಧನೆಗಳಿಗೆ ನಂಬಿಗಸ್ಥರಾಗಿ ನಡೆದುಕೊಳ್ಳುತ್ತಾರೋ ಅವರಿಗೆ ದೇವರು ವಿಶೇಷವಾದ ಪ್ರೀತಿಯನ್ನು ತೋರಿಸುವನು ಎಂದು ಯೇಸು ಕ್ರಿಸ್ತನು ಹೇಳಿದನು. “ನನ್ನ ತಂದೆಯು ಆತನನ್ನು ಪ್ರೀತಿಸುವನು,” ಯೇಸು ವಾಗ್ದನ ಮಾಡಿದ್ದೇನೆಂದರೆ, “ನಾವು ಆತನಿಗೆ ಬಳಿಗೆ ಬರುತ್ತೇವೆ ಮತ್ತು ಆತನೊಂದಿಗೆ ನೆಲೆಸುತ್ತೇವೆ.”

ಯೂದನು (ತದ್ದಾಯನಾಗಿರಬಹುದು; ಮತ್ತಾಯ 10:3; ಮಾರ್ಕ 3:18), ವಿಶ್ವಾಸಿಗಳಲ್ಲದೇ ಲೋಕದವರು ಯೇಸುವನ್ನು ಇನ್ನು ನೋಡಲು ಯಾಕೆ ಸಾಧ್ಯವಿಲ್ಲ ಎಂದು ಕೇಳಿದನು. ವಚನಗಳು ವಾಗ್ದಾನ ಮಾಡಿರುವಂತೆ ಯೇಸು ಕ್ರಿಸ್ತನು ಮೆಸ್ಸೀಯನ ಆಳ್ವಿಕೆಯ ಅರಸನಾಗುವನು ಎಂಬ ಅವರ ನಿರೀಕ್ಷೆಗೆ ಪೂರಕವಾಗಿರಲಿಲ್ಲ (cf. ನೋಟ್ 5, ಪುಟ 50). ಪ್ರಿತಿ ಮತ್ತು ನಂಬಿಗಸ್ಥಿಕೆಯ ವಿಧೇಯತೆಯೊಂದಿಗೆ ಯೇಸುವಿಗೆ ಪ್ರತಿಕ್ರಿಯೆಯನ್ನು ನೀಡುವವನಿಂದಲೇ ದೇವರ ಪ್ರಕಟನೆಯು ಹೊರಡುತ್ತದೆ ಎಂಬ ಉತ್ತರವನ್ನು ಯೇಸು ನೀಡಿದನು.

ನಂತರ ಆತನು, “ಈ ಲೋಕದ ಅಧಿಪತಿ” ಅಥವಾ ಸೈತಾನನಿಗೆ ಈಗ ನಿಯಂತ್ರಣವು ಕೊಡಲ್ಪಟ್ಟಿದೆ ಎಂದು ಪ್ರಕಟಿಸಿದನು. ಆದರೆ ಆತನು ಬೇಗನೇ ಕೆಳಕ್ಕೆ ಹಾಕಲ್ಪಡುವನು (cf. 12:31)7, ಯಾಕೆಂದರೆ ಯೇಸು ಕ್ರಿಸ್ತನು ಅಧೀನತೆಯ ಮೂಲಕವಾಗಿ ತನ್ನ ತಂದೆಯ ಮೇಲಿದ್ದ ಅಪಾರವಾದ ಪ್ರೀತಿಯನ್ನು ಶಿಲುಬೆಯ ಮೇಲೆ ನಿರೂಪಿಸಿದನು. ಯೇಸು ಕ್ರಿಸ್ತನು ಹೇಳಿದ ವಿಷಯಗಳಲೆಲ್ಲವೂ ನೆರವೇರಿದಾಗ ಶಿಷ್ಯರ ನಂಬಿಕೆಯು ಸಹ ಭದ್ರವಾಗಿರುವದು.

## ಯೋಹಾನ 14:1–14 ಓದಿರಿ.

1. ಯೇಸುವನ್ನು ನಮ್ಮಲ್ಲಿಯೇ ಯಾರೋ ಒಬ್ಬನು ಹಿಡಿದುಕೊಡುವನು ಮತ್ತು ಆತನು ಹೋಗುವ ಸ್ಥಳಕ್ಕೆ ನಾವು ಹೋಗಲಾರೆವು ಎಂಬ ವಿಷಯವನ್ನು ಕೇಳಿ ಆತನ ಶಿಷ್ಯರು ಕಳವಳಗೊಂಡಿದ್ದರು. ಗಲಿಬಿಲಿ ಮತ್ತು ಭ್ರಮೆಯು ಆವರಿಸಿಕೊಂಡಿದ್ದ ಈ ಸಮಯದಲ್ಲಿ ಬಲ ಮತ್ತು ನಿರೀಕ್ಷೆಯನ್ನು ಕಂಡುಕೊಳ್ಳಲು ಏನು ಮಾಡಬೇಕೆಂದು ಯೇಸು ತನ್ನ ಶಿಷ್ಯರಿಗೆ ಆಜ್ಞಾಪಿಸಿದನು (14:1)?

2. ಪರಲೋಕದಲ್ಲಿರುವ ತನ್ನ ತಂದೆಯ ಮನೆಯ ಬಗ್ಗೆ ಯೇಸು ಕ್ರಿಸ್ತನು ಮಾಡಿದ ವಾಗ್ದಾನ ಏನು (14:2–3)?

3. ಯೇಸು ಕ್ರಿಸ್ತನು ಹೋಗುತ್ತಿದ್ದ ಪರಲೋಕಕ್ಕೆ ಹೋಗುವ ಮಾರ್ಗ ಯಾವುದು ಎಂದು ತೋಮನು ಕೇಳಿದ ಪ್ರಶ್ನೆಗೆ ಯೇಸು ಕ್ರಿಸ್ತನು ನೀಡಿದ ಪ್ರತ್ಯುತ್ತರ ಏನು (14:5–6)?

**Reference**: ನೋಟ್ 2, ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರಲಾರರು, ಪುಟ 148.

4. ತಂದೆಯನ್ನು ನೋಡಬೇಕೆಂಬ ಫಿಲಿಪ್ಪನ ಮನವಿಗೆ ಯೇಸು ಹೇಗೆ ಪ್ರತಿಕ್ರಿಯಿಸಿದನು (14:8–11)?

**Reference**: ನೋಟ್ 1, ಯೇಸುವಿನ ಸೂಚಕಕಾರ್ಯಗಳು, ಪುಟ 75.

5.ಎ. ಯೇಸುವಿನಲ್ಲಿ ನಂಬಿಕೆಯನ್ನಿಡುವದರಿಂದ ನಮಗೆ ಏನು ಸಿಗುತ್ತದೆ ಎಂದು ಯೇಸು ವಾಗ್ದಾನ ಮಾಡಿದ್ದಾನೆ (14:12)?

**Reference**: ನೋಟ್ 3, ಇವುಗಳಿಗಿಂತ ಹೆಚ್ಚಿನ ಕಾರ್ಯಗಳು, ಪುಟ 148.

ಬಿ. ಪ್ರಾರ್ಥನೆಯ ವಿಷಯದಲ್ಲಿ ಯೇಸು ಕ್ರಿಸ್ತನು ಮಾಡಿರುವ ಅಗಮ್ಯವಾದ ವಾಗ್ದಾನ ಏನು (14:13–14)?

**ನೋಟ್** 4, ನೀವು ನನ್ನ ಹೆಸರಿನಲ್ಲಿ ಏನೇ ಬೇಡಿಕೊಂಡರೂ, ಪುಟ 148.

## ಯೋಹಾನ 14:15–31 ಓದಿರಿ.

6. ತನ್ನನ್ನು ಪ್ರೀತಿಸುವವರಿಗೂ ಮತ್ತು ವಿಧೇಯರಾಗುವವರೆಗೂ ಯೇಸು ಕ್ರಿಸ್ತನು ಕೊಡುವೆನೆಂದು ವಾಗ್ದಾನ ಮಾಡಿರುವ ಪವಿತ್ರಾತ್ಮನ ಬಗ್ಗೆ ಹೇಗೆ ವಿವರಿಸಿದ್ದಾನೆ (14:16–17)?

**ಗಮನಿಸಿರಿ**: ಸಲಹೆಗಾರನು ಎಂದರೆ ಸಹಾಯಕನು, ಕಾಪಾಡುವವನು, ನಮಗಾಗಿ ವಾದಿಸುವವನು, ಮಾರ್ಗದರ್ಶನ ಮತ್ತು ಸಲಹೆಯ ವಿಷಯದಲ್ಲಿ ನಂಬಿಗಸ್ಥನು, ಬಲಪಡಿಸುತಾನು. ಇಲ್ಲಿಯವರೆಗೂ ಯೇಸು ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಹೀಗಿದ್ದನು, ಈಗ ಪವಿತ್ರಾತ್ಮನು ಆತನ ಸ್ಥಳವನ್ನು ತೆಗೆದುಕೊಳ್ಳುವನು. ಯೇಸು ಕ್ರಿಸ್ತನು ಪರಲೋಕದಲ್ಲಿಯೂ ತನ್ನ ಪಾತ್ರವನ್ನು ಮುಂದುವರೆಸುವನು (cf. 1 ಯೋಹಾನ 2:1ಬಿ). Reference: ನೋಟ್ 2, ಪವಿತ್ರಾತ್ಮನು, ಪುಟ 33.

7. ಯೇಸು ಕ್ರಿಸ್ತನು ತನ್ನ ತಂದೆಯ ಬಳಿಗೆ ಹೋದ ನಂತರ ಆತನು ಮಾಡಿರುವ ವಾಗ್ದಾನವು ಒಬ್ಬ ವಿಶ್ವಾಸಿಗೆ ಏನಾಗುತ್ತದೆ (14:18–20)?

**Reference**: ನೋಟ್ 6, ನಾನು ನಿಮ್ಮ ಬಳಿಗೆ ಬರುತ್ತೇನೆ, ಪುಟ 148, ಮತ್ತು ನೋಟ್ 1, ನಾನು ಮತ್ತೆ ಬರುತ್ತೇನೆ, ಪುಟ 147.

8. ತನ್ನನ್ನು ಸ್ತ್ಯವಾಗಿ ಪ್ರೀತಿಸುವವನ ವಿಷಯದಲ್ಲಿ ಯಾವುದು ಸತ್ಯವಾಗಿರುವದೆಂದು ಯೇಸು ಹೇಳಿದ್ದಾನೆ (14:15,21)?

9. ಯೇಸು ಕ್ರಿಸ್ತನು ಇಡೀ ಲೋಕಕ್ಕೆ ಮೆಸ್ಸೀಯನಾಗಿ ತನ್ನ ಬಲ ಮತ್ತು ಮಹಿಮೆಯನ್ನು ಪ್ರದರ್ಶಿಸಬೇಕೆಂದು ಯೂದನು (ಇಸ್ಕರಿಯೋತ ನಲ್ಲ) ಮತ್ತು ಉಳಿದ ಶಿಷ್ಯರು ಬಯಸಿದರು. ಇದರ ಸಂಬಂಧವಾಗಿ ಯೂದನ ಕೇಳಿದ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸಿದನು (14:22–24)?

10. ಪವಿತ್ರಾತ್ಮನ ಬಗ್ಗೆ ಯೇಸು ಕ್ರಿಸ್ತನು ಇನ್ನು ಏನನ್ನು ಕಲಿಸಿದನು (14:25–26)?

11. ನಾವು ಭಯಭೀತರು ಮತ್ತು ಗಲಿಬಿಲಿಗೊಳಗಾಗುವಾಗ ಧೈರ್ಯದಿಂದಿರಲು ಯೇಸು ಕ್ರಿಸ್ತನು ಮಾಡಿರುವ ಅಮೋಘವಾದ ವಾಗ್ದಾನವೇನು (14:27)?

12.ಎ. ಶಿಷ್ಯರು ಇನ್ನೂ ಅರ್ಥಮಾಡಿಕೊಳ್ಳಲು ಪರದಾಡುತ್ತಿದ್ದ ವಿಷಯವನ್ನು ಅವರಿಗೆ ವಿವರಿಸಲು ಯೇಸು ಕ್ರಿಸ್ತನು ಯಾಕೆ ಸಮಯವನ್ನು ತೆಗೆದುಕೊಂಡನು (14:29)?

ಬಿ. "ಈ ಲೋಕದ ಅಧಿಪತಿಯ" ಸಂಗಡ ತನ್ನ ಯುದ್ದದ ವಿಷಯವಾಗಿ ಯೇಸು ಕ್ರಿಸ್ತನು ಏನು ಹೇಳಿದನು (14:30–31)?

**Reference**: ನೋಟ್ 7, ಕೆಳಗೆ ಬೀಳುವನು, ಪುಟ 148, ಮತ್ತು ನೋಟ್ 5, ಸೈತಾನನು, ಪುಟ 66.

**ಗಮನಿಸಿರಿ:** ಈಗ ಬನ್ನಿರಿ; ನಾವು ಹೋಗೋಣ (14:31ಬಿ). ಸಾಮಾನ್ಯವಾದ ನಂಬಿಕೆ ಎಂದರೆ ಮೇಲಂತಸ್ತನ್ನು ಬಿಡಲು ಸಿದ್ಧರಾಗಿರಿ ಎಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದಾಗ, 18:1ರವರೆಗೂ ಅವರು ಅದನ್ನು ಮಾಡಲಿಲ್ಲ. ಆದ್ದರಿಂದ ಮುಂದೆ ನಡೆದ ಸಂಭಾಷಣೆಗಳೆಲ್ಲವನ್ನೂ ಸಾರ್ವತ್ರಿಕ ಸ್ಥಳದಲ್ಲಿ ಹೇಳಲಾಗಿದೆಯ ಅಥವಾ ಗೆತ್ಸೇಮನೆ ತೋಟಕ್ಕೆ ಹೋಗುವ ಮಾರ್ಗದಲ್ಲಿ ಹೇಳಲಾಗಿದೆಯ ಎಂಬದನ್ನು ಊಹಿಸಿಕೊಳ್ಳುವದು ಕಷ್ಟವಾಗಿದೆ.

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ತಿಳುವಳಿಕೆಯನ್ನು ಮೀರುವ ಸಮಾಧಾನ

ಯೇಸು ಕ್ರಿಸ್ತನು ಶಿಲುಬೆಯ ಮರಣವನ್ನನುಭವಿಸಲು ಕೆಲವೇ ತಾಸುಗಳು ಮಾತ್ರವೇ ಉಳಿದಿದ್ದವು. ತಾನು ಬಹಳವಾಗಿ ಪ್ರೀತಿಸುತ್ತಿದ್ದ ಆತನ ಶಿಷ್ಯರು ನಿರಾಸೆಯನ್ನು ಮತ್ತು ತಾವು ಅರ್ಥಮಾಡಿಕೊಳ್ಳಲಾಗದ ನಷ್ಟವನ್ನು ಅನುಭವಿಸುತ್ತಿದ್ದರು. ಸಮುದ್ರದ ತೆರೆಗಳನ್ನು ಶಾಂತಪಡಿಸಿದವನು, ಐದು ಸಾವಿರ ಜನರಿಗೆ ಊಟವನ್ನು ಕೊಟ್ಟವನು ಮತ್ತು ಸತ್ತವರನ್ನು ಎಬ್ಬಿಸಿದವನಾದ ಅವರ ಮೆಸ್ಸೀಯನು ಮತ್ತು ದೇವಕುಮಾರನು, ಈ ಲೋಕದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಿ ತನ್ನ ಶಿಷ್ಯರಿಗೆ ನಾಯಕತ್ವದ ಜವಾಬ್ದಾರಿಕೆಯನ್ನು ವಹಿಸಲು ಯಾಕೆ ಆಗಲಿಲ್ಲ? ಆತನು ಅವರನ್ನು ಬಿಟ್ಟು ಸತ್ತಿದ್ದು ಯಾಕೆ? ಆ ಸಮಯದಲ್ಲಿ ಅವರು ಅರ್ಥಮಾಡಿಕೊಳ್ಳುವಂತೆ ಅವರಿಗೆ ಸಹಾಯ ಮಾಡುವ ಸಾಧ್ಯತೆ ಯೇಸುವಿಗೆ ಇರಲಿಲ್ಲ. ಮುಂದಿನ ಕೆಲವು ತಾಸುಗಳಲ್ಲಿ ತಾನು ಅನುಭವಿಸಬೇಕಾಗಿದ್ದ ನೋವಿನ ವಿಷಯದಲ್ಲಿ ದುಃಖಪಟ್ಟದ್ದಕ್ಕಿಂತಲೂ ಹೆಚ್ಚಾಗಿ ಆತನು ತನ್ನ ನಂಬಿಗಸ್ಥರಾದ ಹಿಂಬಾಲಿಕರ ವಿಷಯದಲ್ಲಿ ದುಃಖಪಟ್ಟನು.
ಪಾಪಿಯಾದ ಮನುಷ್ಯನು ಮಹಿಮಾರ್ಹನಾದ ದೇವಕುಮಾರನನ್ನು ಶಿಲುಬೆಗೆ ಹಾಕುವಾಗಲೂ– ಮಾನವ ಚರಿತ್ರೆಯ ಕಠೋರವಾದ ಕತ್ತಲೆಯ ಅವಧಿಯಲ್ಲಿಯೂ ಯೇಸುವಿನಲ್ಲಿ ಸಮಾಧಾನವಿತ್ತು ಮತ್ತು ಆತನು ಸಮಾಧಾನವನ್ನು ಕೊಟ್ಟನು. ಈ ಸಮಯದಲ್ಲಿ ನಮ್ಮೊಳಗಿಂದಲೇ ಬರುವ ಸಮಾಧಾನ ಬಗ್ಗೆ ಯೇಸುವಿಗೆ ಗೊತ್ತಿತ್ತು ಮತ್ತು ಅದನ್ನೇ ಆತನು ತೋರ್ಪಡಿಸಿದನು ಯಾಕೆಂದರೆ ಕಠಿಣವಾದ ಕಷ್ಟ, ನೋವು ಅಥವಾ ವೇದನೆಯನ್ನು ಜಯಿಸಲು ಇದರಿಂದ ಮಾತ್ರವೇ ಸಾಧ್ಯ. ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಬಲಪಡಿಸುವಿಕೆ ಹಾಗೂ ಸಂತೈಸುವಿಕೆ ಮತ್ತು ಪ್ರಾರ್ಥನೆಯ ಶಕ್ತಿಯ ಮೂಲಕ ದೊರೆಯುವ ಮಹಿಮಾರ್ಹವಾದ ನಿತ್ಯವಾದ ಭವಿಷ್ಯದ ಭರವಸೆಯಿಂದ ಈ ಸಮಧಾನವು ದೊರೆಯುವದೆಂದು ಯೇಸು ಕ್ರಿಸ್ತನು ವಿವರಿಸಿದನು.

ಚರಿತ್ರೆಯ ಪ್ರತಿಯೊಂದು ಸಂತತಿಯ ಹಾಗೆ ಇಂದಿಗೂ ಸಹ ಜನರ ಮತ್ತು ರಾಷ್ಟ್ರಗಳ ನಡುವೆಯ ಸಮಾಧಾನವಿಲ್ಲದಿರುವದು ದೊಡ್ಡ ಸಮಸ್ಯೆಯಾಗಿದೆ. ಜೀವನದಲ್ಲಿ ನೆರವೇರುವಿಕೆಗೆ ವೈಯಕ್ತಿಕ ಸಮಧಾನವು ಬಹಳ ಪ್ರಾಮುಖ್ಯ. ಸಮಾಧಾನದ ಹುಡುಕಾಟದಲ್ಲಿ ಯೇಸು ಕ್ರಿಸ್ತನು ತಮ್ಮ ಕಷ್ಟಗಳನ್ನೆಲ್ಲಾ ಪರಿಹರಿಸುವ ಅರಸನೆಂದು ಜನರು ಭಾವಿಸಿದರು. ಇದು ಲೋಕದಲ್ಲಿ ಸಮಾಧಾನವನ್ನು ನೆಲೆಗೊಳಿಸುತ್ತಿತ್ತಾ?

"ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ; ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ" ಎಂದು ಯೇಸು ಕ್ರಿಸ್ತನು ಹೇಳಿದನು. "ಲೋಕವು ಕೊಡುವ ರೀತಿಯಲ್ಲಿ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ" (14:27). ಯೇಸು ಕ್ರಿಸ್ತನು ಕೊಡುವ ಸಮಾಧಾನವನ್ನು ಆಳವಾಗಿ ನೋಡಿಕೊಳ್ಳೋಣ–ಅದು ಎಲ್ಲಾ ತಿಳುವಳಿಕೆಯನ್ನು ಮೀರುವದಾಗಿದೆ.

1.ಎ. ಲೋಕವು ಕೊಡುವ ಸಮಾಧಾನವನ್ನು ನೀವು ಹೇಗೆ ವಿವರಿಸುತ್ತೀರ?

ಬಿ. ಯೇಸು ಕ್ರಿಸ್ತನನ್ನು ಬಿಟ್ಟು ಜನರು ಸಮಾಧಾನವನ್ನು ಎಲ್ಲಿ ಮತ್ತು ಹೇಗೆ ಹುಡುಕುತ್ತಾರೆ?

ಸಿ. ಯೇಸು ಕೊಡುವ ಸಮಾಧಾನ ಮತ್ತು ಆತನಿಲ್ಲದೆ ನಾವು ಪಡೆಯುವ ಸಮಾಧಾನದ ನಡುವೆ ಇರುವ ವ್ಯತ್ಯಾಸ ಏನು?

2.ಎ. ಕೆಳಗಿನ ವಚನಗಳಲ್ಲಿ ಯೇಸು ಕ್ರಿಸ್ತನು ಸಮಧಾನದೊಂದಿಗೆ ಹೇಗೆ ಸಂಬಂಧವುಳ್ಳವನಾಗಿದ್ದಾನೆ?

ಯೆಶಾಯ 9:6ಬಿ

ಲೂಕ 2:10–14

ಬಿ. ಯೋಹಾನ 14:27ರ ಜೊತೆಗೆ, ಯೋಹಾನ 16:33ರಲ್ಲಿ ಸಮಾಧಾನ ವಿಷಯದಲ್ಲಿ ಯೇಸು ಮಾಡಿರುವ ವಾಗ್ದಾನ ಏನು?

3. ಯೋಹಾನ 14:13–14ರಲ್ಲಿ, ಪ್ರಾರ್ಥನೆಯಲ್ಲಿ ನಿಮಗೆ ಸಮಾಧಾನ ಮತ್ತು ಬಲ ದೊರೆಯುವದೆಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದನು. ಪ್ರಾರ್ಥನೆ ಮತ್ತು ಸಮಾಧಾನದ ವಿಷಯದಲ್ಲಿ ಫಿಲಿಪ್ಪಿ 4:6–7 ನಮಗೆ ಏನನ್ನು ಹೇಳುತ್ತದೆ?

4. ನಿಮ್ಮೊಳಗೆ ನೆಲೆಸುವದಕ್ಕಾಗಿ ಪಂಚಾಶತ್ತಮ ದಿವಸದಂದು ನಿಮಗಾಗಿ ಪವಿತ್ರಾತ್ಮನನ್ನು ಕಳುಹಿಸಲಾಗುವದೆಂದು ಯೇಸು ಕ್ರಿಸ್ತನು ತನ್ನ ಶಿಷ್ಯರನ್ನು ಬಲಪಡಿಸಿದನು. ಯೇಸು ಕ್ರಿಸ್ತನು ಕೊಡುವ ಆತ್ಮ ಮತ್ತು ಸಮಾಧಾನದ ಬಗ್ಗೆ ಕೆಳಗಿನ ವಚನಗಳು ನಮಗೆ ಏನನ್ನು ತಿಳಿಸುತ್ತವೆ?

ರೋಮಾ 8:15–16

ರೋಮಾ 8:26–27

5. ನಾನು ಪ್ರತಿಯೊಬ್ಬ ವಿಶ್ವಾಸಿಗಾಗಿಯೂ ಪರಲೋಕದಲ್ಲಿ ಸ್ಥಳವನ್ನು ಸಿದ್ಧಮಾಡಲು ಹೋಗುತ್ತಿದ್ದೇನೆಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದನು. ಯೇಸು ಕ್ರಿಸ್ತನು ಕೊಡುವ ಅಂತಿಮವಾದ ಸಮಾಧಾನ ಏನು?

ಪ್ರಕಟನೆ 21:1–4

6.ಎ. ಯೇಸು ಕ್ರಿಸ್ತನು ತಾನು ಸಮಾಧಾನಕ್ಕಾಗಿ ತೆತ್ತ ಬೆಲೆ ಏನು?

ಯೆಶಾಯ 53:5

**Reference**: ನೋಟ್ 2, ದೇವರ ಕುರಿಮರಿ, ಪುಟ 18.

ಬಿ. ದೇವರೊಂದಿಗೆ ನಾವು ಸಮಾಧಾನದಿಂದಿರುವವರೆಗೂ ದೇವರ ಸಮಾಧಾನವನ್ನು ನಮ್ಮ ಜೀವಿತದಲ್ಲಿ ಹೊಂದಲು ನಮಗೆ ಸಾಧ್ಯವಿಲ್ಲ. ಯೇಸು ಕೊಡುವ ಸಮಾಧಾನವನ್ನು ಸ್ವೀಕರಿಸಿಕೊಳ್ಳಲು ನಾವು ಪ್ರಾರಂಭಿಸುವದು ಹೇಗೆ?

ರೋಮಾ 5:1

7. ಕೆಳಗಿನ ವಚನಗಳಲ್ಲಿ ಯೇಸು ಕ್ರಿಸ್ತನು ಕೊಡುವ ಸಮಾಧಾನವನ್ನು ಹೇಗೆ ಬಣ್ಣಿಸಲಾಗಿದೆ?

ಕೀರ್ತನೆ 23:4

ಯೆಶಾಯ 32:17–20

ಯೆಶಾಯ 26:3

## ಸಾರಾಂಶ

8. ನಿಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ಸಮಾಧಾನದ ಸ್ಥಾನ ಎಲ್ಲಿದೆ?

9. ಯೇಸು ಕ್ರಿಸ್ತನು ಸಮಾಧಾನದ ವಿಷಯದಲ್ಲಿ ನಿಮಗೆ ಮಾಡಿರುವ ವಾಗ್ದಾನಗಳೇನು?

10. ನಿಮ್ಮ ಜೀವಿತದಲ್ಲಿ ಮಹದಾದ ಸಮಾಧಾನವನ್ನು ಅನುಭವಿಸಬೇಕಾದ ಕ್ಷೇತ್ರ (ಗಳು) ಇವೆಯೇ? ಈ ಸಮಾಧಾನವನ್ನು ನೀವು ಹೇಗೆ ಅನುಭವಿಸಬಹುದು?

## ಪಾಠ 17 ನೋಟ್ಸ್

1 ನಾನು ಮತ್ತೆ ಬರುತ್ತೇನೆ (14:3). ಯೇಸು ಕ್ರಿಸ್ತನು ತನ್ನ ಎರಡನೇ ಬರೋಣದ ಬಗ್ಗೆ ಮಾತನಾಡುತ್ತಿದ್ದನು. ಆತನು ಶಿಲುಬೆಗೆ ಹೋಗುವದಕ್ಕಿಂತ ಮೊದಲು (ಯೋಹಾನ 14:3; ಮತ್ತಾಯ 24:30–31) ಮತ್ತು ಆತನು ಪುನರುತ್ಥಾನವಾದ ಮೇಲೆ (ಯೋಹಾನ 21:22), ತಾನು ಮತ್ತೆ ಭೂಮಿಗೆ ಬರುವದಾಗಿ ಯೇಸು ಕ್ರಿಸ್ತನು ವಾಗ್ದಾನ ಮಾಡಿದನು. ಈ ಘಟನೆಯು ನಡೆಯುವ ದಿವಸವನ್ನು ಆತನು, ಕ್ರಿಸ್ತನ ದಿನ ಅಥವಾ ಆ ದಿನ ಎಂಬದಾಗಿ ಬಣ್ಣಿಸಿದನು, ಅದು ಯಾವಾಗ ಎಂದು ದೇವರಿಗೆ ಮಾತ್ರವೇ ಗೊತ್ತು (ಮಾರ್ಕ 13:32). ಯೇಸು ಕ್ರಿಸ್ತನು ತಾನು ಮನುಷ್ಯನಾಗಿ, ಅಂದರೆ ದೇಹವುಳ್ಳವನಾಗಿ (ಅ.ಕೃ 1:11) ಬರುವೆನೆಂದು ವಾಗ್ದಾನ ಮಾಡಿದನು ಮತ್ತು ಆತನ ಬರೋಣವು ಎಲ್ಲರಿಗೂ ಗೊತ್ತಾಗುವದು ಅದರಲ್ಲಿ ಯಾವುದೇ ಗೊಂದಲಗಳಿರುವದಿಲ್ಲ ಬದಲಾಗಿ ಮಹಿಮೆ ಮತ್ತು ಪ್ರಭಾವವು ತುಂಬಿಕೊಂಡಿರುತ್ತದೆ. ಆತನು ಬಂದಾಗ ಎಲ್ಲರಿಗೂ ನ್ಯಾಯ ವಿಚಾರಣೆ ಮಾಡುವನು (2 ತಿಮೊಥೆ 4:1) ಮತ್ತು ನೀತಿವಂತಿಕೆ ಹಾಗೂ ಸಮಾಧಾನವು ನೆಲೆಯಾಗಿರುವ ಹೊಸ ಲೋಕದಲ್ಲಿ ಆಳ್ವಿಕೆಯನ್ನು ಮಾಡುವನು. ಯೇಸು ಕ್ರಿಸ್ತನು ಎರಡು ಬಾರಿ ಬರುವನೆಂಬದು ಕೆಲವರ ನಂಬಿಕೆ, ಒಂದು ಸಭೆಯು ಎತ್ತಲ್ಪಡುವಾಗ (1 ಥೆಸಲೋನಿಕ 4:17), ಇನ್ನೊಂದು ಮಹಾಸಂಕಟ ಕಾಲವಾದ ಮೇಲೆ (ಪ್ರಕಟನೆ 7:14). ಇತರರಾದರೋ ಚರಿತ್ರೆಯ ಕೊನೆಯಲ್ಲಿ

ಯೇಸು ಕ್ರಿಸ್ತನು ಹಿಂದಿರುಗಿ ಬರುವದು ಒಂದೇ ಘಟನೆ ಎಂದು ಪರಿಗಣಿಸುತ್ತಾರೆ. The NIV Topical Study Bible, page 1075. Reference: ಆಮೋಸ 8:3,9,13;9:11 ಮೀಕ4:6; 5:9–15; 2 ಥೆಸಲೋನಿಕ 1:6–10; ಪ್ರಕಟನೆ 19:11–16; ಅ.ಕೃ 1:9–11.

2 ನನ್ನ ಮೂಲಕವಾಗಿ ಅಲ್ಲದೆ ಯಾರೂ ತಂದೆಯ ಬಳಿಗೆ ಬರಲಾಗುವದಿಲ್ಲ (14:6). ಈ ಮಾತನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿರುವದು ಬಹಳ ಪ್ರಾಮುಖ್ಯವಾಗಿದೆ ಯಾಕೆಂದರೆ ಈ ಹೇಳಿಕೆಯನ್ನು ಕೊಡುತ್ತಿರುವವನು, ಮನುಷ್ಯ ರೂಪವನ್ನು ಧರಿಸಿರುವ ವಾಕ್ಯವೆಂಬವನಾಗಿದ್ದಾನೆ, ತಂದೆಯನ್ನು ನಮಗೆ ಪ್ರಕಟಿಸುವವನು ಈತನೇ. ಈ ವಾಕ್ಯವನ್ನು ಬಿಟ್ಟರೆ ಮಾನವ ಕುಲದವರೊಂದಿಗೆ ಸಂಪರ್ಕವನ್ನಿಡಲು ದೇವರಿಗೆ ಯಾವುದೆ ಸಂಪನ್ಮೂಲಗಳಿರದಿರುವದಾದರೆ (ನರಾವತಾರವೆತ್ತಿರುವವನು) ಮನುಷ್ಯರು ದೇವರೊಂದಿಗೆ ಸಂಪರ್ಕವನ್ನು ಹೊಂದುವದಕ್ಕಾಗಿ ವಾಕ್ಯವೆಂಬವನು ನಮಗಾಗಿಯೇ ನರಾವತಾರವನ್ನೆತ್ತಿ ನಮ್ಮ ಮಧ್ಯದಲ್ಲಿ ನೆಲೆಸಿದನು. ಯೇಸು ಕ್ರಿಸ್ತನು ಈ ಹೇಳಿಕೆಯನ್ನು ಸುವಾರ್ತೆಯ ಪ್ರಾರಂಭದಲ್ಲಿ ನಾವು ತಿಳಿದುಕೊಳ್ಳಬೇಕು. ಎಲ್ಲಾ ಜೀವವು ದೇವರ ಜೀವವಾಗಿರುವ ಹಾಗೆ; ಎಲ್ಲಾ ಸತ್ಯಗಳು ದೇವರ ಸತ್ಯಗಳೇ; ಆದರೆ ದೇವರ ಜೀವ ಮತ್ತು ಸತ್ಯಗಳು, ಯೇಸು ಕ್ರಿಸ್ತನ ಮೂಲಕವಾಗಿ ಪ್ರಕಟಗೊಂಡಿವೆ. F.F. Bruce, The Gospel of John, page 298.

3 ಇವುಗಳಿಗಿಂತ ಮಿಗಿಲಾದ ಕಾರ್ಯಗಳು (14:12). "ನನ್ನ ಶಿಷ್ಯರು ಹೆಚ್ಚು ಉನ್ನತವಾದ ಸೂಚಕಕಾರ್ಯಗಳನ್ನು ಮಾಡುವರೆಂದು ಯೇಸು ಕ್ರಿಸ್ತನು ಹೇಳುತ್ತಿಲ್ಲ–ಸತ್ತವರನ್ನು ಎಬ್ಬಿಸುವದು ಸಹ ಉನ್ನತವಾದ ಕಾರ್ಯವೇ ಆಗಿದೆ. ಬದಲಾಗಿ ಪವಿತ್ರಾತ್ಮನ ಬಲದ ಮೂಲಕವಾಗಿ ಕಾರ್ಯವನ್ನು ನಡೆಸುವ ಶಿಷ್ಯರು, ದೇವರ ರಾಜ್ಯದ ಸುವಾರ್ತೆಯನ್ನು ಪಾಲೆಸ್ತೀನಿನ ಹೊರಗೂ ಮತ್ತು ಲೋಕದ ಕಟ್ಟಕಡೆವರೆಗೂ ಮುಟ್ಟಿಸುವರು" ಎಂದು ಹೇಳುತ್ತಿದ್ದಾನೆ. *Life Application Bible, NIV*, ಪುಟ 1911.

4 ನನ್ನ ಹೆಸರಿನಲ್ಲಿ ನೀವು ಏನೇ ಬೇಡಿಕೊಂಡರೂ ನಿಮಗೆ ಸಿಕ್ಕುವದು (14:13). ಯೇಸುವಿನ ನಾಮದಲ್ಲಿ ಬೇಡಿಕೊಳ್ಳುವದೆಂದರೆ ದೇವರ ಚಿತ್ತ ಮತ್ತು ಸ್ವಭಾವಕ್ಕನುಸಾರವಾಗಿ ಬೇಡಿಕೊಳ್ಳುವದಾಗಿದೆ. ದೇವರು ತನ್ನ ಸ್ವಭಾವ ಅಥವಾ ಚಿತ್ತಕ್ಕೆ ವಿರುದ್ಧವಾದ ಮನವಿಗಳನ್ನು ನೆರವೇರಿಸುವದಿಲ್ಲ, ಮತ್ತು ನಮ್ಮ ಸ್ವಾರ್ಥಪರವಾದ ಬಯಕೆಗಳ ನೆರವೇರುವಿಕೆಗಾಗಿ ನಾವು ಆತನ ನಾಮವನ್ನು ಸಹ ದುರು ಪಯೋಗಪಡಿಸಿಕೊಳ್ಳುವಂತಿಲ್ಲ. ಒಂದುವೇಳೆ ನಾವು ದೇವರನ್ನು ಯಥಾರ್ಥವಾಗಿ ಪ್ರೀತಿಸುವವರು ಮತ್ತು ಆತನ ಚಿತ್ತಕ್ಕನುಸಾರವಾಗಿ ಜೀವಿಸುವವಲು ಬಯಸುವವರಾಗುವದಾದರೆ, ಆಗ ನಮ್ಮ ಮನವಿಗಳು ಆತನ ಮಾರ್ಗಕ್ಕನುಸಾರವಾದದ್ದಾಗಿರುತ್ತದೆ ಮತ್ತು ಆತನು ಅವುಗಳನ್ನು ಕೇಳುತ್ತಾನೆ." *Life Application Bible, NIV*, page 1911. ಪಾರ್ಥನೆ ಎಂದು ಹೇಳುವದಾದರೆ ಕೇವಲ ಯೇಸುವಿನ ನಾಮವನ್ನು ಹೇಳುವದು ಮಾತ್ರವಲ್ಲ ಬದಲಾಗಿ ಪ್ರಾರ್ಥನೆ ಎಂದರೆ ಯೇಸು ಕ್ರಿಸ್ತನು ಮಾಡಿದ ಕಾರ್ಯವನ್ನು ಮಾಡುವದು––ಆತನು ಉತ್ತರಿಸುವಂತೆ ಮಾಡುವದಾಗಿದೆ (ವಚನ 14 ನೋಡಿರಿ)" The NIV Study Bible, ಪುಟ 1625.

5 **Reference**: ನೋಟ್ 2, ಪವಿತ್ರಾತ್ಮನು, ಪುಟ 33.

6 ನಾನು ನಿಮ್ಮ ಬಳಿಗೆ ಬರುತ್ತೇನೆ (14:18). ಯೇಸು ಕ್ರಿಸ್ತನು ತನ್ನ ಎರಡನೇ ಬರೋಣ (ಮೇಲಿರುವ ನೋಟ್ 1 ನೋಡಿರಿ)
ಪುನರುತ್ಥಾನದ ಕಾಣಿಸಿಕೊಳ್ಳುವಿಕೆಗಳ ಮತ್ತು ನಮ್ಮೊಳಗೆ ನೆಲೆಸುವದಕ್ಕಾಗಿ ಬರುವ ಪವಿತ್ರಾತ್ಮನ ಬಗ್ಗೆ ಮಾತನಾಡುತ್ತಿದ್ದನು.

7 ತನ್ನ ಬೀಳುವಿಕೆಯನ್ನು ಎದುರುಗೊಳ್ಳುವನು. ಯೇಸು ಕ್ರಿಸ್ತನು ಕೆಲವು ದಿವಸಗಳ ಮುಂಚೆ ಹೇಳಿದ ಹಾಗೆ (ಯೋಹಾನ 12:31) ಸೈತಾನನು ತನ್ನ ಬೀಳುವಿಕೆಯನ್ನು ಎದುರುಗೊಳ್ಳುವನು ಆದರೆ ಇದು ಸೈತಾನನಿಗೆ ಗೊತ್ತಿಲ್ಲ. ಆದರೆ ಯೇಸು ಕ್ರಿಸ್ತನನ್ನು ಬೀಳಿಸುವದಕ್ಕಾಗಿ ಸೈತಾನನು ಕುತಂತ್ರಗಳನ್ನು ರೂಪಿಸುತ್ತಿದ್ದನು ಆದರೆ ಆತನ ಮೇಲೆ ಹಿಡಿತವನ್ನು ಸಾಧಿಸಲು ಆತನಿಗೆ ಏನೂ ಇರಲಿಲ್ಲ. ಯೇಸು ಕ್ರಿಸ್ತನು ಪಾಪವಿಲ್ಲದವನಾಗಿದ್ದನು ಮತ್ತು ಕೆಟ್ಟವುಗಳ ಮೇಲೆ ಜಯವನ್ನು ಸಾಧಿಸಿದ್ದನು. ತಾನು ಶಿಲುಬೆಯ ಮೇಲೆ ಸಾಯುವದರಿಂದ ಸೈತಾನನ ಕೈಗಳಿಗೆ ಬೀಳುವದಿಲ್ಲ ಬದಲಾಗಿ ತನ್ನ ತಂದೆಯ ಚಿತ್ತಕ್ಕೆ ಪರಿಪೂರ್ಣವಾಗಿ ವಿಧೇಯನಾಗುವೆಂಬದಾಗಿ ಯೇಸು ಕ್ರಿಸ್ತನಿಗೆ ಚೆನ್ನಾಗಿ ಗೊತ್ತಿತ್ತು. ತನ್ನ ಜೀವಿತದಲ್ಲಿ ನಡೆಯುತ್ತಿರುವ ಕಾರ್ಯಗಳೆಲ್ಲವೂ, ನಂಬಿಗಸ್ಥರಿಗೆ ರಕ್ಷಣೆಯ ಮತ್ತು ದೇವರ ನಾಮಕ್ಕೆ ಮಹಿಮೆಯನ್ನು ತರುವದಾಗಿದೆ ಎಂಬದು ಯೇಸು ಕ್ರಿಸ್ತನಿಗೆ ಗೊತ್ತಿತ್ತು. ಇದರ ಆಧಾರದ ಮೇಲೆಯೇ ಯೇಸು ಕ್ರಿಸ್ತನು ತಂದೆಯ ಚಿತ್ತವನ್ನು ನೆರವೇರಿಸಿದನು. ನೋಟ್ 2, ದೇವರ ಕುರಿಮರಿ, ಪುಟ 18 ನೋಡಿರಿ.

# ಪಾಠ 18

# ಶಿಷ್ಯತ್ವದ ಬಗ್ಗೆ ಹೆಚ್ಚು ಬೋಧನೆ

## ಯೋಹಾನ 15

ಯೇಸು ಕ್ರಿಸ್ತನು ತನ್ನ ಬೀಳ್ಕೊಡುವಿಕೆಯ ಸಂಭಾಷಣೆಯನ್ನು ಶಿಷ್ಯರೊಂದಿಗೆ ನಡೆಸುತ್ತಿದ್ದ ಹಾಗೆ, ದೇವರು ಪ್ರತಿಯೊಬ್ಬ ವಿಶ್ವಾಸಿಯ ಜೀವಿತದಲ್ಲಿಯೂ ನಡೆಸುವ ಎಚ್ಚರಿಕೆಯ ಕಾರ್ಯವನ್ನು ತಿಳಿಸುವದಕ್ಕಾಗಿ ದ್ರಾಕ್ಷೇ ತೋಟದ ಉದಾಹರಣೆಯನ್ನು ಉಪಯೋಗಿಸಿಕೊಂಡನು. ಉದಾಹರಣೆಯಲ್ಲಿ, ತಂದೆಯಾದ ದೇವರು ತೋಟಗಾರನಾಗಿದ್ದಾನೆ (ಯಜಮಾನನು ಮತ್ತು ಪೋಷಕನು), ಯೇಸು ಕ್ರಿಸ್ತನು ದ್ರಾಕ್ಷೆ ಬಳ್ಳಿ ಮತ್ತು ಪ್ರತಿಯೊಬ್ಬ ವಿಶ್ವಾಸಿಯು ಅದರ ಕೊಂಬೆಗಳಾಗಿದ್ದಾರೆ. ದ್ರಾಕ್ಷೇಬಳ್ಳಿಯ ಅಪನಂಬಿಗಸ್ತ ಕೊಂಬೆಗಳನ್ನು ತಂದೆಯು ಸತತವಾಗಿ ಶುದ್ಧಗೊಳಿಸುತ್ತಾನೆ ಮತ್ತು ನಂಬಿಗಸ್ಥ ಕೊಂಬೆಗಳನ್ನು ಆಗಾಗ ಕತ್ತರಿಸುತ್ತಿರುತ್ತಾನೆ ಅದರಿಂದ ಅವುಗಳು ಹೆಚ್ಚೆಚ್ಚು ಫಲವನ್ನು ಕೊಡುತ್ತವೆ. ಕೊಂಬೆಗಳು ತಮ್ಮ ಪೋಷಣೆಗಾಗಿ ಮತ್ತು ಫಲವನ್ನು ಕೊಡುವ ಸಾಮರ್ಥ್ಯವನ್ನು ಪಡೆಯುವದಕ್ಕಾಗಿ ಬಳ್ಳಿಯನ್ನು ಆತುಕೊಳ್ಳುತ್ತವೆ. ಬಳ್ಳಿಯಿಂದ ಪೋಷಣೆಯನ್ನು ಹೊಂದದಿರುವದಾದರೆ ಕೊಂಬೆಗಳು ಒಣಗಿಹೋಗುತ್ತವೆ ಮತ್ತು ಬೆಲೆಯಿಲ್ಲದವುಗಳಾಗುತ್ತವೆ.

ಅರ್ಥಮಾಡಿಕೊಳ್ಳಲು ಈ ಉದಾಹರಣೆಯು ಶಿಷ್ಯರಿಗೆ ಬಹಳ ಸುಲಭವಾಗಿತ್ತು. ಪಾಲೆಸ್ತೀನ್‌ನಲ್ಲಿ ತೋಟಗಾರರು ಪ್ರತಿ ವರ್ಷ ತನ್ನ ದ್ರಾಕ್ಷೇ ತೋಟವನ್ನು ಶುದ್ಧೀಗೊಳಿಸುತ್ತಿದ್ದರು, ಜೀವವಿಲ್ಲದ ಭಾಗಗಳನ್ನು ಮತ್ತು ಎಲೆಗಳನ್ನು ಕತ್ತರಿಸುತ್ತಿದ್ದರು ಮತ್ತು ಒಳ್ಳೆಯ ಕೊಂಬೆಗಳು ಹೆಚ್ಚಾಗಿ ಹಬ್ಬಿಕೊಳ್ಳಲು ಸಹಾಯ ಮಾಡುತ್ತಿದ್ದರು. ಪ್ರತಿಯೊಬ್ಬ ವಿಶ್ವಾಸಿಯಲ್ಲಿಯೂ ನಂಬಿಗಸ್ಥಿಕೆಯನ್ನು (ಅಂದರೆ, ಕ್ರಿಸ್ತನ ಸ್ವಭಾವ ಮತ್ತು ಕಾರ್ಯಗಳನ್ನು) ಹೆಚ್ಚಿಸುವದಕ್ಕಾಗಿ ತಂದೆಯ ಮನಸ್ಸನ್ನು ವಿವರಿಸುವದಕ್ಕಾಗಿ ಯೇಸು ಕ್ರಿಸ್ತನು ಈ ಉದಾಹರಣೆಯನ್ನು ಉಪಯೋಗಿಸಿದನು. ಕ್ರಿಸ್ತನಲ್ಲಿ ನೆಲೆಗೊಳ್ಳುವದರ ಮೂಲಕವಾಗಿ, ಕ್ರಿಸ್ತನಂತ ಜೀವಿತದ "ಫಲವನ್ನು" ಕೊಡುವದಕ್ಕಾಗಿ ಒಬ್ಬ ವಿಶ್ವಾಸಿಯು ಹೆಚ್ಚು ಜೀವವನ್ನು ಪಡೆಯುತ್ತಾನೆ. ಈ ನಂಬಿಗಸ್ಥಿಕೆಯು ಸಮಯ ಮತ್ತು ದೇವರ ಪೋಷಣೆಯೊಂದಿಗೆ ಬೆಳೆಯುತ್ತದೆ.

ಯೇಸು ಕ್ರಿಸ್ತನು ಶಿಷ್ಯರ ವಿಷಯದಲ್ಲಿ ತನಗಿರುವ ಮಹದಾದ ಬಯಕೆಯನ್ನು ವಿವರಿಸುತ್ತಾ ಹೋದನು: ಅದೇನೆಂದರೆ, ಅವರು ಪ್ರತಿದಿನ ದೇವರ ಪ್ರಸನ್ನತೆಯಲ್ಲಿ ಜೀವಿಸಬೇಕು. ನಾನು ಯಾವಾಗಲೂ ತಂದೆಯ ಚಿತ್ತವನ್ನು ಮಾಡಲು ಮುಂದಾದ್ದರಿಂದ ತಂದೆಯ ಪ್ರೀತಿಯನ್ನು ಅನುಭವಿಸಿದ್ದೇನೆಂದು ಯೇಸು ಕ್ರಿಸ್ತನು ಹೇಳಿದನು. ಅವರೂ ಸಹ ಯೇಸು ಕ್ರಿಸ್ತನ ಒಂದೇ ಒಂದು ಆಜ್ಞೆಯಿಂದ ದೇವರ ಅಗಮ್ಯವಾದ ಪ್ರೀತಿಯಲ್ಲಿ ನೆಲೆಗೊಳ್ಳುವರು: "ನಾನು ನಿಮ್ಮನ್ನು ಪ್ರೀತಿಸಿದ ಹಾಗೆಯೇ ನೀವೂ ಒಬ್ಬರನ್ನೊಬ್ಬರು ಪ್ರೀತಿಸಿರಿ." ಈ ಆಜ್ಞೆಗೆ ವಿಧೇಯರಾಗುವವರೆಲ್ಲರಿಗೂ, ನನಗೆ ಸ್ನೇಹಿತರಾಗಿರುವರು, ದೇವರಿಗೆ ನಂಬಿಗಸ್ಥರಾಗಿ ಸೇವೆ ಮಾಡುವ ಭಾಗ್ಯವನ್ನು ಪಡೆಯುವರು ಮತ್ತು ಅವರ ಪ್ರಾರ್ಥನೆಗಳಿಗೆ ಆತನು ನಂಬಿಗಸ್ಥಿಕೆಯಿಂದ ಉತ್ತರಿಸುವದಕ್ಕಾಗಿ ತಂದೆಯ ನಾಮಕ್ಕೆ ಮಹಿಮೆಯನ್ನು ತರುವರು ಎಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದ್ದಾನೆ.

ಆದರೆ ಅವರು ಇತರೆ ವಿಶ್ವಾಸಿಗಳೊಂದಿಗೆ ಪ್ರೀತಿಯ ಅನ್ಯೋನ್ಯತೆಯಲ್ಲಿ ಸಂತೋಷಪಟ್ಟಾಗ, ಆ ಅನ್ಯೋನ್ಯತೆ ಸೇರದಿರುವವರಿಂದ ಎದುರಾಗುವ ವಿರೋಧಗಳ ವಿಷಯದಲ್ಲಿ ಯೇಸು ಕ್ರಿಸ್ತನು ಅವರಿಗೆ ಎಚ್ಚರಿಕೆಯನ್ನು ಕೊಟ್ಟನು. "ಲೋಕವು ನಿಮ್ಮನ್ನು ದ್ವೇಷಿಸಿದರೆ, ಅದು ಮೊದಲು ನನ್ನನ್ನು ದ್ವೇಷಿಸಿತು" ಎಂಬದನ್ನು ನೆನಪಿಸಿಕೊಳ್ಳಿರಿ ಎಂದು ಆತನು ಹೇಳಿದನು. "ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿಕೊಂಡಿದ್ದೇನೆ. ಆದ್ದರಿಂದಲೇ ಲೋಕವು ನಿಮ್ಮನ್ನು ದ್ವೇಷಿಸುತ್ತದೆ."1 ಲೋಕದವರು ಶಿಷ್ಯರನ್ನು ಹೊರಗಿನವರಾಗಿ ಕಾಣುವರು ಯಾಕೆಂದರೆ ಯೇಸು ಕ್ರಿಸ್ತನು ಅವರನ್ನು ಆರಿಸಿಕೊಂಡಿದ್ದಾನೆ. ತಂದೆಯನ್ನು ತಿಳಿಯದವರಿಂದ ಆತನು ಅನುಭವಿಸಿದ ಕಷ್ಟಗಳನ್ನೇ ನೀವು ಅನುಭವಿಸುವಿರಿ ಆದ್ದರಿಂದ ಎಚ್ಚರಿಕೆಯಾಗಿರಿ ಎಂದು ಯೇಸು ಕ್ರಿಸ್ತನು ಅವರಿಗೆ ಹೇಳಿದನು. ಆದರೆ ನಂಬಿಗಸ್ಥರು ಇದನ್ನು ತಿಳಿದುಕೊಳ್ಳುವರು ಮತ್ತು ತಂದೆಯಾದ ದೇವರೊಂದಿಗಿರುವ ತಮ್ಮ ಸಂಬಂಧವನ್ನು ಹೊಗಳುವರು.

ಯಾರೆಲ್ಲಾ ನನಗೆ ವಿರೋಧವನ್ನು ವ್ಯಕ್ತಿಪಡಿಸಿದರೋ ಅವರ ಪಾಪಗಳಿಗೆ ಯಾವುದೇ ಕ್ಷಮಾಪಣೆಯಿರುವದಿಲ್ಲ ಯಾಕೆಂದರೆ ಆತನು ಮಾಡಿದ ಸೂಚಕಕಾರ್ಯಗಳನ್ನು2, ದೇವರಲ್ಲಿ ಭಯಭಕ್ತಿಯುಳ್ಳ ಜೀವಿತವನ್ನು ಮತ್ತು ಪರಿಶುದ್ಧವಾದ ಜೀವಿತ ಶೈಲಿಯನ್ನು ಅವರು ತಮ್ಮ ಕಣ್ಣಾರೆ ಕಂಡಿದ್ದಾರೆ ಎಂದು ಯೇಸು ಕ್ರಿಸ್ತನು ತಾನೇ ಪ್ರಕಟಪಡಿಸಿದನು. ದೇವಕುಮಾರನ ಪ್ರಸನ್ನತೆಯನ್ನು ಕಣ್ಣಾರೆ ಕಂಡ ಮೇಲೆಯೂ ಆತನನ್ನು ತಿರಸ್ಕರಿಸಿದ ಪಟ್ಟಣಗಳು ಮತ್ತು ಸಂತತಿಗಳ ಮೇಲೆ ಅತ್ಯಂತ ಘೋರವಾದ ನ್ಯಾಯವಿಚಾರಣೆಯು ಬರುವದು. (cf. ಮತ್ತಾಯ 11:20–24).

ಹಿಂಸೆಗಳ ನಡುವೆಯೂ, ದೇವಕುಮಾರನ ಬಗ್ಗೆ ಶಿಷ್ಯರು ಹೇಳುವರು, ಯಾಕೆಂದರೆ ಆತನ ಸೇವೆಯನ್ನು ಹತ್ತಿರದಿಂದ ಮೊದಲನೆಯದಾಗಿ ನೋಡಿದವರು ಅವರೇ ಆಗಿದ್ದಾನೆ. ನಾನು ಕಳುಹಿಸುವ ಸಹಾಯಕನು, ಪವಿತ್ರಾತ್ಮನು ಸಹ ನನ್ನ ಬಗ್ಗೆ ಸಾಕ್ಷಿ ಕೊಡುವನೆಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದನು. ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಂತುಕೊಳ್ಳಲ್\ಉ ದೇವರಾತ್ಮನು ಅವರಿಗೆ ಮಾತುಗಳನ್ನು ಮತ್ತು ಧೈರ್ಯವನ್ನು ಕೊಡುವನು.

## ಯೋಹಾನ 15:1–8 ನೋಡಿರಿ.

1. ಯೇಸು ಕ್ರಿಸ್ತನ ಉದಾಹರಣೆಯಲ್ಲಿರುವ ಪಾತ್ರಗಳು ಯಾವುವು, ಅವರು ಏನನ್ನು ಪ್ರತಿನಿಧಿಸುತ್ತಾರೆ (15:1,5)?

2.ಎ. ತೋಟಗಾರನ ಕೆಲಸ ಮತ್ತು ಉದ್ದೇಶ ಏನು (15:2)?
ಬಿ. ಈ ಉದಾಹರಣೆಯ ಮೂಲಕ, ಪ್ರತಿಯೊಬ್ಬ ವಿಶ್ವಾಸಿಯೊಂದಿಗೆ ತಂದೆಯಾದ ದೇವರಿಗಿರುವ ಸಂಬಂಧದ ಬಗ್ಗೆ ಆತನು ಏನನ್ನು ವಿವರಿಸುತ್ತಿದ್ದಾನೆ (15:2)?

**Reference**: ನೋಟ್ 3, ಶುದ್ಧೀಕರಣ, ಪುಟ 157.

3.ಎ. ಬಳ್ಳಿಯು ನಿರ್ವಹಿಸುವ ಪಾತ್ರ ಏನು (15:3–5)?

ಬಿ. ಪ್ರತಿಯೊಬ್ಬ ವಿಶ್ವಾಸಿಯೊಂದಿಗೆ ತನಗಿರುವ ಸಂಬಂಧದ ಬಗ್ಗೆ ಯೇಸು ನೀಡಿದ ಬೋಧನೆ ಏನು?

**ಗಮನಿಸಿರಿ:** ನೀನು ಈಗಾಗಲೇ ಶುದ್ಧನಾಗಿದ್ದೀಯ..(15:3 ಅಂದರೆ 15:2ಕ್ಕನುಸಾರವಾಗಿ ಫಲ ಕೊಡಲು ಶುದ್ಧೀಕರಿಸಲ್ಪಟ್ಟಿದ್ದೀಯ). ಯೇಸು ಕ್ರಿಸ್ತನ ವಾಕ್ಯಗಳನ್ನು ತನ್ನಲ್ಲಿಟ್ಟುಕೊಳ್ಳುವ ಶಿಷ್ಯನು (14:23) ಮತ್ತು ಯಾರಲ್ಲಿ ಆತನ ವಾಕ್ಯ ನೆಲೆಗೊಳ್ಳುತ್ತದೋ (cf. 15:7) ಅವನು "ಶುದ್ಧನಾಗಿದ್ದಾನೆ". ಶುದ್ಧೀಕರಣದ ಕಾರ್ಯದಲ್ಲಿ ತಂದೆಯು ಆತನ ವಾಕ್ಯಗಳನ್ನು ಬಳಸಿಕೊಳ್ಳುತ್ತಾನೆ.

4.ಎ. ಬಳ್ಳಿಯಿಲ್ಲದೆ ಕೊಂಬೆಗೆ ಜೀವವಿರುವದಿಲ್ಲವಾದರೂ, ಅದಕ್ಕೆ ಬಹಳ ಪ್ರಾಮುಖ್ಯವಾದ ಪಾತ್ರವನ್ನು ಕೊಡಲಾಗಿದೆ? ಏನದು?

ಬಿ. ಕೆಳಗಿನ ವಾಕ್ಯಗಳಿಗನುಸಾರವಾಗಿ ಫಲ ಕೊಡುವಿಕೆ ಎಂದರೆ ಏನು?

ಯೋಹಾನ 14:12

ಎಫೆಸ 5:9

5. ಕ್ರಿಸ್ತನಲ್ಲಿ ನೆಲೆಗೊಳ್ಳುವಾಗ ದೊರೆಯುವ ಫಲಿತಾಂಶ ಏನೆಂದು ಯೇಸು ಯೋಹಾನ 15:7–8ರಲ್ಲಿ ವಾಗ್ದಾನ ಮಾಡಿದ್ದಾನೆ?

ಯೋಹಾನ 15:9–17 ಓದಿರಿ.

6.ಎ. ಶಿಷ್ಯರ ವಿಷಯದಲ್ಲಿ ಯೇಸು ಕ್ರಿಸ್ತನ ಪರಮೋನ್ನತವಾದ ಬಯಕೆ ಏನು (15:9,11)?

ಬಿ. ಇದನ್ನು ಸಾಧ್ಯವಾಗಿಸುವದು ಏನು (15:10,12,17)?

7. ತನಗೆ ವಿಧೇಯರಾಗುವವರೊಂದಿಗೆ ತನ್ನ ಸಂಬಂಧ ಹೇಗಿರುವದೆಂದು ಯೇಸು ಕ್ರಿಸ್ತನು ಹೇಳಿದನು (15:13–16)?

**Reference**: ನೋಟ್ 4, ನನ್ನ ಹೆಸರಿನಲ್ಲಿ ಏನು ಬೇಕಾದರೂ ಬೇಡಿಕೊಳ್ಳಿರಿ, ಪುಟ 148.

ಯೋಹಾನ 15:18–27 ಓದಿರಿ.

8.ಎ. ವಿಶ್ವಾಸವಿಲ್ಲದ ಲೋಕದಿಂದ ಏನನ್ನು ಅನುಭವಿಸಬೇಕೆಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದನು (15:18–21)?

**Reference**: ನೋಟ್ 1, ಲೋಕವು ನಿಮ್ಮನ್ನು ದ್ವೇಷಿಸುತ್ತದೆ, ಪುಟ 157.

ಬಿ. ಲೋಕವು ತನ್ನನ್ನು ದ್ವೇಷಿಸಿದರ ವಿಷಯದಲ್ಲಿ ಯೇಸು ಕ್ರಿಸ್ತನು ಅವರಿಗೆ ಏನು ಹೇಳಿದನು (15:22–25)?

9. ಶಿಷ್ಯರಿಗೆ ಶೋಧನೆಗಳು ಎದುರಾಗುವಾಗಲು ಕ್ರಿಸ್ತನಿಗೆ ಸಾಕ್ಷಿಗಳಾಗಿ ನಿಲ್ಲಲು ಅವರನ್ನು ಬಲಪಡಿಸುವದು ಮತ್ತು ಪ್ರೇರೇಪಿಸುವದು ಏನು (15:26–27; ಅ.ಕೃ 1:8)?

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಜೀವಿಸಲು ಬಲ

ಶಿಷ್ಯರು ಯೇಸು ಕ್ರಿಸ್ತನ ಜೊತೆ ನಡೆಯುತ್ತಿರುವಾಗ, ಆತನ ಜೀವಿತವನ್ನು ಗಮನಿಸಿದರು ಮತ್ತು ಆತನಂತಾಗಲು ಬಯಸಿದರು. ಆತನು ಒಳ್ಳೆಯವನಾಗಿದ್ದನು, ತಾಳ್ಮೆಯುಳ್ಳವನಾಗಿದ್ದನು ಮತ್ತು ಕರುಣೆಯುಳ್ಳವನಾಗಿದ್ದನು, ಆದರೂ ಸತ್ಯದ ವಿಷಯದಲ್ಲಿ ದೃಢಚಿತ್ತನಾಗಿದ್ದನು. ದೇವರ ಪರಿಪೂರ್ಣವಾದ ಜ್ಞಾನದೆಡೆಗೆ ಸಂಬಂಧವುಳ್ಳವನಾಗಿದ್ದನು ಮತ್ತು ಒಂದೇ ಸಮಯದಲ್ಲಿ ಆತ್ಮೀಕ ಮತ್ತು ಬೌದ್ಧಿಕ ಲೋಕಗಳನ್ನು ನೋಡುವವನಾಗಿದ್ದನು. ಆತನು ಪರಿಪೂರ್ಣ ವ್ಯಕ್ತಿತ್ವವುಳ್ಳನಾಗಿದ್ದು, ದೇವರೊಂದಿಗೂ ಮತ್ತು ತನ್ನೊಂದಿಗೂ ಸಮಾಧಾನ ಹೊಂದಿದ್ದನು ಹಾಗೂ ಸ್ವಾರ್ಥರಹಿತನಾಗಿ ಇತರರ ಸೇವೆಯನ್ನು ಮಾಡುತ್ತಿದ್ದನು. ಕಠಿಣರಾಗಿದ್ದ ವೈರಿಗಳ ಎದುರಿನಲ್ಲಿಯೂ ನಂಬಿಕೆಯಿಂದ ಶಾಂತನಾಗಿ ಯಾವುದೇ ಭಯವಿಲ್ಲದೆ ಜೀವಿಸುತ್ತಿದ್ದ ಆತನ ಜೀವನ ಶೈಲಿಯು ಶಿಷ್ಯರಿಗೆ ಅತ್ಯಂತ ಪ್ರೇರಣೀಯವಾಗಿತ್ತು.

ನಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ, ಸಮಾಧಾನದಲ್ಲಿ ನಾವೆಲ್ಲರೂ ಪರಿಪೂರ್ಣರಾಗಲು ಬಯಸುತ್ತೇವೆ ಮತ್ತು ಯೇಸು ಕ್ರಿಸ್ತನ ಹಾಗೆ ಇತರರ ಜೀವಿತಗಳನ್ನು ಶ್ರೇಷ್ಠವೆಂದು ಭಾವಿಸುವವರಾಗಿತ್ತೇವೆ. ದೇವರು ನಮ್ಮನ್ನು ಯಾವುದಕ್ಕಾಗಿ ಸೃಷ್ಟಿಸಿದನೋ ಅವುಗಳನ್ನು ಮಾಡುವವರಾಗಿರದಂತೆ ನಮ್ಮನ್ನು ನಾವೇ ಅಡ್ಡಿಪಡಿಸಿಕೊಳ್ಳುತ್ತಾ ಭಯ, ಸ್ವ-ಸಂದೇಹ, ದುಃಖ, ಸಂದಿಗ್ಧ ಪರಿಸ್ಥಿತಿ ಮತ್ತು ಸ್ವಾರ್ಥತೆಗಳಿಂದ ಹೊರಬರಲು ಪ್ರಯತ್ನಿಸುತ್ತಿರುತ್ತೇವೆ. ಯೇಸು ಕ್ರಿಸ್ತನಿಗೆ ಅಪಾರವಾದ ಕಷ್ಟ ಮತ್ತು ಸಮಸ್ಯೆಗಳಿದ್ದಾಗಲೂ ಆತನಲ್ಲಿ ನೆಲೆಯಾಗಿದ್ದ ಸಂತೋಷ ಮತ್ತು ಆಂತರ್ಯದ ಬಲವನ್ನು ಅನುಭವಿಸಲು ನಾವೂ ಬಯಸುತ್ತೇವೆ.

ಯೋಹಾನ ಸುವಾರ್ತೆಯ 15ನೇ ಅಧ್ಯಾಯದ ವಿಶೇಷತೆ ಎಂದರೆ, ನೀವು ನಿಮ್ಮ ಕ್ರೈಸ್ತಿಯ ಜೀವಿತವನ್ನು ನಿಮ್ಮ ಸ್ವಂತ ಬಲದಲ್ಲಿ ಜೀವಿಸಿರಿ ಎಂದು ಯೇಸು ಕ್ರಿಸ್ತನು ಹೇಳುವದಿಲ್ಲ. ನಮ್ಮನ್ನು ಪರಿಪೂರ್ಣತೆ ಮತ್ತು ನೆರವೇರುವಿಕೆಗೆ ನಡೆಸುವ ಆತನ ಸ್ವಭಾವದನುಸಾರವಾದ ಫಲವನ್ನು ಕೊಡಲು ಅಗತ್ಯವಾದ ಸಂಬಂಧದ ಬಗ್ಗೆ ಆತನು ಮಾತನಾಡುತ್ತಿದ್ದಾನೆ. ಆತನ ವಾಕ್ಯಗಳಿಗೆ ನಾವು ವಿಧೇಯರಾಗಿ ಜೀವಿಸುವಾಗ, ಪ್ರತಿಯೊಬ್ಬ ವಿಶ್ವಾಸಿಯಲ್ಲಿಯೂ ನೆಲೆಸುವದಕ್ಕಾಗಿ (14:15–16,25) ಪವಿತ್ರಾತ್ಮನನ್ನು ಕೊಡುವದಾಗಿ ಆತನು ವಾಗ್ದಾನ ಮಾಡಿದ್ದಾನೆ (ಯೋಹಾನ 3:5–8;4:23;6:63;7:39). ಯಾರೆಲ್ಲಾ ಪವಿತ್ರಾತ್ಮನ ನಾಯಕತ್ವಕ್ಕೆ ತಮ್ಮನ್ನು ಒಪ್ಪಿಸಿಕೊಡುತ್ತಾರೋ ಅವರಲ್ಲಿ ಆತನು ಕ್ರಿಸ್ತನ ಜೀವಿತವನ್ನು ಉತ್ಪಾದಿಸುತ್ತಾನೆ ಮತ್ತು ದೇವರ ವಾಕ್ಯದನುಸಾರವಾಗಿ ಆತ್ಮೀಕ ಜೀವಿತದೆಡೆಗೆ ನಡೆಸುತ್ತಾನೆ. ಕ್ರಿಸ್ತನಲ್ಲಿ ನೆಲೆಗೊಂಡಿರುವವನು ಕೇವಲ ಕ್ರಿಸ್ತನಂತ ಫಲವನ್ನು ಕೊಡುವದು ಮಾತ್ರವಲ್ಲ ಪರಿಣಾಮಕಾರಿಯಾದ ಪ್ರಾರ್ಥನಾ ಜೀವಿತವನ್ನು ಅನುಭವಿಸುವವನಾಗಿರುತ್ತಾನೆ ಮತ್ತು ಎಲ್ಲಾ ವಿಧವಾದ ಪ್ರಾರ್ಥನಾ ಮನವಿಗಳಿಂದ ದೇವರನ್ನು ಸಮೀಪಿಸುವವನಾಗಿದ್ದಾನೆ (15:7,16). ಆತನಿಗಾಗಲಿ/ಆಕೆಗಾಗಲಿ ದೇವರ ಪ್ರೀತಿಯ ಪ್ರಸನ್ನತೆ (15:9–10), ಕ್ರಿಸ್ತನು ಒಳಗಿರುವದರಿಂದ ದೊರೆಯುವ ಪರಿಪೂರ್ಣವಾದ ಸಂತೋಷ (15:11), ಯೇಸು ಕ್ರಿಸ್ತನ ತ್ಯಾಗಪೂರ್ಣವಾದ ಸ್ನೇಹ ಮತ್ತು ಆತನ ಕೈಗಳಿಂದಲೇ ಆರಿಸಲ್ಪಟ್ಟ ಜೊತೆ ಕೆಲಸಗಾರರೆಂಬ (15:16) ಭಾವವಿರುತ್ತದೆ.

ಯೋಹಾನನ ಸುವಾರ್ತೆಯಲ್ಲಿ ನಾವು ಓದುವ ಯೇಸು ಕ್ರಿಸ್ತನ ಪ್ರೀತಿಪೂರ್ವಕವಾದ ಮಾತುಗಳನ್ನು ಆತನ ಬೋಧನೆಯಲ್ಲಿ ಕಾಣಬಹುದು, ಅದೇನೆಂದರೆ ನಾವು ನಮ್ಮ ಸ್ವಂತ ಸಾಮರ್ಥ್ಯದಿಂದ ಕ್ರಿಸ್ತನಿಗಾಗಿ ಫಲವನ್ನು ಕೊಡಲು ಮುಂದಾಗಬಾರದು. ಆತನ ವಾಕ್ಯಗಳಲ್ಲಿ ನೆಲೆಗೊಳ್ಳುವದರಿಂದ ಮತ್ತು ಆತ್ಮನು ದಯಪಾಲಿಸುವ ಜೀವಕ್ಕೆ ಹತ್ತಿರವಾಗುವದರಿಂದ, ಯೇಸು ಕ್ರಿಸ್ತನು ನಮ್ಮ ಮೂಲಕ ಜೀವಿಸಲು ಮತ್ತು ನಡೆಯಲು ನಾವು ಆತನಿಗೆ ಅವಕಾಶವನ್ನು ಕೊಡುವವರಾಗಿದ್ದೇವೆ.

ನಾವು ಆತನಲ್ಲಿ ನೆಲೆಗೊಳ್ಳುವದರಿಂದ ನಮಗೆ ಯೇಸು ಕ್ರಿಸ್ತನು ಜೀವಿಸಲು ಕೊಡುವೆಂದು ವಾಗ್ದಾನ ಮಾಡಿರುವ ಶಕ್ತಿಯನ್ನು ನೋಡಿಕೊಳ್ಳೋಣ.

1.ಎ. ದೈವೀಕ ಸಿದ್ಧಾಂತಗಳನ್ನು ಅನುಸರಿಸುವ ಮತ್ತು ನಮ್ಮ ಸ್ವಂತ ಬಲಕ್ಕನುಸಾರವಾಗಿ ಕ್ರೈಸ್ತೀಯ ಜೀವಿತವನ್ನು ಜೀವಿಸಲು ಪ್ರಯತ್ನಿಸುವದರಿಂದಾಗುವ ಫಲಿತಾಂಶ ಏನು?

ಬಿ. ಯೋಹಾನ 15:1–8ರಲ್ಲಿರುವ ಇಡೀ ವಾಗ್ದಾನವನ್ನು ನೀವು ಹೇಗೆ ಸಂಕ್ಷಿಪ್ತಗೊಳಿಸುತ್ತೀರ?

2.ಎ. ಯೇಸು ಕ್ರಿಸ್ತನು ತನ್ನ ಜೀವಿತವನ್ನು ನಮ್ಮೊಳಗೆ ಹೇಗೆ ಉತ್ಪಾದಿಸುತ್ತಾನೆ?

ಯೋಹಾನ 14:16–17 (ರೋಮಾ 8:11)

ಬಿ. ಯೇಸು ಕ್ರಿಸ್ತನು ಹೇಳಿದಂತೆ “ಬಳ್ಳಿಯ ಜೀವಿತ” ಹೇಗೆ ಪ್ರಾರಂಭವಾಗುತ್ತದೆ?

ಎಫೆಸ 1:13–14 (ಯೋಹಾನ 3:3,5–6)

3. ಕೆಳಗಿನ ವಚನಗಳಲ್ಲಿ ಪವಿತ್ರಾತ್ಮನ ಕಾರ್ಯಗಳನ್ನು ಹೇಗೆ ವಿವರಿಸಲಾಗಿದೆ?

ಯೋಹಾನ 14:26

ಫಿಲಿಪ್ಪಿ 2:13

4.ಎ. ಗಲಾತ್ಯ 5:16–17,19–23 ಎಂಥಾ ಹೋರಾಟದ ಬಗ್ಗೆ ತಿಳಿಸುತ್ತದೆ?

ಬಿ. ಗಲಾತ್ಯ 5:16,24–25ಗನುಸಾರವಾಗಿ ಈ ಹೋರಾಟವು ಹೇಗಿರುತ್ತದೆ?

ಎಫೆಸ 5:18ಬಿ

ಸಿ. ಕ್ರಿಸ್ತನಲ್ಲಿ ನೆಲೆಗೊಳ್ಳಬೇಕೆಂದು ನಾವು ಬಯಸುವಾಗ, ಪವಿತ್ರಾತ್ಮನಿಂದ ಹೇಗೆ ತುಂಬಲ್ಪಡುತ್ತೇವೆ?

ಲೂಕ 11:13

**Reference**: ನೋಟ್ 2, ಪವಿತ್ರಾತ್ಮನು, ಪುಟ 33.

5. ಬಳ್ಳಿಯಲ್ಲಿಯೇ ಸತತವಾಗಿ ನೆಲೆಗೊಂಡು ಮುಂದುವರೆಯುವದಕ್ಕಾಗಿ ನಾವು ಯಾವ ಆಯ್ಕೆಗಳನ್ನು ಮಾಡಬೇಕು?

ಕೀರ್ತನೆ 119:11,105 (ಕೀರ್ತನೆ 1:2–3)

ಎಫೆಸ 4:22–24

ಎಫೆಸ 4:30–32

1 ಯೋಹಾನ 1:9

6.ಎ. ಯೇಸು ಕ್ರಿಸ್ತನ ಸ್ವಭಾವವನ್ನು ನಮ್ಮಲ್ಲಿ ಉತ್ಪಾದಿಸುವದಕ್ಕಾಗಿ ನಾವು ಪವಿತ್ರಾತ್ಮನಿಗೆ ಅವಕಾಶವನ್ನು ಕೊಟ್ಟಷ್ಟೂ, ಆತನು ನಮ್ಮ ಜೀವಿತದಲ್ಲಿ ಹೆಚ್ಚಾಗಿ ಪ್ರತಿಬಿಂಬಿಸುವವನಾಗಿರುತ್ತಾನೆ. 2 ಕೊರಿಂಥ 3:17–18ರಲ್ಲಿ ಕೊಡಲ್ಪಟ್ಟಿರುವ ವಾಗ್ದಾನ ಏನು?

ಬಿ. ನಾವು ಕ್ರಿಸ್ತನಲ್ಲಿ ಹೆಚ್ಚಾಗಿ ನೆಲೆಗೊಳ್ಳಲು ಪ್ರಾರಂಭಿಸುವಾಗ ನಮ್ಮಲ್ಲಿ ಯೇಸು ಕ್ರಿಸ್ತನಲ್ಲಿ ಯಾವ ಸ್ವಭಾವ ಸತತವಾಗಿ ವ್ಯಕ್ತವಾಗುವದನ್ನು ಜನರು ನೋಡುತ್ತಾರೆ?

ಗಲಾತ್ಯ 5:22–23

ಎಫೆಸ 1:17–19ಎ

2 ತಿಮೊಥೆ 1:7

## ಸಾರಾಂಶ

7.ಎ. ಯೇಸು ಕ್ರಿಸ್ತನನ್ನು ಬಿಟ್ಟು ಜೀವಿಸುವ ನಿಮ್ಮ ಸಾಮರ್ಥ್ಯದ ಬಗ್ಗೆ ದ್ರಾಕ್ಷೆ ಬಳ್ಳಿ ಮತ್ತು ಕೊಂಬೆಗಳ ಉದಾಹರಣೆಯು ಏನನ್ನು ತೋರಿಸುತ್ತದೆ?

ಬಿ. ನಿಮ್ಮೊಳಗೆ ಕ್ರಿಸ್ತನ ಜೀವಿತವನ್ನು ಉತ್ಪಾದಿಸುವಲ್ಲಿ ಪವಿತ್ರಾತ್ಮನು ನಿರ್ವಹಿಸುವ ಪಾತ್ರ ಏನು?

8. ನೀವು ನಿಮ್ಮ ಜೀವಿತದ ಪ್ರತಿಯೊಂದು ಕ್ಷೇತ್ರಗಳನ್ನೂ ಆತನಿಗೆ ಒಪ್ಪಿಸುವದಾದರೆ, ದ್ರಾಕ್ಷೇ ಬಳ್ಳಿಯಾಗಿರುವ ನಾನು ನನ್ನ ಸ್ವಂತ ಸ್ವಭಾವದ ಫಲಗಳನ್ನು ನಿಮ್ಮ ಜೀವಿತದಲ್ಲಿ ಕೊಡುವೆನೆಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದ್ದಾನೆ. ನಿಮ್ಮ ಸ್ವಂತ ಸಾಮರ್ಥ್ಯಕ್ಕನುಸಾರವಾಗಿ ಕಾರ್ಯನಿರ್ವಹಿಸುವ ಪರಿಸ್ಥಿತಿ ನಿಮ್ಮ ಜೀವಿತದಲ್ಲಿದೆಯೇ? ನಿಮ್ಮ ಹೃದಯದ ಬಯಕೆಯನ್ನು ಈ ಪ್ರಾರ್ಥನೆಯು ವ್ಯಕ್ತಪಡಿಸುತ್ತದೆ:

*ಕರ್ತನೇ, ನನ್ನ ಸ್ವಂತ ಸಾಮರ್ಥ್ಯಕ್ಕನುಸಾರವಾಗಿಯೇ ಈ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೇನೆಂದು ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಜೀವಿತದ ಈ ಕ್ಷೇತ್ರದ ಮೇಲೆ ದಯವಿಟ್ಟು ನಿಯಂತ್ರಣವನ್ನು ನೀನೇ ತೆಗೆದುಕೋ ಮತ್ತು ನಿನ್ನ ಪ್ರೀತಿಯ ಆತ್ಮ, ಜ್ಞಾನ ಮತ್ತು ಸ್ವನಿಯಂತ್ರಣದಿಂದ ನನ್ನನ್ನು ತುಂಬಿಸು. ಯೇಸುವಿನ ನಾಮದಲ್ಲಿ ಬೇಡಿಕೊಳ್ಳುತ್ತೇನೆ.*

9.ಎ. ವಿಶೇಷವಾಗಿ ನಿಮ್ಮ ಜೀವಿತದಲ್ಲಿ ಯೇಸು ಕ್ರಿಸ್ತನ ಸ್ವಭಾವದ ಯಾವ ವಿಚಾರಗಳು ನಿಮಗೆ ಬೇಕು?

ಬಿ. ಬದಲಾವಣೆ ಎಂಬದು ಒಂದು ವಿಧಾನ, ಆದರೆ ಯೇಸುವಿನಲ್ಲಿ ಸತತವಾಗಿ ನೆಲೆಗೊಳ್ಳುವವರಿಗೆ ಆತನು ಮಾಡಿರುವ ವಾಗ್ದಾನ ಏನು?

## ಪಾಠ 18 ನೋಟ್ಸ್

1 ಲೋಕವು ನಿಮ್ಮನ್ನು ದ್ವೇಷಿಸುತ್ತದೆ (15:19). “”ಯೋಹಾನನ ಬರವಣಿಗೆಯಲ್ಲಿ ಸಾಮಾನ್ಯವಾಗಿರುವದೆಂದರೆ, ‘ಲೋಕ’ ಎಂದರೆ ದೇವರಿಲ್ಲದ ಲೋಕವಾಗಿದೆ, ದೇವರಿಗೆ ವಿರುದ್ಧವಾಗಿ ನಿರ್ಮಾಣವಾಗಿರುವ ಲೋಕವಾಗಿದೆ, ಆದದ್ದರಿಂದ ಆತನ ಜನರಿಗೂ ವಿರೋಧಗಳು ಎದುರಾಗುತ್ತವೆ. ಈ ಸಮಯದಲ್ಲಿ, ಯೇಸು ಕ್ರಿಸ್ತನ ಅವರ ವಿರೋಧಕ್ಕೆ ಕಾರಣವಾಗಿದ್ದನು; ಕೆಲವೇ ತಾಸುಗಳಲ್ಲಿ ಅವರ ವೈರತ್ವಕ್ಕೂ ಆತನು ಸಿಕ್ಕಿಕೊಳ್ಳುವನು. ಆತನೇ ವಿರೋಧಗಳನ್ನು ಎದುರಿಸಿದ್ದರಿಂದ ಆತನ ಶಿಷ್ಯರಿಗೂ ಅದು ಅನಿವಾರ್ಯವಾಗಿದೆ.” F.F. Bruce, *The Gospel of John*, ಪುಟ 313.

2 **ನೋಟ್** 1, ಯೇಸು ಕ್ರಿಸ್ತನ ಸೂಚಕಕಾರ್ಯಗಳು, ಪುಟ 75.

3 ಶುದ್ಧೀಕರಣ. “ಯೇಸು ಕ್ರಿಸ್ತನು ಎರಡು ತರಹದ ಶುದ್ಧೀಕರಣದ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿದ್ದಾನೆ: (1) ಬೇರ್ಪಡಿಸುವದು ಮತ್ತು (2) ಕೊಂಬೆಗಳನ್ನು ಕತ್ತರಿಸುವದು. ಫಲಕೊಡುವ ಕೊಂಬೆಗಳು ಬೆಳೆವಣಿಗೆಯನ್ನು ಕಾಣುವದಕ್ಕಾಗಿ ಅವುಗಳನ್ನು ಕತ್ತರಿಸಲಾಗುತ್ತದೆ. ಇನ್ನೊಂದು ಮಾತಿನಲ್ಲಿ ಹೇಳುವದಾದರೆ ನಮ್ಮ ಸ್ವಭಾವ ಮತ್ತು ನಂಬಿಕೆಯನ್ನು ಬಲಗೊಳಿಸಲು ದೇವರು ಕೆಲವೊಮ್ಮೆ ನಮ್ಮನ್ನು ಶಿಸ್ತಿಗೆ ಒಳಪಡಿಸುತ್ತಾನೆ. ಆದರೆ ಫಲ ಕೊಡದಿರುವ ಫಲಗಳನ್ನು ಪೂರ್ಣವಾಗಿ ಕಡಿದು ಹಾಕಲಾಗುತ್ತದೆ ಯಾಕೆಂದರೆ ಅವುಗಳಿಂದ ಯಾವುದೆ ಪ್ರಯೋಜನವಿಲ್ಲ ಮತ್ತು ಅವುಗಳಿಂದ ಬಳ್ಳಿಗೂ ತೊಂದರೆಯಾಗುತ್ತದೆ. ದೇವರಿಗಾಗಿ ಫಲವನ್ನು ಕೊಡದಿರುವ ಅಥವಾ ದೇವರ ಹಿಂಬಾಲಕರ ಕಾರ್ಯಗಳಿಗೆ ಅಡ್ಡಿಯನ್ನುಂಟು ಮಾಡುವ ಜನರನ್ನು ಆತನ ಜೀವ ಕೊಡುವ ಶಕ್ತಿಯಿಂದ ಕಡಿದು ಹಾಕಲಾಗುತ್ತದೆ.” Life Application Bible, NIV, page 1913.

ಕಡಿದು ಹಾಕುತ್ತಾನೆ (15:2) ಇದು ನ್ಯಾಯತೀರ್ಪನ್ನು ಸೂಚಿಸುತ್ತದೆ (15:6 ಗನುಸಾರವಾಗಿ). ಶುದ್ಧೀಕರಣವು ಫಲಕೊಡುವಿಕೆಗೆ ಸಂಬಂಧಪಟ್ಟದ್ದಾಗಿದೆ. ಹೊಸ ಒಡಂಬಡಿಕೆಯಲ್ಲಿ ಒಳ್ಳೇ ಫಲಗಳು ದೈವೀಕ ಜೀವಿತದ ಗುಣಮಟ್ಟ (ಮತ್ತಾಯ 3:8; 7:16–20) ಅಥವಾ ಸ್ವಭಾವದ ಲಕ್ಷಣಗಳನ್ನು (cf. ಗಲಾತ್ಯ 5:22–23; ಎಫೆಸ 5:9; ಫಿಲಿಪ್ಪಿ 1:11) ಪ್ರತಿನಿಧಿಸುತ್ತದೆ. ಬೆಂಕಿಯಲ್ಲಿ ಹಾಕಿ ಸುಡಲ್ಪಡುವದು (15:6) ಅವಿಶ್ವಾಸಿಗಳ ಮೇಲೆ ಮತ್ತು ಕ್ರಿಸ್ತನ ಮೇಲಿನ ನಂಬಿಕೆಯಿಂದ ಹಿಂದೆ ಸರಿಯುವವರಿಗೆ ದೇವರ ನ್ಯಾಯತೀರ್ಪನ್ನು ಪ್ರತಿಬಿಂಬಿಸುವದರ ಬಗ್ಗೆ ತಿಳಿಸುತ್ತದೆ ಎಂಬದು ಕೆಲವರ ಅಭಿಪ್ರಾಯ. 6:39; 10:27–28 ಈ ವಚನಗಳಿಗನುಸಾರವಾದ ಬೆಳಕಿನಲ್ಲಿ, ಈ ಕೊಂಬೆಗಳು ನಿಜವಾದ ವಿಶ್ವಾಸಿಗಳನ್ನು ಪ್ರತಿನಿಧಿಸುವದಿಲ್ಲ ಎಂದು ಇನ್ನೂ ಕೆಲವರು ನಂಬುತ್ತಾರೆ. ನಂಬಿಗಸ್ಥಿಕೆಯು ನಿಜವಾದ ರಕ್ಷಣೆಯ ಪುರಾವೆಯಾಗಿದೆ ಮತ್ತು ಕ್ರಿಸ್ತನ ಸಂಬಂಧವನ್ನು ಕಳೆದುಕೊಂಡಿರುವ ಕೊಂಬೆಯು ಜೀವವಿಲ್ಲದ್ದಾಗಿದೆ ಎಂದು ವಾದಿಸುತ್ತಾರೆ (15:2,4).

ಗಮನಿಸಿರಿ: ಈ ಪಾಠದಲ್ಲಿ ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆಯು ಸಾಮಾನ್ಯಕ್ಕಿಂತ ಹೆಚ್ಚಿನದಾಗಿರುತ್ತದೆ.

# ಪಾಠ 19

# ಯೇಸು ಕ್ರಿಸ್ತನ ಬೀಳ್ಕೊಡುಗೆ

## ಯೋಹಾನ 16

ಯೇಸು ಕ್ರಿಸ್ತನು ತನ್ನ ಮರಣದ ಹಿಂದಿನ ರಾತ್ರಿ ಶಿಷ್ಯರೊಂದಿಗೆ ಮೇಲಂತಸ್ತಿನಲ್ಲಿದ್ದುಕೊಂಡು ತನ್ನ ನಿರ್ಗಮನಕ್ಕಾಗಿ ಅವರನ್ನು ಸಿದ್ಧಪಡಿಸುತ್ತಿದ್ದನು. ನಿಮಗೆ ಹಿಂಸೆಗಳಾಗುವವು ಎಂದು ಈಗಾಗಲೇ ಆತನು ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದನು, ಆದರೂ ನಿಮ್ಮ ನಂಬಿಕೆಯ ನಿಮಿತ್ತ ನಿಮ್ಮನ್ನು ಸಭಾಮಂದಿರದಿಂದ1 ಹೊರಗೆ ಹಾಕಲಾಗುವದು ಎಂದು ವಿವರಿಸಿದನು. ದೇವರ ಆರಾಧನೆಯನ್ನು ಮಾಡುತಿದ್ದರಿಂದ ಯೇಸುವಿನ ಶಿಷ್ಯರನ್ನು ಕೊಲ್ಲಲಾಗುವದು ಎಂದು ಕೆಲವರು ಹೇಳುತ್ತಾರೆ. ಆತನ ಹಿಂಬಾಲಕರಿಗೆ ಈ ಘಟನೆಗಳು ಸಂಭವಿಸುವಾಗ ಅವರಿಗೆ ಆಶ್ಚರ್ಯವಾಗಬಾರದು ಬದಲಾಗಿ ಎಲ್ಲಾ ವಿಷಯಗಳ ಅರಿವು ಆತನಿಗಿದೆ ಎಂದು ಅವರು ತಿಳಿದುಕೊಳ್ಳಬೇಕು ಎಂಬ ಕಾರಣಕ್ಕಾಗಿಯೇ ಯೇಸು ಕ್ರಿಸ್ತನು ಈ ಘಟನೆಗಳ ಬಗ್ಗೆ ತಿಳಿಸಿದನು.

ನಿಮ್ಮನ್ನು ಬಿಟ್ಟು ಹೋಗುತ್ತೇನೆಂದು ಯೇಸು ಹೇಳಿದ ಮಾತುಗಳನ್ನು ಕೇಳಿ ಅವರ ಹೃದಯವು ದುಃಖದಿಂದ ತುಂಬಿಕೊಂಡಿತು ಎಂಬದನ್ನು ಅರ್ಥಮಾಡಿಕೊಳ್ಳಬಹುದಾಗಿದೆ. "ಆದರೆ ನಾನು ನಿಮಗೆ ನಿಜವನ್ನೇ ಹೇಳುತ್ತಿದ್ದೇನೆ: ನಿಮ್ಮ ಒಳಿತಿಗಾಗಿಯೇ ನಾನು ದೂರ ಹೋಗುತ್ತಿದ್ದೇನೆ." ಎಂದು ಯೇಸು ಹೇಳಿದನು. "ನಾನು ಹೋಗುವವರೆಗೂ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ; ಆದರೆ ನಾನು ಹೋದ ಮೇಲೆ ಆತನನ್ನು ನಿಮ್ಮ ಬಳಿಗೆ ಕಳುಹಿಸುವೆನು." ನಿಮ್ಮ ಮಧ್ಯದಲ್ಲಿರುವ ನನ್ನ ಈಗಿನ ಪ್ರಸನ್ನತೆಯನ್ನು ಸಹಾಯಕನಾಗಿರುವ2 ಪವಿತ್ರಾತ್ಮನು ತುಂಬವನೆಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದನು. ಯೇಸು ಕ್ರಿಸ್ತನು ಅವರೊಂದಿಗೆ ಇದ್ಧ ಹಾಗೆಯೇ ಪವಿತ್ರಾತ್ಮನು ಸಹ ಇರುವನು ಮತ್ತು ಮುಂದಿನ ಅವರಿಗೆ ಎದುರಾಗುವ ಹೊಸ ಸವಾಲುಗಳನ್ನು ಹಾಗೂ ಹಿಂಸೆಗಳನ್ನು ಎದುರಿಸಲು ಬಲವನ್ನು ಕೊಡುವನು.3

ನನ್ನ ಹಾಗೆಯೇ ಪವಿತ್ರಾತ್ಮನು ಸಹ ನಂಬಿಕೆಯಿಲ್ಲದ ಲೋಕದಲ್ಲಿ ಸೇವೆಯನ್ನು ಮಾಡುವನೆಂದು ಯೇಸು ಕ್ರಿಸ್ತನು ವಿವರಿಸಿದನು. ಯೇಸು ಕ್ರಿಸ್ತನು ಲೋಕದಲ್ಲಿ ತನ್ನ ಶಿಷ್ಯರನ್ನು ಕಾಪಾಡುವವನಾಗಿದ್ದನು, ಆದರೆ ಸತ್ಯವನ್ನು ತಿರಸ್ಕರಿಸಿದರ ಮೇಲೆ ಆತನ ಪ್ರಸನ್ನತೆ ಮತ್ತು ಸಾಕ್ಷಿಗೆ ದೋಷಾರೋಪವಾಗಿತ್ತು. ಆದಷ್ಟು ಬೇಗನೇ ಪವಿತ್ರಾತ್ಮನು ನಂಬಿಕೆಯಿಲ್ಲದಿರುವ ಲೋಕದಲ್ಲಿ ಯೇಸು ಕ್ರಿಸ್ತನ ಸ್ಥಾನವನ್ನು ಪಡೆದುಕೊಳ್ಳುವನು. ಪಾಪವನ್ನು ಆತನು ಬೈಲಿಗೆ ಎಳೆಯುವನು, ಕ್ರಿಸ್ತನಲ್ಲಿ ದೇವರ ಗುಣಮಟ್ಟದ ನೀತಿವಂತಿಕೆಯನ್ನು ಪ್ರಕಟಪಡಿಸುವನು, ದೇವರಿಂದ ಕಳುಹಿಸಲ್ಪಟ್ಟವನಿಗೆ ವಿರೋಧವಾಗಿ ನಿಂತಿಕೊಳ್ಳುವಂತೆ ಜನರನ್ನು ಪ್ರೇರೇಪಿಸಿದವನಾದ "ಈ ಲೋಕದ ಅಧಿಪತಿಯಾಗಿರುವ" ಸೈತಾನನಿಗೆ ತೀರ್ಪು ಕೊಡುವನು. ಯೇಸು ಕ್ರಿಸ್ತನು ಸೈತಾನನೊಂದಿಗೆ ನಡೆಸಿದ ಯುದ್ಧದಲ್ಲಿ ಜಯಿಸಿದ್ದಾನೆ ಎಂಬದನ್ನು ಲೋಕದಲ್ಲಿ ನೆಲೆಯಾಗುವ ಪವಿತ್ರಾತ್ಮನ ಪ್ರಸನ್ನತೆಯು ನಿರೂಪಿಸುತ್ತದೆ.

ಮುಂದುವರೆಯುವ ಸಂತತಿಯ ವಿಶ್ವಾಸಿಗಳಿಗೆ ದೇವರ ಮತ್ತು ಆತನ ಮಗನ ಕುರಿತಾದ ಸತ್ಯಗಳನ್ನು ಪ್ರಕಟಪಡಿಸುತ್ತಾ, ಯೇಸು ಕ್ರಿಸ್ತನ ಶಿಷ್ಯರ ಪರವಾಗಿ ಮಾತನಾಡಲು ಮತ್ತು ಬೋಧಿಸಲು ಪವಿತ್ರಾತ್ಮನು ಅವರಲ್ಲಿಯೇ ನೆಲೆಸುತ್ತಾನೆ. ಯೋಹಾನನ ಸುವಾರ್ತೆ ಮತ್ತು ಹೊಸ ಒಡಂಬಡಿಕೆಯ ಪುಸ್ತಕಗಳೆಲ್ಲವೂ, ಪವಿತ್ರಾತ್ಮನ ಪ್ರೇರಣೆಯಾಗಿದ್ದು (2 ಪೇತ್ರ 1:21) ಈ ಪ್ರವಾದನೆಯ ನೆರವೇರುವಿಕೆಗೆ ನಿದರ್ಶನವಾಗಿವೆ.

"ಇನ್ನು ಸ್ವಲ್ಪದರಲ್ಲಿ ನೀವು ನನ್ನನ್ನು ನೋಡುವದಿಲ್ಲ ಮತ್ತು ಇನ್ನು ಸ್ವಲ್ಪದರಲ್ಲಿಯೇ ನೀವು ನನ್ನನ್ನು ನೋಡುವಿರಿ" ಎಂದು ಯೇಸು ಕ್ರಿಸ್ತನು ಹೇಳಿದ ಮಾತುಗಳು ಅವರಿಗೆ ಈಗಲೂ ಅರ್ಥವಾಗಲಿಲ್ಲ. ಅವರ ಹತಾಶೆಯನ್ನು ತಿಳಿದುಕೊಂಡು, ಇನ್ನೂ ವಿವರವಾಗಿ ವಿವರಿಸುವದಕ್ಕಾಗಿ ಮಗುವಿನ ಜನನದ ಉದಾಹರಣೆಯನ್ನು ಯೇಸು ಕ್ರಿಸ್ತನು ಬಳಸಿಕೊಂಡನು. ಆತನ ಸದ್ಯದ ನಿರ್ಗಮನವು (ಮರಣ) ಅಪಾರವಾದ ನೋವನ್ನುಂಟು ಮಾಡುವದು, ಆದರೆ ಆತನ ಬರೋಣವು (ಪುನರುತ್ಥಾನ) ವಿವರಿಸಲಾಗದಷ್ಟು ಸಂತೋಷವನ್ನು ಅವರಲ್ಲಿ ಉಂಟುಮಾಡುವದು. ಇದಾದ ಮೇಲೆ ತಂದೆ–ಯಾದ ದೇವರು ತನ್ನ ಮಗನ ನಾಮದಲ್ಲಿ ಅವರು ಮಾಡುವ ಪ್ರಾರ್ಥನೆಗಳನ್ನು ಸ್ವಾಗತಿಸುವನು. "ಇಲ್ಲಿಯವರೆಗೂ ನೀವು ನನ್ನ ಹೆಸರಿನ ಮೇಲೆ ಏನನ್ನೂ ಬೇಡಿಕೊಂಡಿಲ್ಲ," ಎಂದು ಯೇಸು ಕ್ರಿಸ್ತನು ಹೇಳಿದನು. "ಬೇಡಿಕೊಳ್ಳಿರಿ ನಿಮಗೆ ದೊರೆಯುವದು ಮತ್ತು ನಿಮ್ಮ ಸಂತೋಷವು ಪರಿಪೂರ್ಣವಾಗುವದು."4

ಕೇವಲ ಇದು ಮಾತ್ರವೇ ಅಲ್ಲ, ಆದರೆ ಆದಷ್ಟು ಬೇಗ ಆತನ ಬೋಧನೆಯು ಸಹ ಸಾಂಕೇತಿಕವಾಗಿಯೂ ಮತ್ತು ಒಗಟಿನಂತೆಯೂ ಗೋಚರಿಸುವದು. ಆದರೆ ಅವರಿಗೆ ಸ್ಪಷ್ಟವಾಗಿ ಅರ್ಥವಾಗುವ ರೀತಿಯಲ್ಲಿ ಪವಿತ್ರಾತ್ಮನು ಕಲಿಸುವನು. ಮತ್ತು ತಾವು "ಯೇಸುವಿನ ನಾಮದಲ್ಲಿ ಪ್ರಾರ್ಥಿಸುವಾಗ."5 ದೇವರು ಅವುಗಳಿಗೆ ಉತ್ತರವನ್ನು ಕೊಡುವದು ಮಾತ್ರವಲ್ಲ ತಮಗೂ ತಂದೆಯಾಗಿರುವನೆಂಬ ಭರವಸೆ ಇರುವದು. ಅವರು ತನ್ನ ಮಗನನ್ನು ಪ್ರೀತಿಸಿ ಸ್ವೀಕರಿಸಿಕೊಂಡದ್ದರಿಂದ ತಂದೆಯಾದ ದೇವರು ಸಹ ಅವರನ್ನು ಪ್ರೀತಿಸಿ ಸ್ವೀಕರಿಸಿಕೊಳ್ಳುವನು.

ಮುಕ್ತಾಯದಲ್ಲಿ ಶಿಷ್ಯರಿಗೆ ಹೆಚ್ಚು ನೋವನ್ನು ಮತ್ತು ಗಾಬರಿಯನ್ನುಂಟು ಮಾಡುವ ಪ್ರಕಟನೆಯನ್ನು ಯೇಸು ಕ್ರಿಸ್ತನು ಮತ್ತೆ ಹೇಳಿದನು. "ನಾನು ತಂದೆಯ ಬಳಿಯಿಂದ ಲೋಕದೊಳಕ್ಕೆ ಬಂದೆನು." ಎಂದು ಆತನು ಹೇಳಿದನು. "ಈಗ ನಾನು ಲೋಕವನ್ನು ಬಿಟ್ಟು ಮತ್ತೆ ತಂದೆಯ ಬಳಿಗೆ ಹೋಗುತ್ತಿದ್ದೇನೆ."

ಗೊಂದಲಗಳಿರುವಾಗಲೂ, ಶಿಷ್ಯರು ತಮ್ಮ ನಂಬಿಕೆಯನ್ನು ಪ್ರಕಟಪಡಿಸಿದರು. ಯೇಸು ಕ್ರಿಸ್ತನು ದೇವರಿಂದ ಬಂದವನು ಮತ್ತು ಆತನಿಗೆ ಎಲ್ಲಾ ವಿಷಯಗಳೂ ಗೊತ್ತು ಎಂದು ಅವರು ನಂಬಿದರು. ಆದರೆ ಬರಲಿರುವ ಮುಂದಿನ ಕೆಲವು ತಾಸುಗಳಲ್ಲಿ, ಅವರಿಗೆ ಅರ್ಥವಾಗದಂತೆ ಅವರು ಚದುರಿಸಲ್ಪಡುವರು ಮತ್ತು ಆತನನ್ನು ಅಲ್ಲಗಳೆಯುವಂತೆ ಅವರನ್ನು ಒತ್ತಾಯಪಡಿಸಲಾಗುವದೆಂದು ಯೇಸುವಿಗೆ ಚೆನ್ನಾಗಿ ಗೊತ್ತಿತ್ತು. ಅವರಿಗೆ ಎದುರಾಗುವ ಕಷ್ಟಗಳ ಮಧ್ಯದಲ್ಲಿಯೂ ಸಹ, ಯೇಸು ಕ್ರಿಸ್ತನು ತನ್ನ ನಂಬಿಕೆಯನ್ನು ಪ್ರೋತ್ಸಾಹಪಡಿಸಿದನು ಮತ್ತು ತನ್ನಲ್ಲಿ ಸಮಾಧಾನವನ್ನು ಕಂಡುಕೊಳ್ಳುವಂತೆ ತನ್ನ ಹಿಂಬಾಲಿಕರನ್ನು ಬಹಳವಾಗಿ ಪ್ರೀತಿಸಿದನು. "ಈ ಲೋಕದಲ್ಲಿ ನಿಮಗೆ ಹಿಂಸೆಗಳುಂಟು" ಎಂದು ಆತನು ಪ್ರಕಟಿಸಿದನು. "ಆದರೆ ಧೈರ್ಯವಾಗಿರಿ! ನಾನು ಲೋಕವನ್ನು ಜಯಿಸಿದ್ದೇನೆ."

## ಯೋಹಾನ 16:1–15 ಓದಿರಿ.

1.ಎ. ಮುಂದೆ ಬರಲಿರುವ ಹಿಂಸೆಗಳ ಬಗ್ಗೆ ಯೇಸು ಕ್ರಿಸ್ತನು ಯಾಕೆ ಶಿಷ್ಯರಿಗೆ ಎಚ್ಚರಿಕೆಯನ್ನು ಕೊಟ್ಟನು (16:1,4ಎ)?

ಬಿ. ಈ ಹಿಂಸೆಗಳು ಸಂಭವಿಸುವದು ಯಾಕೆ (16:3)?

2. ಯೇಸು ಕ್ರಿಸ್ತನು ತನ್ನ ನಿರ್ಗಮನ ವಿಷಯದಲ್ಲಿ ಶಿಷ್ಯರ ಮನಸ್ಸಿನ ಯಾವ ಭಾವನೆಗಳನ್ನು ತಿಳಿದುಕೊಂಡನು (16:5–6)?

3. ನನ್ನ ನಿರ್ಗಮನವು ನಿಮಗೆ ಲಾಭದಾಯಕವಾಗಿರುವದು ಎಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಯಾಕೆ ಹೇಳಿದನು (16:7)?

**ಗಮನಿಸಿರಿ:** ಸಹಾಯಕನನ್ನು: "ಬಲಪಡಿಸುವಾತನು, ಸಲಹೆಗಾರನು, ನಮ್ಮ ಪರವಾಗಿ ವಾದಿಸುವವನು, ಮಧ್ಯಸ್ಥಿಕನು, ನಮಗಾಗಿ ನುಡಿಯುವವನು ಎಂದು ಭಾಷಾಂತರ ಮಾಡಬಹುದು." The Amplified Bible.

4. ಯೇಸು ಕ್ರಿಸ್ತನ ಸೇವೆಯನ್ನು ಮುಂದುವರೆಸುವ ಪವಿತ್ರಾತ್ಮನು ನಂಬಿಕೆಯಿಲ್ಲದಿರುವ ಲೋಕದಲ್ಲಿ ಏನು ಮಾಡುವನು (16:8)?

**Reference**: ನೋಟ್ 6, ಮೂರು ಪ್ರಾಮುಖ್ಯವಾದ ಕಾರ್ಯಗಳು, ಪುಟ 168.

5.ಎ. ಯೇಸುವಿನ ಶಿಷ್ಯರಿಗೆ ಪವಿತ್ರಾತ್ಮನು ಏನು ಮಾಡುವನು (16:12–13)?

ಬಿ. ಪವಿತ್ರಾತ್ಮನ ಚಟುವಟಿಕೆಗಳು ಯಾವ ಹಂತದವರೆಗು ಮಾರ್ಗದರ್ಶಕವಾಗಿರುವದು (16:14–15)?

**ಗಮನಿಸಿರಿ:** ಮುಂದೆ ಬರುವದು ಏನು (16:13) "ಇಡೀ ಕ್ರೈಸ್ತೀಯ ಮಾರ್ಗ ಅಥವಾ (ಅಪೊಸ್ತಲರ ಬರವಣಿಗೆಯಲ್ಲಿ ಪ್ರದರ್ಶಿಸಲಾಗಿರುವ ಮತ್ತು ಕಾಪಾಡಲ್ಪಟ್ಟಿರುವ ಹಾಗೆ) ಭವಿಷ್ಯದಲ್ಲಿ ಯೇಸು ಕ್ರಿಸ್ತನು ಹೇಳಿರುವ ಸಮಯದ ಪ್ರಕಟನೆ." *The NIV Study Bible*, page 1628.

## ಯೋಹಾನ 16:16–33 ಓದಿರಿ.

6.ಎ. ಯೇಸು ಕ್ರಿಸ್ತನು ತಿಳಿಸಿದ ವಿಷಯಗಳಿಗೆ ಶಿಷ್ಯರು ಹೇಗೆ ಪ್ರತಿಕ್ರಿಯಿಸಿದರು (16:16–18)?

ಬಿ. ಅವರ ಗೊಂದಲಗಳಿಗೆ ಪ್ರತಿಕ್ರಿಯಿಸುತ್ತಾ ಯೇಸು ಕ್ರಿಸ್ತನು ಮಾಡಿದ ವಾಗ್ದಾನ ಏನು (16:19–22)?

7. ತನ್ನ ಶಿಷ್ಯರಲ್ಲಿ ಪರಿಪೂರ್ಣ ಸಂತೋಷವನ್ನು ತರುವಂತೆ ಯೇಸು ಕ್ರಿಸ್ತನು ಮಾಡಿದ ವಾಗ್ದಾನ ಏನು (16:23–27)?

**Reference**: ನೋಟ್ 4, ಬೇಡಿಕೊಳ್ಳಿರಿ ನಿಮಗೆ ದೊರೆಯುವದು, ಪುಟ 168.

8. ಯೇಸು ಕ್ರಿಸ್ತನು ತನ್ನ ಬೀಳ್ಕೊಡುಗೆಯ ಸಂಭಾಷಣೆಯನ್ನು ಕೊನೆಗೊಳಿಸುತ್ತಿದ್ದಂತೆ ನೀಡಿದ ಸ್ಪಷ್ಟವಾದ ಹೇಳಿಕೆಗಳೇನು (16:28)?

9. ದೇವರ ಯೋಜನೆಯನ್ನು ಶಿಷ್ಯರು ಅರ್ಥಮಾಡಿಕೊಳ್ಳಲಿಲ್ಲ, ಆದರೆ ಯೇಸು ಕ್ರಿಸ್ತನಿಗೆ ಎಲ್ಲಾ ವಿಷಯಗಳೂ ಗೊತ್ತು ಎಂಬದನ್ನು ನಂಬಿದರು. ಮುಂದೆ ಬರಲಿಕ್ಕಿದ್ದ ತಾಸುಗಳ ಬಗ್ಗೆ ಯೇಸು ಕ್ರಿಸ್ತನು ಅಂತಿಮವಾಗಿ ತಿಳಿಸಿದ ವಿಷಯಗಳೇನು (16:32)?

10.ಎ. ಯೇಸು ಕ್ರಿಸ್ತನು ತಾನು ಸಾಯುವದಕ್ಕಿದ್ದ ಹಿಂದಿನ ರಾತ್ರಿ ತಾನು ಮಾಡಿದವುಗಳನ್ನು ಶಿಷ್ಯರಿಗೆ ಯಾಕೆ ಹೇಳಿದನು (16:33ಎ)?

ಬಿ. ತಾನು ಬಹಳವಾಗಿ ಪ್ರೀತಿಸುತ್ತಿದ್ದ ತನ್ನ ಹಿಂಬಾಲಕರಿಗೆ ಆತನು ಕೊಟ್ಟ ಅಂತಿಮವಾದ ವಾಗ್ದಾನ ಏನು (16:33ಬಿ)?

# ಪ್ರಾರ್ಥನೆಯ ನೆರವೇರುವಿಕೆ

ಯೇಸು ಕ್ರಿಸ್ತನು ತಾನು ಹೋದ ನಂತರ ಶಿಷ್ಯರಿಗೆ ಮುಂದೆ ಎದುರಾಗುವ ಸವಾಲುಗಳಿಗಾಗಿ ಅವರನ್ನು ಸಿದ್ಧಗೊಳಿಸುತ್ತಿದ್ದ, ಅವರಿಗೆ ನನ್ನ ಬಲವನ್ನು ಪಡೆದುಕೊಳ್ಳದೆ ನನಗಾಗಿ ಜೀವಿಸಲು ನಿಮಗೆ ಅಸಾಧ್ಯ ಎಂದು ಹೇಳಿದನು. ತಮ್ಮ ಜೀವಿತಗಳ ನಿಯಂತ್ರಣವನ್ನು ವಹಿಸಿಕೊಳ್ಳುವಂತೆ ಪವಿತ್ರಾತ್ಮನಿಗೆ ಅವರು ಅನುಮತಿಯನ್ನು ನೀಡುವಾಗ, ದೇವರ ಪ್ರಸನ್ನತೆಯನ್ನು ಅನುಭವಿಸುವರು ಮತ್ತು ಅಮೋಘವಾದ ಸೂಚಕಕಾರ್ಯಗಳಿಗೆ ಸಾಕ್ಷಿಯಾಗಿರುವರು. ಇದಕ್ಕನುಸಾರವಾಗಿ, ಪರಿಣಾಮಕಾರಿಯಾದ ಪ್ರಾರ್ಥನಾ ಜೀವಿತವು ಅವರ "ಸಂತೋಷವನ್ನು ಪರಿಪೂರ್ಣಗೊಳಿಸುವದು" ಎಂದು ಯೇಸು ಮುಖ್ಯವಾಗಿ ಹೇಳಿದನು (16:24). ದೇವಕುಮಾರನಲ್ಲಿ ನಂಬಿಕೆಯನ್ನಿಟ್ಟು ಆತನನ್ನು ಸ್ವಾಗತಿಸಿಕೊಳ್ಳುವವನು ಪ್ರೀತಿಯುಳ್ಳ ತಂದೆಯಾದ ದೇವರನ್ನು ನೇರವಾಗಿ ಸಂಪರ್ಕಿಸಬಹುದು ಮತ್ತು ಪ್ರಾಮಾಣಿಕರಾಗಿ ಹಾಗೂ ಯಾವುದೇ ಭಯವಿಲ್ಲದೇ ಮಾತನಾಡಬಹುದು.

ಯೇಸು ಕ್ರಿಸ್ತನು ತಿಳಿಸುತ್ತಿರುವ ಪ್ರಾರ್ಥನೆಯ ಸಂತೋಷವು ಕೇವಲ ನಮ್ಮ ಮನವಿಗಳಿಗೆ ಉತ್ತರವು ದೊರೆಯುವಾಗ ಸಿಗುವಂಥದ್ದು ಮಾತ್ರವಲ್ಲ ಬದಲಾಗಿ ನಮ್ಮ ಪ್ರೀತಿಸುವ ಪರಲೋಕದ ತಂದೆಯಾದ ದೇವರೊಂದಿಗೆ ನೇರವಾದ ಸಂಪರ್ಕವನ್ನು ಹೊಂದುವರಿಂದ ಬರುತ್ತದೆ. ಆತನೊಂದಿಗಿನ ಸಂಪರ್ಕವು ಆತನನ್ನು ಆರಾಧಿಸಬೇಕೆಂಬ ನಮ್ಮ ಹೃದಯದ ಬಯಕೆಯನ್ನು ನೆರವೇರಿಸುವುದರೊಂದಿಗೆ "ಸಹೋದರನಿಗಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನ" ಅವಶ್ಯಕತೆಯನ್ನು ಪೂರ್ತಿಗೊಳಿಸುತ್ತದೆ (ಜ್ಞಾನೋಕ್ತಿ 18:24). ನಮ್ಮ ಪ್ರತಿಯೊಂದು ಮನವಿಗಳನ್ನು ಆಲಿಸುವ ಈತನು ಸರ್ವಜ್ಞಾನಿ, ಸರ್ವಶಕ್ತನು ಮತ್ತು ಪರಿಪೂರ್ಣವಾಗಿ ಪ್ರೀತಿಸುವವನಾಗಿದ್ದಾನೆ. ಆತನು ನಮ್ಮನ್ನು ತಿಳಿದಿದ್ದಾನೆ ಮತ್ತು ನಮ್ಮನ್ನು ಪರಿಪೂರ್ಣವಾಗಿ ಅಂಗೀಕರಿಸಿಕೊಳ್ಳುತ್ತಾನೆ ಹಾಗೂ ನಾವು ಎಲ್ಲೇ ಇದ್ದರೂ, ಯಾವುದೇ ಸಮಯದಲ್ಲಾದರೂ ಮತ್ತು ಯಾವುದೇ ಪರಿಸ್ಥಿತಿಯಲ್ಲಿದ್ದರೂ ಆತನು ನಮಗೆ ಸಿಗುತ್ತಾನೆ. ಆತನ ಪ್ರಸನ್ನತೆಯಲ್ಲಿ ನಾವು ಆತನ ಪ್ರೀತಿಯನ್ನು ಕಾಣುತ್ತೇವೆ ಮತ್ತು ಆತನ ಸಾರೂಪ್ಯಕ್ಕೆ ಮಾರ್ಪಡುತ್ತೇವೆ (2 ಕೊರಿಂಥ 3:18). ಪ್ರಾರ್ಥನೆಯ ಈ ಹಂತಗಳಲ್ಲಿ ಮಹದಾದ ನಿಕ್ಷೇಪಗಳು ದೊರೆಯುತ್ತವೆ ಮತ್ತು ನೆರವೇರುವಿಕೆಯಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತದೆ.

ಪ್ರಾರ್ಥನೆಯು ಮಾನವನ ಸ್ವಾಭಾವಿಕವಾದ ಸ್ವಭಾವವಾಗಿದೆ ಮತ್ತು ಪರಿಣಾಮಕಾರಿಯಾದ ಪ್ರಾರ್ಥನಾ ಜೀವಿತವು ಜೀವಿತದಲ್ಲಿ ನೆರವೇರುವಿಕೆಗೆ ಬಹಳ ಪ್ರಾಮುಖ್ಯವಾಗಿದೆ. ಪ್ರಾರ್ಥನೆಯ ಸಂತೋಷವನ್ನು ಹೇಗೆ ಅನುಭವಿಸಬೇಕೆಂದು ನಮಗೆ ಸೂಚನೆಗಳನ್ನು ಕೊಡುವ ಸತ್ಯವೇದದನುಸಾರವಾದ ತತ್ವಗಳನ್ನು ಈ ಪಾಠದಲ್ಲಿ ನಾವು ನೋಡಿಕೊಳ್ಳೋಣ.

1.ಎ. ನಾವು ಆತನನ್ನು ನಮ್ಮ ಜೀವಿತದಲ್ಲಿ ಸ್ವಾಗತಿಸಿಕೊಳ್ಳಬೇಕು (ಯೋಹಾನ 16:26–27) ಮತ್ತು ದೇವರು ನಮ್ಮ ಪ್ರಾರ್ಥನೆಯನ್ನು ಕೇಳಲು ನನ್ನ ನಾಮದಲ್ಲಿ ಪ್ರಾರ್ಥಿಸಿರಿ ಎಂದು ಯೇಸು ಕ್ರಿಸ್ತನು ಹೇಳಿದನು. ಹೀಗೆ ಯಾಕೆಂದರೆ ನಾವು ದೇವರ ಪರಿಶುದ್ಧವಾದ ಪ್ರಸನ್ನತೆಯಲ್ಲಿ ಪ್ರವೇಶಿಸಬೇಕು, ನಾವು ಪರಿಶುದ್ಧರೆಂದು ದೇವರೇ ಪ್ರಕಟಪಡಿಸಬೇಕು. ನಾವು ಪರಿಶುದ್ಧರು (ನೀತಿವಂತರು,

ಪಾಪದಿಂದ ಶುದ್ಧರಾಗಿರುವವರು) ಎಂದು ದೇವರಿಂದ ಹೇಳಿಸಿಕೊಳ್ಳುವದು ಹೇಗೆ?

ರೋಮಾ 3:22–25ಎ

2 ಕೊರಿಂಥ 5:21

ಬಿ. ಇದರ ಬೆಳಕಿನಲ್ಲಿ, ದೇವರೊಂದಿಗೆ ಸಂಪರ್ಕವನ್ನು ಹೊಂದಿಕೊಳ್ಳುವದರ ಬಗ್ಗೆ ಯೇಸು ಕ್ರಿಸ್ತನು ಏನನ್ನು ಪ್ರಕಟಿಸಿದನು?

ಯೋಹಾನ 14:6

**ಗಮನಿಸಿರಿ:** ಯೇಸು ಕ್ರಿಸ್ತನ ಮೂಲಕ ಕ್ಷಮಾಪಣೆಯು ಕೆಲವರಿಗೆ ಮಾತ್ರವೇ ಅನ್ವಯಿಸುವಂಥದ್ದಲ್ಲ ಬದಲಾಗಿ ಎಲ್ಲಾ ರಾಷ್ಟಗಳಲ್ಲಿರುವ ಎಲ್ಲಾ ಜನರಿಗೂ ಅನ್ವಯಿಸುತ್ತದೆ (ಮತ್ತಾಯ 28:19–20; 1 ತಿಮೊಥೆ 2:4–6ಎ).

2. ಮಗನ ಹೆಸರಿನಲ್ಲಿ ತಂದೆಗೆ ಪ್ರಾರ್ಥಿಸಿರಿ ಎಂದು ಯೇಸು ಕ್ರಿಸ್ತನು ಹೇಳಿದನು. ಪ್ರಾರ್ಥಿಸಲು ನಮಗೆ ಸಹಾಯ ಮಾಡುವವರು ಯಾರು?

ರೋಮಾ 8:26

ಯೂದ 20

**ಗಮನಿಸಿರಿ:** ಪವಿತ್ರಾತ್ಮನಲ್ಲಿ ಎಂದರೆ "ಪವಿತ್ರಾತ್ಮನ ಪ್ರೇರೇಪಣೆಗಳು ಮತ್ತು ಪವಿತ್ರಾತ್ಮನ ಬಲದ ಮೂಲಕ." The NIV Bible, page 1921.

3. ಪ್ರಾರ್ಥನೆಯ ವಿವಿಧ ರೂಪಗಳನ್ನು ಅರ್ಥಮಾಡಿಕೊಳ್ಳಲು ಸರಳವಾದ ವಿವರಣೆಯು ಅನೇಕರಿಗೆ ಸಹಾಯವನ್ನು ಮಾಡಿದೆ. ಅದೇನೆಂದರೆ:

***A*** doration ಆರಾಧನೆ
***C*** onfession ಅರಿಕೆ
***T*** hanksgiving ಕೃತಜ್ಞತಾರ್ಪಣೆ
***S*** uplication ಬೇಡಿಕೊಳ್ಳುವಿಕೆ

## ***A*** doration, or Praise - ಆರಾಧನೆ ಅಥವಾ ಸ್ತುತಿ

ಸ್ತುತಿಯೊಡನೆ ನಾವು ಪ್ರಾರ್ಥನೆಯನ್ನು ಪ್ರಾರಂಭಿಸುವಾಗ ದೇವರಿಗೆ ಗೌರವವನ್ನು ಸಲ್ಲಿಸಲಾಗುತ್ತದೆ. ದೇವರಿಗೆ ನಾವು ಸ್ತುತಿಯನ್ನು ಅರ್ಪಿಸಬೇಕಾದ ವಿಷಯಗಳು ಯಾವುವು?

ಕೀರ್ತನೆ 145:3–7

ಕೀರ್ತನೆ 145:8–9,13–19

## ***C*** onfession of Sin - ಪಾಪದ ಅರಿಕೆ

ಎ. ಪ್ರಾರ್ಥನೆಯ ಪ್ರಾಮುಖ್ಯವಾದ ಅಂಶವಾಗಿರುವ ಅರಿಕೆಯ ಬಗ್ಗೆ ಕೆಳಗಿನ ವಚನಗಳು ಏನನ್ನು ಪ್ರಕಟಿಸುತ್ತವೆ?

ಕೀರ್ತನೆ 66:18

1 ಯೋಹಾನ 1:9

ಬಿ. ನಾವು ದೇವರಲ್ಲಿ ಪಾಪದ ಕ್ಷಮಾಪಣೆಯನ್ನು ಕೇಳಿಕೊಳ್ಳುವಾಗ, ಏನು ಮಾಡಬೇಕೆಂದು ಯೇಸು ಕ್ರಿಸ್ತನು ಸೂಚಿಸಿದ್ದಾನೆ? ಮಾರ್ಕ 11:25

***T*** hanksgiving - ಕೃತಜ್ಞತಾರ್ಪಣೆ

ಈ ವಚನಗಳಲ್ಲಿ ದೇವರಿಗೆ ಕೃತಜ್ಞತೆಯಾಗಿರುವ ವಿಷಯದಲ್ಲಿ ಯಾವ ಸೂಚನೆಗಳನ್ನು ಕೊಡಲಾಗಿದೆ?

ಕೀರ್ತನೆ 100:4

ಎಫೆಸ 5:20

***S*** uplication, or prayer requests - ಬೇಡಿಕೊಳ್ಳುವಿಕೆ

ಎ. ನಮಗಾಗಿ ನಾವು ಏನೆಲ್ಲಾ ವಿಷಯಗಳಿಗೆ ಬೇಡಿಕೊಳ್ಳಬೇಕು?

ಫಿಲಿಪ್ಪಿ 4:6

ಮತ್ತಾಯ 6:11,13

ಯಾಕೋಬ 1:5

ಕೀರ್ತನೆ 51:10

ಬಿ. ಇತರರಿಗಾಗಿ ನಾವು ಏನೆಲ್ಲಾ ವಿಷಯದಲ್ಲಿ ಬೇಡಿಕೊಳ್ಳಬೇಕು?

ಎಫೆಸ 1:15–19ಎ

ಎಫೆಸ 3:16–19

ಯಾಕೋಬ 5:14–16

ಬಿ. ಕಡ್ಡಾಯವಿಲ್ಲ: ನಮ್ಮ ನಿರ್ದಿಷ್ಟವಾದ ಮನವಿ ಅಥವಾ ಬಯಕೆಗಳಿಗೆ ದೇವರು ಉತ್ತರಗಳನ್ನು ಕೊಡದಿರುವಾಗ ನಾನು ಏನನ್ನು ನೆನಪಿಸಿಕೊಳ್ಳಬೇಕು?

ರೋಮಾ 8:32

ಕೀರ್ತನೆ 25:10ಎ

ಯೆಶಾಯ 55:8–9

ಯೋಬ 42:2–3

4. ಯೇಸು ಕ್ರಿಸ್ತನು ಮಾತನಾಡಿದ ವಿಷಯಗಳ ನೆರವೇರುವಿಕೆಯನ್ನು ಅನುಭವಿಸಲು ಪ್ರಾರ್ಥನೆಯು ಬಹಳ ಪ್ರಾಮುಖ್ಯ. ಪ್ರಾರ್ಥನೆಯಲ್ಲಿ ನಾವು ಯಾಕೆ ಆತನನ್ನು ಸಮೀಪಿಸಬೇಕು?

1 ಪೇತ್ರ 5:6–7

ಫಿಲಿಪ್ಪಿ 4:7

ಯೆರೆಮೀಯ 33:3

## ಸಾರಾಂಶ

5. ಪ್ರಾರ್ಥನೆಯಲ್ಲಿ ಇರಬೇಕಾದ ವಿಷಯಗಳು ಯಾವುವು? ಪ್ರಾರ್ಥನೆಯ ಈ ವಿಷಯಗಳು ನೆರವೇರುವಿಕೆಗೆ ಯಾಕೆ ಪ್ರಾಮುಖ್ಯವಾಗಿವೆ?

6. ಈ ಪಾಠದಿಂದ ಪ್ರಾರ್ಥನೆಯ ಕುರಿತಾದ ಯಾವ ತತ್ವಗಳು ನಿಮಗೆ ಹೆಚ್ಚು ಉಪಯುಕ್ತವಾಗಿವೆ?

7. ಪ್ರತಿದಿನ ಸತ್ಯವೇದವನ್ನು ಓದಲು ಮತ್ತು ಪ್ರಾರ್ಥನೆ ಮಾಡಲು ಒಂದು ನಿರ್ದಿಷ್ಟವಾದ ಸಮಯವು ನಿಮಗಿದೆಯೇ? ದೇವರು ಕೊಡುವ ಉತ್ತರಗಳನ್ನು ಸ್ಪಷ್ಟವಾಗಿ ಕಾಣಲು ಪ್ರಾರ್ಥನಾ ಮನವಿಗಳ ಪಟ್ಟಿ ನಿಮಗಿದೆಯೇ? ಪ್ರಾರ್ಥನೆಯ ನೆರವೇರುವಿಕೆಯನ್ನು ಅನುಭವಿಸಲು ಈ ಸ್ವಭಾವಗಳನ್ನು ಒಂದುವೇಳೆ ನೀವು ಪ್ರಾರಂಭಿಸಲು ಬಯಸುವವರಾಗಿರಬಹುದು ಅಥವಾ ನೂತನಪಡಿಸಿಕೊಳ್ಳು ವವರಾಗಿರಬಹುದು.

> ಒಬ್ಬನು ತನ್ನ ಹೃದಯದ ಭಾರ, ನೋವುಗಳನ್ನೆಲ್ಲಾ ಪ್ರೀತಿಯ ಸ್ನೇಹಿತನೊಂದಿಗೆ ಹೇಳಿಕೊಳ್ಳುವ ಹಾಗೆ ನಿಮ್ಮ ಹೃದಯದಲ್ಲಿರುವದನ್ನೆಲ್ಲಾ ದೇವರಿಗೆ ಹೇಳಿರಿ. ನಿಮ್ಮ ತೊಂದರೆಗಳನ್ನು ಆತನಿಗೆ ಹೇಳಿರಿ, ಆತನು ನಿಮ್ಮನ್ನು ಬಲಪಡಿಸುವನು; ನಿಮ್ಮ ಸಂತೋಷಗಳನ್ನೆಲ್ಲಾ ಆತನಿಗೆ ಹೇಳಿರಿ, ಅವುಗಳಿಂದ ಹಾನಿಯಾಗದಂತೆ ಆತನು ನಿಮ್ಮನ್ನು ಕಾಪಾಡುವನು; ನಿಮ್ಮ ಬಯಕೆಗಳನ್ನು ಆತನಿಗೆ ಹೇಳಿರಿ, ಆತನು ಅವುಗಳನ್ನು ಶುದ್ಧೀಕರಿಸುವನು; ನಿಮಗಿಷ್ಟವಿಲ್ಲದವುಗಳನ್ನು ಆತನಿಗೆ ಹೇಳಿರಿ, ಅವುಗಳನ್ನು ಜಯಿಸಲು ಆತನು ನಿಮಗೆ ಸಹಾಯ ಮಾಡುವನು; ನಿಮಗೆದುರಾಗುವ ಶೋಧನೆಗಳ ಬಗ್ಗೆ ಮಾತನಾಡಿರಿ, ಆತನು ಅವುಗಳಿಂದ ನಿಮ್ಮನ್ನು ಬಿಡಿಸುವನು; ನಿಮ್ಮ ಹೃದಯದ ಗಾಯಗಳನ್ನು ಆತನಿಗೆ ತೋರಿಸಿರಿ, ಆತನು ಅವುಗಳನ್ನು ಗುಣಪಡಿಸುವನು; ಒಳ್ಳೇತನ ವಿಷಯದಲ್ಲಿ ನಿಮ್ಮಲಿರುವ ಭಿನ್ನಾಭಿಪ್ರಾಯಗಳು, ದುರಾತ್ಮನ ವಿಷಯದಲ್ಲಿರುವ ಆಸಕ್ತಿ, ನಿಮ್ಮ ಅಸ್ಥಿರತೆ ಎಲ್ಲವನ್ನೂ ಆತನ ಮುಂದೆ ಒಪ್ಪಿಕೊಳ್ಳಿರಿ. ಸ್ವ-ಪ್ರೀತಿಯು ಇತರರ ವಿಷಯದಲ್ಲಿ ಕಾಳಜಿವಹಿಸದಂತೆ ಮಾಡುವದು, ಯಥಾರ್ಥರಲ್ಲದ ಹಾಗೆ ವರ್ತಿಸಲು ವ್ಯರ್ಥವಾದ ಕಾರ್ಯಗಳಿಂದಾಗುವ ಶೋಧನೆ, ಗರ್ವವು ನಿಮ್ಮನ್ನು ಮತ್ತು ಇತರರನ್ನು ಗಾಯಪಡಿಸುವದನ್ನು ಅಂತೂ ಎಲ್ಲವನ್ನೂ ಆತನಿಗೆ ಹೇಳಿರಿ.
>
> ನೀವು ನಿಮ್ಮ ಎಲ್ಲಾ ಬಲಹೀನತೆಗಳನ್ನು, ಅಗತ್ಯತೆಗಳನ್ನು, ಕಷ್ಟಗಳನ್ನು ಹೇಳಿಕೊಳ್ಳುವದಾದರೆ ನಿಮ್ಮಲ್ಲಿ ಯಾವುದೇ ಕೊರತೆಗಳಿರುವದಿಲ್ಲ. ಪ್ರಾರ್ಥನೆಯು ಎಂದಿಗೂ ನಿಮ್ಮಲ್ಲಿ ಕುಂದಿಹೋಗುವದಿಲ್ಲ. ಇದು ನಿಮ್ಮಲ್ಲಿ ಸತತವಾಗಿ ನೂತನಗೊಳ್ಳುತ್ತಾ ಹೋಗುತ್ತದೆ. ಪರಸ್ಪರ ಒಬ್ಬರಿಗೊಬ್ಬರು ರಹಸ್ಯಗಳನ್ನು ಇಟ್ಟುಕೊಳ್ಳದ ಅನಾವಶ್ಯಕವಾದ ಯಾವ ವಿಷಯಗಳ ಬಗ್ಗೆಯೂ ಚರ್ಚಿಸುವದಿಲ್ಲ. ಅವರು ಮನಸ್ಸಿನೊಳಗೆ ಯಾವುದನ್ನೂ ಇಟ್ಟುಕೊಂಡಿರುವದಿಲ್ಲ, ಯಾಕೆಂದರೆ ಇಟ್ಟುಕೊಳ್ಳಲು ಏನೂ ಇರುವದಿಲ್ಲ; ಹಾಗೆಯೇ ಯಾವುದನ್ನು ಹೇಳಲು ಸಹ ಅವರು ಮುಂದಾಗುವದಿಲ್ಲ. ಅವರು ತಮ್ಮ ಹೃದಯದ ಹೇರಳತನದಿಂದ ಮಾತನಾಡುತ್ತಾರೆ, ತಮಗೆ ಅನ್ನಿಸುವದನ್ನು ಮಾತ್ರವೇ ಅವರು ಮಾತನಾಡುತ್ತಾರೆ. ದೇವರೊಂದಿಗೆ ಪರಿಚಿತವಾಗಿರುವ ಯಾವುದೇ ಮುಂಗಡ ಕಾಯ್ದಿರಿಸುವಿಕೆಯಿಲ್ಲದೆ ಮಾತನಾಡುವವರು ಧನ್ಯರಾಗಿದ್ದಾರೆ.
>
> 17ನೇ ಶತಮಾನದ ಆರ್ಚ್‌ಬಿಷಪ್ ಫ್ರಾನ್ಕೋಸಿಸ್ ಡೇ ಲಾ ಮೋಥೆ ಫೆನಲೋನ್

# ಪಾಠ 19 ನೋಟ್ಸ್

1 ಸಭಾಮಂದಿರಗಳಿಂದ ಹೊರಗೆ ಹಾಕುವರು. "ಸುವಾರ್ತೆಯು ಬರೆಯಲ್ಪಟ್ಟ ಸಮಯದಲ್ಲಿ ಸಭಾಮಂದಿರದಲ್ಲಿ ನಡೆಯುತ್ತಿದ್ದ ಪ್ರಾರ್ಥನೆಗಳಲ್ಲಿ ನಜರೇತಿನವರ [ಕ್ರೈಸ್ತರ] ಮೇಲೆ ಬಂದ ಶಾಪ ಎಂದು ಹೇಳಲಾಗುತ್ತಿತ್ತು, ಆಕಾರಣದಿಂದ ಅವರನ್ನು ಆರಾಧನೆಯಲ್ಲಿ ಸೇರಿಕೊಳ್ಳಲಾಗುತ್ತಿರಲಿಲ್ಲ ಆದ್ದರಿಂದ ಈ ಪದವು ಪ್ರಾಮುಖ್ಯವಾದದ್ದಾಗಿತ್ತು." F.F.Bruce, *The Gospel of John*, page 317.

2 **Reference**: ಸಲಹೆಗಾರನು, Gr. Parakletos, ಪುಟ 142, ಪ್ರಶ್ನೆ 6 ನೋಟ್ ನೋಡಿರಿ.

3 ನಾನು ಆತನನ್ನು [ಪವಿತ್ರಾತ್ಮನನ್ನು] ನಿಮ್ಮ ಬಳಿಗೆ ಕಳುಹಿಸುವೆನು (16:7). ಪಂಚಾಶತ್ತಮ ದಿವಸದಂದು ಈ ಪ್ರವಾದನೆಯು ನೆರವೇರಿತು (cf. ಅ.ಕೃ 2:1ಎಫ್).

4 ಕೇಳಿಕೊಳ್ಳಿರಿ ನಿಮಗೆ ದೊರೆಯುವದು. ಯೋಹಾನ 16:23–27ರಲ್ಲಿ, "ವಿಶ್ವಾಸಿ ಮತ್ತು ದೇವರು ನಡುವೆಯಿರುವ ಹೊಸ ಸಂಬಂಧದ ಬಗ್ಗೆ ಯೇಸು ಕ್ರಿಸ್ತನು ಮಾತನಾಡುತ್ತಿದ್ದಾನೆ. ಇದಕ್ಕೂ ಮೊದಲು ಜನರು ಯಾಜಕರ ಮೂಲಕವಾಗಿ ದೇವರನ್ನು ಸಂಧಿಸುತ್ತಿದ್ದರು. ಯೇಸುವಿನ ಪುನರುತ್ಥಾನವಾದ ಮೇಲೆ ಯಾವ ವಿಶ್ವಾಸಿ ಬೇಕಾದರು ದೇವರನ್ನು ನೇರವಾಗಿ ಸಂಪರ್ಕಿಸಬಹುದು. ಒಂದು ಹೊಸ ದಿವಸವು ಉದಯಿಸಿದೆ ಮತ್ತು ಈಗ ವಿಶ್ವಾಸಿಗಳೆಲ್ಲರೂ ದೇವರೊಂದಿಗೆ ನೇರವಾಗಿ ಮತ್ತು ವೈಯಕ್ತಿಕವಾಗಿ ಮಾತನಾಡುವ ಯಾಜಕರಾಗಿದ್ದಾರೆ (ಇಬ್ರಿಯ 10:19–23 ನೋಡಿರಿ). ನಾವು ದೇವರನ್ನು ಸಂಪರ್ಕಿಸುತ್ತೇವೆ ದೇವರು ನಮ್ಮಲ್ಲಿರುವ ಯೋಗ್ಯತೆಯಿಂದಲ್ಲ ಬದಲಾಗಿ ನಮ್ಮ ಮಹಾಯಾಕಜನಾಗಿರುವ ಯೇಸು ಕ್ರಿಸ್ತನು ನಮ್ಮನ್ನು ದೇವರಿಗೆ ಸ್ವೀಕೃತರನ್ನಾಗಿ ಮಾಡಿದ್ದಾನೆ." *Life Application Bible,NIV*, page 1915.

5 **Reference**: ಯೇಸುವಿನ ನಾಮದಲ್ಲಿ. ನೋಟ್ 4, ನೀವು ನನ್ನ ಹೆಸರಿನಲ್ಲಿ ಏನೇ ಬೇಡಿ–ಕೊಂಡರು, ಪುಟ 148 (ಪಾಠ 14).

6 "ಪವಿತ್ರಾತ್ಮನ ಮೂರು ಪ್ರಾಮುಖ್ಯವಾದ ಕಾರ್ಯಗಳು ಯಾವುವೆಂದರೆ (1) ಲೋಕಕ್ಕೆ ಅದರ ಪಾಪದ ಅರಿವನ್ನು ಹುಟ್ಟಿಸುವದು ಮತ್ತು ಪಶ್ಚಾತ್ತಾಪಕ್ಕೆ ನಡೆಸುವದು, (2) ನಂಬುವವರೆಲ್ಲರಿಗೆ ದೇವರ ನೀತಿವಂತಿಕೆಯ ಗುಣಮಟ್ಟವನ್ನು ಪ್ರಕಟಪಡಿಸುವದು ಯಾಕೆಂದರೆ ಕ್ರಿಸ್ತನು ಈ ಲೋಕದಲ್ಲಿ ಇನ್ನು ಶರೀರಧಾರಿಯಾಗಿ ಇರುವದಿಲ್ಲ, ಮತ್ತು (3) ಸೈತಾನನ ಮೇಲೆ ಕ್ರಿಸ್ತನ ನ್ಯಾಯವಿಚಾರಣೆಯನ್ನು ಪ್ರಕಟಪಡಿಸುವದು." *Life Application Bible,NIV,* page 1915.

# ಪಾಠ 20

# ಯೇಸು ಕ್ರಿಸ್ತನು ತನಗಾಗಿ ಪ್ರಾರ್ಥಿಸಿದನು

## ಯೋಹಾನ 17

ಬಹುಶಃ ಗೆತ್ಸೇಮನೆ ತೋಟಕ್ಕೆ ಹೋಗುವದಕ್ಕಿಂತ ಮುಂಚೆ ಇನ್ನೂ ಮೇಲಂತಸ್ತಿನಲ್ಲಿರುವಾಗಲೇ, ಯೇಸು ಕ್ರಿಸ್ತನು ಪರಲೋಕದ ಕಡೆಗೆ ನೋಡುತ್ತಾ ತನ್ನ ಶಿಷ್ಯರ ಎದುರಿನಲ್ಲೇ ಪ್ರಾರ್ಥಿಸಿದನು. ಮಹಾ–ಯಾಜಕತ್ವದ ಪ್ರಾರ್ಥನೆ ಎಂದು ಕರೆಯಲ್ಪಡು ತನ್ನ ಈ ಪ್ರಾರ್ಥನೆಯಲ್ಲಿ, ಯೇಸು ಕ್ರಿಸ್ತನು ಮೊಟ್ಟ ಮೊದಲನೆಯದಾಗಿ ತನಗಾಗಿ, ನಂತರ ತನ್ನ ಶಿಷ್ಯರಿಗಾಗಿ ಮತ್ತು ಅಂತಿಮವಾಗಿ ಮೊದಲ ಶಿಷ್ಯರ ಸಾಕ್ಷಿಗಳ ಫಲಿತಾಂಶವಾಗಿ ನಂಬುವ ಎಲ್ಲರಿಗಾಗಿಯೂ ಪ್ರಾರ್ಥಿಸಿದನು.

"ತಂದೆಯೇ, ಸಮಯವು ಬಂದಿದೆ," ಎಂದು ಆತನು ಪ್ರಾರಂಭಿಸಿದನು. "ನಿನ್ನ ಮಗನನ್ನು ಮಹಿಮೆಪಡಿಸು ಆಗ ಆತನು ನಿನ್ನನ್ನು ಮಹಿಮೆಪಡಿಸುವನು." ಇದು ಶಿಲುಬೆಯ ಸಮಯವಾಗಿತ್ತು, ತನ್ನ ಭೂಲೋಕದ ಸೇವೆಯ ಪರಾಕಾಷ್ಠತೆ ಇದು ಎಂದು ಯೇಸು ಕ್ರಿಸ್ತನಿಗ್ ಬಹಳ ಚೆನ್ನಾಗಿಯೇ ಗೊತ್ತಿತ್ತು. ಮಾನವರ ವಿಮೋಚನೆಗೆ ಕಾರಣವಾಗುವ1 ಶಿಲುಬೆಯನ್ನು ಯೇಸು ಕ್ರಿಸ್ತನು ವಹಿಸಿಕೊಳ್ಳುವ ರೀತಿಯು ಯೇಸು ಕ್ರಿಸ್ತನ ಸ್ವಭಾವ ಮತ್ತು ದೇವರು ಮನುಷ್ಯ ಮೇಲಿಟ್ಟಿರುವ ಅಪರಿಮಿತವಾದ ಪ್ರೀತಿ ಇವೆರಡನ್ನೂ ಪ್ರಕಟಪಡಿಸುತ್ತದೆ.

ಎಲ್ಲದಕ್ಕಿಂತಲೂ ಮಿಗಿಲಾದದ್ದೆಂದರೆ, ದೇವರ ಮಕ್ಕಳಾಗುವವರಿಗೆ ಶಿಲುಬೆಯು ನಿತ್ಯಜೀವವನ್ನು ಖಚಿತಪಡಿಸುತ್ತದೆ. ದೇವರೊಂದಿಗೆ ನಿಕಟವಾದ ಸಂಬಂಧವಿರುವದೇ ನಿತ್ಯಜೀವ ಎಂದು ಯೇಸು ಕ್ರಿಸ್ತನು ತನ್ನ ಪ್ರಾರ್ಥನೆಯಲ್ಲಿ ವಿವರಿಸಿದನು. "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನು ತಿಳಿಯುವದೇ ನಿತ್ಯಜೀವವು" (17:3). ಲೋಕದಲ್ಲಿ ತಂದೆಯು ತನಗೆ ಕೊಟ್ಟಂಥ ಕೆಲಸವನ್ನು ಶಿಲುಬೆಯು ನೆರವೇರಿಸುವದು ಮತ್ತು ಮಗನು ತಂದೆಯ ಪ್ರಸನ್ನತೆಗೆ ಮರಳಲು ಶಿಲುಬೆಯ ವಿಧೇಯತೆಯೊಂದೇ ಮಾರ್ಗ ಎಂಬದನ್ನು ಯೇಸು ಕ್ರಿಸ್ತನು ಪ್ರಕಟಿಸಿದನು. ಅಲ್ಲಿ, ಯೇಸು ಕ್ರಿಸ್ತನು ತಂದೆಯ ಆಡಳಿತ, ಮತ್ತು ತಂದೆಗೂ ಹಾಗು ಆತನಿಗೂ ಸಂಬಂಧಪಟ್ಟ ಜ್ಞಾನ ಮತ್ತು ಶಕ್ತಿಯಿರುವ ತನ್ನ ನಿತ್ಯವಾದ ಮಹಿಮೆಯ ಸ್ಥಾನವನ್ನು ಪಡೆದುಕೊಳ್ಳುವನು (17:5,10).

ತನ್ನ ಮುಂದೆಯಿದ್ದ ಶಿಲುಬೆಯ ವಿಷಯವಾಗಿ ತನಗಾಗಿ ಪ್ರಾರ್ಥಿಸಿದ ನಂತರ, ಯೇಸು ಕ್ರಿಸ್ತನು ತನ್ನ ಶಿಷ್ಯರಿಗಾಗಿ ಪ್ರಾರ್ಥಿಸಿದನು, ಆತನು ಅವರನ್ನು, "ಲೋಕದೊಳಗಿಂದ ನೀನು ನನಗೆ ಕೊಟ್ಟವರು" (17:6)2 ಎಂದು ಬಣ್ಣಿಸಿದನು. ದೇವರಾತ್ಮನ ಪೇರೇಪಣೆಗಳಿಗೆ ಪ್ರತಿಕ್ರಿಯೆಯಾಗಿ, ಯೇಸು ಕ್ರಿಸ್ತನು ದೇವರಿಂದಲೇ ಬಂದವನಾಗಿದ್ದಾನೆ ಮತ್ತು ದೇವರ ಮಾತುಗಳನ್ನೇ ಮಾತನಾಡಿದನೆಂದು ನಂಬುವ ಹಂತಕ್ಕೆ ಆತನ ಶಿಷ್ಯರು ಬಂದಿದ್ದರು. ಈ ಸ್ತ್ರೀ ಪುರುಷರನ್ನು ಲೋಕದೊಳಗಿಂದ ತೆಗೆದುಕೋ ಎಂದು ಯೇಸು ಕ್ರಿಸ್ತನು ಪ್ರಾರ್ಥನೆ ಮಾಡಲಿಲ್ಲ, ಯಾಕೆಂದರೆ ಈ ಲೋಕದಲ್ಲಿ ಸುವಾರ್ತೆಯನ್ನು ಸಾರುವಲ್ಲಿ ಅವರು ಆತನ ರಾಯಭಾರಿಗಳಾಗಿದ್ದಾರೆ (17:21,23; 2 ಕೊರಿಂಥ 5:18–20). ಪ್ರತಿರೋಧಗಳಿರುವ4 ಈ ಲೋಕದಲ್ಲಿ ಅವರು ತನಗೆ ಸಾಕ್ಷಿಗಳಾಗಿ ಜೀವಿಸುತ್ತಾರಾದ್ದರಿಂದ ಅವರನ್ನು ಕೆಟ್ಟವುಗಳಿಂದ3 ಸಂರಕ್ಷಿಸಲು ಮತ್ತು ಶುದ್ಧೀಗೊಳಿಸಲು (ಅವರನ್ನು ಬೇರ್ಪಡಿಸಿ, ತನ್ನ ಸ್ವಭಾವವನ್ನು ಅವರಲ್ಲಿ

ಉತ್ಪಾದಿಸು) ಎಂದು ಪ್ರಾರ್ಥಿಸಿದನು. ಯೇಸು ಕ್ರಿಸ್ತನು ತನ್ನನ್ನೇ ತನ್ನ ಶಿಷ್ಯರ ಶುದ್ಧೀಕರಣಕ್ಕಾಗಿ ಸಮರ್ಪಿಸಿದನು (17:19).

ಇದಾದ ಮೇಲೆ, ಮೊದಲನೆಯ ಶಿಷ್ಯರ ಸಾಕ್ಷಿಯ ಫಲಿತಾಂಶವಾಗಿ ಆತನಲ್ಲಿ ನಂಬಿಕೆಯನ್ನಿಡುವವರೆಲ್ಲರಿಗಾಗಿ ಯೇಸು ಕ್ರಿಸ್ತನು ಪ್ರಾರ್ಥಿಸಿದನು. ಹಿಂಬಾಲಕರ ಈ ಸಣ್ಣ ಹಿಂಡಿನ ಮೂಲಕ ದೇವರ ಸಾಮರ್ಥ್ಯದ ಮೇಲೆ ಭರವಸೆಯುಳ್ಳವರಾಗಿ ಲೋಕಕ್ಕೆ ಸುವಾರ್ತೆಯನ್ನು ಸಾರಲು ಮುಂದಾಗುತ್ತಿದ್ದೇವೆ, ಯೇಸು ಕ್ರಿಸ್ತನು ಸಹ ಇವರ ನಂಬಿಗಸ್ಥ ಸಾಕ್ಷಿಯ ಮೂಲಕವಾಗಿ ಲಕ್ಷಾಂತರ ಜನರು ವಿಮೋಚಿಸಲ್ಪಡಬೇಕೆಂಬದನ್ನು ಎದುರುನೋಡುತ್ತಿದ್ದಾನೆ. ನಂಬಿಕೆಯನ್ನಿಟ್ಟಿರುವವರಿಗೆಲ್ಲರಿಗಾಗಿ ಯೇಸು ಕ್ರಿಸ್ತನು ಮಾಡಿದ ಪ್ರಾರ್ಥನೆ ಪ್ರಾಮುಖ್ಯತೆ ಎಂದರೆ ಅವರಲ್ಲಿ ಐಕ್ಯತೆ ಅಥವಾ ಒಗ್ಗಟ್ಟಿರಲಿ5 ಎಂಬದಕ್ಕಾಗಿಯೇ ಆಗಿದೆ. ದೇವರೊಂದಿಗೆ ಐಕ್ಯರಾಗಿರುವಾಗ ಇದು ಬರುತ್ತದೆ. "ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕು.." (17:21). ತನ್ನನ್ನು ತನ್ನ ತಂದೆಯೊಂದಿಗೆ ಐಕ್ಯಗೊಳಿಸಿದ ಪ್ರೀತಿಯು ತನ್ನ ಸಭೆಯನ್ನು ಸಹ ತುಂಬಿಸಲಿ ಮತ್ತು ಕ್ರಿಸ್ತನ ಸತ್ಯವನ್ನು ಹಾಗೂ ದೇವರ ವಿಮೋಚನಾತ್ಮಕವಾದ ಪ್ರೀತಿಯನ್ನು ಲೋಕಕ್ಕೆ ಪ್ರದರ್ಶಿಸಲಿ ಎಂದು ಪ್ರಾರ್ಥಿಸಿದನು.

ಅಂತಿಮವಾಗಿ, ತನ್ನಲ್ಲಿ ನಂಬಿಕೆಯನ್ನಿಡುವವರು ತನ್ನೊಂದಿಗೇ ಶಾಶ್ವತವಾಗಿ, ತನ್ನ ನಿತ್ಯವಾದ ಮಹಿಮೆಯನ್ನು ಪ್ರಕಟಿಸುತ್ತಾ ನೆಲೆಯಾಗಿರಲಿ ಎಂದು ಪ್ರಾರ್ಥಿಸಿದನು. ತಾನು ಪರಲೋಕಕ್ಕೆ ಆರೋಹಣವಾದ ನಂತರವೂ, ದೇವರ ಪ್ರೀತಿ ಮತ್ತು ಕ್ರಿಸ್ತನ ಶಾಶ್ವತವಾದ ಪ್ರಸನ್ನತೆಯನ್ನು ವಿಶ್ವಾಸಿಗಳು ಅನುಭವಿಸುವದಕ್ಕಾಗಿ ಅವರಿಗೆ ತಂದೆಯನ್ನು ಪ್ರಕಟಿಸುವೆನೆಂದು ಯೇಸು ಕ್ರಿಸ್ತನು ವಾಗ್ದಾನ ಮಾಡಿದನು.

## ಯೋಹಾನ 17:1–5 ಓದಿರಿ.

1.ಎ. "ತಂದೆಯೇ ಸಮಯವು ಬಂದಿದೆ" ಎಂದು ಯೋಹಾನ 17:1ರಲ್ಲಿ ಹೇಳುವಾಗ ಯೇಸು ಏನನ್ನು ಸೂಚಿಸಿದನು (cf. 2:4; 7:30; 8:20; 12:23,27; 13:1).

**Reference**: ನೋಟ್ 2, ದೇವರ ಕುರಿಮರಿ, ಪುಟ 18.

ಬಿ. ತಂದೆಯು ಮಗನನ್ನು ಯಾವ ಹಂತಕ್ಕೆ ಮಹಿಮೆಪಡಿಸುವಂತೆ ಯೇಸು ಕ್ರಿಸ್ತನು ಬೇಡಿಕೊಂಡನು (17:1)?

**ಗಮನಿಸಿರಿ:** ಮಹಿಮೆಪಡಿಸುವದೆಂದರೆ ಪ್ರಕಟಪಡಿಸುವದು ಮತ್ತು ಸನ್ಮಾನಿಸುವದು.
ಸಿ. ತಂದೆ ಮತ್ತು ಮಗನ ನಡುವೆಯ ಶಿಲುಬೆಯ ಪ್ರಮಾಣ ಏನು (ರೋಮಾ 5:8; 8:31–34)?

2. ಯೇಸು ಕ್ರಿಸ್ತನು ನಿತ್ಯಜೀವವನ್ನು ಹೇಗೆ ವಿವರಿಸಿದ್ದಾನೆ (17:3)?

3.ಎ. ಲೋಕದಲ್ಲಿ ಯೇಸು ಕ್ರಿಸ್ತನು ಯಾವ ಉದ್ದೇಶದಿಂದ ಬಂದನು (17:4)?

ಬಿ. ಶಿಲುಬೆಯನ್ನು ಮೀರಿ ಆತನು ಏನನ್ನು ಎದುರುನೋಡಿದನು (17:5)?

## ಯೋಹಾನ 17:6–19 ಓದಿರಿ.

4. ತನ್ನ ಮೂಲಕವಾಗಿ ದೇವರ ಸತ್ಯಕ್ಕೆ ಪ್ರತಿಕ್ರಿಯಿಸುವವರ ವಿಷಯದಲ್ಲಿ ಯೇಸು ಕ್ರಿಸ್ತನು ಸತ್ಯ ಎಂದು ಏನನ್ನು ಹೇಳಿದನು (17:6,8)?

**Reference**: ನೋಟ್ 2, ನೀನು ನನಗೆ ಕೊಟ್ಟವರು, ಪುಟ 177.

5. ವಿರೋದಗಳುಳ್ಳ ಲೋಕದಲ್ಲಿ ಸುವಾರ್ತೆಯನ್ನು ಸಾರಲು ತನ್ನ ಶಿಷ್ಯರನ್ನು ಕಳುಹಿಸಿ ಯೇಸು ಕ್ರಿಸ್ತನು ಅವರಿಗಾಗಿ ಏನೆಂದು ಪ್ರಾರ್ಥಿಸಿದನು (17:11–12,14–16)?

**ಗಮನಿಸಿರಿ:** "ಘೋರವಾದ ನಾಶನಕ್ಕೆ ಗುರಿಯಾದವನು" ಯೂದನು, ಯಾಕೆಂದರೆ ಆತನು ಯೇಸುವನ್ನು ಅಲ್ಲಗಳೆಯುವ ಆಯ್ಕೆಯನ್ನು ಮಾಡಿದನು. Reference: ನೋಟ್ 3, ದುರಾತ್ಮನು, ನೋಟ್ 4, ಲೋಕವು, ಪುಟ 177, ನೋಟ್ 6, ನಿನ್ನ ನಾಮದ ಬಲದ ಮೂಲಕ, ಪುಟ 177.

6. ಶಿಷ್ಯರ ಜೀವಿತದಲ್ಲಿ ಯೇಸುವಿನ ಮಾತುಗಳು ಮುಂದೆ ಏನನ್ನು ಉತ್ಪಾದಿಸುವವು (17:13)?

7.ಎ. ಯೇಸು ಕ್ರಿಸ್ತನ ಹಿಂಬಾಲಕರು ಲೋಕದಲ್ಲಿ ನಡೆಸುವ ಸೇವೆಯ ಮಧ್ಯದಲ್ಲಿಯೂ (ಸೇವೆಗಾಗಿ ಬೇರ್ಪಟ್ಟು ದೈವೀಕ ಸ್ವಭಾವದಲ್ಲಿ ಬೆಳೆದು) ಶುದ್ಧೀಕರಿಸಲ್ಪಡುವರು (17:17–18)?

ಬಿ. ಯೇಸು ಕ್ರಿಸ್ತನು ಯಾವ ಕೆಲಸಕ್ಕಾಗಿ ತನ್ನನ್ನೇ ಸಮರ್ಪಿಸಿಕೊಂಡನು (17:19)?

## ಯೋಹಾನ 17:20–26 ಓದಿರಿ.

8.ಎ. ಯೇಸು ಕ್ರಿಸ್ತನು ತನ್ನ ಪ್ರಾರ್ಥನೆಯಲ್ಲಿ ಯಾರನ್ನು ಸೇರಿಸಿಕೊಂಡನು (17:20)?

ಬಿ. ವಿಶ್ವಾಸಿಗಳೆಲ್ಲರ ವಿಷಯದಲ್ಲಿ ಯೇಸು ಕ್ರಿಸ್ತನ ಪ್ರಾಥಮಿಕವಾದ ಬಯಕೆ ಏನಾಗಿತ್ತು ಮತ್ತು ಯಾಕೆ (17:21–23)?

**Reference**: ನೋಟ್ 5, ಐಕ್ಯತೆ ಅಥವಾ ಒಗ್ಗಟ್ಟು, ಪುಟ 177.

9.ಎ. ತನ್ನ ನಂಬಿಕೆಯನ್ನಿಡುವವರೆಲ್ಲರ ವಿಷಯದಲ್ಲಿ ಯೇಸು ಕ್ರಿಸ್ತನು ಏನನ್ನು ಬಯಸಿದನು (17:24)?

ಬಿ. ಆತನು ತನ್ನ ಪ್ರಾರ್ಥನೆಯನ್ನು ಮುಗಿಸುತ್ತಿದ್ದಂತೆ, ಯೇಸು ಕ್ರಿಸ್ತನು ಏನು ಮಾಡುವೆನೆಂದು ವಾಗ್ದಾನ ಮಾಡಿದನು ಮತ್ತು ಯಾಕೆ (17:26)?

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಪ್ರೀತಿಯ ಬಂಧಗಳು

ನಮ್ಮ ನೆರವೇರುವಿಕೆಯ ಅನ್ವೇಷಣೆಯಲ್ಲಿ ನಮಗೆ ಬೇಕಾಗಿರುವ ಆಳವಾದ ಅಗತ್ಯತೆ ಎಂದರೆ ಸಂಬಂಧಪಟ್ಟ ಸ್ಥಳ, ಯಾವುದೇ ಮೇರೆಗಳಿಲ್ಲದೆ ನಮ್ಮನ್ನು ಪ್ರೀತಿಸುವ ಜನರ ಮಧ್ಯದಲ್ಲಿ ವ್ಯಕ್ತಿತ್ವ. ಯೇಸು ಕ್ರಿಸ್ತನು ತಾನು ಸಾಯುವದಕ್ಕಿಂತ ಮುಂಚಿನ ರಾತ್ರಿ ತನ್ನ ಮಹಾಯಾಜಕತ್ವದ ಪ್ರಾರ್ಥನೆಯಲ್ಲಿ ತಿಳಿಯಪಡಿಸಿದ ಅಗತ್ಯತೆ ಇದುವೇ. ಈ ಪ್ರಾರ್ಥನೆಯಲ್ಲಿ, ನಾವು ಮೊದಲನೆಯದಾಗಿ ಮತ್ತು ನಿರಂತರವಾಗಿ ಪ್ರೀತಿಯ ಬಂಧಗಳನ್ನು ಆತನೊಂದಿಗೆ ಅನುಭವಿಸುತ್ತೇವೆ ಮತ್ತು ಆತನ ನಿತ್ಯವಾದ ಕುಟುಂಬದಲ್ಲಿ ಸ್ಥಾನವನ್ನು ಪಡೆಯಬೇಕೆಂಬ ದೇವರ ಬಯಕೆಯನ್ನು ಅತನು ಪ್ರಕಟಪಡಿಸಿದನು. ದೇವರೊಂದಿಗೆ ಅನ್ಯೋನ್ಯತೆ ಮತ್ತು ಆತನ ವಾಕ್ಯದ ಮೂಲಕ ದೊರೆಯುವ ಶುದ್ಧೀಕರಣ ಇತರೆ ವಿಶ್ವಾಸಿಗಳೊಂದಿಗೆ ಐಕ್ಯತೆ ಮತ್ತು ಪ್ರೀತಿಯ ಸಂಬಂಧಗಳನ್ನು ಉತ್ಪಾದಿಸುತ್ತದೆ. ವಿಶ್ವಾಸಿಗಳ ನಡುವೆ ನೆಲೆಗೊಳ್ಳುವ ಪ್ರೀತಿ ಮತ್ತು ಅನ್ಯೋನ್ಯತೆಯು ಕ್ರಿಸ್ತನ ನಿಜತ್ವವನ್ನು ನಂಬದಿರುವ ಲೋಕದಲ್ಲಿ ಅನೇಕರನ್ನು ದೇವರ ಪ್ರೀತಿಯ ಬೆಳಕಿನಲ್ಲಿ ನಡೆಸುತ್ತಾ ಫಲವನ್ನು ಕೊಡಲಾರಂಭಿಸುತ್ತದೆ (ಯೋಹಾನ 17:23).

ವಿಶ್ವಾಸಿಗಳನ್ನು ವೈಯಕ್ತಿಕವಾಗಿ ನೆರವೇರಿಸುವ ಮತ್ತು ಕ್ರಿಸ್ತನ ದೇಹದ ಕಟ್ಟೋಣಕ್ಕೆ ಕಾರಣವಾಗುವ ಪ್ರೀತಿ ಮತ್ತು ಐಕ್ಯತೆಯ ಬಂಧಗಳನ್ನು ನಾಶಗೊಳಿಸಲು ಬಲಿಷ್ಠವಾದ ಸೈನ್ಯಗಳು ಕಾರ್ಯಗಳನ್ನು ಮಾಡುತ್ತಿವೆ. ಯೇಸು ಕ್ರಿಸ್ತನು ತನ್ನಲ್ಲಿ ನಂಬಿಕೆಯನ್ನಿಡುವವರಿಗೆ ವಿರುದ್ಧವಾದ ಸೈನ್ಯಗಳಿಗೆ ವಿರುದ್ಧವಾಗಿ ಪ್ರಾರ್ಥಿಸಿದನು. ಮೊದಲನೆಯದಾಗಿ ನಂಬಿಕೆ ಮತ್ತು ಆರೋಗ್ಯಕರವಾದ ಸಂಬಂಧಗಳನ್ನು ಮುರಿಯುವದರ ಹಿಂದೆ ಇರುವ (ಎಫೆಸ 6:11–12), ದುರಾತ್ಮನಿಂದ ರಕ್ಷಣೆಗಾಗಿ ಆತನು ಪ್ರಾರ್ಥಿಸಿದನು (17:15). ಸ್ವಾರ್ಥತೆ ಮತ್ತು ಗರ್ವವು ಸಹ ವಿಶ್ವಾಸಿಗಳ ನಡುವೆಯಿರುವ ಒಗ್ಗಟ್ಟನ್ನು ಮುರಿಯುತ್ತದೆ, ಆದ್ದರಿಂದಲೇ ನನ್ನ ಜನರು ತಂದೆಯ ಪ್ರೀತಿಯಿಂದ ತುಂಬಲ್ಪಡಬೇಕು ಮತ್ತು ಅವರೊಳಗೆ ನೆಲೆಸುವ ನನ್ನ ಪ್ರಸನ್ನತೆಯಿಂದ ಸಮಾನರಾಗಬೇಕೆಂದು ಯೇಸು ಕ್ರಿಸ್ತನು ಪ್ರಾರ್ಥಿಸಿದನು.

ದೇವರ ಕುಟುಂಬದಲ್ಲಿ ಐಕ್ಯತೆಗಾಗಿ ಯೇಸು ಕ್ರಿಸ್ತನು ಮಾಡಿದ ಪ್ರಾರ್ಥನೆಯು ಪರಿಶುದ್ಧವಾದ ಪ್ರೀತಿಯ ಬಂಧಗಳನ್ನು ಉಂಟು ಮಾಡುತ್ತದೆ ಯಾಕೆಂದರೆ ಪ್ರತಿಯೊಬ್ಬ ವಿಶ್ವಾಸಿಯಲ್ಲಿಯೂ ವೈಯಕ್ತಿಕವಾಗಿ ನೆಲೆಯಾಗಿರುವ ದೇವರ ಅಪರಿಮಿತವಾದ ಪ್ರೀತಿಯೇ ಅದರ ಆಧಾರವಾಗಿದೆ. ಈ ಪ್ರೀತಿಯು ನಿಸ್ವಾರ್ಥವಾದದ್ದಾಗಿದೆ ಮತ್ತು ಯಾವಾಗಲೂ ಇತರರಿಗೆ ಒಳ್ಳೇದನ್ನೇ ಆಲೋಚಿಸುತ್ತದೆ, ಮತ್ತು ಮನುಷ್ಯನ ಆಕಾಂಕ್ಷೆಗಳನ್ನು ನೆರವೇರಿಸಲು ವಿಶ್ವಾಸಿಗಳು ವ್ಯಕ್ತಿತ್ವವನ್ನು ಹಾಗೂ ಸವಾಲುಗಳಿಲ್ಲದ ಪ್ರೀತಿಯನ್ನು ಕೊಡಲು ಮತ್ತು ಪಡೆದುಕೊಳ್ಳಲು ಅವಕಾಶಗಳನ್ನು ಕಲ್ಪಿಸುತ್ತದೆ. ನಮ್ಮ ನೆರವೇರುವಿಕೆಯ ಅನ್ವೇಷಣೆಯ ಅಧ್ಯಯನವನ್ನು ನಾವು ಮುಂದುವರೆಸುತ್ತಿದ್ದಂತೆ, ದೇವರು ತನ್ನ ಕುಟುಂಬದ ಮಕ್ಕಳನ್ನು ತುಂಬುವದಕ್ಕಾಗಿ ರಚಿಸಿರುವ ಪ್ರೀತಿಯ ಬಂಧಗಳನ್ನು ಒಮ್ಮೆ ನೋಡಿಕೊಳ್ಳೋಣ.

1. ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿ ನಮ್ಮ ವ್ಯಕ್ತಿತ್ವ ಅಥವಾ ನಾವು ಸೇರುವ ಜಾಗ ಎಲ್ಲಿದೆ?

ಯೋಹಾನ 1:12

ಎಫೆಸ 2:19–22

1 ತಿಮೊಥೆ 3:15

2.ಎ. ದೇವರ ಮನೆಯವರನ್ನು ಲೋಕದಲ್ಲಿ ಕ್ರಿಸ್ತನ "ದೇಹ" ಎಂಬದಾಗಿಯೂ ಹೇಳಲಾಗುತ್ತದೆ, ಇದಕ್ಕೆ ಕ್ರಿಸ್ತನೇ ಶಿರಸ್ಸಾಗಿದ್ದಾನೆ ಮತ್ತು ವಿಶ್ವಾಸಿಗಳು ಅದರ ವಿವಿಧ ಭಾಗಗಳಾಗಿದ್ದಾರೆ (cf. ಎಫೆಸ 4:4–6,15–16; 5:30). ಸ್ವಾರ್ಥಪರವಾದ ಆಯ್ಕೆಗಳು ದೇಹವನ್ನು ಛಿದ್ರಗೊಳಿಸುತ್ತವೆ ಮತ್ತು ಅಗತ್ಯತೆಗಳ ಪೂರೈಕೆ ಅಡ್ಡಿಯನ್ನುಂಟು ಮಾಡುತ್ತವೆ. ನಾಶನಕರವಾದ ಯಾವ ಮನೋಭಾವನೆಗಳನ್ನು ಮತ್ತು ಕ್ರಿಯೆಗಳನ್ನು ತಡೆಗಟ್ಟಬೇಕು?

1 ಕೊರಿಂಥ 3:3

ಕೀರ್ತನೆ 101:5 (ಯಾಕೋಬ 3:14)

ಜ್ಞಾನೋಕ್ತಿಗಳು 20:19

ಬಿ. ಕ್ರಿಸ್ತನ ದೇಹದ ಒಗ್ಗಟ್ಟನ್ನು ನಾಶ ಮಾಡುವ ಕೆಲವು ವಿಷಯಗಳಿಗಾಗಿಯೂ ಯೇಸು ಕ್ರಿಸ್ತನು ಪ್ರಾರ್ಥಿಸಿದನು ಅವುಗಳು ಯಾವುವು?

ಮತ್ತಾಯ 7:1,3

ಫಿಲಿಪ್ಪಿ 2:21

1 ತಿಮೊಥೆ 6:10

ತೀತನು 1:16

ಸಿ. ಕ್ರಿಸ್ತನ ದೇಹದೊಳಗಿನ ಇಂಥ ಸ್ವಭಾವಗಳು ನಂಬಿಕೆಯಿಲ್ಲದಿರುವ ಲೋಕದಲ್ಲಿ ಬೀರುವ ಪರಿಣಾಮ ಏನು?

ರೋಮಾ 2:23–24 (2 ಪೇತ್ರ 2:2)

ಡಿ. ಇತರ ವಿಶ್ವಾಸಿಗಳೊಂದಿಗೆ ನಾವೇನಾದರೂ ಜಗಳದಲ್ಲಿ ಸಿಕ್ಕಿಕೊಳ್ಳುವದಾದರೆ ಏನನ್ನು ನೆನಪಿಸಿಕೊಳ್ಳಬೇಕು?

ಎಫೆಸ 6:12

3.ಎ. ಕ್ರಿಸ್ತನ ದೇಹವನ್ನು ಕಟ್ಟುವ ಮತ್ತು ನಮ್ಮೊಳಗೆ ನೆರವೇರುವಿಕೆಯನ್ನು ಕಂಡುಕೊಳ್ಳಲು ಸಹಾಯ ಮಾಡಲು ನಾವು ಆಯ್ಕೆ ಮಾಡಿಕೊಳ್ಳಬಹುದಾದ ಮನೋಭಾವನೆಗಳನ್ನು ಮತ್ತು ಕ್ರಿಯೆಗಳನ್ನು ಪಟ್ಟಿ ಮಾಡಿರಿ?

ರೋಮಾ 12:9–19

ಕೊಲೊಸ್ಸೆ 3:16–17

ಎಫೆಸ 4:1–3

ಎಫೆಸ 4:15–16

ಬಿ. ಕ್ರಿಸ್ತನ ದೇಹವನ್ನು ಕಟ್ಟುವ ಮತ್ತು ನಮ್ಮೊಳಗಿನ ನೆರವೇರುವಿಕೆಯನ್ನು ಕಂಡುಕೊಳ್ಳಲು ನಮಗೆ ಅವಕಾಶವನ್ನು ಕೊಡುವ ಪವಿತ್ರಾತ್ಮನು ನಮ್ಮೊಳಗೆ ಏನನ್ನು ಉತ್ಪಾದಿಸುತ್ತಾನೆ?

1 ಕೊರಿಂಥ 13:4–8ಎ

ಗಲಾತ್ಯ 5:22–23

## ಸಾರಾಂಶ

4. ಯೇಸು ಕ್ರಿಸ್ತನು ತನ್ನ ಪ್ರಾರ್ಥನೆಯಲ್ಲಿ, ಎಲ್ಲಾಭಾಗಗಳಲ್ಲಿರುವ ವಿಶ್ವಾಸಿಗಳ ಪ್ರೀತಿಯನ್ನು ನಾವು ಅನುಭವಿಸಬೇಕೆಂದು ಪ್ರಾರ್ಥಿಸಿದನು. ಇದಕ್ಕೆ ಬೇಕಾಗಿರುವದು ಏನು?

5. ಕ್ರಿಸ್ತನ ದೇಹವಾಗಿರುವ, ಸಭೆಯಲ್ಲಿ ಐಕ್ಯತೆಯನ್ನು ಸ್ಥಾಪಿಸುವಾಗ ಯಾವೆಲ್ಲಾ ವಿಷಯಗಳಿಗೆ ವಿರುದ್ದವಾಗಿ ನಿಮ್ಮ ಜೀವಿತಗಳನ್ನು ಕಾಪಾಡಿಕೊಳ್ಳಲು ನೀವು ಬಯಸುತ್ತೀರ?

6. ಇಂದಿನ ಸಭೆಯಲ್ಲಿ ನಾಶನವನ್ನುಂಟು ಮಾಡುತ್ತಿರುವ ಬಲಿಷ್ಠವಾದ ಸಾಧನ ಎಂದು ಯಾವುದನ್ನು ನೀವು ಪರಿಗಣಿಸುತ್ತೀರ? ಇವುಗಳಿಗೆ ವಿರುದ್ಧವಾಗಿ ನಿಮ್ಮ ಸ್ವಂತ ಜೀವಿತದಲ್ಲಿ ನೀವು ಹೇಗೆ ಹೋರಾಡುತ್ತೀರ?

7. ಕ್ರಿಸ್ತನ ದೇಹದೊಳಗೆ ಯಾವ ನೆರವೇರುವಿಕೆಯನ್ನು ನೀವು ಅನುಭವಿಸಿದ್ದೀರ? ಇತರರಿಗೆ ನೀವು ಏನನ್ನು ಕೊಡಬೇಕೆಂದಿದ್ದೀರ?

8.ಎ ಲೋಕದಲ್ಲಿರುವ ಸಭೆಯಲ್ಲಿ ಯೇಸು ಕ್ರಿಸ್ತನು ಯಾವುದು ಪ್ರಾಮುಖ್ಯವಾದ ಸ್ವಭಾವವಾಗಬೇಕೆಂದು ಯೇಸು ಕ್ರಿಸ್ತನು ಬಯಸುತ್ತಿದ್ದಾನೆ?

ಬಿ. ಇದರ ಫಲಿತಾಂಶವಾಗಿ ನೀವು ಏನನ್ನು ಅನುಭವಿಸುತ್ತೀರ?

ಸಿ. ಸಭೆಯು ಲೋಕದಲ್ಲಿ ಐಕ್ಯವಾದ ಸಾಕ್ಷಿಯಾಗಿ ನಿಲ್ಲುವದರ ಮೂಲಕರ ಏನಾಗಬೇಕೆಂದು ದೇವರು ಬಯಸುತ್ತಾನೆ?

# ಪಾಠ 20 ನೋಟ್ಸ್

1 ವಿಮೋಚನೆಗಾಗಿ ದೇವರ ಸಾಧನ. ನೋಟ್ 2, ದೇವರ ಕುರಿಮರಿ, ಪುಟ 18 ನೋಡಿರಿ.
2 ನೀನು ನನಗೆ ಕೊಟ್ಟವರು (17:6,9,24). ಇದು ಪಾದಚಾರಿಗಳ ಬಗ್ಗೆ ಮಾತನಾಡುತ್ತಿಲ್ಲ ಎಂದು ಅನೇಕ ವ್ಯಾಖ್ಯಾನಕಾರರು ಒಪ್ಪಿಕೊಳ್ಳುತ್ತಾರೆ. ಬಾರ್ಕ್ಲೇ ಬರೆದಿರುವದೇನೆಂದರೆ: "ಕೆಲವರು ಶಿಷ್ಯತ್ವವನ್ನು ಸ್ವೀಕರಿಸಿಕೊಳ್ಳಬೇಕು ಮತ್ತು ಕೆಲವರು ಶಿಷ್ಯತ್ವವನ್ನು ನಿರಾಕರಿಸಬೇಕೆಂಬದು ದೇವರ ಉದ್ದೇಶ ಎಂದಲ್ಲ. ಈ ರೀತಿಯಾಗಿ ಇದನ್ನು ಆಲೋಚಿಸಿರಿ. ತಂದೆಯು ತನ್ನ ಮಗನ ಬಗ್ಗೆ ದೊಡ್ಡ–ದೊಡ್ಡ ಕನಸುಗಳನ್ನು ಕಾಣುತ್ತಿರುತ್ತಾರೆ; ಆತನಿಗೆ ಒಳ್ಳೇ ಭವಿಷ್ಯವನ್ನು ರೂಪಿಸಲು ಕಾರ್ಯಗಳನ್ನು ಮಾಡುತ್ತಿರುತ್ತಾನೆ, ಆದರೆ ಮಗನು ಅಂಥ ಭವಿಷ್ಯವನ್ನು ನಿರಾಕರಿಸಿ ತನ್ನ ಚಿತ್ತದಂತೆಯೂ ಹೋಗುವನು. ಒಂದುವೇಳೆ ನಾವು ಯಾರನ್ನಾದರೂ ಪ್ರೀತಿಸುವದಾದರೆ ನಾವು ಯಾವಾಗಲೂ ಆತನ ಭವಿಷ್ಯದ ಬಗ್ಗೆಯೇ ಕನಸುಗಳನ್ನು ಕಾಣುತ್ತಿರುತ್ತೇವೆ ಮತ್ತು ಮೇಲೆ ಬರಲು ಯೋಜನೆಗಳನ್ನು ರೂಪಿಸುತ್ತೇವೆ; ಆದರೆ ಕನಸುಗಳು ಮತ್ತು ಯೋಜನೆಗಳು ನಿರಾಸೆಗೊಳಿಸಬಹುದು. ದೇವರಿಗೆ ಆತನದೇ ಆದ ಯೋಜನೆಗಳಿವೆ, ಕನಸುಗಳಿವೆ, ಪ್ರತಿಯೊಬ್ಬ ಮನುಷ್ಯನ ವಿಷಯದಲ್ಲಿಯೂ ಆಲೋಚನೆಗಳಿವೆ; ಆದರೆ ನಮ್ಮ ಮೇಲಿರುವ ದೊಡ್ಡ ಜವಾಬ್ದಾರಿಕೆ ಎಂದರೆ ನಾವು ಅದನ್ನು ಅಂಗೀಕರಿಸಿಕೊಳ್ಳಲೂ ಬಹುದು ಅಥವಾ ನಿರಾಕರಿಸಲೂ ಬಹುದು. ದೇವರ ಮೂಲಕ ಯೇಸು ಕ್ರಿಸ್ತನಿಗೆ ಕೊಡಲ್ಪಡುವದೆಂದರೆ, ಯೇಸು ಕ್ರಿಸನ ಒತ್ತಾಯಕ್ಕೆ ಪ್ರತಿಕ್ರಿಯಿಸುವಂತೆ ದೇವರ ಆತ್ಮನು ನಮ್ಮಲ್ಲಿ ಕಾರ್ಯವನ್ನು ಮಾಡುತ್ತಾನೆ." William Barclay, The Gospel of John, Volume 2, pages 212,213.
3 ದುರಾತ್ಮನು (17:15) ಅಥವಾ ಸೈತಾನನು. "ಇಡೀ ಲೋಕವು ದುರಾತ್ಮನ ಬಲದ ಮೇಲೆಯೇ ನೆಲೆಯಾಗಿದೆ, ಯಾಕೆಂದರೆ ಇದನ್ನು ನಿಯಂತ್ರಿಸುವವನು ಆತನೇ ಆಗಿದ್ದಾನೆ (1 ಯೋಹಾನ 5:19; cf. 1 ಯೋಹಾನ 2:13ಎಫ್; 3:12; 5:18); ಆತನಿಂದ ಅವರಿಗೆ ಬಿಡುಗಡೆಯಾಗಲಿ ಎಂದು ಯೇಸು ಕ್ರಿಸ್ತನು ಪ್ರಾರ್ಥಿಸಿದನು, ಇಂಥ ಬಿಡುಗಡೆಗಾಗಿ ನೀವು ಪ್ರಾರ್ಥಿಸಿರಿ ಎಂದು ಈಗಾಗಲೇ ಆತನು ಅವರಿಗೆ ಕಲಿಸಿದನು (ಮತ್ತಾಯ 6:13)" F.F. Bruce, The Gospel of John, page 333. ನಮ್ಮನ್ನು ದುರಾತ್ಮನ ನಿಂದೆಗಳಿಂದ ರಕ್ಷಿಸುವದಕ್ಕಾಗಿ ನಮ್ಮ ಜೀವಿತಗಳನ್ನು ನಿಯಂತ್ರಣದಲಿ ಲ್ಟಟ್ಟುಕೊಂಡಿರುವವನು ದೇವರೇ ಆಗಿದ್ದಾನೆ ಎಂಬದನ್ನು ತಿಳಿದುಕೊಳ್ಳುವದು ಉತ್ತಮವಾದ ಸಂಗತಿಯಾಗಿದೆ. ನಾವು ಸಾಮಾನ್ಯವಾಗಿ ಬಿದ್ದುಹೋಗಲು ಇರುವ ಕಾರಣವೆಂದರೆ, ನಮ್ಮ ಜೀವಿತದ ಅಗತ್ಯತೆಗಳನ್ನು ಸ್ವಂತ ಬಲದ ಮೇಲೆ ಪೂರೈಸಿಕೊಳ್ಳಲು ಮುಂದಾಗುತ್ತೇವೆ ಮತ್ತು ನಮ್ಮನ್ನು ರಕ್ಷಿಸುವ ದೇವರ ಪ್ರಸನ್ನತೆಯನ್ನು ನೆನಪಿಸಿಕೊಳ್ಳಲು ಹಾಗೂ ಆತನ ಸಹಾಯವನ್ನು ಬೇಡಿಕೊಳ್ಳಲು ಮರೆತುಹೋಗುತ್ತೇವೆ." William Barclay, The Gospel of John, page 216.
ನೋಟ್ 5, ಸೈತಾನನು, ಪುಟ 66 ಸಹ ನೋಡಿರಿ.
4 ಈ ಲೋಕ (17:9,14–17,18,21). ಯೋಹಾನನು "ಲೋಕ" ಎಂಬ ಪದವನ್ನು ದೇವರನ್ನು ಬಿಟ್ಟು ತನ್ನನ್ನೇ ರಚಿಸಿಕೊಳ್ಳುವ ಮಾನವ ಸಮಾಜವನ್ನು ಬಣ್ಣಿಸಲು ಉಪಯೋಗಿಸಿದ್ದಾನೆ. ದೇವರನ್ನು ಪ್ರಕಟಪಡಿಸಲು ಮತ್ತು ಲೋಕವನ್ನು ಮತ್ತೆ ಆತನಿಗಾಗಿ ಗೆಲ್ಲಲು ಹೋಗುವ ತನ್ನ ಶಿಷ್ಯರನ್ನು ಬಲಪಡಿಸುವದಕ್ಕಾಗಿ ಯೇಸು ಕ್ರಿಸ್ತನು ಪ್ರಾರ್ಥಿಸಿದನು (17:21,23).
5 ಐಕ್ಯತೆ ಅಥವಾ ಒಗ್ಗಟ್ಟು (17:21–23). "ಹಳೆಯ ಒಡಂಬಡಿಕೆಯಲ್ಲಿ ದೇವರ ನಾಮವು ಕೇವಲ ಆತನ ಸ್ವಭಾವವನ್ನು ಮಾತ್ರವೇ ಸೂಚಿಸುವದು (17:6ರಲ್ಲಿ ಮೇಲೆ ಕೊಡಲ್ಪಟ್ಟಿರುವ ಹಾಗೆ) ಮಾತ್ರವಲ್ಲ ಬದಲಾಗಿ ಆತನ ಶಕ್ತಿಯನ್ನು ಸೂಚಿಸುತ್ತದೆ; cf. ಕೀರ್ತನೆ 20:1; ಕೀರ್ತನೆ 54:1; ಜ್ಞಾನೋಕ್ತಿ 18:10. ಯೇಸುವಿಗೆ ಕೊಡಲ್ಪಟ್ಟಿರುವ ತಂದೆಯ ಶಕ್ತಿಯ ಮೂಲಕ, ತಂದೆಯು ಅತನಿಗೆ ಕೊಟ್ಟಿರುವ ಸ್ವಾಸ್ಥ್ಯದ ಹಾಗೆ ಅವರನ್ನು ಸಂರಕ್ಷಿಸಿದ್ದಾನೆ." F.F. Bruce, The Gospel of John, page 332.

# ಪಾಠ 21

# ಬಂಧನ, ಕಷ್ಟ ಮತ್ತು ಶಿಲುಬೆಗೆ ಹಾಕುವಿಕೆ

## ಯೋಹಾನ 18–19

ಯೋಹಾನ 17ರಲ್ಲಿ ಯೇಸು ಕ್ರಿಸ್ತನು ಪ್ರಾರ್ಥಿಸಿದ ಮೇಲೆ, ಆತನು ಮತ್ತು ಆತನ ಶಿಷ್ಯರು ತಾವು ಪಸ್ಕ ಹಬ್ಬದ ಭೋಜನವನ್ನು ನಡೆಸಿದ ಮನೆಯಿಂದ ಹೊರಟು ಹೋದರು. ಅವರು ಪಟ್ಟಣದಿಂದ ಹೊರಗೆ ಹೋಗಿ ತಾವು ಸಾಮಾನ್ಯವಾಗಿ ಹೋಗುತ್ತಿದ್ದ ಎಣ್ಣೇ ಮರಗಳ ಗುಡ್ಡದಲ್ಲಿದ್ದ ಗೆತ್ಸೇಮನೆ ತೋಟಕ್ಕೆ ಹೋದರು. ಇದು ಬಹಳ ಚೆನ್ನಾಗಿ ಗೊತ್ತಿದ್ದ ಸ್ಥಳವಾದ್ದರಿಂದ, ಯೇಸುವನ್ನು ಬಂಧಿಸುವದಕ್ಕಾಗಿ ಆತನಿದ್ದ ಸ್ಥಳಕ್ಕೇ ನೇರವಾಗಿ ರೋಮನ್ ಸೈನಿಕರನ್ನು ಮತ್ತು ಯೆಹೂದ್ಯ ಅಧಿಕಾರಿಗಳನ್ನು ಯೂದನು ಕರಕೊಂಡು ಹೋದನು. ಕೈಗಳಲ್ಲಿ ಬೆಳಕುಗಳನ್ನು ಮತ್ತು ಆಯುಧಗಳನ್ನು ಹಿಡಿದುಕೊಂಡು, ಯೇಸು ಕ್ರಿಸ್ತನನ್ನು ಮರಗಳ ಮತ್ತು ಗುಹೆಗಳ ಮಧ್ಯದಲ್ಲಿ ಹುಡುಕಲು ಅವರು ಸಜ್ಜಾಗಿದ್ದರು. ಅದರೆ ಆತನೇ ಮುಂದೆ ಬಂದು, "ನೀವು ಯಾರನ್ನು ಹುಡುಕುತಿದ್ದೀರ?" ಎಂದು ಕೇಳಿದನು. "ನಜರೇತಿನ ಯೇಸುವನ್ನು" ಎಂದು ಅವರು ಉತ್ತರಿಸಿದಾಗ, "ನಾನೇ ಆತನು" ಎಂದು ಆತನು ಹೇಳಿದನು. ಖಂಡಿತವಾಗಿಯೂ ಆತನೊಂದಿಗಿದ್ದವರೆಲ್ಲರೂ ಹಿಂದೆ ಸರಿದರು ಮತ್ತು ನೆಲದ ಮೇಲೆ ಬಿದ್ದರು.1 ಅವರನ್ನು ಮುನ್ನಡೆಸುತ್ತಿದ್ದ ಯೂದನನ್ನು ಕಂಡು, ಶಿಷ್ಯರಿಗೆ ಅಚ್ಚರಿಯನ್ನು ನೀಡಿದನು.

ನೀವು ಹುಡುಕುತ್ತಿರುವದು ನನ್ನನ್ನೇ ಎಂದು ಮತ್ತೆ ಹೇಳಿ, ನನ್ನನ್ನು ನಿಮ್ಮ ವಶಕ್ಕೆ ತೆಗೆದುಕೊಳ್ಳಿರಿ ಮತ್ತು ಶಿಷ್ಯರನ್ನು ಬಿಟ್ಟುಬಿಡಿರಿ ಎಂದು ಯೇಸು ಕ್ರಿಸ್ತನು ಅವರನ್ನು ಮನವಿ ಮಾಡಿಕೊಂಡನು. ಆದರೆ ಪೇತ್ರನು ತನ್ನ ಕತ್ತಿಯನ್ನು ಕೈಗೆ ತೆಗೆದುಕೊಂಡು ಮಹಾಯಾಜಕನ ಸೇವಕನ ಕಿವಿಯನ್ನು ಕತ್ತರಿಸಿದನು. ಯೇಸು ಕ್ರಿಸ್ತನು ಆ ಮನುಷ್ಯನ ಕಿವಿಯನ್ನು ಮುಟ್ಟಿದನು ಮತ್ತು ಅದನ್ನು ಗುಣಪಡಿಸಿದನು (ಲೂಕ 22:51) ಹಾಗು ತನ್ನ ಕತ್ತಿಯನ್ನು ಬಿಸಾಡುವಂತೆ ಪೇತ್ರನಿಗೆ ಸೂಚಿಸಿದನು. "ನನ್ನ ತಂದೆಯು ನನಗೆ ಕೊಟ್ಟಿರುವ ಪಾತ್ರೆಯನ್ನು ನಾನು ಕುಡಿಯಬಾರದೇ?" ಎಂದು ಕೇಳುವದರ ಮೂಲಕ, ಗೊಂದಲಮಯವಾಗಿದ್ದ ಪರಿಸ್ಥಿತಿಯನ್ನು ಯೇಸು ಕ್ರಿಸ್ತನು ಶಾಂತಪಡಿಸಿದನು.

ನಂತರ ಮಹಾಯಾಜಕರ ಕಾರ್ಯಕರ್ತರು ಯೇಸು ಕ್ರಿಸ್ತನನ್ನು ಹಿಡಿದು ಮಾಜಿ ಮಹಾಯಾಜಕನು ಮತ್ತು ಆ ವರ್ಷದ ಮಹಾಯಾಜಕನಾದ ಕಾಯಫಾಸ್‌ನ ಮಾವನಾದ ಅನ್ನನ2 ಬಳಿಗೆ ಕರೆದು–ಕೊಂಡು ಹೋದರು. ಯೇಸು ಕ್ರಿಸ್ತನು ದೇವದೂಷಣೆಯನ್ನು ಮಾಡಿದ್ದಾನೆಂಬದಕ್ಕೆ ಪುರಾವೆಯನ್ನು ಪಡೆಯುವ ಪ್ರಯತ್ನದಲ್ಲಿ ಅನ್ನನಿಗೆ ಪ್ರಶ್ನೆಗಳನ್ನು ಕೇಳಿದನು. ಅಪರಾಧಿಯ ಅಪರಾಧವನ್ನು ನಿರೂಪಿಸುವಂಥ ಪುರಾವೆಗಳನ್ನು ಸಾಕ್ಷಿದಾದರು ಒದಗಿಸಬೇಕೆಂಬದು ಯೆಹೂದ್ಯರ ನಿಯಮ, ಆದ್ದರಿಂದ ನಾನು ಹಾಗೆ ಮಾತನಾಡುವದನ್ನು ಕೇಳಿದಾಗ ಯಾಕೆ ನನ್ನನ್ನು ಬಂಧಿಸಲಿಲ್ಲ ಎಂದು ಅನ್ನನಿಗೆ ಉತ್ತರಿಸಿದನು. ಈ ಉತ್ತರಕ್ಕೆ ಮಹಾಯಾಜಕರ ಅಧಿಕಾರಿಗಳಲ್ಲಿ ಒಬ್ಬನು ಯೇಸುವನ್ನು ಗದರಿಸಿದನು ಮತ್ತು ಆತನ ಮುಖದ ಮೇಲೆ ಹೊಡೆದನು. ಯೇಸು ಕ್ರಿಸ್ತನು ಸಾಯಬೇಕೆಂದು ಈಗಾಗಲೇ ನಿಶ್ಚಯಿಸಿಕೊಂಡಿದ್ದ ಕಾಯಫನ ಬಳಿಗೇ ಅನ್ನನು ಯೇಸುವನ್ನು ಕಳುಹಿಸಿದನು (18:4).

ಈ ಸಮಯದಲ್ಲಿ, ಪೇತ್ರನು ಮತ್ತು ಮತ್ತೊಬ್ಬ ಶಿಷ್ಯನು ಹಾಗೂ ಯೋಹಾನನು3 ಯೇಸುವನ್ನು ಹಿಂಬಾಲಿಸಿಕೊಂಡು ಹೋದರು. ಮತ್ತೊಬ್ಬ ಶಿಷ್ಯನಿಗೆ ಮಹಾಯಾಜಕನ ಪರಿಚಯ ಇದ್ದದ್ದರಿಂದ ಅವನು ಒಳಗೆ ಹೋದನು ಮತ್ತು ಪೇತ್ರನನ್ನು ಸಹ ಕರೆಸಿಕೊಂಡನು. ಅಲ್ಲಿ ಮೊದಲನೆಯದಾಗಿ ನೀನು ಯೇಸುವಿನೊಂದಿಗೆ ಇದ್ದವನೆಂದು ಒಬ್ಬ ಸೇವಕಿಯು ಮತ್ತು ಕಾವಲುಗಾರನು, ನಂತರ ಬೆಂಕಿ ಕಾಯಿಸಿಕೊಳ್ಳುತ್ತಿದ್ದ ಜನರು ಮತ್ತು ಕೊನೆಯದಾಗಿ ತೋಟದಲ್ಲಿ ಪೇತ್ರನು ಕಿವಿಯನ್ನು ಕತ್ತರಿಸಿದವನ ಸಂಬಂಧಿಕರಲ್ಲಿ ಮಹಾಯಾಜಕನ ಸೇವಕನಾಗಿದ್ದವನು ಪೇತ್ರನನ್ನು ಪ್ರಶ್ನಿಸಿದನು. ಪ್ರತಿಬಾರಿ ಆತನನ್ನು ವಿಚಾರಿಸಿದಾಗಲೂ, ಪೇತ್ರನು ಯೇಸುವಿನ ಪರಿಚಯ ತನಗಿಲ್ಲವೆಂದು ಹೇಳಿದನು. ಪೇತ್ರನ ಅಲ್ಲಗಳೆಯುವಿಕೆಯನ್ನು ಯೇಸು ಕ್ರಿಸ್ತನು ಈಗಾಗಲೇ ಹೇಳಿದ್ದನು ಅದರ ನೆರವೇರುವಿಕೆಯಾದ ಮೇಲೆ ಕೋಳಿಯು ಕೂಗಿತು (13:37–38).

ಯೆಹೂದ್ಯರ ಸಮಿತಿಯಲ್ಲಿ ರಾತ್ರಿಯ ಸಮಯದಲ್ಲಿ ನಡೆದ ವಿಚಾರಣೆಯಲ್ಲಿ (cf. ಲೂಕ 22:63–71), ಯೇಸು ಕ್ರಿಸ್ತನು ದೇವದೂಷಣೆಯ ನಿಮಿತ್ತವಾಗಿ ಸಾಯಬೇಕೆಂದು ತೀರ್ಮಾನಿಸಲಾಯಿತು. ಆದರೆ ರೋಮನ್ ಅಧಿಕಾರಿಗಳಿಗಿಂತ ಮುಂಚೆ, ಮರಣ ಶಿಕ್ಷೆ ಪ್ರಾಪ್ತವಾಗುವದಕ್ಕಾಗಿ ಯೆಹೂದ್ಯ ನಾಯಕರು ಯೇಸುವಿನ ಮೇಲೆ ಆರೋಪಗಳನ್ನು ಸಾಬೀತುಪಡಿಸುವರು. ರೋಮನ್ ಸರ್ಕಾರದ ಪ್ರಕಾರ, ಮರಣ ಶಿಕ್ಷೆಯನ್ನು ವಿಧಿಸುವ ಅಧಿಕಾರ ಯೆಹೂದ್ಯರಿಗೆ ಇರಲಿಲ್ಲ ಅಥವಾ ಅವರು ಯೇಸು ಕ್ರಿಸ್ತನನ್ನು ಕಲ್ಲೆಸೆದು ಕೊಲ್ಲುತಿದ್ದರು. ಶಿಲುಬೆ ಹಾಕುವದರ ಮೂಲಕವಾಗಿಯೇ ತನಗೆ ಮರಣವು ಪ್ರಾಪ್ತವಾಗುವದೆಂಬದಾಗಿ ಯೇಸು ಕ್ರಿಸ್ತನು ಮೊದಲೇ ಹೇಳಿದ್ದನು (cf. 18:32; ಮತ್ತಾಯ 20:18–19).

ಬೆಳಗಿನ ಜಾವದಲ್ಲಿಯೇ ತಮ್ಮ ವಿಚಾರಣೆಗಳನ್ನೆಲ್ಲಾ ಮುಗಿಸಿದ ಮೇಲೆ, ಯೆಹೂದ್ಯ ನಾಯಕರು ಯೇಸುವನ್ನು ರೋಮನ್ ರಾಜಪ್ರತಿನಿಧಿಯಾದ ಪಿಲಾತನ ಬಳಿಗೆ ಆತನ ಅರಮನೆಗೆ ಕರೆದು–ಕೊಂಡು ಹೋದರು. ಪಿಲಾತನ ಬಳಿಗೆ ಹೋದಾಗ ಯೇಸುವಿಗೆ ವಿರುದ್ಧವಾಗಿ ಬರೆಯಲ್ಪಟ್ಟಿದ್ದ ದೋಷಾರೋಪಣೆಯ ಪತ್ರವು ಸಹ ಅವರಲಿರಲಿಲ್ಲ, ಒಂದುವೇಳೆ ನಮ್ಮ ಮಾತುಗಳನ್ನು ಪಿಲಾತನು ನಂಬಬಹುದು ಎಂದು ಅವರೇ ಊಹಿಸಿಕೊಂಡಿರಬಹುದು. ಈ ವಿಷಯವನ್ನು ಅಷ್ಟೊಂದು ಗಂಭೀರವಾಗಿ ಪ್ರದರ್ಶಿಸಲಿಲ್ಲವಾದ್ದರಿಂದ, ಈ ವಿಷಯದಲ್ಲಿ ಮಾತನಾಡುವದು ಸರಿಯಲ್ಲ ಎಂದು ನೆನಸಿ ಪಿಲಾತನು ಪ್ರಾರಂಭದಲ್ಲಿ ಆಸಕ್ತಿಯನ್ನು ತೋರಲಿಲ್ಲ (18:31). ಆದರೆ ತಾನೊಬ್ಬ ರಾಷ್ಟ್ರದ ಅರಸನೆಂದು ಯೇಸು ಕ್ರಿಸ್ತನು ಹೇಳಿಕೊಳ್ಳುತ್ತಾನೆಂಬ ಆರೋಪವನ್ನು ಮಾಡಿದಾಗ (cf. ಲೂಕ 23:2–3), ಇದು ದಂಗೆಯನ್ನೆಬ್ಬಿಸುವ ವಿಷಯವೆಂದು ಗ್ರಹಿಸಿ, ಪಿಲಾತನು ಯೇಸುವನ್ನು ವಿಚಾರಿಸಲು ಮುಂದಾದನು.

"ನೀನು ಯೆಹೂದ್ಯರ ಅರಸನೋ?" ಎಂದು ಪಿಲಾತನು ಆತನನ್ನು ಕೇಳಿದನು, ಅಲ್ಲಿ ಆತನು "ನೀನು" ಎಂಬದಕ್ಕೆ ಪ್ರಾಧಾನ್ಯತೆಯನ್ನು ಕೊಡುತ್ತಿದ್ದಾನೆ ಯಾಕೆಂದರೆ ಪಿಲಾತನಿಗೆ ಬಂಧಿತನು ಅರಸನ ಹಾಗೆಯೇ ಕಂಡನು. ಅದಕ್ಕೆ ಪ್ರತ್ಯುತ್ತರವಾಗಿ, "ನನ್ನ ರಾಜ್ಯವು ಈ ಲೋಕದ್ದಲ್ಲ. ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ ಯೆಹೂದ್ಯರು ನನ್ನನ್ನು ಬಂಧಿಸದಂತೆ ನನ್ನ ಸೇವಕರು ಕಾದಾಡುತ್ತಿದ್ದರು. ಆದರೆ ನನ್ನ ರಾಜ್ಯವು ಇಲ್ಲಿಯದಲ್ಲ" ಎಂದು ಯೇಸು ಕ್ರಿಸ್ತನು ಹೇಳಿದನು.

ಯೇಸು ಕ್ರಿಸ್ತನು ತಾನು ಅರಸನೆಂದು ಒಪ್ಪಿಕೊಂಡಾಗಲೂ, ರಾಜಕೀಯವಾದ ಯಾವುದೇ

ಉದ್ದೇಶಗಳಿಲ್ಲದೆ ತನ್ನ ನಡವಳಿಕೆಯಲ್ಲಿ ಕೇಡಿಲ್ಲದ ಮನುಷ್ಯನನ್ನು ಪಿಲಾತನು ಕಂಡನು. ಯೇಸು ಕ್ರಿಸ್ತನು ನಿರಪರಾಧಿಯಾಗಿದ್ದಾನೆಂದು ಆತನು ಯೆಹೂದ್ಯರ ಬಳಿಗೆ ಹೋಗಿ ಹೇಳಿದನು ಮತ್ತು ಪ್ರತಿವರ್ಷದ ಪಸ್ಕ ಹಬ್ಬದಲ್ಲಿ ಒಬ್ಬ ಖೈದಿಯನ್ನು ಬಿಡುಗಡೆ ಮಾಡುವ ಪದ್ಧತಿಯಿರುವದರಿಂದ ಈ ಬಾರಿ ಯೇಸುವನ್ನು ಬಿಡುಗಡೆ ಮಾಡುವದಾಗಿ ಪ್ರಕಟಿಸಿದನು. ಆದರೆ ಯೇಸುವಿಗೆ ಬದಲಾಗಿ ಬರಬ್ಬನೆಂಬ4 ಅಪರಾಧಿಯನ್ನು ಬಿಡುಗಡೆ ಮಾಡಬೇಕೆಂದು ಯೆಹೂದ್ಯರು ಕೇಳಿಕೊಂಡರು.

ಯೆಹೂದ್ಯರನ್ನು ಸಮಾಧಾನಪಡಿಸುವದಕ್ಕಾಗಿ, ಪಿಲಾತನು ಯೇಸುವನ್ನು ಕೊರಡೆಗಳಿಂದ ಹೊಡೆಸಿದನು,5 ಇದಾದ ಮೇಲೆ ಸಿಪಾಯಿಗಳು ಆತನನ್ನು ಹಾಸ್ಯಮಾಡಿದರು, ಮುಳ್ಳಿನ ಕಿರೀಟವನ್ನು ಮತ್ತು ಕೆಂಪು ಹೊದಿಕೆಯನ್ನು ಹಾಕಿದರು ಮತ್ತು ಆತನ ಕೆನ್ನೆಗೆ ಹೊಡೆದರು. ಇಂಥ ಕ್ರೂರವಾದ ಹಿಂಸೆಯ ನಂತರ ಪಿಲಾತನು ಯೇಸುವನ್ನು ಯೆಹೂದ್ಯರ ಮುಂದೆ ಬರ ಮಾಡಿದನು ಮತ್ತು ಆತನು ನಿರಪರಾಧಿಯೆಂದು ಹೇಳಿದನು. ಆಗ ತಕ್ಷಣ, ಮಹಾಯಾಜಕರು ಮತ್ತು ಅಧಿಕಾರಿಗಳು ಆತನನ್ನು, “ಶಿಲುಬೆಗೆ ಹಾಕಿರಿ!” ಎಂದು ಕೂಗಿಕೊಂಡರು. ಯೇಸು ಕ್ರಿಸ್ತನು ತನ್ನನ್ನು ದೇವಕುಮಾರನೆಂದು ಹೇಳಿಕೊಂಡದ್ದರಿಂದ, ದೇವದೂಷಣೆಯನ್ನು ಮಾಡಿದ್ದಾನೆ ಆದ್ದರಿಂದ ನಮ್ಮ ಧರ್ಮಶಾಸ್ತ್ರಕ್ಕನುಸಾರವಾಗಿ ಯೇಸುವನ್ನು ಶಿಲುಬೆಗೆ ಹಾಕಲು ಪಿಲಾತನು ತಮಗೆ ಅಧಿಕಾರವನ್ನು ಕೊಡಬೇಕೆಂದು ಕೇಳಿಕೊಂಡರು.

ಈ ಹೊಸ ಮಾಹಿತಿಯ ದೆಸೆಯಿಂದ, ದೇವರು ಸಹ ಈ ಪರಿಸ್ಥಿತಿಯಲ್ಲಿ ಭಾಗಿಯಾಗಿದ್ದಾನೆಂಬ ಆಲೋಚನೆಯೊಂದಿಗೆ ಪಿಲಾತನು ಬಹಳವಾಗಿ ಹೆದರಿಕೊಂಡನು. ಮತ್ತು ಯೇಸುವನ್ನು ಅರಮನೆಯೊಳಗೆ ಕರೆದುಕೊಂಡು ಹೋಗಿ “ನೀನು ಎಲ್ಲಿಂದ ಬಂದವನು?” ಎಂದು ಕೇಳಿದನು. ಅದಕ್ಕೆ ಯೇಸು ಕ್ರಿಸ್ತನು ಉತ್ತರವನ್ನು ಕೊಡದಿದ್ದಾಗ, ನಿನ್ನನ್ನು ಬಿಡುಗಡೆಗೊಳಿಸುವ ಅಥವಾ ಶಿಲುಬೆಗೆ ಹಾಕದಂತೆ ತಪ್ಪಿಸುವ ಅಧಿಕಾರವು ನನಗಿದೆ ಎಂದು ಪಿಲಾತನು ಯೇಸುವಿಗೆ ನೆನಪಿಸಿದನು. ಆಗ ಯೇಸು ಕ್ರಿಸ್ತನು, “ನಿನಗೆ ಮೇಲಿಂದ ಅಧಿಕಾರವು ಬಂದಿರದೆ ಹೋಗಿದ್ದರೆ, ನಿನಗೆ ನನ್ನ ಮೇಲೆ ಯಾವುದೇ ಅಧಿಕಾರವಿರುತ್ತಿರಲಿಲ್ಲ” ಎಂದು ಹೇಳಿದನು. ನನ್ನನ್ನು ರಾಜಪ್ರತಿನಿಧಿಯ ಬಳಿಗೆ ಕ–ರೆದುಕೊಂಡು ಬಂದಿರುವವರೆ ಹೆಚ್ಚು ದೋಷಗಳನ್ನು ಹೊಂದಿದ್ದಾರೆ ಎಂದು ಆತನು ಪಿಲಾತನಿಗೆ ಹೇಳಿದನು.

ಪಿಲಾತನು ಬಹುಶಃ ತನ್ನ ಮುಂದೆ ಇದ್ದ ವಿವರಿಸಲಾಗದ ವ್ಯಕ್ತಿಯ ವಿಷಯದಲ್ಲಿ ಭಯವುಳ್ಳವನಾಗಿದ್ದರಿಂದ ಮತ್ತು ಯೇಸು ಕ್ರಿಸ್ತನು ನಿರಪರಾಧಿ ಎಂಬ ದೃಢತೆ ಇದ್ದರಿಂದ, ಯೇಸು ಕ್ರಿಸ್ತನನ್ನು ಬಿಡುಗಡೆಗೊಳಿಸಲು ತನ್ನ ಕೈಲಾದಷ್ಟು ಪ್ರಯತ್ನವನ್ನು ಮಾಡಿದನು. ಆದರೆ ಯೇಸು ಕ್ರಿಸ್ತನನ್ನು ಬಿಡಿಸುವ ಪ್ರಯತ್ನವನ್ನು ಮಾಡಿದರೆ ನೀನು ಕೈಸರನಿಗೆ ದ್ರೋಹಬಗೆದಂತೆ ಎಂಬ ಆರೋಪವನ್ನು ಮಾಡಿದರು ಮತ್ತು ಕೂಗುತ್ತಲೇ ಇದ್ದರು. ಅಂತಿಮವಾಗಿ ಪಿಲಾತನು ನ್ಯಾಯತೀರ್ಪನ್ನು ವಿಧಿಸುವ ಆಸನದಲ್ಲಿ ಕುಳಿತು, “ನಿಮ್ಮ ಅರಸನನ್ನು ಶಿಲುಬೆಗೆ ಹಾಕಿಸಲೋ?” ಎಂದು ಕೇಳಿದನು. ಯೇಸು ಕ್ರಿಸ್ತನ ಮರಣವನ್ನೇ ಅಪೇಕ್ಷಿಸುತ್ತಿದ್ದ ಮಹಾಯಾಜಕರು, “ನಮಗೆ ಕೈಸರನಲ್ಲದೆ ಬೇರೆ ಯಾವ ಅರಸನೂ ಇಲ್ಲ” ಎಂಬದಾಗಿ ಉತ್ತರಿಸಿದರು.

ಆದ್ದರಿಂದ ಪಿಲಾತನು ಮರಣದಂಡನೆಗೆ ಒಪ್ಪಿಸಿಕೊಡುವದರೊಂದಿಗೆ, ಅರಮಾಯ, ಲಾಟಿನ್ ಮತ್ತು ಗ್ರೀಕ್ ಭಾಷೆಗಳಲ್ಲಿ; ನಜರೇತಿನ ಯೇಸು, ಯೆಹೂದ್ಯರ ಅರಸನು ಎಂದು ಬರೆಯಲ್ಪಟ್ಟಿದ್ದ

ವಿಳಾಸವನ್ನು ಶಿಲುಬೆಯ ಮೇಲೆ ಹಾಕುವದಕ್ಕೆ ಕಳುಹಿಸಿಕೊಟ್ಟನು. ಮಹಾಯಾಜಕರು ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು, ಅದರೆ ಅದಕ್ಕೆ ಪಿಲಾತನು, "ನಾನು ಬರೆಯಬೇಕಾದದ್ದನ್ನು ಬರೆದಿದ್ದೇನೆ" ಎಂದು ಹೇಳಿದನು.

ಸಿಪಾಯಿಗಳು ಆತನನ್ನು ಪಟ್ಟಣದ ಹೊರಗಡೆ ಇದ್ದ ಗೊಲ್ಗಿಥಾಗೆ ಕರೆದುಕೊಂಡು ಹೋದರು ಅಲ್ಲಿ ಆತನು ಬೆಳಗ್ಗೆ 9 ಘಂಟೆಗೆ ಇಬ್ಬರ ನಡುವೆ ಶಿಲುಬೆಗೆ ಹಾಕಲಾಯಿತು (ಮಾರ್ಕ 15:25). ಮೂರು ತಾಸುಗಳ ನಂತರ ಮಧ್ಯಾಹ್ನದಲ್ಲಿ, ಪಸ್ಕದ ಯಜ್ಞಗಳನ್ನು ಯೆರೂಸಲೇಮಿನಲ್ಲಿ ಸಿದ್ಧಪಡಿಸುತ್ತಿದ್ದಾಗ, ದೇವರ ಕುರಿಮರಿಯಾದಾತನು7 ಇನ್ನೂ ಶಿಲುಬೆಯಲ್ಲಿಯೇ ತೂಗಾಡುತ್ತಿದ್ದನು. ಪಕ್ಕದಲ್ಲಿ ನಿಂತಿದ್ದವರಾದ ಸಿಪಾಯಿಗಳು ಮತ್ತು ಧಾರ್ಮಿಕ ನಾಯಕರು ಗೇಲಿ ಮಾಡಿದರು (cf. ಮತ್ತಾಯ 27:41–44; ಲೂಕ 23:35–37) ಆದರೆ ಅವರಲ್ಲಿ ಕೆಲವರಾದ ಆತನ ತಾಯಿ, ಚಿಕ್ಕಮ್ಮ, ಇನ್ನೂ ಕೆಲವು ಸ್ತ್ರೀಯರು, ಮತ್ತು ಅಪೊಸ್ತಲನಾದ ಯೋಹಾನನು ಶಿಲುಬೆಯ ದುಃಖಭರಿತರಾಗಿ ನಿಂತಿದ್ದರು. ಅವರನ್ನು ನೋಡಿ ಯೇಸು ಕ್ರಿಸ್ತನು ತನ್ನ ತಾಯಿಗೂ ಮತ್ತು ಯೋಹಾನನಿಗೂ ನೀವು ಪರಸ್ಪರ ಒಬ್ಬರನ್ನೊಬ್ಬರು ನೋಡಿಕೊಳ್ಳಿರಿ ಎಂದು ಹೇಳಿದನು ಮತ್ತು ಆಗಿನಿಂದ ಮರಿಯಳು ಯೋಹಾನನ ಮನೆಯಲ್ಲಿ ಜೀವಿಸಿದಳು.

ಮಧ್ಯಾಹ್ನ ಮತ್ತು 3 ಘಂಟೆಯ ನಡುವೆ ಭೂಮಿಯಲ್ಲಿ ಕತ್ತಲೆಯು ಕವಿದಿತ್ತು (ಮತ್ತಾಯ 27:45; ಮಾರ್ಕ 15:33; ಲೂಕ 23:44–45). ನಂತರ ಶಿಲುಬೆಯಲ್ಲಿ ನಾಲ್ಕರಿಂದ ಆರು ತಾಸುಗಳು ಕಳೆದ ಮೇಲೆ, ತನ್ನ ಮರಣದ ಸಮಯವು ಬಂದಿದೆ ಎಂದು ಯೇಸುವಿಗೆ ಗೊತ್ತಾಯಿತು. ಆತನು ನೀರನ್ನು ಕೇಳಿದನು ಮತ್ತು ಸಿಪಾಯಿಗಳು ಆತನಿಗೆ ಹುಳಿ ರಸವನ್ನು ಕುಡಿಸಿದರು. ನಂತರ ಯೇಸು ಕ್ರಿಸ್ತನು "ತೀರಿತು" ಎಂದು ಹೇಳಿ ಶಿರವನ್ನು ಬಾಗಿಸಿ ತನ್ನ ಆತ್ಮವನ್ನು ಒಪ್ಪಿಸಿಕೊಟ್ಟನು.

ವಿಶೇಷವಾದ ಪಸ್ಕದ ಸಬ್ಬತ್‌ಗೂ ಮುಂಚೆ ದೇಹಗಳನ್ನು ಇಳಿಸಬೇಕೆಂದು ಯೆಹೂದ್ಯ ನಾಯಕರು ಸಿಪಾಯಿಗಳಿಗೆ ತಿಳಿಸಿದ್ದರಿಂದ, ಯೇಸುವಿನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ಸತ್ತಿದ್ದಾರ ಎಂಬದನ್ನು ಖಚಿತಪಡಿಸಿಕೊಳ್ಳುವದಕ್ಕೆ ಅವರ ಕಾಲುಗಳನ್ನು ಮುರಿದರು. ಆದರೆ ಯೇಸುವಿನ ಬಳಿಗೆ ಬಂದಾಗ, ಆತನು ಸತ್ತಿರುವದು ಅವರಿಗೆ ಗೊತ್ತಾಯಿತು ಆದರೂ ಅದನ್ನು ದೃಢಪಡಿಸಿಕೊಳ್ಳುವದಕ್ಕಾಗಿ ಅವರು ಆತನ ಪಕ್ಕೆಗೆ ಈಟಿಯಿಂದ ತಿವಿದರು.
ಇದಾದ ಮೇಲೆ ಅರಿಮತ್ತಾಯದ ಯೋಸೇಫನು ಮತ್ತು ನಿಕೋದೇಮನು8 ಯೇಸುವಿನ ದೇಹವನ್ನು ತೆಗೆದುಹೋಗಲು ಪಿಲಾತನಿಂದ ಅನುಮತಿಯನ್ನು ಪಡೆದುಕೊಂಡು ಹತ್ತಿರದಲ್ಲಿದ್ದ ಸಮಾಧಿಯಲ್ಲಿ ಇಟ್ಟರು.

## ಯೋಹಾನ 18 ಓದಿರಿ.

1.ಎ. ಯೇಸುವನ್ನು ಬಂಧಿಸುವಾಗ ಯೂದನ ಜೊತೆಯಲ್ಲಿ ಇದ್ದವರು ಯಾರು (18:3)?

ಬಿ. ಇದು ಯಾಕೆ ಅಸಾಮಾನ್ಯವಾದದ್ದಾಗಿತ್ತು?

2.ಎ. ಯೇಸು ಕ್ರಿಸ್ತನು ತನ್ನ ಸ್ವಂತ ಬಂಧನವನ್ನು ಯಾವ ರೀತಿಯಲ್ಲಿ ನಿಯಂತ್ರಿಸಿದನು (18:4–11)?

ಬಿ. "ನಾನೇ ಆತನು" ಎಂದು ಯೇಸು ಕ್ರಿಸ್ತನು ಘೋಷಿಸಿದಾಗ ಆತನನ್ನು ಬಂಧಿಸಲು ಬಂದವರ ಪ್ರತಿಕ್ರಿಯೆ ಹೇಗಿತ್ತು (18:6)?

**Reference**: ನೋಟ್ 1, ನೆಲದ ಮೇಲೆ ಬಿದ್ದರು, ಪುಟ 187.

## ಯೋಹಾನ 18:12–27.

3. ಸೌರಣೆಯ ದಿವಸಕ್ಕಿಂತ ಮುಂಚೆ ಯೇಸು ಕ್ರಿಸ್ತನನ್ನು ಕೊಲ್ಲಬೇಕೆಂದು ಬಯಸಿದ್ದರಿಂದ ಯೆಹೂದ್ಯ ನಾಯಕರು ಯೇಸುವಿನ ವಾಚರಣೆಯನ್ನು ರಾತ್ರಿಯೇ ಮುಗಿಸಿ, ಬೆಳಗಿನ ಜಾವ ಪಿಲಾತನನ್ನು ಕಾಣಲು ಹೋದರು. ಯೆಹೂದ್ಯರ ಧರ್ಮಶಾಸ್ತ್ರಕ್ಕನುಸಾರವಾಗಿ ಪರಿಶುದ್ಧರಾಗಿ ಕಾಣಿಸಿಕೊಳ್ಳಬೇಕೆಂಬ ಉತ್ಸುಕತೆಯ ಪ್ರಾಮುಖ್ಯತೆ ಏನು?

4.ಎ. ಯೇಸುವನ್ನು ಬಂಧಿಸಿದವರು ಮೊದಲನೆಯದಾಗಿ ಏನು ಮಾಡಿದರು (18:12–13,19)?

**Reference**: ನೋಟ್ 2, ಅನ್ನನು, ಪುಟ 187.

ಬಿ. ಅಪರಾಧಿಯ ದೋಷವನ್ನು ಸಾಬೀತುಪಡಿಸಲು ಸಾಕ್ಷಿಗಳು ಪುರಾವೆಯನ್ನು ಕೊಡಬೇಕೆಂದು ಧರ್ಮಶಾಸ್ತ್ರದ ನಿಯಮ. ಇದರ ವಿಷಯವಾಗಿ, ಅನ್ನನು ಕೇಳಿದ ಪ್ರಶ್ನೆಗಳಿಗೆ ಮತ್ತು ತನ್ನ ಮುಖದ ಮೇಲೆ ಹೊಡೆದ ಅಧಿಕಾರಿಗಳಿಗೆ ಯೇಸು ಕ್ರಿಸ್ತನು ನೀಡಿದ ಪ್ರತಿಕ್ರಿಯೆ ಏನು (18:20–23)?

ಸಿ. ಅನ್ನನು ಯೇಸುವಿಗೆ ಏನು ಮಾಡಿದನು (18:24)?

5. ಯೇಸುವನ್ನು ತೋಟದಲ್ಲಿ ಕಾಪಾಡುವ ಮತ್ತು ಆತನ ಬಂಧನವಾದ ಮೇಲೂ ಆತನನ್ನು ಹಿಂಬಾಲಿಸುವ ಧೈರ್ಯವು ಪೇತ್ರನಿಗಿತ್ತು, ಆದರೆ ಮಹಾಯಾಜಕನ ಮನೆಯೊಳಗೆ ಪ್ರವೇಶಿಸಿದ ಮೇಲೆ ಅವನು ಏನು ಮಾಡಿದನು (18:17–18,25–27; ಮಾರ್ಕ 14:71–72 ನೋಡಿರಿ)?

**Reference**: ನೋಟ್ 3, ಯೋಹಾನನು ಹಿಂಬಾಲಿಸಿದನು, ಪುಟ 187.

ಯೋಹಾನ 18:28–40.

6. ಯೆಹೂದ್ಯರ ಪಿಲಾತನ ಅರಮನೆಯೊಳಕ್ಕೆ ಯಾಕೆ ಹೋಗಲಿಲ್ಲ (18:28)?

7. ಅಪರಾಧವನ್ನು ನಿರೂಪಿಸುವ ಯಾವುದೇ ಬರವಣಿಗೆ ಇಲ್ಲದಿದ್ದರೂ ತೀರ್ಪು ಕೊಡುವದಕ್ಕಾಗಿ ಪಿಲಾತನನ್ನು ಅಷ್ಟು ಬೆಳಗ್ಗೆ ಎಬ್ಬಿಸಿದ್ದರಿಂದ ಖಂಡಿತವಾಗಿಯೂ ಆತನು ಪೇಚಾಟಕ್ಕೆ ಸಿಕ್ಕಿರಬಹುದು. ಆದರೂ ಯೇಸುವಿನ ವಿಷಯವನ್ನು ಕೇಳುವಂತೆ ಪಿಲಾತನನ್ನು ಪ್ರೇರೇಪಿಸಿದ್ದು ಏನು (18:29–33; ಲೂಕ 23:20)?

8. ನಿನ್ನ ಪ್ರಶ್ನೆಯು ರೋಮನ್ ಅಥವಾ ಯೆಹೂದ್ಯ ದೃಷ್ಟಿಕೋನದನುಸಾರವಾಗಿದೆಯೋ ಎಂದು ಪಿಲಾತನು ಕೇಳಿದಾಗ, ಯೇಸು ಕ್ರಿಸ್ತನು ರಾಜಪ್ರತಿನಿಧಿಯ ಪ್ರಶ್ನೆಗೆ ಹೇಗೆ ಉತ್ತರಿಸಿದನು (18:36–37)?

**ಗಮನಿಸಿರಿ:** ಇದು ನಿನ್ನ ಸ್ವಂತ ಯೋಜನೆಯೇ...? (18:34). ಒಂದುವೇಳೆ ಪಿಲಾತನ ಪ್ರಶ್ನೆಯು (ವಚನ 33) ರೋಮನ್ ದೃಷ್ಟಿಕೋನದಾಗಿದ್ದರೆ, ಅದರ ಅರ್ಥ, "ನೀನು ಎದುರುಬೀಳುವವನಾಗಿದ್ದೀಯ?" ಒಂದುವೇಳೆ ಪ್ರಶ್ನೆಯು ಯೆಹೂದ್ಯರ ಮೂಲದ್ದಾಗಿದ್ದರೆ, ಅದರ ಅರ್ಥ, "ಅರಸನಾದ ಮೆಸ್ಸೀಯನು ನಾನೇ ಎಂದು ಹೇಳುತ್ತಿದ್ದೀಯೋ?"

9.ಎ. ಪಿಲಾತನು ನೀಡಿದ ಪ್ರತಿಕ್ರಿಯೆ ಏನು (18:38)?

ಬಿ. ಯೇಸುವನ್ನು ಪಸ್ಕದ ನಿಮಿತ್ತ ಬಿಡುಗಡೆಗೊಳಿಸುತ್ತೇನೆಂದು ಪಿಲಾತನು ಹೇಳಿದಾಗ, ಯೆಹೂದ್ಯರು ನೀಡಿದ ಪ್ರತಿಕ್ರಿಯೆ ಏನು (18:39–40)?

**Reference**: ನೋಟ್ 4, ಬರಬ್ಬನು, ಪುಟ 187.

ಯೋಹಾನ 19:1–16

10.ಎ. ಯೆಹೂದ್ಯರನ್ನು ಸಮಾಧಾನಪಡಿಸಲು ಪಿಲಾತನು ಮಾಡಿದ ಪ್ರಯತ್ನಗಳೇನು (19:1–5)?

Reference: ನೋಟ್ 5, ಕೊರಡೆಯಿಂದ ಹೊಡೆಸಿದನು, ಪುಟ 188.

ಬಿ. ಪಿಲಾತನಿಗೂ ಮತ್ತು ಯೆಹೂದ್ಯರಿಗೂ ನಡುವೆ ಆದ ಭಿನಾಭಿಪ್ರಾಯಗಳ ವಾದ ಏನು (19:6)?

11.ಎ. ಯೇಸುವನ್ನು ಮತ್ತೆ ಪ್ರಶ್ನಿಸುವಂತೆ ಪಿಲಾತನನ್ನು ಪ್ರಶ್ನಿಸಿದ್ದು ಏನು (19:7–9)?

ಬಿ. ಪಿಲಾತನ ಕಾರಣಗಳಿಗೆ ಪ್ರತಿಕ್ರಿಯೆಯಾಗಿ ಯೇಸು ಕ್ರಿಸ್ತನು ಮಾಡಿದ ಪ್ರಕಟನೆ ಏನು (19:10–11)?

12.ಎ. ಪಿಲಾತನು ಯೇಸು ಕ್ರಿಸ್ತನನ್ನು ಬಿಡಿಸಲು ಪ್ರಯತ್ನಿಸಿದಾಗ, ಯೇಸುವಿಗೆ ಮರಣ ಶಿಕ್ಷೆಯನ್ನು ವಿಧಿಸುವಂತೆ ಯೆಹೂದ್ಯರು ಆತನ ಮೇಲೆ ಒತ್ತಡವನ್ನು ಹೇಗೆ ತಂದರು (19:12–15ಎ).

**Reference**: ನೋಟ್ 6, ಆರನೇ ತಾಸು, ಪುಟ 188.

ಬಿ. "ನಿಮ್ಮ ಅರಸನನ್ನು ಶಿಲುಬೆಗೆ ಹಾಕಿಸಲೋ" ಎಂದು ಪಿಲಾತನು ಕೇಳಿದ ಪ್ರಶ್ನೆಗೆ ಮಹಾಯಾಜಕರು ನೀಡಿದ ಹೇಳಿಕೆ ಏಣು (19:15ಬಿ)?

## ಯೋಹಾನ 19:17–27

13. ಪಿಲಾತನ ಮೂಲಕವಾಗಿ ದೇವರು ಯೇಸು ಕ್ರಿಸ್ತನನ್ನು ಎಲ್ಲಾರಿಗೂ ವ್ಯಕ್ತವಾದ ರೀತಿಯಲ್ಲಿ ವಿವರಿಸಿದ್ದು ಹೇಗೆ (19:19–22)?

14. ಕೀರ್ತನೆ 22:18ರಲ್ಲಿ ಬರೆಯಲ್ಪಟ್ಟಿರುವ ಹಳೆಯ ಒಡಂಬಡಿಕೆಯ ಪ್ರವಾದನೆಯು ಶಿಲುಬೆಯ ಮೇಲೆ ಹೇಗೆ ನೆರವೇರಿತು (19:23–24)?

15. ತನ್ನ ತಾಯಿಯ ದೊಡ್ಡ ಮಗನಾಗಿ, ಶಿಲುಬೆಯ ಮೇಲೆ ಇದ್ದುಕೊಂಡೇ ಯೇಸು ಕ್ರಿಸ್ತನು ತನ್ನ ವಿಷಯವಾಗಿ ಕಾಳಜಿಯನ್ನು ಹೇಗೆ ವಹಿಸಿದನು (19:25–27)?

## ಯೋಹಾನ 19:28–42.

16. ಶಿಲುಬೆಯ ಮೇಲೆ ಹಲವು ತಾಸುಗಳನ್ನು ಕಳೆದ ಮೇಲೆ, ಯೇಸು ಕ್ರಿಸ್ತನು ವಿಮೋಚನೆಯ ಕೆಲಸವನ್ನು ಹೇಗೆ ಪೂರ್ಣಗೊಳಿಸಿದನು (19:28–30)?

17.ಎ. ಕತ್ತಲಾಗುವದಕ್ಕಿಂತ ಮೊದಲೇ ಶಿಲುಬೆಯಿಂದ ದೇಹಗಳನ್ನು ಇಳಿಸಬೇಕೆಂದು ಯೆಹೂದ್ಯರು ಯಾಕೆ ಬಯಸಿದರು (19:31)?

ಬಿ. ಯೇಸು ಕ್ರಿಸ್ತನು ಸತ್ತಿದ್ದಾನೆಂದು ಸಿಪಾಯಿಗಳು ಹೇಗೆ ಖಚಿತಪಡಿಸಿಕೊಂಡರು (19:32–34)?

**ಗಮನಿಸಿರಿ:**ಈಟಿಯಿಂದ ತಿವಿಯುವಾಗ ಪಕ್ಕೆಯಿಂದ ರಕ್ತ ಮತ್ತು ನೀರು ಬರುತ್ತದೆ (ಹೃದಯದ ಸುತ್ತಲಿರುವ ಭಾಗ) ಮತ್ತು ಹೃದಯದಿಂದಲೂ ಸಹ. The NIV Study Bible, page 1635.

ಸಿ. ಯೇಸು ಕ್ರಿಸ್ತನ ಮರಣದ ಬಗ್ಗೆ ಬರಹಗಾರನು ತಾನು ಏನನ್ನು ನೋಡಿದ್ದನು ತಿಳಿಸಲು ಬಯಸುತ್ತಿದ್ದಾನೆ (19:32–34)?

**ಗಮನಿಸಿರಿ:** ಅದನ್ನು ಕಂಡವನು, ಬರಹಗಾರನೇ ಆಗಿದ್ದನೆಂದು, ಕೆಲವರ ನಂಬಿಕೆ ಅಥವಾ ನಂಬಿಗಸ್ಥನಾಗಿದ್ದವನೊಬ್ಬನು. ವಚನಭರಿತನು (19:36–37). ಕೀರ್ತನೆ 34:20 ಮತ್ತು ಜೆಕರ್ಯ 12:10ರಲ್ಲಿ ಬರೆಯಲಾಗಿರುವ ಪ್ರವಾದನೆಯನ್ನು ಯೇಸು ಕ್ರಿಸ್ತನ ಮರಣದಲ್ಲಿ ನೆರವೇರಿಸುವದನ್ನು ದೇವರು ತಳ್ಳಿಹಾಕಿದನು.

18. ಯೇಸುವಿನ ಶರೀರವನ್ನು ಧೈರ್ಯವಾಗಿ ಪಿಲಾತನಲ್ಲಿ ಕೇಳಿದವರು ಯಾರು, ಮತ್ತು ಪಡೆದು ಏನು ಮಾಡಿದರು (19:38–42; ಮತ್ತಾಯ 27:59–60)?

**Reference**: ನೋಟ್ 8, ಯೋಸೇಫನು ಮತ್ತು ನಿಕೊದೇಮನು, ಪುಟ 188.

## ಸಾರಾಂಶ

19.ಎ. ಈ ಅಧ್ಯಾಯಗಳು ಮನುಷ್ಯನಲ್ಲಿರುವ ಸ್ವಭಾವದ ಬಗ್ಗೆ ಏನನ್ನು ಕಲಿಸುತ್ತವೆ?

ಬಿ. ಧಾರ್ಮಿಕ ಕಪಟತನದ ಬಗ್ಗೆ ಇವು ಏನನ್ನು ಪ್ರಕಟಿಸುತ್ತವೆ?

20. ಪಾಪಿಯಾಗಿರುವ ಮನುಷ್ಯನ ಜೀವಿತದಲ್ಲಿ ದೇವರ ಸ್ವಭಾವವು ಏನಾಗಿದೆ ಎಂದು ಈ ಅಧ್ಯಾಯಗಳು ಪ್ರಕಟಪಡಿಸುತ್ತವೆ?

21.ಎ. ಶಿಲುಬೆ ಮತ್ತು ನಿಮ್ಮ ಬಗ್ಗೆ ಈ ವಚನಗಳು ಏನನ್ನು ಪ್ರಕಟಪಡಿಸುತ್ತವೆ?

ಯೋಹಾನ 3:16

ರೋಮಾ 5:8

ಯೆಶಾಯ 53:3–12

ಬಿ. ದೇವರು ನಿಮಗಾಗಿ ಅರ್ಪಿಸಿದ ತ್ಯಾಗದ ವಿಷಯದಲ್ಲಿ ನಿಮ್ಮ ಪ್ರತಿಕ್ರಿಯೆ ಏನು?

# ಪಾಠ 21 ನೋಟ್ಸ್

1 ನೆಲದ ಮೇಲೆ ಬಿದ್ದರು (18:6). "ಸಾತ್ವಿಕನಾದ ವ್ಯಕ್ತಿಯನ್ನು ಬಂಧಿಸಲು ಅವರು ಬಂದರು ಆದರೆ ಮಂದ ಬೆಳಕಿನಲ್ಲಿ ಸರ್ವಾಧಿಪತ್ಯವುಳ್ಳ ವ್ಯಕ್ತಿಯನ್ನು ಸಂಧಿಸಿದರು." The NIV Study Bible, page 1631.

"ಯೇಸು ಕ್ರಿಸ್ತನು ಧೈರ್ಯವಾಗಿ ಕೇಳಿದ ಪ್ರಶ್ನೆಯಿಂದ ಅಥವಾ ತನ್ನ ದೈವೀಕತೆಯನ್ನು ಪ್ರಕಟಿಸುವ ಮಾತುಗಳಾದ "ನಾನೇ ಆತನು" (ವಿಮೋಚನಕಾಂಡ 3:14) ಎಂದು ಕೇಳಿದಾಗ ಆ ಜನರು ಗಾಬರಿಗೊಂಡರು. ಅಥವಾ ಆತನ ಸ್ಪಷ್ಟವಾದ ಶಕ್ತಿ ಮತ್ತು ಅಧಿಕಾರವನ್ನು ಕಂಡು ಅವರು ನಿಬ್ಬೆರಗಾದರು." Life Application Bible, page 1918.

"ನಾನೇ ಆತನು" (18:5,6) ಈ ಮಾತನ್ನು ಯೆಹೂದ್ಯ ಕೇಳುಗರು ಚೆನ್ನಾಗಿ ಅರ್ಥಮಾಡಿಕೊಂಡರು ಯಾಕೆಂದರೆ ವಿಮೋಚನಕಾಂಡ 3:14ರಲ್ಲಿ ಇಸ್ರಾಯೇಲರ ದೇವರು ಸಹ ತನ್ನನ್ನು "ನಾನೇ ಆತನು" ಎಂದು ಗುರುತಿಸಿಕೊಂಡನು. ಇದು ಅವರ ದೇವರ ಶಕ್ತಿ ಮತ್ತು ದೈವೀಕತೆಯ ಪ್ರಕಟನೆಯಾಗಿದೆ. F.F. Bruce, The Gospel of John, page 341.

2 ಅನ್ನನು (18:13–24). ಎ. ಎಡಿ 6 ರಿಂದ 15 ರವರೆಗೆ ಅನ್ನನು ಮಹಾಯಾಜಕನಾಗಿದ್ದನು. ಅವನು ನಾಲ್ಕು ಮಕ್ಕಳು ಸಹ ಮಹಾಯಾಜಕತ್ವವನ್ನು ವಹಿಸಿಕೊಂಡಿದ್ದರು ಮತ್ತು ಕಾಯಫನು ಈತನ ಮಾವನಾಗಿದ್ದನು. ಮಹಾಯಾಜಕನ ಸ್ಥಾನವು ಜೀವಿತಾವಧಿಯವರೆಗೂ ಇರುವಂಥದ್ದು, ಆದರೆ ರೋಮನ್ ರಾಜಪ್ರತಿನಿಧಿಗಳು ಪಾಲೆಸ್ತೀನಿಗೆ ಬಂದದ್ದರಿಂದ, ರೋಮನ್ ರಾಜಪ್ರತಿನಿಧಿಗಳೊಂದಿಗೆ ಜೊತೆಗೂಡಿ ಕಾರ್ಯನಿರ್ವಹಿಸುತಿದ್ದರಿಂದ ಮಹಾಯಾಜಕತ್ವ ಸ್ಥಾನದ ಅವಧಿಯು ಕಡಿತಗೊಂಡಿತು. ಅನ್ನನ ಕುಟುಂಬದವರು ಆಗರ್ಭ ಶ್ರೀಮಂತರಾಗಿದ್ದರು, ಆದ್ದರಿಂದ ಅವರು ಲಂಚ ಕೊಟ್ಟು ಸ್ಥಾನವನ್ನು ಸಂಪಾದಿಸಿಕೊಂಡಿದ್ದರು. ಅನ್ನನಿಗೆ ಸ್ಥಾನವೇ ಎಲ್ಲಕ್ಕಿಂತಲೂ ದೊಡ್ಡದಾಗಿತ್ತು. ಬಲಿಯನ್ನರ್ಪಿಸುವದಕ್ಕಾಗಿ ಮಾರಾಟ ಮಾಡಲಾಗುತ್ತಿದ್ದ ಹಕ್ಕಿಗಳು ಮತ್ತು ಪ್ರಾಣಿಗಳನ್ನು ಮಾರಾಟ ಮಾಡಲಾಗುತ್ತಿದ್ದ ಅಂಗಡಿಗಳನ್ನು ಅನ್ನನ ಮಾರುಕಟ್ಟೆ ಎಂದು ಕರೆಯಲಾಗುತಿತ್ತು ಹಾಗೂ ಅಲ್ಲಿನ ವ್ಯಾಪಾರದಿಂದ ಬಂದ ಹಣವೆಲ್ಲಾ ಅನ್ನನ ಮನೆಗೆ ಹೋಗುತಿತ್ತೆಂದು ಈಗಲೂ ನಂಬಲಾಗುತ್ತದೆ. ಯೋಹಾನ 2ರಲ್ಲಿ ಯೇಸು ಕ್ರಿಸ್ತನು ಇದನ್ನು ವಿರೋಧಿಸಿದನು.

ಬಿ. ಯಜ್ಞವಗಿ ಅರ್ಪಿಸಲಾಗುತ್ತಿದ್ದ ಪ್ರಾಣಿಗಳು ದೋಷವಿಲ್ಲದ್ದಾಗಿರಬೇಕೆಂದು ಈ ಬೋಧನೆಯು ತಿಳಿಸುತ್ತದೆ. ಪ್ರಾಣಿಗಳು ಹೇಗಿರುವವೆಂದು ದೇವಾಲಯದ ತನಿಖಾಧಿಕಾರಿಗಳು ಪರೀಕ್ಷಿಸುತ್ತಿದ್ದರು ಆದರೆ ದೇವಾಲಯದ ಹೊರಗೆ ಖರೀದಿಸಲಾಗುವ ಪ್ರಾಣಿಗಳು ಯಾವಾಗಲೂ ದೋಷವುಳ್ಳವುಗಳಾಗಿಯೇ ಇರುತ್ತಿದ್ದವು. ಆದ್ದರಿಂದ ಜನರು ತಮ್ಮ ಯಜ್ಞಪಶುಗಳನ್ನು ದೇವಾಲಯದೊಳಗೇ ಖರೀದಿಸುತ್ತಿದ್ದರು, ದೇವಾಲಯದ ಹೊರಗೆ ಎರಡು ಪಾರಿವಾಳಗಳಿಗೆ 4ಪೈಸೆ ಇದ್ದರೆ ಒಳಗೆ 75 ಪೈಸೆ ಬೆಲೆ ಇತ್ತು. William Barclay, The Gospel of John, page 226.

3 ಯೋಹಾನನು ಹಿಂಬಾಲಿಸಿದನು. ಪೇತ್ರನು "ಮತ್ತು ಇನ್ನೊಬ್ಬ ಶಿಷ್ಯನು" ಅಂಗಳದವರೆಗೂ ಯೇಸುವನ್ನು ಹಿಂಬಾಲಿಸಿಕೊಂಡು ಹೋದರು ಎಂದು ಯೋಹಾನನು ಬರೆದಿದ್ದಾನೆ. ಇನ್ನೊಬ್ಬನು ಶಿಷ್ಯನು ಯೋಹಾನನೋ ಅಥವಾ ಯೆರೂಸಲೇಮಿನ ಶಿಷ್ಯನೋ ಎಂದು ಯಾರಿಗೂ ಗೊತ್ತಿಲ್ಲವಾದರೂ, ಆತನು ಯೋಹಾನನೇ ಎಂಬದು ಕೆಲವರ ನಂಬಿಕೆಯಾಗಿದೆ. ಯಾಕೆಂದರೆ ಈ ಸುವಾರ್ತೆಯಲ್ಲಿ ಯೋಹಾನನು ತನ್ನ ಬಗ್ಗೆ ಬರೆದಿದ್ದಾನಾದರು ಎಲ್ಲಿಯೂ ತನ್ನ ಹೆಸರನ್ನು ಪ್ರಸ್ತಾಪಿಸಿಲ್ಲ (ಉದಾ: 13:23). ಮಾತ್ರವಲ್ಲದೇ ಮಹಾಯಾಜಕನ ಅಂಗಳದೊಳಗೆ ನಡೆದ ವಿಷಯಗಳೆಲ್ಲವನ್ನೂ ಬಹಳ ಸ್ಪಷ್ಟವಾಗಿ ಇದರಲ್ಲಿ ವಿವರಿಸಲಾಗಿದೆ.

4 ಬರಬ್ಬನು. "ಬರಬ್ಬನು ರೋಮನ್ನರಿಗೆ ಪ್ರತಿರೋಧವನ್ನೊಡ್ಡುತ್ತಿದ್ದನು ಮತ್ತು ಕೊಲೆಗಳನ್ನು ಮಾಡಿದ್ದರೂ, ಯೆಹೂದ್ಯರ ಮಧ್ಯದಲ್ಲಿ ನಾಯಕನಾಗಿದ್ದನು. ರೋಮನ್ನರ ಆಳ್ವಿಕೆಯನ್ನು ಮತ್ತು ರೋಮನ್ ಸರ್ಕಾರಕ್ಕೆ ಸುಂಕ ಕೊಡುವದು ಯೆಹೂದ್ಯರಿಗೆ ಇಷ್ಟ ಇರಲಿಲ್ಲ. ಇಸ್ರಾಯೇಲರಿಗೆ ನಿಜವಾಗಿಯೂ ಸಹಾಯ ಮಾಡಲು ಶಕ್ತನಾಗಿದ್ದ ಯೇಸು ಕ್ರಿಸ್ತನಿಗೆ ಬದಲಾಗಿ ಪ್ರತಿರೋಧವನ್ನು ಮುನ್ನಡೆಸಿ ಅದರಲ್ಲಿ ವಿಫಲನಾಗಿದ್ದ ಬರಬ್ಬನನ್ನು ಬಿಡುಗಡೆ ಮಾಡಿದರು." Life Application Bible, page 1921.

5 ಕೊರಡೆಗಳ ಹೊಡೆತ ಯೇಸುವನ್ನು ಕೊಲ್ಲಬಹುದಿತ್ತು. ಸಾಮಾನ್ಯವಾದ ಪದ್ಧತಿ ಎಂದರೆ ಅಪರಾಧಿಯ ಅಂಗಿಯನ್ನು ತೆಗೆದು, ಆತನ ಕೈಗಳನ್ನು ಕಂಬಕ್ಕೆ ಕಟ್ಟಿ ಚಾಟಿಯಿಂದ ಹೊಡೆಯಲಾಗುತಿತ್ತು. ಅಪರಾಧದ ಆಧಾರದ ಮೇಲೆ ಚಾಟಿ ಹೊಡೆತಗಳನ್ನು ಹೊಡೆಯಲಾಗುತಿತ್ತು, ಯೆಹೂದ್ಯರ ಧರ್ಮಶಾಸ್ತ್ರಕ್ಕನುಸಾರವಾಗಿ 40 ಹೊಡೆತಗಳನ್ನು ಹೊಡೆಯುವ ಅನುಮತಿ ಇತ್ತು (ಧರ್ಮೋ 25:3). ಕೊರಡೆಗಳಿಂದ ಹೊಡೆಸಿಕೊಂಡ ನಂತರ ಯೇಸು ಕ್ರಿಸ್ತನು ಇನ್ನೂ ಕೆಲವು ವೇದನೆಗಳನ್ನು ಸಹಿಸಿಕೊಂಡನು ಅವುಗಳನ್ನು ಇಲ್ಲಿ ಮತ್ತು ಉಳಿದ ಸುವಾರ್ತೆಗಳಲ್ಲಿ ಬರೆಯಲಾಗಿದೆ (ಮತ್ತಾಯ 27, ಮಾರ್ಕ 15, ಲೂಕ 23)." Life Application Bible, page 1922.

ಅಪರಾಧವು ಸಾಬೀತಾಗಿ ಶಿಕ್ಷೆಯನ್ನು ವಿಧಿಸುವವರೆಗೂ ಹಿಂಸೆ ಕೊಡುವದು ರೋಮನ್ ನಿಯಮಕ್ಕನುಸಾರವಾಗಿ, ಕಾನೂನು ಬಾಹಿರವಾಗಿತ್ತು, ಮತ್ತು ಯೇಸು ಕ್ರಿಸ್ತನು ನಿರಪರಾಧಿ ಎಂದು ಪಿಲಾತನು ಪ್ರಕಟಿಸಿದ್ದನು (18:38).

6 ಆರನೆಯ ತಾಸು (19:14). ಯೆಹೂದ್ಯರ ಲೆಕ್ಕಾಚಾರಕ್ಕನುಸಾರವಾಗಿ, ಪಿಲಾತನ ನಿರ್ಣಯವು ಮಧ್ಯಾಹ್ನದ ಸಮಯದಲ್ಲಿ ಹೊರಡಿತು. ಆದರೆ, ಯೇಸುವನ್ನು ಮೂರನೇ ತಾಸಿನಲ್ಲಿ ಅಥವಾ ಬೆಳಗ್ಗೆ 9 ಘಂಟೆಗೆ ಶಿಲುಬೆಗೆ ಹಾಕಲಾಯಿತು ಎಂದು ಉಳಿದ ಸುವಾರ್ತೆಗಳು ತಿಳಿಸುತ್ತವೆ. ಯೆಹೂದ್ಯರ ಲೆಕ್ಕಾಚಾರ. ಈ ವ್ಯತ್ಯಾಸಗಳ ನಡುವೆ ಇರುವ ಒಂದೇ ಒಂದು ವಿಷಯವೆಂದರೆ ಯೋಹಾನನು ರೋಮನ್ ಸಮಯವನ್ನು ಅನುಸರಿಸುತ್ತಿದ್ದಾನೆ, ಇದಕ್ಕನುಸಾರವಾಗಿ ಪಿಲಾತನ ಮುಂದೆ ಅವರು ಕಾಣಿಸಿಕೊಂಡಿರುವದು ಬೆಳಗ್ಗೆ 6.00 ಘಂಟೆಯಾಗಿದೆ ಮತ್ತು ಶಿಲುಬೆಗೆ ಹಾಕಿದ್ದು 9.00 ಘಂಟೆ. ಸಮಯದ ಬಗ್ಗೆ ಮತ್ತಷ್ಟು ಮಾಹಿತಿಗಳಿಗಾಗಿ, ಮತ್ತಾಯ 27:45–46; ಮಾರ್ಕ 15:33–34; ಲೂಕ 23:44. The NIV Study Bible, page 1634.

7 Reference: ನೋಟ್ 2, ದೇವರ ಕುರಿಮರಿ, ಪುಟ 18.

8 ಅರಿಮಥಾಯದ ಯೋಸೇಫನು ಮತ್ತು ನಿಕೊದೇಮನು "ಇವರು ಯೇಸು ಕ್ರಿಸ್ತನು ರಹಸ್ಯ ಹಿಂಬಾಲಕರಾಗಿದ್ದರು." ಯೆಹೂದ್ಯ ಸಮಾಜದಲ್ಲಿ ಇವರಿಗೆ ಒಳ್ಳೇ ಸ್ಥಾನಗಳು ಇದ್ದರಿಂದ ಯೇಸುವಿನೊಂದಿಗಿನ ತಮ್ಮ ಸಂಬಂಧಗಳನ್ನು ವ್ಯಕ್ತಪಡಿಸಲು ಭಯಪಟ್ಟರು. ಯೋಸೇಫನು ನಾಯಕನಾಗಿದ್ದನು ಮತ್ತು ಯೆಹೂದ್ಯ ಸಮಿತಿಯಲ್ಲಿ ಗೌರವಾನ್ವಿತವಾದ ಸದಸ್ಯನಾಗಿದ್ದನು. ನಿಕೊದೇಮನು ಸಹ ಸಮಿತಿಯ ಸದಸ್ಯನಾಗಿದ್ದನು ಮತ್ತು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದಿದ್ದನು (3:1) ಮತ್ತು ನಂತರ ಉಳಿದ ಧಾರ್ಮಿಕ ನಾಯಕರ ಮಧ್ಯದಲ್ಲಿ ಯೇಸುವನ್ನು ಕಾಪಾಡಲು ಪ್ರಯತ್ನಿಸಿದ್ದನು (7:50–52). ಆದರೂ ಯೇಸುವನ್ನು ಸಮಾಧಿಯಲ್ಲಿ ಇಡುವದಕ್ಕಾಗಿ ತಮ್ಮ ಸ್ಥಾನಗಳನ್ನೇ ಪಣಕಿಟ್ಟರು." Life Application Bible, page 1925.

# ಪಾಠ 22

# ಪುನರುತ್ಥಾನ

## ಯೋಹಾನ 20

ಮಗ್ದಲದ ಮರಿಯಳು ಯೇಸು ಕ್ರಿಸ್ತನ ಮೇಲೆ ತನಗಿದ್ದ ಪ್ರೀತಿಯ ನಿಮಿತ್ತವಾಗಿ ಸಬ್ಬತ್ ದಿನವಾದ ಕೂಡಲೇ ತನ್ನ ಕರ್ತನ ಸಮಾಧಿಯ ಬಳಿಗೆ ಹೋಗುವದನ್ನೇ ಎದುರುನೋಡುತ್ತಿದ್ದಳು. ವಾರದ ಮೊದಲನೆಯ ದಿನವೇ ಇನ್ನೂ ಬೆಳಕಾಗುವದಕ್ಕಿಂತ ಮುಂಚೆಯೇ ಆಕೆ ಅಲ್ಲಿದ್ದಳು. ಕತ್ತಲೆಯಲ್ಲಿಯೇ, ಆಕೆಯು ಸಮಾಧಿಯ ಬಳಿಗೆ ಹೋದಳು. ಆದರೆ ಸಮಾಧಿಯು ತೆರೆಯಲ್ಪಟ್ಟಿರುವದನ್ನು ಮತ್ತು ಖಾಲಿಯಾಗಿರುವದನ್ನು ನೋಡಿ ಆಕೆ ಗಾಬರಿಗೊಂಡಳು. ಆಕೆ ಓಡಿ ಹೋಗಿ ಪೇತ್ರನಿಗೆ ಮತ್ತು ಯೋಹಾನನಿಗೆ ವಿಷಯವನ್ನು ತಿಳಿಸಿದಳು, ಅವರು ಕೂಡಲೇ ಪರೀಕ್ಷಿಸುವದಕ್ಕೆ ಓಡಿ ಬಂದರು. ಸಮಾಧಿಯು ಖಾಲಿಯಾಗಿರುವದನ್ನು ಮತ್ತು ಮೃತ ದೇಹದ ಮೇಲೆ ಹಾಕಿದ್ದ ಬಟ್ಟೆಗಳು ಮಾತ್ರವೇ ಉಳಿದಿರುವದನ್ನು ನೋಡಿದರು. ಇದು ಖಂಡಿತವಾಗಿಯು ಸಮಾಧಿಯ ಕಳ್ಳನ ಕೆಲಸವಲ್ಲ. ಯೇಸು ಕ್ರಿಸ್ತನು ತಾನು ವಾಗ್ದಾನಮಾಡಿದಂತೆ ಪುನರುತ್ಥಾನಗೊಂಡಿದ್ದನು. ಆದರೆ ಪುನರುತ್ಥಾನದ ಬಗ್ಗೆ ವಾಗ್ದಾನ ಮಾಡಲಾಗಿದ್ದ ವಚನಭಾಗಗಳನ್ನು ಶಿಷ್ಯರು ಆಗಲೂ ಅರ್ಥಮಾಡಿಕೊಳ್ಳಲಿಲ್ಲ (cf. ಕೀರ್ತನೆ 16:10; ಕೀರ್ತನೆ 110:1,4; ಯೆಶಾಯ 53:11; ಲೂಕ 18:33).

ಪೇತ್ರನು ಮತ್ತು ಯೋಹಾನನು ಅಲ್ಲಿಂದ ಹೋದ ಮೇಲೂ, ಮರಿಯಳು ಸಮಾಧಿಯಿಂದ ಹೊರಗೆ ಬಂದು ಅಲ್ಲೇ ಅಳುತ್ತಾ ಕೂತಿದ್ದಳು. ಆದರೂ ಮತ್ತೊಮ್ಮೆ ಒಳಗೆ ನೋಡಿದಾಗ, ಯೇಸುವಿನ ದೇಹವನ್ನು ಇಟ್ಟಿದ್ದ ಸ್ಥಳದಲ್ಲಿ ಇಬ್ಬರು ದೂತರು ಕುಳಿತಿರುವದನ್ನು ಕಂಡಳು. ನೀನು ಯಾಕೆ ಅಳುತಿದ್ದೀಯ ಎಂದು ಅವರು ಆಕೆಯನ್ನು ಕೇಳಿದರು. ದುಃಖಭರಿತಳಾಗಿ, "ಅವರು ನನ್ನ ಕರ್ತನನ್ನು ತೆಗೆದುಕೊಂಡು ಹೋಗಿದ್ದಾರೆ, ಈಗ ಆತನನ್ನು ಎಲ್ಲಿ ಇಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ" ಎಂದು ಆಕೆ ಉತ್ತರಿಸಿದಳು. ಮತ್ತು ತಿರುಗಿದಾಗ, ಯಾರೋ ಒಬ್ಬ ವ್ಯಕ್ತಿ ನಿಂತಿರುವದನ್ನು ಆಕೆ ಕಂಡಳು, ಆದರೆ ಯೇಸು ಆಕೆಯನ್ನು "ಮರಿಯಳೇ" ಎಂದು ಕರೆಯುವವರೆಗೂ ಆತನು ಯೇಸು ಎಂದು ಆಕೆ ಗುರುತು ಹಿಡಿಯಲಿಲ್ಲ. "ರಬ್ಬೂನಿ" (ಎಂದರೆ ಗುರು) ಎಂದು ಇನ್ನೂ ಜೋರಾಗಿ ಅತ್ತಳು. "ದಯವಿಟ್ಟು ನನ್ನನ್ನು ಮುಟ್ಟಬೇಡ" ಎಂದು ಆತನು ಆಕೆಗೆ ಹೇಳಿದನು. "ಬದಲಾಗಿ ನೀನು ನನ್ನನ್ನು ನೋಡಿದ್ದೀಯ ಹಾಗೂ ಬೇಗನೇ ನಾನು ತಂದೆಯ ಬಳಿಗೆ ಹೋಗುತ್ತೇನೆ" ಎಂದು ಶಿಷ್ಯರಿಗೆ ಹೇಳು ಅಂದನು. ಮರಿಯಳು ಶಿಷ್ಯರಿಗೆ ಹೇಳಲು ಹೋದಳು.

ಯೆಹೂದ್ಯರಿಗೆ ಭಯಪಟ್ಟು ಆ ದಿನ ಸಂಜೆ ಶಿಷ್ಯರು ಒಟ್ಟಾಗಿ ಸೇರಿ ಬಂದಿದ್ದಾಗ, ಯೇಸು ಕ್ರಿಸ್ತನು ಅವರ ಮಧ್ಯದಲ್ಲಿ ಕಾಣಿಸಿಕೊಂಡನು. "ನಿಮಗೆ ಸಮಾಧಾನವಾಗಲಿ!" ಎಂದು ಆತನು ಹೇಳಿದನು, ಮತ್ತು ಆತನು ಗಾಯವುಳ್ಳ ತನ್ನ ಕೈಗಳನ್ನು ಮತ್ತು ಪಕ್ಕೆಯನ್ನು ಅವರಿಗೆ ತೋರಿಸಿದನು. "ತಂದೆ-ಯು ನನ್ನನ್ನು ಕಳುಹಿಸಿದ ಹಾಗೆ ನಾನು ನಿಮ್ಮನ್ನು ಕಳುಹಿಸುತ್ತೇನೆ," ಎಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದನು. ನಂತರ ನಂಬುವವರೆಲ್ಲರಿಗೂ ಆತನ ನಾಮದಲ್ಲಿ ಕ್ಷಮಾಪಣೆಯನ್ನು ನೀಡುವ

ಅಧಿಕಾರವನ್ನು ಅವರಿಗೆ ಕೊಟ್ಟನು.

ಆದರೆ ಹನ್ನೆರೆಡು ಜನರಲ್ಲಿ ಒಬ್ಬನಾಗಿದ್ದ ತೋಮನು, ಯೇಸು ಕ್ರಿಸ್ತನು ಅವರಿಗೆ ಕಾಣಿಸಿಕೊಂಡಾಗ ಅವರ ಮಧ್ಯದಲ್ಲಿ ಇರಲಿಲ್ಲ. ಯೇಸುವನ್ನು ನಾವು ನೋಡಿದೇವೆಂದು ಶಿಷ್ಯರು ಆತನಿಗೆ ಹೇಳಿದಾಗ, ನಾನು ಆತನ ಗಾಯಗಳನ್ನು ಮುಟ್ಟಿ ನೋಡುವವರೆಗೂ ನಂಬುವದಿಲ್ಲ ಎಂದು ತೋಮನು ಹೇಳಿದನು. ಎಂಟು ದಿವಸಗಳ ನಂತರ ಯೇಸು ಕ್ರಿಸ್ತನು ಮತ್ತೆ ಶಿಷ್ಯರಿಗೆ ಕಾಣಿಸಿಕೊಂಡಾಗ ತೋಮನ ಬೇಡಿಕೆಯನ್ನು ಈಡೇರಿಸಿದನು. ಅಗ ತೋಮನು, “ನನ್ನ ಕರ್ತನೇ, ನನ್ನ ದೇವರು” ಎಂದು ಅರಿಕೆ ಮಾಡಿದನು.

## ಯೋಹಾನ 20:1–9 ಓದಿರಿ.

1.ಎ. ನಿಮ್ಮ ಮನಸ್ಸಿನಲ್ಲಿ ಉಳಿಯುವ ಈ ಭಾನುವಾರದ ಬೆಳಗ್ಗೆ ನಡೆದ ಘಟನೆಗಳನ್ನು ಮತ್ತು ವಿವರಗಳನ್ನು ವಿವರಿಸಿರಿ?

**ಗಮನಿಸಿರಿ:** ಯೆಹೂದ್ಯರ ಲೆಕ್ಕಾಚಾರದ ಪ್ರಕಾರ, ಒಂದು ದಿನದ ಯಾವುದೇ ಭಾಗವಾದರೂ ಒಂದು ದಿನವನ್ನು ರಚಿಸುತ್ತದೆ. ಯೇಸು ಕ್ರಿಸ್ತನನ್ನು ಶುಕ್ರವಾರದಂದು ಬೆಳಗ್ಗೆ ಶಿಲುಬೆಗೆ ಹಾಕಲಾಯಿತು, ಶುಕ್ರವಾರ ಮಧ್ಯಾಹ್ಯ ಸಮಾಧಿಯಲ್ಲಿ ಇಡಲಾಯಿತು, ಮತ್ತು ಭಾನುವಾರ ಬೆಳಗ್ಗೆ ಪುನರುತ್ಥಾನಗೊಂಡನು. ನಾನು ಮೂರನೇ ದಿನದಲ್ಲಿ ಎದ್ದು ಬರುವೆನೆಂದು ಯೇಸು ಕ್ರಿಸ್ತನು ಪ್ರವಾದಿಸಿದ್ದನು (ಲೂಕ 18:33; ಮಾರ್ಕ 8:31; ಮತ್ತಾಯ 27:63).

ಬಿ. ಯೋಹಾನನು ಸಮಾಧಿಯ ಬಟ್ಟೆಗಳನ್ನು ಕಾಣಿದಾಗ ಹೇಗೆ ಪ್ರತಿಕ್ರಿಯಿಸಿದನು (20:8)?

**ಗಮನಿಸಿರಿ:** ನೋಡಿದನು ಮತ್ತು ನಂಬಿದನು (20:8). ತನ್ನ ಸುವಾರ್ತೆಯಲ್ಲಿ “ನಂಬು” ಎಂಬ ಪದವನ್ನು ಬಳಕೆ ಮಾಡಿರುವದರಿಂದ ಯೋಹಾನನು ಪುನರುತ್ಥಾನವನ್ನು ನಂಬಿರಿ ಎಂದು ಸೂಚಿಸುತ್ತಿದ್ದಾನೆ ಎಂದು ನಂಬಲಾಗುತ್ತದೆ (cf. 20:29).

ಸಿ. ಯೇಸು ಕ್ರಿಸ್ತನು ತಕ್ಕ ಮಟ್ಟಿಗೆ ಎದ್ದಿದ್ದಾನೆ ಎಂದು ಅವರು ನಂಬಿದರಾದರೂ, ಇನ್ನೂ ಏನನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ (20:9)?

**ಗಮನಿಸಿರಿ:** ಪುನರುತ್ಥಾನದ ಬಗ್ಗೆ ಹಳೆಯ ಒಡಂಬಡಿಕೆಯ ಪ್ರವಾದನೆಗಳಲ್ಲಿ ಕೀರ್ತನೆ 16:10; 110:1,4; ಯೆಶಾಯ 53:11; ಹೋಶೇಯ 6:2, ಇವೂ ಸೇರಿವೆ.

## ಯೋಹಾನ 20:10–18 ಓದಿರಿ.

2. ಈ ಸಮಯದಲ್ಲಿ ಮರಿಯಳ ಮನಸ್ಥಿತಿ ಹೇಗಿತ್ತು (20:10–14)?

**ನೋಟ್**: ನೋಟ್ 1, ಮಗ್ದಲದ ಮರಿಯಳು, ಪುಟ 197.

3. ಆಕೆಯ ಅದ್ಭುತವಾದ ಅನುಭವ ಏನು (20:15–16)?

4. ಯೇಸು ಕ್ರಿಸ್ತನು ಆಕೆಗೆ ಮಾಡಲು ಹೇಳಿದ್ದೇನು (20:17)?

**Reference**: ನೋಟ್ 2, ನಾನಿನ್ನೂ ನನ್ನ ತಂದೆಯ ಬಳಿಗೆ ಹೋಗಿಲ್ಲ, ಪುಟ 197.

## ಯೋಹಾನ 20:19–23 ಓದಿರಿ.

5. ಆ ದಿನದ ನಂತರ ಸಮಯದಲ್ಲಿ ಯೇಸು ಕ್ರಿಸ್ತನು ತನ್ನ ಶಿಷ್ಯರನ್ನು ಸಂಧಿಸಿದಾಗ ನಡೆದ ಘಟನೆಗಳನ್ನು ವಿವರಿಸಿರಿ. ಅವರ ಮಧ್ಯದಲ್ಲಿ ವಾತಾವರಣವು ಹೇಗೆ ಬದಲಾಯಿತು (20:19–20)?

6. ಯೇಸು ಕ್ರಿಸ್ತನು ತನ್ನ ಶಿಷ್ಯರು ಯಾವ ಆಜ್ಞೆಯನ್ನು ಕೊಟ್ಟನು ಮತ್ತು ಆ ಕೆಲಸಕ್ಕಾಗಿ ಅವರನ್ನು ಹೇಗೆ ಬಲಗೊಳಿಸಿದನು (20:21–23)?

**Reference**: ನೋಟ್ 3, ಅವರ ಮೇಲೆ ಊದಿದನು ಮತ್ತು ನೋಟ್ 4, ನೀವು ಕ್ಷಮಿಸಿದರೆ, ಪುಟ 197.

## ಯೋಹಾನ 20:24–31 ಓದಿರಿ.

7.ಎ. ತೋಮನಿಗೆ ಪುರಾವೆಯನ್ನು ತೋರಿಸುವದಕ್ಕಾಗಿ ಯೇಸು ಕ್ರಿಸ್ತನು ಅವನನ್ನು ಹೇಗೆ ಸಂಧಿಸಿದನು (20:24–27)?

ಬಿ. ಇತರರು ತಾವು ಪುನರುತ್ಥಾನಗೊಂಡಿರುವ ಯೇಸು ಕ್ರಿಸ್ತನನ್ನು ನೋಡಿದ್ದೇವೆಂದು ಹೇಳಿದಾಗ (20:16,20) ತೋಮನ ಪ್ರತಿಕ್ರಿಯೆ ಏನಾಗಿತ್ತು (20:28)?

8. ತೋಮನ ಪ್ರತಿಕ್ರಿಯೆಗೆ ಉತ್ತರವಾಗಿ ಯೇಸು ಕ್ರಿಸ್ತನು ಪ್ರಕಟಿಸಿದ ವಾಗ್ದಾನ ಏನು (20:29)?

**Reference**: ನೋಟ್ 5, ನೀನು ನನ್ನನ್ನು ನೋಡಿದ್ದೀಯಾದ್ದರಿಂದ, ಪುಟ 198.

9. ತಾನು ಅನೇಕ ಅದ್ಭುತಗಳಿಗೆ ಸಾಕ್ಷಿಯಾಗಿದ್ದೇನಾದರೂ ಅವುಗಳಲ್ಲಿ ಕೆಲವನ್ನು ಮಾತ್ರವೇ ನನ್ನ ಸುವಾರ್ತೆಯಲ್ಲಿ ಬರೆದಿದ್ದೇನೆಂದು ಯೋಹಾನನು ಪ್ರಕಟಿಸಿದ್ದಾನೆ. ಅಪೋಸ್ತಲನು ತನ್ನ ಸುವಾರ್ತೆಯಲ್ಲಿ ಕೆಲವು ಸೂಚಕಕಾರ್ಯಗಳನ್ನು ಮಾತ್ರವೇ ಆಯ್ಕೆ ಮಾಡಿ ಅವುಗಳನ್ನು ಬರೆಯಲು ಕಾರಣವೇನು (20:31, ಯೋಹಾನನ ಪುಸ್ತಕದಲ್ಲಿ ಇದನ್ನೇ ಪ್ರಮುಖ ವಾಕ್ಯ ಎಂದು ಪರಿಗಣಿಸಲಾಗಿದೆ)?

**Reference**: ನೋಟ್ 6, ಯೇಸು ಕ್ರಿಸ್ತನು ಪುನರುತ್ಥಾನವಾದ ಮೇಲೆ ಕಾಣಿಸಿಕೊಂಡದ್ದು, ಪುಟ 198 ಮತ್ತು ನೋಟ್ 1, ಯೇಸು ಕ್ರಿಸ್ತನ ಸೂಚಕಕಾರ್ಯಗಳು ಪುಟ 75.

# ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಪರಿಪೂರ್ಣವಾದ ಭರವಸೆ

ಪುನರುತ್ಥಾನದ ನಿಜತ್ವವು 40 ದಿವಸಗಳ ಕಾಲ ದೃಢಪಟ್ಟಿತು, ಯಾಕೆಂದರೆ ಯೇಸು ಕ್ರಿಸ್ತನು ಸುಮಾರು 500ಕ್ಕೂ ಹೆಚ್ಚು ಜನರಿಗೆ7 ಶರೀರಧಾರಿಯಾಗಿ ಕಾಣಿಸಿಕೊಂಡನು–ಭ್ರಮೆಯ ಕಲ್ಪನೆಯನ್ನು ವಾದಿಸುವವರಿಗೆ ಇದು ವಿರೋಧವಾಗಿದೆ. ಇದಾದ ಮೇಲೆ, ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣವಾದನು (ಅ.ಕೃ 9:3), ಆದರೆ ನಂತರ, ಸ್ತೆಫನನಿಗೆ (ಅ.ಕೃ 7:55–60), ನಂತರ ಪೌಲನಿಗೆ (ಅ.ಕೃ 9:3–8;18:9–10;22:17–21;23:11) ಮತ್ತು ಮತ್ತೊಮ್ಮೆ ಅಪೊಸ್ತಲನಾದ ಯೋಹಾನನಿಗೆ (ಪ್ರಕಟನೆ 1:10–19) ಕಾಣಿಸಿಕೊಂಡನು.

ಪುನರುತ್ಥಾನಗೊಂಡ ತಮ್ಮ ಕರ್ತನನ್ನು ಶಿಷ್ಯರು ಸಂಧಿಸಿದಾಗ ಅವರು ಅನುಭವಿಸಿದ ಅತಿಮಧುರವಾದ ಕ್ಷಣಗಳನ್ನು ಊಹಿಸಿಕೊಳ್ಳುವದೂ ಸಹ ಕಷ್ಟಕರವಾಗಿದೆ. ಯೇಸು ಕ್ರಿಸ್ತನು ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದ್ದನು, ಸಮುದ್ರದ ಅಲೆಗಳನ್ನು ಶಾಂತಪಡಿಸಿದ್ದನು, ರೋಗಿಗಳನ್ನು, ಕುರುಡರನ್ನು ಮತ್ತು ಕುಂಟರನ್ನು ಗುಣಪಡಿಸಿದ್ದನು, ಸಾವಿರಾರು ಜನರಿಗೆ ಊಟ ಕೊಟ್ಟದ್ದನ್ನು, ದುರಾತ್ಮಗಳನ್ನು ಓಡಿಸಿದ್ದನ್ನು, ನೀರಿನ ಮೇಲೆ ನಡೆದದ್ದನ್ನು ಮತ್ತು ಸತ್ತವರನ್ನು ಎಬ್ಬಿಸಿದ್ದನ್ನು ನೋಡಿದ್ದು ಸಾಕಾಗಿ–ತ್ತು. ಆದರೆ ಈಗ ತನ್ನ ಪುನರುತ್ಥಾನದ ಬಗ್ಗೆ ಆತನೇ ಹೇಳಿದ ಮಾತು ಸಹ ನೆರವೇರಿದೆ; ಆತನ ಅವರ ಎದುರಿನಲ್ಲಿ ಶರೀರಧಾರೆಯಾಗಿ ಕಾಣಿಸಿಕೊಂಡಿದ್ದನು. ತಕ್ಷಣದಲ್ಲಿ ತನಗೆ ಮರಣವನ್ನು ವಿಧಿಸಿದವರಿಗಿಂತಲೂ ಯೇಸು ಹೆಚ್ಚು ಶಕ್ತಿಯುಳ್ಳವನೆಂಬದು ಸಾಬೀತಾಯಿತು. ಶಿಲುಬೆಯು ತನ್ನಲ್ಲಿ ನೆರವೇರಲು ಆತನು ಒಪ್ಪಿಕೊಂಡನು. ಇದರ ಅರ್ಥ ಏನು? ಪುನರುತ್ಥಾನಗೊಂಡಿರುವ ಯೇಸು ಕ್ರಿಸ್ತನನ್ನು ನೋಡುವದು ನಮ್ಮ ಹಾಗೆಯೇ, ಅವರ ಆತ್ಮೀಕ ಜೀವಿತದ ಪ್ರಾರಂಭವಾಗಿತ್ತು.

ಅವರ ತಿಳುವಳಿಕೆಯು ಸಮಯಕ್ಕನುಸಾರವಾಗಿ ತಿಳಿದುಬರುವದಾದರೂ, ಯೇಸು ಕ್ರಿಸ್ತನ ಪುನರುತ್ಥಾನವು ಪ್ರಾರಂಭದ ವಿಶ್ವಾಸಿಗಳ ನಂಬಿಕೆಯ ಅಡಿಪಾಯವಾಯಿತು. “ಒಂದುವೇಳೆ ಕ್ರಿಸ್ತನು ಪುನರುತ್ಥಾಗೊಳ್ಳದೆ ಹೋಗಿದ್ದರೆ” ಪೌಲನು ಕೊರಿಂಥದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಪ್ರಕಟಿಸುವದೇನೆಂದರೆ, “ನಮ್ಮ ಪ್ರಸಂಗವು ಮತ್ತು ನಿಮ್ಮ ನಂಬಿಕೆಯು ಹುರುಳಿಲ್ಲದ್ದಾಗಿರುತಿತ್ತು” (1 ಕೊರಿಂಥ 15:14). ಯಾಕೆ? ಯಾಕೆಂದರೆ ಸತ್ಯವೇದದನುಸಾರವಾದ ಕ್ರೈಸ್ತತ್ವವು, ಜೀವಿಸುವ ಕರ್ತನಾದ ಯೇಸು ಕ್ರಿಸ್ತನೊಂದಿಗೆ ವೈಯಕ್ತಿಕ ಸಂಬಂಧವಿರುವದರಿಂದ ಹುಟ್ಟುತ್ತದೆ ಮತ್ತು ಮುಂದುವರೆಯುತ್ತದೆ.

ಹೀಗೆ, ಮೊದಲನೆ ಶತಮಾನದ ವಿಶ್ವಾಸಿಗಳು ತಮ್ಮ ಕಣ್ಣುಗಳನ್ನು ಪುನರುತ್ಥಾಗೊಂಡ ತಮ್ಮ ರಕ್ಷಕನ ಮೇಲೆ ಇಟ್ಟವರಾಗಿ ದೇವರ ಕೃಪೆಯೊಂದಿಗೆ ಆತ್ಮೀಕ ಪ್ರಯಾಣವನ್ನು ಪ್ರಾರಂಭಿಸಿದರು. ಪುನರುತ್ಥಾನವು ಅವರಿಗೆ ಎಲ್ಲವೂ ಆಗಿತ್ತು ಯಾಕೆಂದರೆ ದೇವರ ಕ್ಷಮಾಪಣೆ ಮತ್ತು ನಿತ್ಯವಾದ ನೆರವೇರುವಿಕೆಯನ್ನು ಪಡೆಯಲು ಇದೊಂದೇ ಮಾರ್ಗ ಎಂದು ಅವರು ಇಡೀ ಲೋಕಕ್ಕೆ ಸಾರಿದರು.

ಪುನರುತ್ಥಾನವು ಇಂದಿಗೂ ನಮ್ಮ ನಂಬಿಕೆಯ ಅಡಿಪಾಯವಾಗಿದೆ. ಯೇಸು ಕ್ರಿಸ್ತನೇ ನಮ್ಮ

ಜೀವಿಸುವ ರಕ್ಷಕನು ಮತ್ತು ಕರ್ತನಾಗಿರುವದರಿಂದ ಆತನು ನಮಗೆ ಈ ನೆರವೇರಿಕೆಯನ್ನು ಕೊಡಲು ಶಕ್ತನಾಗಿದ್ದಾನೆ. ನಮ್ಮ ಅಧ್ಯಯನದ ಮುಕ್ತಾಯಕ್ಕೆ ಬಂದಿರುವ ನಾವು, ನಮ್ಮ ನಂಬಿಕೆ ಮತ್ತು ನೆರವೇರುವಿಕೆಗೆ ಚರಿತ್ರೆಯು ಕೊಟ್ಟಿರುವ ಈ ಪರಿಪೂರ್ಣವಾದ ಭರವಸೆಯನ್ನು ಪ್ರತಿಬಿಂಬಿಸೋಣ.

1.ಎ. ಯೇಸು ಕ್ರಿಸ್ತನ ಪುನರುತ್ಥಾನವು ಆತನ ದೈವೀಕತೆಯನ್ನು ಮತ್ತು ಆತನ ವಾಗ್ದಾನಗಳೆಲ್ಲವೂ ನ್ಯಾಯಸಮ್ಮತವಾದವುಗಳೆಂದು ನಿರೂಪಿಸಿದನು. ನೆರವೇರುವಿಕೆಯ ವಿಷಯದಲ್ಲಿ ಯೇಸು ಕ್ರಿಸ್ತನ ನೀಡಿದ ಹೇಳಿಕೆಗಳೇನು? (ಆವರಣದ ಒಳಗಿರುವ ವಚನಭಾಗಗಳೆಲ್ಲವೂ ಖಡ್ಡಾಯವಾದದ್ದಲ್ಲ)

ಯೋಹಾನ 10:10ಬಿ

ಯೋಹಾನ 4:14 (6:35;7:38;12:46) ಆತ್ಮೀಕ ಹಸಿವು ಮತ್ತು ದಾಹ

ಯೋಹಾನ 14:16–17 (16:13)

ಯೋಹಾನ 16:33 (14:27)

ಬಿ. ಮತ್ತಾಯ 28:20ಬಿ ಇದಕ್ಕೆ ಏನನ್ನು ಸೇರಿಸುತ್ತದೆ?

2.ಎ. ಯೇಸು ಕ್ರಿಸ್ತನು ದೇವರ ರಾಜ್ಯದಲ್ಲಿ ಆಳ್ವಿಕೆಯನ್ನು ಮಾಡುತ್ತಾನೆಂದು ಪುನರುತ್ಥಾನವು ಸಾಬೀತುಪಡಿಸಿದೆ. ಆತನ ಆಳ್ವಿಕೆಯನ್ನು ಯಾವುದು ಒಳಗೊಂಡಿದೆ?

ಯೋಹಾನ 1:3–4

ಕೊಲೊಸ್ಸೆ 1:15–17

ಬಿ. ಕೆಳಗಿನ ವಚನದಲ್ಲಿ ಭವಿಷ್ಯದಲ್ಲಿ ಏನನ್ನು ವಾಗ್ದಾನ ಮಾಡಿವೆ?

ಫಿಲಿಪ್ಪಿ 2:10–11

ಸಿ. ಖಡ್ಡಾಯವಲ್ಲ: ಅ.ಕೃ 17:31 ಮತ್ತು ಯೋಹಾನ 5:22ರಲ್ಲಿ ಯಾವ ಆತ್ಮೀಕ ಸತ್ಯವನ್ನು ಪ್ರಕಟಿಸಲಾಗಿದೆ? ರೋಮಾ 4:25 ಮತ್ತು ರೋಮಾ 3:23–24ರ ಅನುಸಾರವಾಗಿ ಆತನನ್ನು ಸ್ವೀಕರಿಸಿಕೊಳ್ಳುವವರಿಗೆ ಯೇಸು ಕ್ರಿಸ್ತನ ಪುನರುತ್ಥಾನವು ಮಾಡಿರುವ ವಾಗ್ದಾನ ಏನು?

3.ಎ. ಮರಣದ ಮೇಲೆ ಯೇಸು ಕ್ರಿಸ್ತನಿಗೆ ಅಧಿಕಾರ ಇದೆ ಎಂಬದನ್ನು ಪುನರುತ್ಥಾನವು ನಿರೂಪಿಸುವದರ ಮೂಲಕ, ಆತನು ವಾಗ್ದಾನ ಮಾಡಿದಂತೆಯೇ ನಿತ್ಯಜೀವದ ಪರಿಪೂರ್ಣವಾದ ಭರವಸೆಯನ್ನು ನಮಗೆ ಕೊಟ್ಟಿದೆ. ನಿತ್ಯಜೀವದ ವಿಷಯದಲ್ಲಿ ಯೇಸು ಕ್ರಿಸ್ತನು ಮಾಡಿದ ವಾಗ್ದಾನಳೇನೇನು?

ಯೋಹಾನ 5:24

ಯೋಹಾನ 11:25–26

ಯೋಹಾನ 14:2–3

ಬಿ. ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಒಬ್ಬ ವಿಶ್ವಾಸಿಗೆ ಏನನ್ನು ನೆರವೇರಿಸಿದ್ದಾನೆ ಎಂದು 2 ತಿಮೊಥೆ 1:10 ಸ್ಪಷ್ಟವಾಗಿ ಒಂದೇ ಪದದಲ್ಲಿ ವಿವರಿಸುತ್ತದೆ?

4.ಎ. ಯೋಹಾನ 20:19–20 ಮತ್ತು ಲೂಕ 24:39ರ ಅನುಸಾರವಾಗಿ ಪುನರುತ್ಥಾನಗೊಂಡಿರುವ ಯೇಸು ಕ್ರಿಸ್ತನ ಶರೀರದ ಯಾವ ವಿಷಯಗಳು ಪುನರುತ್ಥಾನಗೊಂಡಾಗ ನಮ್ಮ ಶರೀರಗಳೂ ಹಾಗೆಯೇ ಇರುವವೆಂದು ತಿಳಿಸುತ್ತವೆ?

ಬಿ. ಕೆಳಗಿನ ವಚನಗಳು ಪರಲೋಕದಲ್ಲಿ ನಮಗೆ ಎಂಥಾ ದೇಹಗಳು ಕೊಡಲ್ಪಡುವವು ಎಂಬ ವಾಗ್ದಾನವನ್ನು ತಿಳಿಸುತ್ತವೆ?

1 ಕೊರಿಂಥ 15:42–44

ಫಿಲಿಪ್ಪಿ 3:21

ಪ್ರಕಟನೆ 21:4

5. ಯೇಸು ಕ್ರಿಸ್ತನ ಪುನರುತ್ಥಾನವು ನಾವು ಸಹ ನಮ್ಮ ಆತ್ಮೀಕ ಮರಣದಿಂದ (ದೇವರಿಂದ ದೂರವಾಗಿರುವದರಿಂದ) ಆತ್ಮೀಕ ಜೀವಿತಕ್ಕೆ (ದೇವರ ಪ್ರೀತಿಯ ಪ್ರಸನ್ನತೆಯೊಳಗೆ ಬರುವಂತೆ) ಸಹಾಯ ಮಾಡುತ್ತದೆ. ಸತ್ಯವೇದದ ಈ ಸತ್ಯವನ್ನು ಕೆಳಗಿನ ವಚನಗಳು ಹೇಗೆ ನಿರೂಪಿಸುತ್ತವೆ?

ರೋಮಾ 6:3–4

**ನೋಟ್**: ದೀಕ್ಷಾಸ್ನಾನ ಎಂದರೆ ಗುರುತಿಸಿಕೊಳ್ಳುವದು.

ರೋಮಾ 8:11 (ಗಲಾತ್ಯ 2:20).

## ಸಾರಾಂಶ

6. ಸತ್ಯವೇದದನುಸಾರವಾದ ಕ್ರೈಸ್ತತ್ವವು ಯೇಸು ಕ್ರಿಸ್ತನ ಪುನರುತ್ಥಾನದ ಮೇಲೆ ಯಾಕೆ ಆಧಾರವಾಗಿದೆ?

**Reference**: ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವದು ವ್ಯಾಖ್ಯಾನ, ಉಲ್ಲೇಖನ 3, ಪುಟ 193.

7. ನಿಮ್ಮ ನೆರವೇರುವಿಕೆಯ ಅನ್ವೇಷಣೆಯ ಬೆಳಕಿನಲ್ಲಿ ಯೇಸು ಕ್ರಿಸ್ತನ ಪುನರುತ್ಥಾನವು ನಿಮಗೆ ಹೇಗೆ ಉಪಯುಕ್ತವಾಗಿದೆ?

8. ಯೇಸು ಕ್ರಿಸ್ತನು ಹೇಳಿದಂತೆಯೇ ಪುನರುತ್ಥಾನಗೊಂಡಿರುವದರಿಂದ ಆತನ ಯಾವ ವಾಗ್ದಾನಗಳು ನಿಮಗೆ ಹೆಚ್ಚು ಅರ್ಥಗರ್ಭಿತವಾಗಿವೆ?

9. ಚರಿತ್ರೆಯಲ್ಲಿರುವ ಪುನರುತ್ಥಾನವು ಯಾವಾಗ ನಿಮಗೆ ನಿಜವಾಯಿತು? ಕ್ರಿಸ್ತನಿಗೆ ಸಾಕ್ಷಿಯನ್ನು ಕೊಡಲು ಪುನರುತ್ಥಾನವು ಯಾಕೆ ಅವಶ್ಯಕವಾಗಿದೆ?

Reference: Know Why You Believe booklet in the front pocket of your notebook. ಹಾಗೆಯೇ, ಪುನರುತ್ಥಾನಕ್ಕೆ ಏಳು ಪುರಾವೆಗಳು ಸಹ ನೋಡಿರಿ.

## ಪಾಠ 22 ನೋಟ್ಸ್

1 ಮಗ್ದಲದ ಮರಿಯಳು ಪುನರುತ್ಥಾನನಾದ ಯೇಸು ಕ್ರಿಸ್ತನನ್ನು ಮೊದಲು ನೋಡಿದಳು. ಇದಕ್ಕೂ ಮುಂಚೆ ಆತನು ಮರಿಯಳಿಂದ ಏಳು ದೆವ್ವಗಳನ್ನು ಓಡಿಸಿದ್ದನು (ಲೂಕ 8:2–3) ಗಲಿಲಾಯದಲ್ಲಿ ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರು ನಡೆಸಿದ ಸೇವೆಯಲ್ಲಿ ಈಕೆಯು ಸಹ ಭಾಗಿಯಾಗಿ, ತನ್ನಿಂದಾದ ಸಹಾಯವನ್ನು ನೀಡಿದ್ದಳು (cf. ಮಾರ್ಕ 15:41). ಆಕೆಯು ಪುನರುತ್ಥಾನಕ್ಕೆ ಸಾಕ್ಷಿಯಾಗಿದ್ದಾಳೆಂದು ಮತ್ತಾಯನು ಮತ್ತು ಮಾರ್ಕನು ಒಪ್ಪಿಕೊಳ್ಳುತ್ತಾರೆ ಮತ್ತು ಲೂಕನು ಅದನ್ನು ಸರಿ ಎಂದು ಹೇಳುತ್ತಾನೆ (cf. ಲೂಕ 23:49,55; 24:10). ಮಗ್ದಲದ ಮರಿಯಳು ಮತ್ತು ಬೆಥಾನ್ಯದ ಮರಿಯಳ ನಡುವೆ ಕೆಲವರಿಗೆ ಇರುವ ವ್ಯತ್ಯಾಸವನ್ನು ಯೋಹಾನ ಸುವಾರ್ತೆಯು ತಳ್ಳಿಹಾಕುತ್ತದೆ, ಆದರೆ ಅವರಿಬ್ಬರೂ ಯೇಸುವಿನಲ್ಲಿ ಭಯಭಕ್ತಿಯುಳ್ಳವರಾಗಿದ್ದರು.
2 ನಾನಿನ್ನೂ ನನ್ನ ತಂದೆಯ ಬಳಿಗೆ ಹೋಗಿಲ್ಲ (20:17). “ಆರೋಹಣಕ್ಕೆ ಇನ್ನೂ ಸ್ವಲ್ಪ ಸಮಯ

ಬಾಕಿ ಇದೆ ಎಂಬದು ಇದರ ಅರ್ಥವಾಗಿರಬಹುದು. ಯೇಸುವನ್ನು ನೋಡುವ ಅವಕಾಶವು ಮರಿಯಳಿಗೆ ಮತ್ತೆ ಸಿಗುವದಾಗಿರಬಹುದು ಆದ್ದರಿಂದಲೇ ಆಕೆಯು ಆತನನ್ನು ಮುಟ್ಟಲು ಹೋದಾಗ ಆತನು ಬೇಡವೆಂದನು. ಜೊತೆಯಲ್ಲಿ ಯೇಸು ಆಕೆಗೆ ಹೇಳುತ್ತಿರುವದೇನೆಂದರೆ ಶಿಲುಬೆಯ ಮರಣವಾದ ಮೇಲೆ ಪವಿತ್ರಾತ್ಮನು ನಿಮ್ಮೊಂದಿಗೆ ಇರುವನು ನಾನು ಇರಲು ಆಗುವದಿಲ್ಲ ಎಂದು ಹೇಳಿದನು (16:5–16 ನೋಡಿರಿ). The NIV Study Bible, page 1636.

3 ಅವರ ಮೇಲೆ ಊದಿದನು (20:22). ದೇವರು ಸೃಷ್ಟಿಯ ಸಮಯದಲ್ಲಿ ಮನುಷ್ಯನಲ್ಲಿ ತನ್ನ ಶ್ವಾಸವನ್ನು ಊದಿದ್ದನ್ನು ಈ ಕ್ರಿಯೆಯು ನೆನಪಿಸುತ್ತದೆ (ಆದಿಕಾಂಡ 2:7). 50 ದಿವಸಗಳಾದ ಮೇಲೆ ಯೇಸು ಕ್ರಿಸ್ತನ ಮಹಿಮೆಯು ಆತನಿಗೆ ಸಂದ ನಂತರ ಪಂಚಾಶತ್ತಮ ದಿನದಂದು ಬಂದು ತಮ್ಮಲ್ಲಿ ನೆಲೆಸುವ ಪವಿತ್ರಾತ್ಮನ ಮೂಲಕ ಆತ್ಮೀಕ ಜೀವಿತವನ್ನು ಪಡೆದುಕೊಳ್ಳುವಂತೆ ಯೇಸು ಕ್ರಿಸ್ತನ ಶಿಷ್ಯರ ಮೇಲೆ ಊದಿದನು (ಯೋಹಾನ 7:39; ಅ.ಕೃ 2).

4 ನೀವು ಕ್ಷಮಿಸಿದರೆ...(20:23) ಪಾಪಗಳನ್ನು ಕ್ಷಮಿಸುವ ಅಧಿಕಾರವು ದೇವರಿಗೆ ಮಾತ್ರವೇ ಇದೆ, ಈ ಅಧಿಕಾರವನ್ನು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಕೊಡುತ್ತಿಲ್ಲ (ಮಾರ್ಕ 2:7). ಆದರೆ ಕೆಲವು ವ್ಯಾಖ್ಯಾನಕಾರರು ನಂಬುವದೇನೆಂದರೆ ಯೇಸು ಕ್ರಿಸ್ತನು ಸಭೆಯನ್ನು ಅಥವಾ ಅಪೋಸ್ತಲರ ಅಧಿಕಾರವನ್ನು ಸೂಚಿಸುತ್ತಿದ್ದಾನೆ ಎಂದು, ಆದರೆ ಪವಿತ್ರಾತ್ಮನು ಕೊಡುವ ವಿವೇಚನಾ ಶಕ್ತಿಯ ಬಗ್ಗೆ ಯೇಸು ಕ್ರಿಸ್ತನು ಮಾತನಾಡುತ್ತಿದ್ದಾನೆಂಬದು ಇನ್ನೂ ಕೆಲವರ ನಂಬಿಕೆಯಾಗಿದೆ. ಮತ್ತೂ ಕೆಲವರ ಅಭಿಪ್ರಾಯವೆಂದರೆ ಯಾರೆಲ್ಲಾ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುತ್ತಾರೋ ದೇವರು ಅವರ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ಯಾರೆಲ್ಲಾ ಆತನಲ್ಲಿ ನಂಬಿಕೆಯನ್ನಿಡುವದನ್ನು ನಿರಾಕರಿಸುತ್ತಾರೋ ಅವರನ್ನು ಕ್ಷಮಿಸುವದಿಲ್ಲ ಎಂಬದನ್ನು ಸಾರುವ ಅಧಿಕಾರವನ್ನು ಕೊಡುತ್ತಿದ್ದಾನೆ ಎಂಬದಾಗಿದೆ.

5 ನೀನು ನನ್ನನ್ನು ನೋಡಿರುವದರಿಂದ (20:29). "ಯಾವುದಾದರೊಂದು ಸೂಚಕಕಾರ್ಯವನ್ನಾಗಲಿ ಅಥವಾ ಅದ್ಭುತವನ್ನಾಗಲಿ ನೋಡುವದಾದರೆ ಯೇಸುವನ್ನು ನಂಬುಬದಾಗಿ ಹೇಳುತ್ತಾರೆ. ಅದರೆ ನೋಡದೇನೇ ನಂಬಿದರೆ ನಾವು ಧನ್ಯರು ಎಂದು ಯೇಸು ಕ್ರಿಸ್ತನು ಹೇಳುತ್ತಿದ್ದಾನೆ. ಬೇಕಾದ ಪುರಾವೆಗಳೆಲ್ಲವೂ ಸತ್ಯವ್ವೇದದಲ್ಲಿ ಬರೆಯಲ್ಪಟ್ಟಿವೆ ಮತ್ತು ಅನೇಕ ವಿಶ್ವಾಸಿಗಳ ಸಾಕ್ಷಿಗಳೂ ಇವೆ. ಶಾರೀರಿಕವಾಗಿ ನೋಡಿದರೆ ಮಾತ್ರ ಯೇಸುವನ್ನು ಈಗಿರುವದಕ್ಕಿಂತ ಹೆಚ್ಚು ವಿಶೇಷವಾಗೇನೂ ಮಾಡುವದಿಲ್ಲ." Life Application Bible, page 1928.

6 ಪುನರುತ್ಥಾನವಾದ ಮೇಲೆ ಯೇಸು ಕ್ರಿಸ್ತನು ಕಾಣಿಸಿಕೊಂಡದ್ದು (Walvoord and Zuck, The Bible Knowledge Commentary on the New Testament, page 91).

# ನಲವತ್ತು ದಿವಸಗಳು – ಪುನರುತ್ಥಾನದಿಂದ ಆರೋಹಣದವರೆಗೂ

## ಭಾನುವಾರ ಬೆಳಗ್ಗೆ

1. ಸೂರ್ಯೋದಯಕ್ಕೂ ಮೊದಲೇ ಯೇಸುವಿನ ಸಮಾಧಿಯನ್ನು ಮುಚ್ಚಿದ್ದ ಕಲ್ಲನ್ನು ದೇವದೂತನು ತೆಗೆದು ಹಾಕಿದನು (ಮತ್ತಾಯ 28:2–4).
2. ಯೇಸುವನ್ನು ಹಿಂಬಾಲಿಸುತ್ತಿದ್ದ ಸ್ತ್ರೀಯರು ಯೇಸುವಿನ ಸಮಾಧಿಯ ಬಳಿಗೆ ಹೋದರು ಮತ್ತು ಅಲ್ಲಿ ಯೇಸು ಇಲ್ಲದಿರುವದನ್ನು ಕಂಡರು (ಮತ್ತಾ 28:1; ಮಾರ್ಕ 16:1–4; ಲೂಕ 24:1–3; ಯೋಹಾನ 20:1).
3. ಮಗ್ದಲಯದ ಮರಿಯಳು ಪೇತ್ರನಿಗೂ ಮತ್ತು ಯೋಹಾನನಿಗೂ ವಿಷಯವನ್ನು ತಿಳಿಸಲು

ಹೋದಳು (ಯೋಹಾನ 20:1–2).
4. ಸಮಾಧಿಯ ಬಳಿಯಲ್ಲೇ ಇದ್ದ ಸ್ತ್ರೀಯರು, ತಮಗೆ ಪುನರುತ್ಥಾನದ ಬಗ್ಗೆ ತಿಳಿಸಿದ ಇಬ್ಬರು ದೂತರನ್ನು ಕಂಡರು (ಮತ್ತಾಯ 28:5–7; ಮಾರ್ಕ 16:5–7; ಲೂಕ 24:4–8).
5. ಪೇತ್ರನು ಮತ್ತು ಯೋಹಾನನು ಯೇಸುವಿನ ಸಮಾಧಿಯನ್ನು ಸಂಧಿಸಿದರು (ಲೂಕ 24:12; ಯೋಹಾನ 20:3–10).
6. ಮಗ್ದಲದ ಮರಿಯಳು ಮತ್ತೆ ಸಮಾಧಿಯ ಬಳಿಗೆ ಹೋದಾಗ ಯೇಸು ಕ್ರಿಸ್ತನು ತೋಟದಲ್ಲಿ ಒಬ್ಬೊಂಟಿಗನಾಗಿ ಆಕೆಗೆ ಕಾಣಿಸಿಕೊಂಡನು (ಮಾರ್ಕ 16:9–11; ಯೋಹಾನ 20:11–18): ಆತನು ಮೊದಲನೆ ಬಾರಿಗೆ ಕಾಣಿಸಿಕೊಂಡದ್ದು.
7. ಯೇಸು ಕ್ರಿಸ್ತನು ಇನ್ನೂ ಕೆಲವು ಸ್ತ್ರೀಯರಿಗೆ ಕಾಣಿಸಿಕೊಂಡನು (ಮರಿಯಳು, ಯಾಕೋಬನ ತಾರಿ, ಸಲೋಮೆ ಮತ್ತು ಯೋಹಾನ್ನಳು) (ಮತ್ತಾಯ 28:8–10): ಆತನು ಎರಡನೆ ಬಾರಿಗೆ ಕಾಣಿಸಿಕೊಂಡದ್ದು.
8. ಯೇಸುವಿನ ಸಮಾಧಿಯನ್ನು ಕಾಯುತ್ತಿದ್ದ ಕಾವಲುಗಾರರು, ಸಮಾಧಿಗೆ ಇಟ್ಟಿದ್ದ ಕಲ್ಲನ್ನು ದೇವದೂತರು ಹೇಗೆ ಉರುಳಿಸಿದರು ಎಂಬದನ್ನು ಧಾರ್ಮಿಕ ನಾಯಕರಿಗೆ ತಿಳಿಸಿದರು. ನಂತರ ಅವರಿಗೆ ಲಂಚ ಕೊಡಲಾಯಿತು (ಮತ್ತಾಯ 28:11–15).
9. ಯೇಸು ಕ್ರಿಸ್ತನು ಪೇತ್ರನಿಗೆ ಕಾಣಿಸಿಕೊಂಡನು (1 ಕೊರಿಂಥ 15:5); ಮೂರನೇ ಬಾರಿಗೆ ಆತನು ಕಾಣಿಸಿಕೊಂಡದ್ದು.

## ಭಾನುವಾರ ಮಧ್ಯಾಹ್ನ

10. ಯೇಸು ಕ್ರಿಸ್ತನು ಇಬ್ಬರು ಶಿಷ್ಯರು ಎಮ್ಮಾಹು ಹಳ್ಳಿಗೆ ಹೋಗುತ್ತಿದ್ದಾಗ ಕಾಣಿಸಿಕೊಂಡನು (ಮಾರ್ಕ 16:12–13; ಲೂಕ 24:13–32): ನಾಲ್ಕನೇ ಬಾರಿಗೆ ಆತನು ಕಾಣಿಸಿಕೊಂಡದ್ದು.

## ಭಾನುವಾರ ಸಂಜೆ

11. ಎಮ್ಮಾಹುವಿಗೆ ಹೋಗುತ್ತಿದ್ದ ಇಬ್ಬರು ಶಿಷ್ಯರು ತಾವು ಯೇಸುವನ್ನು ನೋಡಿದ್ದಾಗಿ ಇತರರಿಗೆ ತಿಳಿಸಿದರು (ಲೂಕ 24:33–35).
12. ಯೇಸು ಕ್ರಿಸ್ತನು ಮೇಲಂತಸ್ತಿನಲ್ಲಿ ಹತ್ತು ಜನ ಶಿಷ್ಯರಿಗೆ ಕಾಣಿಸಿಕೊಂಡನು, ಆಗ ತೋಮನು ಅವರ ಮಧ್ಯದಲ್ಲಿರಲಿಲ್ಲ (ಲೂಕ 24:36–43; ಯೋಹಾನ 20:19–25): ಐದನೇ ಬಾರಿಗೆ ಆತನು ಕಾಣಿಸಿಕೊಂಡದ್ದು.

## ಮುಂದಿನ ಭಾನುವಾರ

13. ಯೇಸು ಕ್ರಿಸ್ತನು ತನ್ನ ಹನ್ನೊಂದು ಶಿಷ್ಯರಿಗೆ ಕಾಣಿಸಿಕೊಂಡನು, ಆಗ ತೋಮನು ಇದ್ದನು, ಮತ್ತು ಅವನು ನಂಬಿದನು (ಯೋಹಾನ 20:26–28): ಆರನೇ ಬಾರಿಗೆ ಆತನು ಕಾಣಿಸಿಕೊಂಡದ್ದು.

## ಮುಂದಿನ 32 ದಿನಗಳು

14. ಯೇಸು ಕ್ರಿಸ್ತನು ಗಲಿಲಾಯ ಸಮುದ್ರದ ಬಳಿ ತನ್ನ ಏಳು ಶಿಷ್ಯರಿಗೆ ಕಾಣಿಸಿಕೊಂಡನು ಮತ್ತು ಮೀನಿನ ಸೂಚಕಕಾರ್ಯವನ್ನು ಮಾಡಿದನು (ಯೋಹಾನ 21:1–14): ಏಳನೇ ಬಾರಿಗೆ ಆತನು

ಕಾಣಿಸಿಕೊಂಡದ್ದು.
15. ಗಲಿಲಾಯದ ಪರ್ವತದ ಬಳಿ (ತನ್ನ ಹನ್ನೊಂದು ಶಿಷ್ಯರನ್ನು ಸೇರಿಸಿ) 500 ಜನರಿಗೆ ಕಾಣಿಸಿಕೊಂಡನು (ಮತ್ತಾಯ 28:16–20; ಮಾರ್ಕ 16:15–18; 1 ಕೊರಿಂಥ 15:6): ಎಂಟನೇ ಬಾರಿಗೆ ಆತನು ಕಾಣಿಸಿಕೊಂಡದ್ದು.
16. ಯೇಸು ಕ್ರಿಸ್ತನು ತನ್ನ ಮಲಸೋದರನಾದ ಯಾಕೋಬನಿಗೆ ಕಾಣಿಸಿಕೊಂಡನು (1 ಕೊರಿಂಥ 15:7): ಒಂಭತ್ತನೇ ಬಾರಿಗೆ ಆತನು ಕಾಣಿಸಿಕೊಂಡದ್ದು.
17. ಯೇಸು ಕ್ರಿಸ್ತನು ಯೆರೂಸಲೇಮಿನಲ್ಲಿ ಮತ್ತೆ ತನ್ನ ಶಿಷ್ಯರಿಗೆ ಕಾಣಿಸಿಕೊಂಡನು (ಲೂಕ 24:44–49; ಅ.ಕೃ 1:3–8): ಹತ್ತನೇ ಬಾರಿಗೆ ಆತನು ಕಾಣಿಸಿಕೊಂಡದ್ದು.
18. ಶಿಷ್ಯರು ನೋಡುತ್ತಿದ್ದ ಹಾಗೆ ಎಣ್ಣೇ ಮರಗಳ ಗುಡ್ಡದಿಂದ ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣವಾದನು (ಮಾರ್ಕ 16:19–20; ಲೂಕ 24:50–53; ಅ.ಕೃ 1:9–12).

7 ಯೇಸು ಕ್ರಿಸ್ತನು ನಿಜವಾಗಲೂ ಮರಣದಿಂದ ಎದ್ದು ಬಂದನೆಂಬದಕ್ಕೆ ಆ ಪುರಾವೆಗಳು
1. ದೇವಕುಮಾರನಾದ ಯೇಸು ಕ್ರಿಸ್ತನು ತನ್ನ ಪುನರುತ್ಥಾನದ ಬಗ್ಗೆ ಮೊದಲೇ ಹೇಳಿದ್ದನು.
2. ಖಾಲಿಯಾಗಿದ್ದ ಆತನ ಸಮಾಧಿಯೇ ಆತನು ಪುನರುತ್ಥಾನಗೊಂಡಿದ್ದಾನೆ ಎಂಬದಕ್ಕೆ ಸೂಕ್ತವಾದ ವಿವರಣೆಯಾಗಿದೆ.
3. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡದ್ದೇ ಆತನು ಪುನರುತ್ಥಾಗೊಂಡಿದ್ದಾನೆ ಎಂಬದಕ್ಕೆ ಸೂಕ್ತವಾದ ವಿವರಣೆಯಾಗಿದೆ.
4. ಕ್ರೈಸ್ತೀಯ ಸಭೆಯ ಪ್ರಾರಂಭವೇ ಆತನು ಪುನರುತ್ಥಾನಗೊಂಡಿದ್ದಾನೆ ಎಂಬದಕ್ಕೆ ಸೂಕ್ತವಾದ ವಿವರಣೆಯಾಗಿದೆ.
5. ಶಿಷ್ಯರ ರೂಪಾಂತರಗೊಳ್ಳುವಿಕೆಯೇ ಆತನು ಪುನರುತ್ಥಾನಗೊಂಡಿದ್ದಾನೆ ಎಂಬದಕ್ಕೆ ಸೂಕ್ತವಾದ ವಿವರಣೆಯಾಗಿದೆ.
6. ಅಪೊಸ್ತಲನಾದ ಪೌಲನ ಸಾಕ್ಷಿ ಮತ್ತು ಆತನ ಜೀವಿತದ ಮಾರ್ಪಡುವಿಕೆ ಆತನು ಪುನರುತ್ಥಾಗೊಂಡಿದ್ದಾನೆ ಎಂಬದನ್ನು ನಿರೂಪಿಸಲು ಕಾರಣವಾಗಿದೆ. Ten Basic Steps Toward Christian Maturity Teacher's Manual, Here's Life Publishers, pages 58-64.

# ಪಾಠ 23

## “ನನ್ನ ಕುರಿಗಳನ್ನು ಮೇಯಿಸು”

### ಮುಕ್ತಾಯ (ಯೋಹಾನ 21)

ತನ್ನ ಪುಸ್ತಕವನ್ನು ಕೊನೆಗೊಳಿಸುತ್ತಾ, ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡ ಮೂರನೆಯ ಬಾರಿಯನ್ನು ವಿವರಿಸುತ್ತಿದ್ದಾನೆ. ಗಲಿಲಾಯ ಸಮುದ್ರದಲ್ಲಿ, ಯೇಸು ಕ್ರಿಸ್ತನ ಶಿಷ್ಯರಲ್ಲಿ ಏಳು ಜನ ರಾತ್ರಿಯಿಂದ ಮೀನು ಹಿಡಿಯಲು ಬಲೆ ಬೀಸಿದ್ದರು ಬೆಳಗಿನವರೆಗೂ ಯಾವುದೇ ಪ್ರಯೋಜನವಾಗಿರಲಿಲ್ಲ. ದಡದಲ್ಲಿ ನಿಂತಿದ್ದ ಯೇಸುವನ್ನು ಪ್ರಾರಂಭದಲ್ಲಿ ಅವರು ಕಂಡುಹಿಡಿಯಲಿಲ್ಲ, ಆದರೆ ನಂತರ ದೋಣಿಯ ಬಲಭಾಗದಲ್ಲಿ ಬಲೆಗಳನ್ನು ಬೀಸಿರಿ ಎಂದು ಯೇಸು ಕ್ರಿಸ್ತನು ಹೇಳಿದಾಗ ಅವರು ಆತನ ಮಾತಿಗೆ ವಿಧೇಯರಾದರು. ಶಿಷ್ಯರು ಯೇಸು ಕ್ರಿಸ್ತನು ಸೂಚನೆಯಂತೆ ಮಾಡಿದಾಗ ಅವರ ಬಲೆಗಳು ಮೀನುಗಳಿಂದ ತುಂಬಿದ್ದರಿಂದ, ಅದನ್ನು ಪುನಃ ದೋಣಿಯೊಳಗೆ ಎಳೆದುಕೊಳ್ಳಲು ಸಹ ಅವರಿಗೆ ಸಾಧ್ಯವಾಗಲಿಲ್ಲ. ಯೋಹಾನನು ಪೇತ್ರನ ಕಡೆಗೆ ತಿರುಗಿ, “ಈತನು ನಮ್ಮ ಕರ್ತನು” ಎಂದು ಹೇಳಿದನು. ತಕ್ಷಣವೇ, ಪೇತ್ರನು ನೀರಿನೊಳಗೆ ಧುಮುಕಿ ಈಜುತ್ತಾ ದಡವನ್ನು ಸೇರಿದನು. ಉಳಿದವರು ದೋಣಿಯಲ್ಲಿ ಆತನನ್ನು ಹಿಂಬಾಲಿಸಿದರು ಮತ್ತು 153 ದೊಡ್ಡ ಮೀನುಗಳಿದ್ದ ಬಲೆಯನ್ನು ಕಿತ್ತುಹೋಗದೇನೇ ಅದ್ಭುತವಾಗಿ ಎಳೆದು ತಂದರು. ಅವರೆಲ್ಲರೂ ದಡವನ್ನು ಮುಟ್ಟಿದ್ದಾಗ, ಯೇಸು ಕ್ರಿಸ್ತನು ಬೆಂಕಿಯನ್ನು ಹಾಕಿ ಅವರಿಗೆ ಫಲಹಾರವನ್ನು ಸಿದ್ಧಮಾಡಿದ್ದನು.

ಅವರು ತಿಂದು ಮುಗುಸಿದ ಮೇಲೆ, ಯೇಸು ಕ್ರಿಸ್ತನು ಪೇತ್ರನೊಂದಿಗೆ ಪ್ರಾಮುಖ್ಯವಾದ ಸಂಭಾಷಣೆಯನ್ನು ನಡೆಸಿದನು. ಅವರು ಜೊತೆಯಲ್ಲಿ ನಡೆಯುತ್ತಿದ್ದಾಗ, ಯೇಸು ಕ್ರಿಸ್ತನು ಪೇತ್ರನಿಗೆ, “ನೀನು ನನ್ನ ಮೇಲೆ ಮಮತೆಯಿಟ್ಟಿದ್ದೀಯೋ?” ಎಂದು ಮೂರು ಸಾರಿ ಕೇಳಿದನು. “ಹೌದು ಕರ್ತನೇ; ನಾನು ನಿನ್ನ ಮೇಲೆ ಮಮತೆಯನ್ನಿಟ್ಟಿರುವದು ನಿನಗೇ ಗೊತ್ತು” ಎಂದು ಪೇತ್ರನು ಮೂರು ಸಾರಿ ಉತ್ತರಿಸಿದನು. ಅದಕ್ಕೆ ಪ್ರತ್ಯುತ್ತರವಾಗಿ ಯೇಸು ಕ್ರಿಸ್ತನು ಪ್ರತಿಬಾರಿಯು, “ನನ್ನ ಕುರಿಗಳನ್ನು ಮೇಯಿಸು” ಎಂದು ಹೇಳಿದನು. ನಂತರ ಯೇಸು ಕ್ರಿಸ್ತನು ಪೇತ್ರನಿಗೆ, ನಿನ್ನ ಜೀವಿತವು ರಕ್ತಸಾಕ್ಷಿಯ ಮೂಲಕ ನನ್ನನ್ನು ಮಹಿಮೆಪಡಿಸುವದೆಂಬ ಎಚ್ಚರಿಕೆಯನ್ನು ಕೊಟ್ಟನು. ಆದರೂ, “ನನ್ನನ್ನು ಹಿಂಬಾಲಿಸು” ಎಂಬ ಆಜ್ಞೆಯನ್ನು ಯೇಸು ಕ್ರಿಸ್ತನು ತನ್ನ ನಂಬಿಗಸ್ಥನಾದ ಶಿಷ್ಯನಿಗೆ ಕೊಟ್ಟನು. ಆಗ ಪೇತ್ರನು ಹಿಂದಿರುಗಿದಾಗ, ತಮ್ಮನ್ನು ಹಿಂಬಾಲಿಸುತ್ತಿದ್ದ ಯೋಹಾನನ್ನು ಕಂಡು, “ದೇವರ ಆತನ ವಿಷಯ ಏನು?” ಎಂಬದಾಗಿ ಕೇಳಿದನು, ಅದಕ್ಕೆ ಯೇಸು ಕ್ರಿಸ್ತನು ಪೇತ್ರನೇ ಅದರ ಬಗ್ಗೆ ನೀನು ಚಿಂತಿಸಬೇಡ, “ನೀನು ನನ್ನನ್ನು ಹಿಂಬಾಲಿಸು” ಎಂದು ಹೇಳಿದನು.
ನಾನು ಬರೆದಿರುವ ವಿಷಯಗಳನ್ನೆಲ್ಲಾ ಬಹಳ ಪ್ರಾಮಾಣಿಕವಾಗಿ ಬರೆದಿದ್ದೇನೆಂದು ಹೇಳುತ್ತಾ ಯೋಹಾನನು ತನ್ನ ಸುವಾರ್ತೆಯನ್ನು ಮುಗಿಸುತ್ತಿದ್ದಾನೆ. “ಯೇಸು ಕ್ರಿಸ್ತನು ಇನ್ನೂ ಅನೇಕ ಸೂಚಕಕಾರ್ಯಗಳನ್ನು ಮಾಡಿದನು” ಎಂಬದಾಗಿ ಮುದಿವಯಸ್ಸಿನವನಾಗಿದ್ದ ಅಪೊಸ್ತಲನು ಹೇಳಿದನು. “ಒಂದುವೇಳೆ ಯೇಸು ಕ್ರಿಸ್ತನು ಮಾಡಿದ ಕಾರ್ಯಗಳನ್ನೆಲ್ಲಾ ಬರೆಯುವದಾದರೆ ಲೋಕದಲ್ಲಿ ಪುಸ್ತಕಗಳನ್ನು ಇಡಲು ಸ್ಥಳವೇ ಇರುವದಿಲ್ಲ.”

## ಯೋಹಾನ 21:1–14 ಓದಿರಿ.

1.ಎ. ಸಮಯ, ಸ್ಥಳ, ವಾತಾವರಣ, ಹಾಜರಿದ್ದ ಜನ ಮತ್ತು ಕ್ರಿಯೆಗಳಿಗನುಸಾರವಾಗಿ ಸಂದರ್ಭವನ್ನು ವಿವರಿಸಿರಿ (21:1–4).

ಬಿ. ಯೇಸು ಸಂಧಿಸಿದ ಸಮಯದಲ್ಲಿ ಏನೆಲ್ಲಾ ಶ್ರೇಷ್ಟ ಘಟನೆಗಳು ಸಂಭವಿಸಿದವು (21:5–6,11–14)?

2. ಯೋಹಾನ ಮಾತುಗಳು ಮತ್ತು ಪೇತ್ರನು ಪ್ರತಿಕ್ರಿಯೆಯು ಈ ಇಬ್ಬರು ವ್ಯಕ್ತಿಗಳ ಬಗ್ಗೆ ಏನನ್ನು ತಿಳಿಸುತ್ತದೆ (cf. 21:7)?

3.ಎ. ಯೇಸು ಕ್ರಿಸ್ತನು ನೀಡಿದ ಉಳಿದ ನಾಲ್ಕು ಹೇಳಿಕೆಗಳೇನು (21:5,6,10,12)?

ಬಿ. ಯೇಸುವಿನ ವಿಷಯದಲ್ಲಿ ಇಲ್ಲಿ ನಿಮ್ಮ ಮೇಲೆ ಪ್ರಭಾವ ಬೀರುವ ವಿಷಯ ಏನು?

## ಯೋಹಾನ 21:15–25 ಓದಿರಿ.

4. ಫಲಾಹಾರವಾದ ನಂತರ, ಯೇಸು ಕ್ರಿಸ್ತನು ಪೇತ್ರನಿಗೆ ಯಾವ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸುವದಕ್ಕಾಗಿ ಕೇಳಿದನು (21:15–17)?

ಗಮನಿಸಿರಿ: ಇವುಗಳಿಗಿಂತ ಹೆಚ್ಚು (21:15) ಎಂದರೆ "ಇವರೆಲ್ಲರಿಗಿಂತಲೂ ನೀನು ನನ್ನನ್ನು ಹೆಚ್ಚಾಗಿ ಪ್ರೀತಿಸುತ್ತೀಯೋ?" ಯಾಕೆಂದರೆ ಉಳಿದವರಿಗಿಂತಲೂ ಪೇತ್ರನು ತನ್ನನ್ನು ಪ್ರಮಾಣಿಕನೆಂದು ತೋರಿಸಿಕೊಳ್ಳುತ್ತಿದ್ದನು (ಛಿಜಿ. 13:37; ಮತ್ತಾಯ 26:33; ಮಾರ್ಕ 14:29).

5. ಪೇತ್ರನು ಹೇಗೆ ಪ್ರತಿಕ್ರಿಯಿಸಿದನು ಮತ್ತು ಆತನ ಪ್ರತಿಕ್ರಿಯೆಗಳು ಏನನ್ನು ಪ್ರದರ್ಶಿಸಿದವು?

6. ಪೇತ್ರನು ಯೇಸುವನ್ನು ಪ್ರೀತಿಸುತಿದ್ದರಿಂದ, ಆ ಪ್ರೀತಿಯ ನಿಮಿತ್ತ ಏನನ್ನು ಮಾಡುವಂತೆ ಯೇಸು ಅವನಿಗೆ ಹೇಳಿದನು (21:15–17)?

7.ಎ. ಯೇಸು ಕ್ರಿಸ್ತನು ಪೇತ್ರನಿಗೆ ಮುಂದೆ ಏನು ಸಂಭವಿಸುತ್ತದೆ ಎಂಬದಾಗಿ ಹೇಳಿದನು (21:18–19ಎ)?

ಬಿ. ಆದರೂ, ಯೇಸು ಕ್ರಿಸ್ತನು ಪೇತ್ರನಿಗೆ ಯಾವ ಆಜ್ಞೆಯನ್ನು ಕೊಟ್ಟನು (21:19ಬಿ)?

8. ಪೇತ್ರನು ತನ್ನ ಜೀವಿತವನ್ನು ಯೋಹಾನನಿಗೆ ಹೋಲಿಸಿದಾಗ ಯೇಸು ಕ್ರಿಸ್ತನು ಆತನನ್ನು ಹೇಗೆ ನಿರಾಸೆಪಡಿಸಿದನು (21:20–22)?

9. ಯೋಹಾನನು ಯಾವ ವದಂತಿಯನ್ನು ತಳ್ಳಿಹಾಕಿದನು (21:20–33)?

10. ಯೋಹಾನನು ತನ್ನ ಓದುಗರಿಗೆ ಏನನ್ನು ಖಚಿತಪಡಿಸುತ್ತಿದ್ದಾನೆ (21:24)?

11.ಎ. ತನ್ನ ಅಂತಿಮವಾದ ಹಿನ್ನೋಟದಲ್ಲಿ, ಯೇಸು ಕ್ರಿಸ್ತನ ಜೀವಿತದ ಬಗ್ಗೆ ಯೋಹಾನನು ಯಾವ ಹೇಳಿಕೆಗಳನ್ನು ನೀಡಿದನು (21:25)?

ಬಿ. ಈ ಸುವಾರ್ತೆಯನ್ನು ಓದುವವರಿಗೆ ಏನಾಗಬೇಕೆಂಬದು ಯೋಹಾನನ ನಿರೀಕ್ಷೆಯಾಗಿದೆ (20:31)?

## ಮೂಲಭೂತ ವಿಷಯಗಳ ಮೇಲೆ ಕಟ್ಟಲ್ಪಡುವಿಕೆ

## ಕಾರ್ಯಗತದಲ್ಲಿರುವ ನೆರವೇರುವಿಕೆ

ಯೇಸು ಕ್ರಿಸ್ತನ ಪುನರುತ್ಥಾನವಾದ ನಂತರವೂ ತನ್ನ ಶಿಷ್ಯರ ಜೀವಿತದಲ್ಲಿ ಇನ್ನೂ ಕಾರ್ಯನಿರ್ವಹಿಸುವದನ್ನು ಮತ್ತು ಸಮರ್ಪಿತನಾಗಿರುವದನ್ನು, ಗಲಿಲಾಯದ ಸಮುದ್ರದಲ್ಲಿ ಕಾಣಿಸಿಕೊಂಡಿದ್ದನು ವಿವರಿಸುವದರ ಮೂಲಕ ಯೋಹಾನನು ತಿಳಿಸುತ್ತಿದ್ದಾನೆ. ಆ ದಿನದಲ್ಲಿ ಆತನು ತೋರಿದ ಕರುಣೆಯುಳ್ಳ ದೇವರ ಸ್ವಭಾವವನ್ನು ವ್ಯಕ್ತಪಡಿಸಿದನು. ಅದ್ಭುತಕರವಾಗಿ ಮೀನನ್ನು ದೊರಕಿಸಿ ಕೊಡುವದರ ಮೂಲಕ ಮನುಷ್ಯನ ಅಸಹಾಯಕತೆಯ ಸಮಯದಲ್ಲಿ ಪರಿಪೂರ್ಣವಾದ ಸಹಾಯವನ್ನು ಮಾಡಲು ಶಕ್ತನಾಗಿದ್ದಾನೆ. ಆತನು ತನ್ನ ಶಿಷ್ಯರಿಗೆ ಫಲಾಹಾರವನ್ನು ಸಿದ್ಧಪಡಿಸಿ ಬಡಿಸುವ ಮೂಲಕ, ತನ್ನನ್ನು ತಗ್ಗಿಸಿಕೊಂಡು ಪರಿಪೂರ್ಣ ಸಂತೋಷದಿಂದ ಜನರ ಅಗತ್ಯತೆಗಳನ್ನು ಪೂರೈಸುತ್ತಾ ದೇವರ ಸ್ವಭಾವವನ್ನು ಪ್ರಕಟಪಡಿಸಿದನು. ಪೇತ್ರನು ಯೇಸು ಕ್ರಿಸ್ತನಿಗೆ ತೋರಿದ ಪ್ರೀತಿಯನ್ನು ಆತನು ತನ್ನಲ್ಲಿಯೇ ಇರಿಸಿಕೊಳ್ಳದೇ, ನನ್ನ “ಕುರಿಗಳನ್ನು ಮೇಯಿಸು” ಎಂದು ಹೇಳಿದನು, ಇದರ ಅರ್ಥ ದೇವರಿಗಾಗಿ ನಮ್ಮಲ್ಲಿರುವ ಪ್ರೀತಿಯನ್ನು ಇತರರ ಅಗತ್ಯತೆಗಳನ್ನು ಪೂರೈಸುವ ಕ್ರಿಯೆಗಳನ್ನಾಗಿ ಮಾರ್ಪಡಿಸಬೇಕೆಂಬದು ದೇವರ ಬಯಕೆಯಾಗಿದೆ ಎಂದು ತೋರಿಸಿಕೊಟ್ಟನು.

ಯೇಸು ಕ್ರಿಸ್ತನು ನಮಗೆ ತೋರಿಸುವ ಪ್ರೀತಿ ಮತ್ತು ಸೇವೆಯ ಅಂತ್ಯ ಶಿಲುಬೆಯಲ್ಲ. “ನಾನು ಜೀವಿಸುವದರಿಂದ, ನೀವೂ ಜೀವಿಸುವಿರಿ” (14:19), ಎಂದು ಆತನು ವಾಗ್ದಾನ ಮಾಡಿದ್ದಾನೆ. ಅಂದು ಗಲಿಲಾಯದ ಸಮುದ್ರದ ಬಳಿ ನಿಂತಿದ್ದ ಹಾಗೆ, ಇಂದಿಗೂ ಸಹ ಯೇಸು ಕ್ರಿಸ್ತನ ಜೀವಿಸುತ್ತಿದ್ದಾನೆ ಮತ್ತು ನಮ್ಮನ್ನು ಮುನ್ನಡೆಸಲು, ಅಗತ್ಯತೆಗಳನ್ನು ಪೂರೈಸಲು ಮತ್ತು ಅತನನ್ನು ಪ್ರೀತಿಸುವ ಎಲ್ಲರಿಗೂ ಸೇವೆ ಮಾಡಲು ಆತನು ಸಿದ್ಧನಾಗಿದ್ದಾನೆ. ನಾವು ಆತನನ್ನು ಅನುಸರಿಸುವ ಆಯ್ಕೆಯನ್ನು ಮಾಡುವದಾದರೆ, ಕಾರ್ಯನಿರತವಾಗಿರುವ ನಮ್ಮ ನೆರವೇರುವಿಕೆಯು ನೆರವೇರಲು ಸಹಾಯ ಮಾಡುತ್ತಾನೆ. ಈ ಪ್ರಾಮುಖ್ಯವಾದ ಸತ್ಯಗಳನ್ನು ಗಮನಿಸಿ ನಾವು ನಮ್ಮ ಅಧ್ಯಯನವನ್ನು ಮುಗಿಸೋಣ.

1.ಎ. ಕಷ್ಟಕರ ಮತ್ತು ಅಸಾಧ್ಯವಾದ ಸನ್ನಿವೇಶದಲ್ಲಿಯೂ ಯೋಹಾನ 21ರಲ್ಲಿ ಯೇಸು ಕ್ರಿಸ್ತನು ಮಾಡಿದ ಸೂಚಕಕಾರ್ಯವು ಆತನ ಬಗ್ಗೆ ಏನನ್ನು ಪ್ರದರ್ಶಿಸುತ್ತದೆ?

ಬಿ. ಮಾನುಷಿಕವಾದ ನಮ್ಮ ಸೀಮಿತವಾದ ಮೇರೆ ಮತ್ತು ಅಗತ್ಯತೆಯ ಸಮಯದಲ್ಲಿ ಏನನ್ನು ನೆನಪಿಸಿಕೊಳ್ಳಬೇಕು ಮತ್ತು ಮಾಡಬೇಕೆಂದು ನಮಗೆ ಸೂಚಿಸಲಾಗಿದೆ?

ಮತ್ತಾಯ 6:25,33

1 ಪೇತ್ರ 5:7

ಸಿ. 2 ಕೊರಿಂಥ 9:8ರಲ್ಲಿ ದೇವರು ಕೊಟ್ಟಿರುವ ವಾಗ್ದಾನ ಏನು?

2.ಎ. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಫಲಾಹಾರವನ್ನು ಸಿದ್ಧಪಡಿಸಿ ಬಡಿಸಿದ್ದರಲ್ಲಿ, ದೇವರ ಯಾವ ಸ್ವಭಾವವನ್ನು ನಾವು ಕಾಣಬಹುದು?

ಬಿ. ಫಿಲಿಪ್ಪಿ 2:6–8 ಯೇಸು ಕ್ರಿಸ್ತನು ಸೇವಕನೆಂದು ಹೇಗೆ ಬಣ್ಣಿಸುತ್ತದೆ?

3. ಕೆಳಗಿನ ವಚನಗಳಲ್ಲಿ ದೇವರ ಪೋಷಣೆಯ ಯಾವ ವಿಷಯಗಳನ್ನು ತಿಳಿಸಲಾಗಿದೆ?

ಕೀರ್ತನೆ 121:3, 7–8

ಯೆಶಾಯ 41:10

ರೋಮಾ 8:31ಬಿ–32

ಫಿಲಿಪ್ಪಿ 4:19

4.ಎ. ನಾವು ಜನರಿಗೆ ಸೇವೆ ಮಾಡಬೇಕು ಮತ್ತು ಅವರನ್ನು ಪೋಷಿಸಬೇಕೆಂಬದೇ ದೇವರ ಬಯಕೆ ಎಂದು ಯೇಸು ಕ್ರಿಸ್ತನು ಪ್ರಕಟಪಡಿಸಿದನು. ನಾವು ಆತನ ಮೇಲೆ ಇಟ್ಟಿರುವ ಪ್ರೀತಿಗೆ ಬದಲಾಗಿ, ಏನನ್ನು ಮಾಡಬೇಕೆಂದು ಆತನು ನಮಗೆ ಹೇಳುತ್ತಾನೆ?

ಯೋಹಾನ 21:15ಬಿ, 16ಬಿ

ಬಿ. ಬೇರೆಯವರ ವಿಷಯದಲ್ಲಿ ಕಾಳಜಿಯನ್ನು ವಹಿಸುವದರ ಬಗ್ಗೆ ಕೆಳಗಿನ ವಚನಗಳು ಏನನ್ನು ತಿಳಿಸುತ್ತವೆ?

ಗಲಾತ್ಯ 6:2

1 ತಿಮೊಥೆ 6:18

1 ಪೇತ್ರ 4:8–11

5.ಎ. ಕ್ರಿಸ್ತನೊಂದಿಗೆ ನಾವು ಜನರಿಗೆ ಕಾಳಜಿಯನ್ನು ತೋರಿಸುವದಾದರೆ, ನಮಗೆ ಸಿಗುವ ಸೌಲಭ್ಯಗಳೇನು?

2 ಕೊರಿಂಥ 5:18–20

ಬಿ. ಅವಶ್ಯಕತೆಯಲ್ಲಿರುವ ಲೋಕದಲ್ಲಿ ನಾವು ಆತನೊಂದಿಗೆ ಸೇವೆಯನ್ನು ಮಾಡುವಾಗ ಯೇಸು ನಮಗೆ ಏನು ವಾಗ್ದಾನ ಮಾಡಿದ್ದಾನೆ?

ಮತ್ತಾಯ 28:18,20ಬಿ

6. ಕ್ರಿಸ್ತನ ಮೂಲಕ ದೇವರಿಗೆ ಸ್ವಾಭಾವಿಕವಾಗಿ ನಂಬಿಗಸ್ಥರಾಗಿ ಮತ್ತು ವಿಧೇಯರಾಗಿ ಜೀವಿಸಲು ಪ್ರೇರಣೆ ಏನು?

1 ಯೋಹಾನ 4:19 (ರೋಮಾ 5:8)

7.ಎ. ಯೇಸು ಕ್ರಿಸ್ತನನ್ನು ಸುಮಾರು 60 ವರ್ಷಗಳಿಂದ ಹಿಂಬಾಲಿಸುತ್ತಾ ಈಗ 85 ವರ್ಷ ಪ್ರಾಯವಾಗಿರುವ ಅಪೊಸ್ತಲನಾದ ಯೋಹಾನನಿಂದ, ಆತನಲ್ಲಿ ಭಯಭಕ್ತಿಯುಳ್ಳವರಾಗಿರುವದರಿಂದ ನಾವು ಏನನ್ನು ನಿರೀಕ್ಷಿಸುತ್ತೇವೆ?

ಯೋಹಾನ 1:16

ಬಿ. ಯೇಸು ಮಾಡಿರುವ ವಾಗ್ದಾನ ಏನು?

ಯೋಹಾನ 10:10ಬಿ

## ಸಾರಾಂಶ

6.ಎ. ಕಾರ್ಯರೂಪದ ಆಧಾರದ ಮೇಲೆ ಯೇಸು ಕ್ರಿಸ್ತನು ನಿಮ್ಮಲ್ಲಿ ಏನನ್ನು ಮಾಡಲು ಬಯಸುತ್ತಿದ್ದಾನೆ ಎಂಬದನ್ನು ನೀವು ಕಲಿತುಕೊಂಡಿದ್ದೀರ?

ಬಿ. ಯೋಹಾನ 21ರಲ್ಲಿ ಅದ್ಭುತಕರವಾಗಿ ಮೀನುಗಳನ್ನು ಯೇಸು ಕ್ರಿಸ್ತನು ದೊರಕಿಸಿಕೊಟ್ಟದ್ದರ ಮೂಲಕ ನಿಮಗೆ ಏನು ನೆನಪಾಗುತ್ತದೆ? ನಿಮ್ಮ ಜೀವಿತದ ಕೆಲವು ಕ್ಷೇತ್ರಗಳಿಗೆ ಇವು ಅನ್ವಯಿಸುತ್ತವೆಯೇ?

7.ಎ. ಯೋಹಾನ 21:16, 19ಬಿ ಪ್ರಕಾರ ದೇವರೊಂದಿಗಿನ ನಿಮ್ಮ ನಡುಗೆಯ ಬಗ್ಗೆ ಯೇಸು ಕ್ರಿಸ್ತನು ಪೇತ್ರನೊಂದಿಗೆ ಚರ್ಚಿಸಿದ ಸರಳವಾದ ವಿಷಯಗಳು ಯಾವುವು?

ಬಿ. ಯೇಸು ಕ್ರಿಸ್ತನು ಮಾತ್ರವೇ ಕೊಡುವಂಥಹ ನೆರವೇರುವಿಕೆಯನ್ನು ಅನುಭವಿಸಲು ಇಂಥ ತೀರ್ಮಾನಗಳು ನಿರ್ವಹಿಸುವ ಪಾತ್ರಗಳೇನು?

8.ಎ ಯೋಹಾನನ ಧ್ಯಾನದ ಬಗ್ಗೆ ನೀವು ಗಮನಹರಿಸುವಾಗ, ಯೇಸು ಕ್ರಿಸ್ತನ ಮತ್ತು ದೇವರ ಸ್ವಭಾವದ ಬಗ್ಗೆ ಏನನ್ನು ಕಲಿತಿದ್ದೀರ?

ಬಿ. ನೆರವೇರುವಿಕೆಯ ಬಗ್ಗೆ ನೀವು ಏನನ್ನು ಕಲಿತಿದ್ದೀರ?

ಸಿ. ದೇವರಿಗೆ ಯಾವ ವಿಷಯದಲ್ಲಿ ನೀವು ಕೃತಜ್ಞತೆಯುಳ್ಳವರಾಗಿದ್ದೀರ?

***ಅಂತಿಮವಾಗಿ ಗಮನಿಸಿರಿ:*** ನೆರವೇರುವಿಕೆಯ ಅನ್ವೇಷಣೆಯ ಅಧ್ಯಯನದ ಮೂಲಕವಾಗಿ, ಯೇಸು ಕ್ರಿಸ್ತನು ಯಾರು ಎಂಬದನ್ನು ಮೊದಲ ಬಾರಿಗೆ ಅರ್ಥಮಾಡಿಕೊಂಡಿದ್ದೀರಿ, ಮತ್ತು ಆತನು ಯಾರಾಗಿದ್ದಾನೆಂದು ನೀವು ತಿಳಿಸುಕೊಳ್ಳಬೇಕೆಂಬದಾಗಿ ಮಾತ್ರ ಆತನು ಬಯಸುತ್ತಿಲ್ಲ ಬದಲಾಗಿ ಆತನೊಂದಿಗೆ ವೈಯಕ್ತಿಕವಾದ ಸಂಬಂಧವನ್ನು ಸಹ ಇಟ್ಟುಕೊಳ್ಳಬೇಕೆಂದು ಬಯಸುತ್ತಾನೆ. ಪ್ರಕಟನೆ 3:20ರಲ್ಲಿ, *"ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟ ಮಾಡುವನು"* ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ.

ಈ ಕ್ಷಣವೇ ನಿಮ್ಮ ಜೀವಿತದ ಬಾಗಿಲನ್ನು ಯೇಸು ಕ್ರಿಸ್ತನಿಗಾಗಿ ತೆರೆಯಬೇಕೆಂದು ನೀವು ಬಯಸುವದಾದರೆ, ಕೆಳಗೆ ಪ್ರಾರ್ಥನೆಯನ್ನು ಕೊಡಲಾಗಿದೆ ಅದನ್ನು ಮಾಡಿರಿ:

*“ಕರ್ತನಾದ ಯೇಸುವೇ, ನನಗೆ ನೀನು ಬೇಕು. ನನ್ನ ಪಾಪಗಳಿಗಾಗಿ ಶಿಲುಬೆಯ ಮೇಲೆ ಸತ್ತದ್ದಕ್ಕಾಗಿ ನಿನಗೆ ಸ್ತೋತ್ರ. ನನ್ನ ಜೀವಿತದೊಳಗೆ ಬಂದು ನಾನು ಯಾವ ರೀತಿಯಲ್ಲಿ ಇರಬೇಕೆಂದು ನೀನು ನನ್ನನ್ನು ಸೃಷ್ಟಿಸಿದೆಯೋ ನಾನು ಹಾಗೆ ಮಾಡು ಎಂದು ನಿನ್ನನ್ನು ಆಹ್ವಾನಿಸುತ್ತೇನೆ. ಆಮೆನ್.”*

ನೀವು ಯಥಾರ್ಥರಾಗಿ ಈ ಪ್ರಾರ್ಥನೆಯನ್ನು ಮಾಡುವದಾದರೆ, ಪ್ರಕಟನೆ 3:20ರಲ್ಲಿ ಯೇಸು ಕ್ರಿಸ್ತನು ವಾಗ್ದಾನ ಮಾಡಿರುವಂತೆಯೇ ನಿಮ್ಮ ಜೀವಿತದೊಳಗೆ ಬರುವನು ಮತ್ತು ಆತನು ನಿಮ್ಮನ್ನು ಎಂದಿಗೂ ಕೈಬಿಡುವದಿಲ್ಲ (ಇಬ್ರಿಯ 13:5ಬಿ).

# ಪ್ರಾಮುಖ್ಯವಾದ ಅಡಿಬರಹಗಳ ನಿರ್ದೇಶಕ


| ಪಾಠ | ಪುಟ | ನೋಟ್ ಮತ್ತು ವಿಷಯ |
|---|---|---|
| 1 | 7 | 1 ಸುವಾರ್ತೆ. |
| | 8 | 2 ಯೋಹಾನನ ಬರವಣಿಗೆ. |
| | 8 | **4 ಸ್ನಾನಿಕನಾದ ಯೋಹಾನನು.** |
| 2 | 17 | **1 ಯೇಸು ಕ್ರಿಸ್ತನು, ಮೆಸ್ಸೀಯನು.** |
| | 18 | 2 ದೇವರ ಕುರಿಮರಿ (1:29,36). |
| | 18 | 3 ಪವಿತ್ರಾತ್ಮನಲ್ಲಿ ದೀಕ್ಷಾಸ್ನಾ (1:33). |
| | 18 | **4 ಮನುಷ್ಯಕುಮಾರನು** |
| 3 | 25 | **1 ಪಸ್ಕ** (ಪಸ್ಕದ ಭೋಜನ, ಪುಟ 139). |
| 4 | 33 | **1 ಫರಿಸಾಯರು.** |
| | 33 | **2 ಪವಿತ್ರಾತ್ಮನು** |
| 5 | 42 | 1 ಸಮಾರ್ಯರು (ನೋಟ್ 3, ಪುಟ 93 ಸಹ). |
| 6 | 50 | 2 “ಹಿರಿಯರ ಸಂಪ್ರದಾಯ.” |
| | 50 | **5 ಮೆಸ್ಸೀಯನ ಕುರಿತಾದ ಪ್ರವಾದನೆಗಳು ಯೇಸು ಕ್ರಿಸ್ತನಲ್ಲಿ ನೆರವೇರಿದವು.** |
| 8 | 66 | **5 ಸೈತಾನನು, ದೆವ್ವಗಳು.** |
| 9 | 75 | **1 ಯೇಸು ಕ್ರಿಸ್ತನ ಸೂಚಕಕಾರ್ಯಗಳು.** |
| 10 | 84 | **1 ಯೇಸು ಕ್ರಿಸ್ತನ “ನಾನೇ” ಎಂಬ ಹೇಳಿಕೆಗಳು.** |
| 11 | 93 | 1 ಯೆಹೂದ್ಯರು (8:48). |
| | 93 | 5 ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚೆಯೇ ನಾನಿದ್ದೇನು! (8:58). |
| 12 | 102 | 1 ಯಾರು ಪಾಪ ಮಾಡಿದರು...? (9:2). |
| | 102 | 2 ಆತನು ಸಬ್ಬತ್ ದಿನವನ್ನು ಲಕ್ಷಿಸುವದಿಲ್ಲ (9:16. |
| 14 | 119 | 1 ನಾನೇ...ಜೀವವೂ (11:25). |
| | 119 | **2 ಸಭಾಮಂಡಳಿ.** |
| | 120 | **6 ವಿಶ್ವಾಸಿಗೆ ಮರಣ.** |
| 16 | 139 | **1 ಪಸ್ಕದ ಊಟ** (ಪಸ್ಕವನ್ನು ನೋಡಿರಿ, ಪುಟ 25). |
| 17 | 147 | 1 ನಾನು ಮತ್ತೆ ಬರುತ್ತೇನೆ (14:3); ಎರಡನೇ ಬರೋಣ. |
| | 148 | 2 ನನ್ನ ಹೊರತು....ಯಾರೂ ಬರಲಾರರು (14:6). |
| | 148 | 4 ನನ್ನ ಹೆಸರಿನಲ್ಲಿ ನೀವು ಏನೇ ಬೇಡಿಕೊಂಡರೂ (14:13). |
| 22 | 198 | **6 ಯೇಸು ಕ್ರಿಸ್ತನು ಪುನರುತ್ಥಾನ ಹೊಂದಿದ ಮೇಲೆ ಕಾಣಿಸಿಕೊಂಡದ್ದು.** |
| | 199 | 7 ಯೇಸು ಕ್ರಿಸ್ತನು ನಿಜವಾಗಿಯೂ ಸತ್ತು ಎದ್ದುಬಂದನು ಎಂಬದಕ್ಕೆ ಪುರಾವೆಗಳು. |

# *Bibliography*


William Barclay, *The Gospel of John*, volumes 1 & 2, THe Westminster Press, Philadelphia, Pennsylvania, copyright 1975.

F.F.Bruce, *The Gospel of John*, William B. Eerdmans Publishing Company, Grand Rapids,Michigan, copyright, 1983.

A. Edersheim, *The Life and Times of Jesus the Messiah*, Hendrickson Publishers, Peabody, Massachusetts, Preface the First Edition, 1883.

Irving Jensen, *John*, Here's Life Publishers, San Bernardina, California, copyright 1983.

C.S.Lewis, *Mere Christianity*, MacMillian Publishing Company, New York, New York, copyright 1952.

*Life Application Bible*, New International Version, Tyndale House Publishers, Inc., Wheaton, Illinois, copyright 1991.

*The NIV Study Bible*, Zondervan Corporation, Grand Rapids, Michigan, copyright 1985.

Eugene H. Petersen, *The Message*, NavPress Publishing Group, Colorado Springs, Colorado, copyright 1993.

*Teacher's Manual for the Ten Basic Steps Toward Christian Maturity*, Here's Life Publishers, San Dernardino, California, copyright 1965.

W.E.Vine, *Vine's Expository Dictionary of Old and New Testament Words*, Fleming H.Revell, Grand Rapids, Michigan, copyright 1981.

John F. Walvoord, Roy B. Zuck, *The Bible Knowledge Commentary*, New Testament, Scripture Press Publications, Inc., copyright 1983.

*Zondervan Pictorial Biblical Dictionary*, Merrill C. Tenney, Zondervan Publishing House, Grand Rapids, Michigan, copyright 1967.